Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 115
ಭಾನುವಾರ,26 ಏಪ್ರಿಲ್ 2026 | ಪುಟಗಳು: 19 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
c
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಬಿಜೆಪಿ ಸೇರಿದ ಬೆನ್ನಲ್ಲೇ ಸಂಸದ ರಾಘವ್ ಚಡ್ಡಾ ಇನ್‌ಸ್ಟಾಗ್ರಾಂ ಫಾಲೋವರ್ಸ್ 10 ಲಕ್ಷ ಇಳಿಕೆ

₹14,120 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	₹15,404 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	₹2,60,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಬೆಂಗಳೂರು ದರ

ಪಕ್ಷಾಂತರಗೊಂಡ 7 ಸಂಸದರ ಸದಸ್ಯತ್ವ ರದ್ದು ಕೋರಿ ರಾಜ್ಯಸಭೆ ಸಭಾಧ್ಯಕ್ಷರಿಗೆ ಆಪ್ ಪತ್ರ

ವಿಕ ಹೊಂಗಿರಣ

ಉತ್ತಮ ಪುಸ್ತಕಗಳನ್ನು ಓದುವುದೆಂದರೆ, ಅದು ಶ್ರೇಷ್ಠ ವ್ಯಕ್ತಿಗಳೊದಿಗೆ ಸಂಭಾಷಣೆ ನಡೆಸಿದಂತೆ.

- ರೀನ್ ಡೆಸ್ಕಾರ್ಟ್ಸ್

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹ 90/- ಕೋಲಾರ 88/- ತುಮಕೂರು 88/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹130/-
ಕೋಲಾರ 128/- ತುಮಕೂರು 128/-
ವಿಥ್ ಸ್ಕಿನ್ ₹183/- ಕೋಲಾರ 180/- ತುಮಕೂರು 180/-
ವಿಥೌಟ್ ಸ್ಕಿನ್ ₹209/- ಕೋಲಾರ 206/- ತುಮಕೂರು 206/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಒಳಮೀಸಲು ನಿರ್ಧಾರ: ಬಿಜೆಪಿ ಹೋರಾಟದ ಎಚ್ಚರಿಕೆ »03
ರಾಜ್ ಸ್ಮಾರಕ ಭೂಮಿ ಬಗ್ಗೆ ಟೀಕೆ: ನಟ ಚೇತನ್ ಕ್ಷಮೆ »03
ಮತ್ತೆ ಕೇಜ್ರಿ ಬೆನ್ನೇರಿದ ಶೀಷ್ ಮಹಲ್ ಭೂತ »10

ಪಾಕಿಸ್ತಾನದಿಂದ ಇರಾನ್ ಅನಿರೀಕ್ಷಿತ ನಿರ್ಗಮನ | ನೇರ ಮಾತುಕತೆಗೆ ಅಸಮ್ಮತಿ
ಇಸ್ಲಾಮಾಬಾದ್ ಭೇಟಿ ರದ್ದುಗೊಳಿಸಿದ ಟ್ರಂಪ್ | ಪಾಕ್‌ಗೆ ಮತ್ತೊಮ್ಮೆ ಮುಖಭಂಗ

ಸಂಧಾನ ಸಭೆ 2.0 ಬ್ರೇಕಪ್

ಇಸ್ಲಾಮಾಬಾದ್/ವಾಷಿಂಗ್‌ಟನ್: ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ನಿಗದಿಯಾಗಿದ್ದ ಅಮೆರಿಕ-ಇರಾನ್ ನಡುವಿನ 2ನೇ ಸುತ್ತಿನ ಸಂಧಾನ ಮಾತುಕತೆ ಅತಂತ್ರವಾಗಿದೆ.

ಅಮೆರಿಕದ ಜತೆ ನೇರ ಮಾತುಕತೆ ನಿರಾಕರಿಸಿರುವ ಇರಾನ್ ನಿಯೋಗ ಇಸ್ಲಾಮಾಬಾದ್‌ನಿಂದ ನಿರ್ಗಮಿಸಿದ ಬೆನ್ನಿಗೆ, ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್, ಟ್ರಂಪ್ ಅಳಿಯ ಹಾಗೂ ಸಲಹೆಗಾರ ಜೇರೆಡ್ ಕುಶ್ನರ್ ಅವರನ್ನೊಳಗೊಂಡ ನಿಯೋಗದ ಇಸ್ಲಾಮಾಬಾದ್ ಪ್ರಯಾಣವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರದ್ದುಗೊಳಿಸಿದ್ದಾರೆ.

''ಇರಾನ್ ಮೊಂಡುತನದಿಂದಾಗಿ ಸಂಧಾನ ಮಾತುಕತೆಗೆ ತೆರಳಬೇಕಿದ್ದ ಅಮೆರಿಕ ನಿಯೋಗದ 18 ಗಂಟೆಗಳ ವಿಮಾನ ಪ್ರಯಾಣ ರದ್ದು ಮಾಡಲಾಗಿದೆ,'' ಎಂದು ಟ್ರಂಪ್ ಘೋಷಿಸಿದ್ದಾರೆ.

ಇದರೊಂದಿಗೆ ಎರಡನೇ ಬಾರಿ ಪಾಕ್ ಮಧ್ಯಸ್ಥಿಕೆ ವಿಫಲವಾಗಿದ್ದು, ಜಾಗತಿಕ ಮಟ್ಟದಲ್ಲಿ ಮುಖಭಂಗ ಅನುಭವಿಸಿದೆ.

ಅಮೆರಿಕ ನಿಯೋಗ ಶನಿವಾರ ರಾತ್ರಿ ಇಸ್ಲಾಮಾಬಾದ್‌ಗೆ ಪ್ರಯಾಣ ಬೆಳೆಸಬೇಕಿತ್ತು. ಆದರೆ, ಅಷ್ಟರಲ್ಲಿ ಇರಾನ್ ವಿದೇಶಾಂಗ ಸಚಿವ ಸೈಯ್ಯದ್ ಅಬ್ಬಾಸ್ ಅರಾಘಚಿ ಅವರ ನಿಯೋಗ ಪಾಕಿಸ್ತಾನದಿಂದ ನಿರ್ಗಮಿಸುವ ಮೂಲಕ ಸಂಧಾನ ಮಾತುಕತೆಯನ್ನು ಅಡಕತ್ತರಿಗೆ ದೂಡಿತು.

ಹರ್ಮುಜ್ ಜಲಸಂಧಿಯಲ್ಲಿ ನೌಕಾ ಧಿಗ್ಬಂಧನ ಮುಂದುವರಿಸಿರುವ ಟ್ರಂಪ್ ನಡೆಯನ್ನು ವಿರೋಧಿಸಿರುವ ಇರಾನ್, ಅಮೆರಿಕದ ಜತೆ ನೇರ ಮಾತುಕತೆಗೆ ನಿರಾಕರಿಸಿದ್ದು, ಪಾಕ್ ಮಧ್ಯಸ್ಥಿಕೆಯಲ್ಲಿ ಹೊಸ ಷರತ್ತುಗಳನ್ನು ಮಂಡಿಸಿದೆ. »10

ಅಮೆರಿಕ ಜತೆ ಸಂಧಾನಕ್ಕೆ ಇರಾನ್ ಪೂರ್ವ ಷರತ್ತು

ಇಸ್ಲಾಮಾಬಾದ್‌ನಲ್ಲಿ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಅವರ ಜತೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘಚಿ.

- ಮಧ್ಯಪ್ರಾಚ್ಯದಲ್ಲಿ ಶಾಂತಿ ಸ್ಥಾಪನೆ, ಸುಸ್ಥಿರ ಹಾಗೂ ಸಮಗ್ರ ಬೆಳವಣಿಗೆಗೆ ಯುದ್ಧಕ್ಕೆ ಶಾಶ್ವತ ಅಂತ್ಯ ಹಾಡಬೇಕು
- ಇರಾನ್ ಮೇಲೆ ವಿಧಿಸಲಾಗಿರುವ ಕಾನೂನು ಬಾಹಿರ ನಿರ್ಬಂಧಗಳನ್ನು ಅಮೆರಿಕ ಕೂಡಲೇ ತೆರವು ಮಾಡಬೇಕು
- ಶಾಂತಿಯುತ ಪರಮಾಣು ಕಾರ್ಯಕ್ರಮ ಕೈಗೊಳ್ಳುವ ಇರಾನ್‌ನ ಹಕ್ಕುಗಳಿಗೆ ಮಾನ್ಯತೆ ನೀಡಬೇಕು
- ಭವಿಷ್ಯದಲ್ಲಿ ಇರಾನ್ ಮೇಲೆ ದಾಳಿ ನಡೆಸುವುದಿಲ್ಲ ಎಂದು ಅಮೆರಿಕದಿಂದ ದೃಢವಾದ ಖಾತರಿ ನೀಡಬೇಕು
- ಯುದ್ಧದಿಂದ ಉಂಟಾಗಿರುವ ನಷ್ಟ, ಜೀವ ಹಾನಿಗೆ ಸಮಗ್ರ ಪರಿಹಾರ ನೀಡಬೇಕು
- ಅಮೆರಿಕ, ವಿಶ್ವಸಂಸ್ಥೆ ದಿಗ್ಬಂಧನದಿಂದ ವಿವಿಧ ದೇಶಗಳಲ್ಲಿ ನಿರ್ಬಂಧಿಸಲಾದ ಇರಾನ್ ಆಸ್ತಿಗಳನ್ನು ಬಿಡುಗಡೆ ಮಾಡಬೇಕು
- ದೇಶದ ರಕ್ಷಣಾ ಉದ್ದೇಶಕ್ಕೆ ಮೀಸಲಾದ ಕ್ಷಿಪಣಿ ಉತ್ಪಾದನೆಯನ್ನು ಸಂಧಾನ ಮಾತುಕತೆಯಿಂದ ಹೊರಗಿಡಬೇಕು
- ಯುರೇನಿಯಂ ಪುಷ್ಟೀಕರಣ ಕಾರ್ಯಕ್ರಮದಿಂದ ಇರಾನ್ ಹಿಂದೆ ಸರಿಯಬೇಕು ಎಂದು ಒತ್ತಾಯಿಸಬಾರದು
- ಬೆದರಿಕೆ, ಒತ್ತಡ ಅಥವಾ ಕಾರ್ಯಸಾಧುವಲ್ಲದ ಷರತ್ತುಗಳ ಅಡಿಯಲ್ಲಿ ಸಂಧಾನ ಮಾತುಕತೆ ನಡೆಯಬಾರದು
- 5 ವರ್ಷ ಕಾಲ ಹರ್ಮುಜ್ ಜಲಸಂಧಿ ಮೇಲೆ ಇರಾನ್‌ಗೆ ಪೂರ್ಣ ಅಧಿಕಾರ ನೀಡಬೇಕು
- ಶಾಂತಿ ಸಂಧಾನ ಮಾತುಕತೆಗೆ ಲೆಬನಾನ್ ವಿಷಯ ಸೇರ್ಪಡೆ ಮಾಡಬೇಕು.

ನಾಯಕತ್ವಕ್ಕೆ ಡಿಸಿಎಂ ಬಿಗಿಪಟ್ಟು

ನಿರ್ಧಾರ ಹೇಳಲು ಮೇ 10 ಗಡುವು ನೀಡಿರುವ ಡಿಕೆ ಬ್ರದರ್ಸ್
ಸಂಪುಟ ಸರ್ಜರಿಗೆ ಸಿಎಂ ಪ್ರಸ್ತಾಪ | ಮುಂದಿನ ತಿಂಗಳತ್ತ ಕುತೂಹಲ

■ **ವಿಕ ಸುದ್ದಿಲೋಕ** ಬೆಂಗಳೂರು

'ಪವರ್ ಶೇರಿಂಗ್' ಗೌಪ್ಯತೆಯನ್ನು ಬಹಿರಂಗಪಡಿಸಿ ತಮ್ಮ ನಾಯಕತ್ವ ಅವಕಾಶದ ಸರದಿ ಬಗ್ಗೆ ಹೈಕಮಾಂಡ್ ನಾಯಕರ ಸ್ಪಷ್ಟ ತೀರ್ಮಾನಕ್ಕಾಗಿ ಡಿಸಿಎಂ ಡಿ.ಕೆ. ಶಿವಕುಮಾರ್ ಪಟ್ಟು ಹಿಡಿದಿದ್ದಾರೆ.

ಮತ್ತೊಂದೆಡೆ ಮೇ 20ಕ್ಕೆ ಮೂರು ವರ್ಷಗಳ ಅಧಿಕಾರಾವಧಿ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಸಚಿವ ಸಂಪುಟ ಪುನಾರಚನೆಗೆ ಅನುಮತಿ ಕೇಳುವ ಮೂಲಕ ತಮ್ಮ ನಾಯಕತ್ವ ಅಬಾಧಿತ ಎಂಬ ಸಂದೇಶ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಯತ್ನ ನಡೆಸಿದ್ದಾರೆ.

ಇದರೊಂದಿಗೆ ಪಂಚರಾಜ್ಯಗಳ ಚುನಾವಣೆ ಫಲಿತಾಂಶದ ಬೆನ್ನಿಗೇ ಮೇ ಮೊದಲ ವಾರದಲ್ಲಿ ರಾಜ್ಯದ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಮಹತ್ವದ ರಾಜಕೀಯ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ.

ಎರಡೂವರೆ ವರ್ಷಗಳ ಬಳಿಕ ತಮ್ಮ 'ನಾಯಕತ್ವ ಸರದಿ' ನಿರೀಕ್ಷೆಯಲ್ಲಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, 6 ತಿಂಗಳ 'ಗ್ರೇಸ್ ಪೀರಿಯಡ್' ಮುಗಿದ ಬಳಿಕ ನೇರವಾಗಿ ಅಖಾಡಕ್ಕೆ ಇಳಿದಿದ್ದಾರೆ. ಮೂರು ದಿನಗಳಿಂದ ಎಐಸಿಸಿ ಅಂಗಳದಲ್ಲಿ ಮೊಕ್ಕಾಂ ಹೂಡಿರುವ ಅವರು, ಅಧಿಕಾರ ಹಸ್ತಾಂತರ ವಿಚಾರದಲ್ಲಿ ಮೇ 10 ರೊಳಗೆ ಎಲ್ಲವೂ ಖುಲ್ಲಂಖುಲ್ಲಾ ಆಗಬೇಕು ಎಂದು ಪಟ್ಟುಹಿಡಿದಿದ್ದಾರೆ. ಹಾಗಾಗಿ ಬಹುಚರ್ಚಿತ 'ಪವರ್ ಶೇರಿಂಗ್' ವಿಚಾರದಲ್ಲಿ ರಾಹುಲ್ ಗಾಂಧಿ ಅವರ ಸಮ್ಮುಖದಲ್ಲಿ ಈ ಮಾಸಾಂತ್ಯಕ್ಕೆ (ಏಪ್ರಿಲ್ 29 ಅಥವಾ 30) ಮಹತ್ವದ ಸಭೆಯನ್ನು ನಿರೀಕ್ಷಿತವಾಗಿದ್ದು, ಆಡಳಿತ ಪಕ್ಷದೊಳಗಿನ 'ಪವರ್ ಗೇಮ್ ಪಾಲಿಟಿಕ್ಸ್' ನಿರ್ಣಾಯಕ ಘಟ್ಟ ತಲುಪುತ್ತಿದೆ.

ಬಜೆಟ್ ಅಧಿವೇಶನ, ವಿಧಾನಸಭೆ ಉಪ ಚುನಾವಣೆ, ಪಂಚರಾಜ್ಯಗಳ ಚುನಾವಣೆ ಎಲ್ಲವೂ ಮುಗಿಯುತ್ತಿದ್ದು, ರಾಜ್ಯದಲ್ಲಿ ದೀರ್ಘಾವಧಿ ಅಧಿಕಾರ ನಡೆಸಿದ ದೇವರಾಜ ಅರಸು ದಾಖಲೆಯನ್ನೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುರಿದಿದ್ದಾಯಿತು. ಬಾಕಿ ಉಳಿದ ಎರಡು ವರ್ಷಗಳ ಅವಧಿಗೆ ತಮ್ಮ ಅವಕಾಶದ ಘೋಷಣೆ ಆಗಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಬೇಡಿಕೆ ಮಂಡಿಸಿದ್ದಾರೆ. ಗುರುವಾರ ದಿಲ್ಲಿ ತಲುಪಿದ ದಿನವೇ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ತಮ್ಮ ಹಕ್ಕೊತ್ತಾಯ ಮಂಡಿಸಿದ ಡಿ.ಕೆ.ಶಿವಕುಮಾರ್ ಅವರು, ಶುಕ್ರವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ದಿಲ್ಲಿ ನಿವಾಸದಲ್ಲಿ ಭೇಟಿಯಾಗಿ ಸುಮಾರು ಒಂದೂವರೆ ತಾಸು ಕಾಲ ಸಮಾಲೋಚನೆ ನಡೆಸಿದ್ದಾರೆ. ಈ ಭೇಟಿಯ ಫಲಶ್ರುತಿ ಎಂಬಂತೆ ಮಾಸಾಂತ್ಯಕ್ಕೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಇಬ್ಬರನ್ನೂ ದಿಲ್ಲಿಗೆ ಕರೆಸಿಕೊಂಡು ರಾಹುಲ್ ಗಾಂಧಿ ಸಭೆ ನಡೆಸಿ ತೀರ್ಮಾನ ಹೇಳುವ ಸಾಧ್ಯತೆಗಳಿವೆ.

ದಿಲ್ಲಿಯಲ್ಲಿ ಕೇಂದ್ರ ಸಚಿವ ಮನೋಹರಲಾಲ್ ಖಟ್ಟರ್ ಅವರನ್ನು ಭೇಟಿಯಾದ ಡಿಸಿಎಂ ಡಿ.ಕೆ. ಶಿವಕುಮಾರ್.

ನೇರಾನೇರ ಹಕ್ಕು ಮಂಡಿಸಿದ ಸಹೋದರರು »03

ಹೊಸ ಪಕ್ಷ ಘೋಷಿಸಿದ ಕೆಸಿಆರ್ ಪುತ್ರಿ

ಹೈದರಾಬಾದ್: ತೆಲಂಗಾಣ ಮಾಜಿ ಸಿಎಂ ಕೆ.ಚಂದ್ರಶೇಖರ್ ರಾವ್ (ಕೆಸಿಆರ್) ಅವರ ಪುತ್ರಿ ಮತ್ತು ಮಾಜಿ ಎಂಎಲ್‌ಸಿ ಕೆ. ಕವಿತಾ ಅವರು ನೂತನ ರಾಜಕೀಯ ಪಕ್ಷವನ್ನು ಅಧಿಕೃತವಾಗಿ ಘೋಷಿಸಿದ್ದಾರೆ.

ಕವಿತಾ ಅವರು ತಮ್ಮ ಪಕ್ಷಕ್ಕೆ 'ತೆಲಂಗಾಣ ರಾಷ್ಟ್ರ ಸೇನಾ (ಟಿಆರ್‌ಎಸ್)' ಎಂದು ಹೆಸರಿಟ್ಟಿದ್ದಾರೆ. ಅವರ ತಂದೆ ಕೆಸಿಆರ್ ಅವರು ಬಳಸುತ್ತಿದ್ದ 'ತೆಲಂಗಾಣ ರಾಷ್ಟ್ರಸಮಿತಿ' (ಟಿಆರ್‌ಎಸ್) ಹೆಸರನ್ನು ಇದು ನೆನಪಿಸುವಂತಿದೆ. 2025ರಲ್ಲಿ ಆಂತರಿಕ ಭಿನ್ನಮತ ಮತ್ತು ಸಹೋದರ ಕೆ.ಟಿ. ರಾಮರಾವ್ ಅವರೊಂದಿಗಿನ ವೈಮನಸ್ಸಿನಿಂದಾಗಿ ಬಿಆರ್‌ಎಸ್ ಪಕ್ಷದಿಂದ ಕವಿತಾ ಅವರನ್ನು ಹೊರಹಾಕಲಾಗಿತ್ತು.

ಬಿಜೆಪಿ ಶಾಸಕ ಲಾಹಿರಿಗೆ ನೀತಿ ಆಯೋಗದ ಸಾರಥ್ಯ

ಹೊಸದಿಲ್ಲಿ: ದೇಶದ ಅತ್ಯುನ್ನತ ನೀತಿ ನಿರ್ಧಾರಕ ಸಂಸ್ಥೆಯಾದ 'ನೀತಿ ಆಯೋಗ'ವನ್ನು ಪುನಾರಚನೆ ಮಾಡಿರುವ ಕೇಂದ್ರ ಸರಕಾರ, ಕೇಂದ್ರದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಹಾಗೂ ಹಾಲಿ ಪಶ್ಚಿಮ ಬಂಗಾಳ ಬಿಜೆಪಿ ಶಾಸಕ ಅಶೋಕ್ ಕುಮಾರ್ ಲಾಹಿರಿ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಿದೆ. ಐವರು ಹೊಸ ಕಾಯಂ ಸದಸ್ಯರನ್ನು ಹೆಸರಿಸಲಾಗಿದೆ. ದೇಶದ ಪ್ರಧಾನಿ ನೀತಿ ಆಯೋಗದ ಅಧ್ಯಕ್ಷರಾಗಿರುತ್ತಾರೆ.

ಆರ್ಥಿಕ ತಜ್ಞ ಕೆ.ಪಿ. ರಾಜು, ವಿಜ್ಞಾನಿ ಗೋವರ್ಧನ್ ದಾಸ್, ಮಾಜಿ ಸಂಪುಟ ಕಾರ್ಯದರ್ಶಿ ರಾಜೀವ್ ಗುಬಾ, ಏಮ್ಸ್ ನಿರ್ದೇಶಕ ಎಂ ಶ್ರೀನಿವಾಸ್, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಅಭಯ್ ಕರಂಡಿಕರ್ ಅವರು ಕಾಯಂ ಸದಸ್ಯರಲ್ಲಿ ಸೇರಿದ್ದಾರೆ.

ಶನಿವಾರ ತಮ್ಮನ್ನು ಭೇಟಿಯಾದ ಅಶೋಕ್ ಲಾಹಿರಿ ಅವರೊಂದಿಗೆ ಕೆಲಕಾಲ ಚರ್ಚಿಸಿದ ಪ್ರಧಾನಿ ಮೋದಿ, ಮುಂದಿನ ಅಧಿಕಾರಾವಧಿಗೆ ಶುಭ ಹಾರೈಸಿದರು.

ಪಶ್ಚಿಮ ಬಂಗಾಳ ಚುನಾವಣೆ ಸಂದರ್ಭದಲ್ಲೇ ಲಾಹಿರಿ ಅವರ ಆಯ್ಕೆಯು ಕುತೂಹಲ ಮೂಡಿಸಿದೆ.

ಕ್ರೈಸ್ ಶಾಲೆಗಳಿಗೆ 1500 ಶಿಕ್ಷಕರ ನೇಮಕ

ಬೆಂಗಳೂರು: ರಾಜ್ಯದ ಕ್ರೈಸ್ ವಸತಿ ಶಾಲೆಗಳಲ್ಲಿ ಖಾಲಿ ಇರುವ 1500 ಶಿಕ್ಷಕರ ನೇಮಕ ಪ್ರಕ್ರಿಯೆಯನ್ನು ಶೀಘ್ರದಲ್ಲೇ ಆರಂಭಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕ್ರೈಸ್ ವಸತಿ ಶಾಲೆಗಳ ಸಾಧನೆ ಕುರಿತು ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಒಳಮೀಸಲು ಜಾರಿ ಸಂಬಂಧ ಅಧಿಸೂಚನೆ ಹೊರಡಿಸಿದ ಬಳಿಕ ನೇಮಕಪ್ರಕ್ರಿಯೆ ಕೈಗೊಳ್ಳಲಾಗುವುದು,'' ಎಂದು ಹೇಳಿದರು. ''ಕ್ರೈಸ್ ವಸತಿ ಶಾಲೆಗಳಲ್ಲಿ ಇನ್ನೂ ಹೆಚ್ಚಿನ ಗುಣಮಟ್ಟದ ಶಿಕ್ಷಣ ನೀಡುವುದಕ್ಕೆ ಗಮನಹರಿಸಲಾಗುತ್ತಿದೆ. ಹೆಚ್ಚು ಶ್ರಮದಿಂದ ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಫಲಿತಾಂಶ ತಂದ ಶಿಕ್ಷಕರಿಗೆ ಅಭಿನಂದನೆ ಸಲ್ಲಿಸುತ್ತೇನೆ'' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗೌಡರಿಗೆ ಬಸವಶ್ರೀ, ಕರ್ಜಗಿಗೆ ವಚನ ಸಾಹಿತ್ಯಶ್ರೀ



ಬೆಂಗಳೂರು: ಬಸವ ವೇದಿಕೆಯು ಕೊಡಮಾಡುವ 2026ನೇ ಸಾಲಿನ 'ಬಸವಶ್ರೀ' ಪ್ರಶಸ್ತಿಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ 'ವಚನ ಸಾಹಿತ್ಯಶ್ರೀ' ಪ್ರಶಸ್ತಿಗೆ ಶಿಕ್ಷಣ ತಜ್ಞ ಡಾ. ಗುರುರಾಜ ಕರ್ಜಗಿ ಅವರನ್ನು ಆಯ್ಕೆಮಾಡಲಾಗಿದೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಏ.27ರಂದು ಸಂಜೆ 5.30ಕ್ಕೆ ನಡೆಯಲಿರುವ ರಾಜ್ಯ ಮಟ್ಟದ 'ಬಸವ ಜಯಂತಿ' ಸಮಾರಂಭದಲ್ಲಿ 'ಬಸವಶ್ರೀ' ಪ್ರಶಸ್ತಿಯನ್ನು ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಅವರು ಹಾಗೂ 'ವಚನ ಸಾಹಿತ್ಯಶ್ರೀ' ಪ್ರಶಸ್ತಿಯನ್ನು ಕಾನೂನು ಸಚಿವ ಎಚ್.ಕೆ.ಪಾಟೀಲ್ ಪ್ರದಾನ ಮಾಡಲಿದ್ದಾರೆ ಎಂದು ವೇದಿಕೆ ಅಧ್ಯಕ್ಷ ಡಾ. ಸಿ.ಸೋಮಶೇಖರ್ ತಿಳಿಸಿದ್ದಾರೆ. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಕೇಂದ್ರ ಸಚಿವ ವಿ.ಸೋಮಣ್ಣ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ಹೇಳಿದ್ದಾರೆ.

ಆನ್‌ಲೈನ್ ಮದ್ಯ ಮಾರಾಟ ಪ್ರಸ್ತಾವನೆ ಕೈಬಿಡಲು ಆಗ್ರಹ

ಬೆಂಗಳೂರು: ರಾಜ್ಯ ಸರಕಾರದ 'ಆನ್‌ಲೈನ್ ಮದ್ಯ ಮಾರಾಟ'ದ ಪ್ರಸ್ತಾವನೆ ವಿರುದ್ಧ ಹೋರಾಟ ರೂಪಿಸಲಾಗಿದೆ ಎಂದು ಕರ್ನಾಟಕ ರಾಷ್ಟ್ರಸಮಿತಿ (ಕೆಆರ್‌ಎಸ್) ಪಕ್ಷ ತಿಳಿಸಿದೆ. ಅಬಕಾರಿ ಇಲಾಖೆಯ ಸುಧಾರಣೆ ನೆಪದಲ್ಲಿ ಸರಕಾರ ಈ ಕ್ರಮಕ್ಕೆ ಮುಂದಾಗಿರುವುದು ಸಮಾಜದ ಸ್ವಾಸ್ಥ್ಯಕ್ಕೆ ಧಕ್ಕೆ ಉಂಟು ಮಾಡಲಿದೆ. ಇದನ್ನು ಕೂಡಲೇ ಕೈಬಿಡಬೇಕು. ಈ ಬಗ್ಗೆ ರಾಜ್ಯಾದ್ಯಂತ ಜಾಗೃತಿ ಸಭೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಪಕ್ಷದ ಮಾಧ್ಯಮ ಸಂಯೋಜಕ ಜೀವನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಭೂಮಿ ಪೂಜೆ

■ ವಿಕ ಸುದ್ದಿಲೋಕ ಬೆಂಗಳೂರು



ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ 'ಬಿಎಸ್‌ವೈ ಅಭಿಮಾನೋತ್ಸವ' ಬೃಹತ್ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ವೇದಿಕೆ, ಇತರ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಭಾನುವಾರ ಭೂಮಿ ಪೂಜೆ ಕಾರ್ಯಕ್ರಮ ನಡೆಯಲಿದೆ.

ರಾಜ್ಯ ಬಿಜೆಪಿ ಧುರೀಣ ಬಿ.ಎಸ್.ಯಡಿಯೂರಪ್ಪ ಅವರು ಐದು ದಶಕಗಳ ಸುದೀರ್ಘ ರಾಜಕೀಯ ಜೀವನ ಪೂರ್ಣಗೊಳಿಸಿರುವ ಸಂದರ್ಭದಲ್ಲಿ ಅವರನ್ನು ಅಭಿನಂದಿಸುವ ಸಲುವಾಗಿ ಅಭಿನಂದನೆ ಸಲ್ಲಿಸಲು ಅಭಿಮಾನಿಗಳ ಬಳಗ ಮುಂದಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಭಿಮಾನೋತ್ಸವ ಸಮಾರಂಭ ಉದ್ಘಾಟಿಸಲಿದ್ದು, ಸುಮಾರು 10 ಲಕ್ಷ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಭೂಮಿ ಪೂಜೆ ಸಿದ್ಧತೆಯನ್ನು ಮಾಜಿ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ, ಎಸ್.ಲಿಂಗಮೂರ್ತಿ ವೀಕ್ಷಿಸಿದರು.

ನಾಡಿನ ಎಲ್ಲ ಮಠಗಳ ಮಠಾಧೀಶರು, ಮಾಜಿ ಮುಖ್ಯಮಂತ್ರಿಗಳು, ಸಚಿವರು, ಗಣ್ಯರು, ಯಡಿಯೂರಪ್ಪ ಅವರನ್ನು ಆರಾಧಿಸುವ ಸಾಹಿತಿಗಳು, ಒಡನಾಡಿಗಳು, ಕಲಾವಿದರು ಸೇರಿ ಸಮಾಜದ ಎಲ್ಲ ರಂಗದವರು, ರೈತರು, ಸಾರ್ವಜನಿಕರನ್ನು ಆಹ್ವಾನಿಸಲು ಅಭಿಮಾನಿಗಳು ಸಿದ್ಧತೆ ಆರಂಭಿಸಿದ್ದಾರೆ.

ಐತಿಹಾಸಿಕವಾಗಿಸಿರುವ ಕಾರ್ಯಕ್ರಮದಲ್ಲಿ 10 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆಯಿರುವ ಹಿನ್ನೆಲೆಯಲ್ಲಿ ವ್ಯವಸ್ಥಿತವಾದ ಬೃಹತ್ ವೇದಿಕೆ ನಿರ್ಮಿಸಲಾಗುತ್ತಿದೆ. ಅದರಂತೆ ಚಿತ್ರದುರ್ಗದ ಮದಕರಿ ಚಿಕ್ಕಪ್ಪನ ಗುರುಕುಲದ ಸಮೀಪದಲ್ಲಿರುವ ಮೈದಾನದಲ್ಲಿ ಭಾನುವಾರ ಬೆಳಗ್ಗೆ 10 ಗಂಟೆಗೆ 'ಬಿಎಸ್‌ವೈ ಅಭಿಮಾನೋತ್ಸವ' ಸಮಾರಂಭದ ಭೂಮಿ ಪೂಜೆ ಕಾರ್ಯ ನಡೆಯಲಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಡಿಸಿಎಂ ಗೋವಿಂದ ಕಾರಜೋಳ, ಮಾಜಿ ರಾಜ್ಯಸಭಾ ಸದಸ್ಯ ಪ್ರಭಾಕರ್ ಕೋರೆ, ಮಾಜಿ ಸಚಿವ ಬಿ.ಶ್ರೀರಾಮುಲು ಸೇರಿದಂತೆ ಸಂಸದರು, ಶಾಸಕರು, ಎಂಎಲ್ಸಿಗಳು, ಮಾಜಿ ಸಂಸದರು, ಮಾಜಿ ಸಚಿವರು, ಮಾಜಿ ಶಾಸಕರು, ರಾಜ್ಯ ಪದಾಧಿಕಾರಿಗಳು, ಜಿಲ್ಲಾಧ್ಯಕ್ಷರು ಮತ್ತು ಪಕ್ಷದ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ಮಹಿಳಾ ಮೀಸಲು ರಾಜೀವ್ ಗಾಂಧಿ ಕನಸು: ಕಮಲಾಕ್ಷಿ ರಾಜಣ್ಣ

ಹೊಸಪೇಟೆ (ವಿಜಯನಗರ): "2023ರಲ್ಲಿ ಲೋಕಸಭೆ, ರಾಜ್ಯಸಭೆಯಲ್ಲಿ ಅಂಗೀಕಾರವಾಗಿ, ರಾಷ್ಟ್ರಪತಿಯಿಂದ ಅಂಕಿತ ಪಡೆದಿದ್ದ ಮಹಿಳಾ ಮೀಸಲಿಗೆ ಸಂಬಂಧಿಸಿದಂತೆ ಬಿಜೆಪಿಯವರು 2026ರ ಏಪ್ರಿಲ್ 16ರ ತನಕ ಅಧಿಸೂಚನೆ ಹೊರಡಿಸಿರಲಿಲ್ಲವೇಕೆ," ಎಂದು ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕಮಲಾಕ್ಷಿ ರಾಜಣ್ಣ ಪ್ರಶ್ನಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, "ಕಾಂಗ್ರೆಸ್ ಮಹಿಳಾ ಮೀಸಲು ಪರ. ಮಹಿಳಾ ಮೀಸಲು ರಾಜೀವ್ ಗಾಂಧಿಯವರ ಕನಸಾಗಿತ್ತು. ಪಂಚಾಯಿತಿಗಳಲ್ಲಿ ಮಹಿಳಾ ಮೀಸಲು ಜಾರಿಗೊಳಿಸಿದ್ದೇ ಕಾಂಗ್ರೆಸ್," ಎಂದರು.

ಬದ್ಧತೆ ಇಲ್ಲ

"ಸದ್ಯ ಅಸ್ತಿತ್ವದಲ್ಲಿರುವ 543 ಸ್ಥಾನಗಳಲ್ಲೇ ಮಹಿಳೆಯರಿಗೆ ಶೇ.33ರಷ್ಟು ಮೀಸಲು ಕಲ್ಪಿಸುವ ನಾರಿ ಶಕ್ತಿ ವಂದನಾ ಕಾಯಿದೆ ತಿದ್ದುಪಡಿ ತರಲು ಮೋದಿ ಸರಕಾರ ಸಿದ್ಧವಿಲ್ಲವೇಕೆ? ಬಿಜೆಪಿ ಮತ್ತು ಮೋದಿ ಸರಕಾರಕ್ಕೆ ನಿಜವಾಗಿಯೂ ಮಹಿಳಾ ಸಬಲೀಕರಣದ ಬಗ್ಗೆ ಬದ್ಧತೆ ಇದ್ದರೆ, ಚುನಾವಣೆ ನಡೆಯುವ ರಾಜ್ಯಗಳಲ್ಲಾದರೂ ಶೇ.33ರಷ್ಟು ಮಹಿಳೆಯರಿಗೆ ಟಿಕೆಟ್ ಕೊಡಬಹುದಾಗಿದೆ," ಎಂದರು.

ನೆಹರು ಕುಟುಂಬದಿಂದಲೇ ಮೀಸಲಿಗೆ ವಿರೋಧ

■ ವಿಕ ಸುದ್ದಿಲೋಕ ಹುಬ್ಬಳ್ಳಿ

ಮೀಸಲು ನೀತಿಗೆ ನೆಹರು ಕುಟುಂಬದಲ್ಲಿ ವಿರೋಧವಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆರೋಪಿಸಿದರು. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ಜವಾಹರಲಾಲ್ ನೆಹರು ಅವರು ಎಸ್ಸಿ-ಎಸ್ಟಿ ಹಾಗೂ ರಾಜೀವ್ ಗಾಂಧಿ ಒಬಿಸಿ ಮೀಸಲು ವಿರೋಧಿಸಿದರು. ಅದರಂತೆ ಮಹಿಳಾ ಮೀಸಲಿಗೆ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ವಾದ್ರಾ ಕುಟುಂಬ ವಿರೋಧ ವ್ಯಕ್ತಪಡಿಸುತ್ತಿದೆ," ಎಂದು ದೂರಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಇಡೀ ಜೀವನ ಶಾಸನ ಸಭೆಗಳಲ್ಲೇ ಕಳೆದ ಅನುಭವ ಇದ್ದರೂ ಪ್ರಧಾನಿ ಮೋದಿಯವರನ್ನು ಭಯೋತ್ಪಾದಕ ಎಂದು ಕರೆದಿರುವುದು ದುರದೃಷ್ಟ
-ಪ್ರಲ್ಹಾದ್ ಜೋಶಿ ಕೇಂದ್ರ ಸಚಿವ

"ಜನಗಣತಿ ಆಧಾರವಾಗಿ ಕ್ಷೇತ್ರ ಮರು ವಿಂಗಡಣೆ ಮಾಡಿದರೆ, ದಕ್ಷಿಣ ರಾಜ್ಯಗಳಿಗೆ ಹಾಗೂ ಸಣ್ಣ ರಾಜ್ಯಗಳಿಗೆ ಅನ್ಯಾಯವಾಗುತ್ತದೆ ಎಂಬುದು ಕಾಂಗ್ರೆಸ್ ಮೊಂಡು ವಾದವಾಗಿದೆ. ಡಿಲಿಮಿಟೇಷನ್ ವಿಚಾರದಲ್ಲಿ ಕಾಂಗ್ರೆಸ್‌ಗೆ ಸಮಸ್ಯೆ ಇದ್ದಿದ್ದರೆ ಅದರ, ಬಿಜೆಪಿಯಿಂದಲೇ ಮಾಡಲಾಗುತ್ತದೆ ಎಂಬುದು ಸ್ಪಷ್ಟಪಡಿಸಿದೆ. ಆದರೆ 2011ರ ಜನಗಣತಿ ಆಧಾರವಾಗಿ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಶೇ.33ರ ಮಹಿಳಾ ಮೀಸಲನ್ನು ಕೇಂದ್ರ ಸರಕಾರ ಒಟ್ಟೊಟ್ಟಿಗೆ ತೀರ್ಮಾನಿಸಿದೆ. ಆದರೆ ಕಾಂಗ್ರೆಸ್ ಜನರ ವಿಶ್ವಾಸ ಕಳೆದುಕೊಂಡ ಭಯದಲ್ಲಿ ವಿರೋಧಿಸುತ್ತಿದೆ," ಎಂದು ಟೀಕಿಸಿದರು.

"ಲೋಕಸಭೆ ಸ್ಥಾನಗಳು ಎಷ್ಟೇ ಏರಿದರೂ ಮತದಾರರು ಮಾತ್ರ ಅವರೇ ಇರುತ್ತಾರೆ. ಒಂದೊಂದು ಕ್ಷೇತ್ರದಲ್ಲಿ 40-50 ಲಕ್ಷ ಮತದಾರರಿದ್ದಾರೆ. ಇಷ್ಟು ಜನಸಂಖ್ಯೆಗೆ ಒಬ್ಬ ಸಂಸದರು ಎಲ್ಲರನ್ನೂ ತಲುಪಲು ಸಾಧ್ಯವಿಲ್ಲ. ದೇವೇಗೌಡರು ಪ್ರಧಾನಿಯಾಗಿದ್ದ ವೇಳೆ ಮಹಿಳಾ ಮೀಸಲಿಗೆ ಮೊದಲ ಪ್ರಯತ್ನ ನಡೆಯಿತು. ಆಗಲೂ ಬಿಜೆಪಿ ಬೆಂಬಲಿಸಿತ್ತು. ಆಗ ಕಾಂಗ್ರೆಸ್ ವಿರೋಧಿಸಿತು. ಅನಂತರ ಯುಪಿಎ ರಾಜ್ಯಸಭೆಯಲ್ಲಿ ಪಾಸ್ ಮಾಡಿದರೂ ಲೋಕಸಭೆಯಲ್ಲಿ ತರದೇ ಮಹಿಳೆಯರಿಗೆ ದ್ರೋಹ ಮಾಡಿದೆ," ಎಂದು ಕಿಡಿಕಾರಿದರು.

ಧಾರಾಳ ಅಂಕದಿಂದ ಶಿಕ್ಷಣ ವ್ಯವಸ್ಥೆ ಹಾಳು: ವಿಶ್ವನಾಥ್

■ ವಿಕ ಸುದ್ದಿಲೋಕ ಮೈಸೂರು



ಈ ಬಾರಿಯ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ದಾಖಲೆ ತೋರಿಸಲು ಹೋಗಿ ಶಿಕ್ಷಣದ ಗುಣಮಟ್ಟ ಹಾಳು ಮಾಡಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ಮಾಜಿ ಶಿಕ್ಷಣ ಸಚಿವ ಎಚ್.ವಿಶ್ವನಾಥ್ ಆರೋಪಿಸಿದರು.

"ಎಸ್ಸೆಸ್ಸೆಲ್ಸಿ ಫಲಿತಾಂಶ ಶೇ.94ರಷ್ಟು ತಲುಪುವ ಮೂಲಕ ದಾಖಲೆ ನಿರ್ಮಿಸಿರುವುದು ಸರಿ. ಆದರೆ, ಇದು ಮುಂದಿನ ಪಿಯುಸಿಯಲ್ಲಿ ಡ್ರಾಪ್ ಔಟ್ ಆಗುವ ಸಾಧ್ಯತೆ ಹೆಚ್ಚಿರುತ್ತದೆ," ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

"ಬಹುತೇಕ ಸರಕಾರಿ ಶಾಲೆಗಳಲ್ಲಿ ಶಿಕ್ಷಕರಿಲ್ಲ, ಖಾಸಗಿ ಶಾಲೆಗಳಲ್ಲಿಯೂ ಇದೇ ಪರಿಸ್ಥಿತಿ ಇದೆ. ಹೀಗಿದ್ದರೂ ಧಾರಾಳ ಅಂಕ ನೀಡಿ ಎಲ್ಲರನ್ನೂ ಉತ್ತೀರ್ಣರನ್ನಾಗಿಸಲಾಗಿದೆ. ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದೇನೋ ಪೋಷಕರು, ಮೊದಲಾದವರಿಗೆ ಸಂತಸ ತರಿಸಿದೆ. ಆದರೆ, ಈ ರೀತಿ ಶೈಕ್ಷಣಿಕ ಗುಣಮಟ್ಟಕ್ಕೆ ಅಡ್ಡಿ ಎದುರಾಗುವಂತೆ ಉತ್ತೀರ್ಣರನ್ನಾಗಿಸಿರುವುದು ಸ್ವತಃ ಅನೇಕ ಶಿಕ್ಷಕರಿಗೂ ಆತಂಕವುಂಟು ಮಾಡಿದೆ," ಎಂದರು.

"ನಾನೂ ಶಿಕ್ಷಣ ಸಚಿವನಾಗಿದ್ದೆ. ಇಂಟರ್ನಲ್ ಮಾರ್ಕ್ಸ್ 20ಕ್ಕೆ 20 ಕೊಡುತ್ತಾರೆ. ಇನ್ನು ಉಳಿದ 80 ಮಾರ್ಕ್ಸ್‌ನಲ್ಲಿ 13 ತೆಗೆದರೆ ಪಾಸ್. ಈ ರೀತಿಯಾದರೆ ಶಿಕ್ಷಣ ವ್ಯವಸ್ಥೆ ಎಲ್ಲಿಗೆ ಹೋಗಬೇಕು? ಪಾಸಾದ ವಿದ್ಯಾರ್ಥಿಗಳು ಮುಂದೆ ಏನು ಮಾಡಬೇಕು? ಈ ಮೂಲಕ ಮಗುವಿನ ಓದುವ ಉತ್ಸಾಹವನ್ನೇ ಕಸಿದಿದ್ದಾರೆ," ಎಂದರು. "ಹಿಂದಿಗೆ ಗ್ರೇಡ್ ಕೊಡುವ ವಿಚಾರದಲ್ಲಿ ಕೋರ್ಟ್ ರಾಜ್ಯ ಸರಕಾರಕ್ಕೆ ಛೀಮಾರಿ ಹಾಕಿದ್ದು, ಗ್ರೇಡ್ ಬದಲು ಅಂಕಗಳನ್ನೇ ಕೊಡುವಂತೆ ಆದೇಶ ನೀಡಿದೆ. ಕೋರ್ಟ್ ಛೀಮಾರಿ ಹಾಕಿದ ಎರಡೇ ದಿನಕ್ಕೆ ಫಲಿತಾಂಶ ಹೇಗೆ ಪ್ರಕಟ ಆಯ್ತು. ಹಾಗಾದರೆ ಮಾರ್ಕ್ಸ್ ಎರಡೇ ದಿನಗಳಲ್ಲಿ ಹೇಗೆ ಕೊಟ್ಟಿರಿ?," ಎಂದು ಪ್ರಶ್ನಿಸಿದರು.

Nurturing Next Generation... Leading College in Dharwad

Y. B. ANNIGERI

P.U. SCIENCE & COMMERCE COLLEGE, TAPOVAN, DHARWAD

Admission Open for-2026-27

PUC-I & II Science, Commerce, B.Com. & BCA

SCIENCE TOPPER: GUL D. NAIK 97.50%

COMMERCE TOPPERS: DISHA S.B. 97.50% | SHIFA KHAZI PUC : 97.50% SSLC : 68.20%

"ಅಂಕಗಳಿಗಿಂತ ಆಸಕ್ತಿ ಹಾಗೂ ಅಭಿರುಚಿಗೆ ಪ್ರೇರಣೆ ನೀಡುವ ಸಂಸ್ಥೆ": ಹತ್ತನೇ ತರಗತಿಯಲ್ಲಿ ಕಡಿಮೆ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರವೇಶದ ಅವಕಾಶ ನೀಡಿ ದ್ವಿತೀಯ ಪಿ.ಯು.ಸಿ.ಯಲ್ಲಿ 85% ಪ್ರತಿಶತಕ್ಕಿಂತ ಹೆಚ್ಚು ಅಂಕಗಳಿಸುವಂತೆ ಮಾಡುವ ಧಾರವಾಡ ಜಿಲ್ಲೆಯ ವಿದ್ಯಾಕಾಶಿಯ ಪ್ರತಿಷ್ಠಿತ ವಿದ್ಯಾ ಸಂಸ್ಥೆಯಾದ ವಾಯ್.ಬಿ.ಅಣ್ಣಿಗೇರಿ ವಿಜ್ಞಾನ ಹಾಗೂ ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯ, ವಿದ್ಯಾರ್ಥಿಗಳ ಅಂಕಗಳನ್ನು ಮಾತ್ರ ಪರಿಗಣಿಸದೆ ವಿದ್ಯಾರ್ಥಿಗಳ ಆಸಕ್ತಿ ಮತ್ತು ಅಭಿರುಚಿಗೆ ಮಹತ್ವ ನೀಡಿ ಯಶಸ್ವಿಯಾಗಿರುವುದಕ್ಕೆ ಸಾಕ್ಷಿಯಾಗಿದೆ.

VISHAL SANIKOPPA has successfully Cleared CA Final Exam

An ultimate proof for... How Annigeri PU College bring bright future for students...

Congratulations SCIENCE STREAM-2025-26 AND MANY MORE ....

TEJASWINI G. H. 96.33% | GUL V. NAIK 96.00% | NANDITA W. 96.00% | MAHANTESH D. 95.83% | NANDA U. 95.83% | VAISHNAVI R C. 95.67% | TEJASWINI S 95.50%

BHUVIKA H. 95.50% | NANDEESH T. 95.33% | KIRANKUMAR N. 95.00% | MADHUSHREE M.S. 94.00% | CHANDRAPRIYA S. U. 93.83% | BASAVARAJ I. G. 93.67% | BHUSHAN I. 93.67%

VIKAS NAIK SSLC : 45.6% PUC : 76.33% | PRAJWAL B. H. SSLC : 60.83% PUC : 89.67% | VIDYASHREE A B. SSLC : 53.76% PUC : 82.5% | R ABHISHEK SSLC : 50.88% PUC : 79.17% | TANUSHREE D. SSLC : 61.4% PUC : 89% | VIVEK R.D. SSLC : 60.48% PUC : 87.5% | MANIKANT L.J. SSLC : 53.8% PUC : 79.83%

MARUTI IRAPPA SSLC : 53.6% PUC : 79.17% | LAXMI S.J. SSLC : 67.36% PUC : 90.17% | ANOOP B. SSLC : 68.8% PUC : 91.17% | GANESH KADAD SSLC : 60.32% PUC : 82.5% | SHASHANK DESAI SSLC : 52.48% PUC : 74.5% | SANJANA D.N. SSLC : 52.8% PUC : 73.5% | AVINASH J. SSLC : 55.52% PUC : 75.67%

Congratulations COMMERCE STREAM-2025-26 AND MANY MORE ....

VIKAS S. 97.33% | SHIVANI C.J. 97% | SOUJANYA S.P. 96.5% | ABHISHEK B.C. 95.5% | BHUVANESHWARI R.P. 95.33% | SRUSHTI S. 95.33% | DARSHINI B. 95%

ASHA MALI 94.67% | POOJA SADAR 94.67% | SHANTALA KORI 94.5% | ABHIRATH IYER 93.83% | BHAGESH YADAV 93.17% | KIRTHI H. 93.17% | NIRANJAN J. 93.17%

SHREYAS W. SSLC : 57.8% PUC : 92.33% | NIRANJAN L.J. SSLC : 57.8% PUC : 93.17% | RENUKA V.P. SSLC : 52% PUC : 85.33% | CHARAN N.G. SSLC : 50% PUC : 83.33% | HARISHGOUDA P. SSLC : 47% PUC : 80.17% | SANDEEP P.P. SSLC : 56.32% PUC : 89% | SHILPA S.G. SSLC : 52.96% PUC : 83.67%

SANJAY K. SSLC : 50.72% PUC : 81.33% | ASHA MALI SSLC : 64.8% PUC : 94.67% | SHIFA KHAZI SSLC : 68.2% PUC : 97.5% | VIRESH K SSLC : 48.6% PUC : 77.83% | PRARTHANA H. SSLC : 59.8% PUC : 89% | SHRINIVAS N.N. SSLC : 47.33% PUC : 76% | DHEERAJ H. SSLC : 57.4% PUC : 85.83%

You have made us proud! We wish you a very Bright Future. From : Management & Staff

For Admission / Information Contact

Haliyal Main Road, Near Railway Gate, Tapovan, DHARWAD-03.

Ph. : 0836-2278600, 8971748037

E-mail : ybannigeri@gmail.com

Website : www.ybannigericollege.com

SEPERATE HOSTEL FACILITY FOR BOYS & GIRLS

ಅಪಸ್ಮಾರ ದ್ವಾರ

ಅಪಸ್ಮಾರ / ಸೀಜರ್ಸ್ / ಫಿಟ್ಸ್

ಆರ್.ಎಸ್. ರಾಮ್ ಡಿಐಜಿ ಪೊಲೀಸ್, ಬಿಎಸ್ಎಫ್, ನನ್ನ ಪತ್ನಿ ರೇಷ್ಮಾ ಒಂದು ತಿಂಗಳಲ್ಲಿ ಅನೇಕ ರೋಗಗಳಿಂದ ಬಳಲುತ್ತಿದ್ದಳು. ಅವಳನ್ನು ಹಲವು ಪ್ರಮುಖ ಆಸ್ಪತ್ರೆಗಳು ಮತ್ತು ವೈದ್ಯಕೀಯ ಕಾಲೇಜುಗಳಿಗೆ ಕರೆದೊಯ್ದು ಮತ್ತು ವರ್ಷಗಳ ಕಾಲ ಔಷಧಿಗಳನ್ನು ಖರೀದಿಸಿದೆ, ಇದು ಹಲವು ಅಡ್ಡಪರಿಣಾಮಗಳಿಗೆ ಕಾರಣವಾಯಿತಾದರೂ, ಯಾವುದೇ ಪರಿಹಾರ ಕಾಣಲಿಲ್ಲ. ಈ ಔಷಧಿಗಳು ಜೀವನಪರ್ಯಂತ ತೆಗೆದುಕೊಳ್ಳಬೇಕು ಮತ್ತು ಒಂದು ದಿನ ಬಿಟ್ಟರೂ, ರೋಗ ಹೆಚ್ಚಾಗುವುದಾಗಿ ವೈದ್ಯರು ನನಗೆ ಹೇಳಿದರು. ಆದರೆ ನೀರಜ್ ಕ್ಲಿನಿಕ್‌ನ ಜಾಹೀರಾತು ನೋಡಿದ ತಕ್ಷಣವೇ ಋಷಿಕೇಶಕ್ಕೆ (ಹರಿದ್ವಾರ) ಹೊರಟೆ. ಅಲ್ಲಿನ ಆಯುರ್ವೇದ ವೈದ್ಯರು ನನ್ನ ಮಾತನ್ನು ಬಹಳ ಎಚ್ಚರಿಕೆಯಿಂದ ಆಲಿಸಿದರು ಮತ್ತು ಆಯುರ್ವೇದ ಔಷಧದ ಮೊದಲ ಡೋಸ್ ಅನ್ನು ತಮ್ಮ ಕೈಗಳಿಂದಲೇ ನೀಡಿದರು ಮತ್ತು ನನ್ನನ್ನು ಅಪಾರವಾಗಿ ಅಭಿನಂದಿಸಿದರು. ಏನೂ ಆಗಿಲ್ಲ, ಚೇತರಿಸಿಕೊಳ್ಳುವಿರಿ ಎಂಬುದಾಗಿ ಅವರು ನನ್ನ ಪತ್ನಿಯಲ್ಲಿ ವಿಶ್ವಾಸ ತುಂಬಿದರು. ನಾನು ತಕ್ಷಣವೇ ಅವಳಿಗೆ ಔಷಧ ನೀಡಲು ಆರಂಭಿಸಿದೆ ಮತ್ತು ಅಂದಿನಿಂದ ಅವಳಿಗೆ ಒಂದು ರೋಗವೂ ಬಂದಿಲ್ಲ, ಸಂಪೂರ್ಣವಾಗಿ ಆರೋಗ್ಯವಾಗಿದ್ದಾಳೆ. ನನ್ನ ಪತ್ನಿ ಮತ್ತು ಕ್ಲಿನಿಕ್‌ನ ವೈದ್ಯರು ಮತ್ತು ಸಿಬ್ಬಂದಿಗೆ ಕೃತಜ್ಞರಾಗಿದ್ದೇವೆ. ಔಷಧಗಳು ಮತ್ತು ಪ್ರಾರ್ಥನೆಯಲ್ಲಿ ಹೆಚ್ಚಿನ ಶಕ್ತಿಯಿದೆ.

ಜೂನ್ 30 ರವರೆಗೆ ಉಚಿತ ಔಷಧ, ಉಚಿತ ಆಹಾರ, ಉಚಿತ ವಾಸ್ತವ್ಯ

1. ನೆಲದ ಮೇಲೆ ಹಠಾತ್ ಬೀಳುವುದು, 2. ಒಂದು ಬದಿಗೆ ಮುಖ ತಿರುಗುವುದು, 3. ಮುಷ್ಟಿ ಬಿಗಿಯುವುದು, 4. ಕಣ್ಣುಗಳು ಹೊಳಪಾಗುವುದು, 5. ಹಲ್ಲುಗಳ ನಡುವೆ ನಾಲಿಗೆ ಚಾಚಿಕೊಂಡಿರುವುದು, 6. ಬಾಯಲ್ಲಿ ನೊರೆ ಬರುವುದು, 7. ಕುತ್ತಿಗೆ ಬಾಗುವುದು, 8. ಒನ್ ಸೆಕೆಂಡ್ ಜರ್ಕ್ಸ್, 9. ಮೂರ್ಛೆ ಮತ್ತು ತಲೆನೋವು, 10. ಮಹಿಳೆಯರಲ್ಲಿ ಮುಟ್ಟಿನ ವೇಳೆ ಸೆಳೆತ, 11. "ಓಹ್-ಓಹ್/ಗೋ-ಗೋ" ಶಬ್ದದೊಂದಿಗೆ ಮೂರ್ಛೆ ಹೋಗುವುದು, 12. ಕೆಲಕಾಲ ಶೂನ್ಯತೆ

ಈ ಲಕ್ಷಣಗಳಲ್ಲಿ ಯಾವುದಾದರೂ ಒಂದಿದ್ದರೆ, ನಿಮಗೆ ಅಪಸ್ಮಾರ ಬರುವ ಸಾಧ್ಯತೆಯಿದೆ ಮತ್ತು ವೈದ್ಯಕೀಯ ಚಿಕಿತ್ಸೆ ಅಗತ್ಯವಿದೆ

ನೀರಜ್ ಕ್ಲಿನಿಕ್

ಹರಿದ್ವಾರ ರಸ್ತೆ, ಗಂಗಾ ಸಮೀಪ, ಋಷಿಕೇಶ

9654055255 ಸಂಖ್ಯೆಗೆ ಕೇವಲ ಮಿಸ್ಡ್ ಕಾಲ್ ಕೊಡಿ

ಆಯುರ್ವೇದ ಡಾ. ಶುಭಂ, ಆಯುರ್ವೇದ ಡಾ. ಎಸ್.ಎಸ್. ವಿಶ್ವಾಮಿತ್ರ, ಆಯುರ್ವೇದ ಡಾ. ವಿ.ಕೆ. ಗುಪ್ತಾ, ಎಂಬಿಬಿಎಸ್ ಡಾ. ತರುಣ, ಮಾಜಿ ವೈದ್ಯಕೀಯ ಅಧಿಕಾರಿ ಏಮ್ಸ್

To View Our Youtube Channel SCAN ME

info@epilepsytreatment.org

www.epilepsytreatment.org

ಗಮನಿಸಿ: ಜಗತ್ತಿನಾದ್ಯಂತ ಅಪಸ್ಮಾರ ರೋಗಿಗಳಿಗೆ ನಾವು ಮಾತ್ರ ಸಮಾಲೋಚನೆ ಕಲ್ಪಿಸುತ್ತೇವೆ

ಉಚಿತ ಆಯುರ್ವೇದ ಔಷಧಗಳು, ಉಚಿತ ತಪಾಸಣೆ, ಉಚಿತ ವಾಸ್ತವ್ಯ, ಉಚಿತ ಆಹಾರದ ಲಾಭ ಪಡೆಯಲು ಈ ಜಾಹೀರಾತು ಪ್ರತಿಯನ್ನು ತಂದು ನಮ್ಮ ರಿಸೆಪ್ಷನ್‌ನಲ್ಲಿ ತೋರಿಸಬೇಕು

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸೂಚನೆ ಸಂ. 08/SBC/26, ದಿನಾಂಕ: 16.04.2026

ಕ್ರ.ಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	**ಬೆಂಗಳೂರು ವಿಭಾಗ: ಉಪ ಕಾಮಗಾರಿ-1:** ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗದ ಡಬ್ಲ್ಯೂಎಫ್‌ಡಿ ವಿಭಾಗದಲ್ಲಿ ಎಫ್‌ಸಿಐ ಸೈಡಿಂಗ್‌ನಲ್ಲಿ 7.05 ಕಿಮೀ. ಉದ್ದದ ದೂರಕ್ಕೆ ಈಗಿರುವ ಸಿಎಸ್‌ಟಿ-9 ಸ್ಲೀಪರುಗಳ ಮೇಲಿನ 90ಆರ್ ರೈಲುಗಳನ್ನು 52 ಕೆಜಿ. ಪಿಎಸ್‌ಸಿ ಸ್ಲೀಪರುಗಳ 90 ಯುಟಿಎಸ್ ರೈಲುಗಳನ್ನಾಗಿ 1540 ಸಾಂದ್ರತೆಯಂತೆ ಸಿಟಿಆರ್(ಎಸ್) ಕಾಮಗಾರಿ (ಉಳಿದಿರುವ ಕಾಮಗಾರಿ). **ಉಪ ಕಾಮಗಾರಿ-2:** ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗದ ಕೆಜೆಎಂ ಯಾರ್ಡ್ ವಿಭಾಗದಲ್ಲಿ ಎಫ್‌ಸಿಐ ಸೈಡಿಂಗ್‌ನಲ್ಲಿ 1.741 ಕಿಮೀ. ಉದ್ದದ ದೂರಕ್ಕೆ ಈಗಿರುವ ಸಿಎಸ್‌ಟಿ-9 ಸ್ಲೀಪರುಗಳ ಮೇಲಿನ 90ಆರ್ ರೈಲುಗಳನ್ನು 52 ಕೆಜಿ. ಪಿಎಸ್‌ಸಿ ಸ್ಲೀಪರುಗಳ 90 ಯುಟಿಎಸ್ ರೈಲುಗಳನ್ನಾಗಿ 1540 ಸಾಂದ್ರತೆಯಂತೆ ಸಿಟಿಆರ್(ಎಸ್) ಕಾಮಗಾರಿ (ಉಳಿದಿರುವ ಕಾಮಗಾರಿ).	ರೂ. 1,95,70,037/-
2	**ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್/ಬಂಗಾರಪೇಟೆ ಉಪ-ವಿಭಾಗದಲ್ಲಿ ಬೆಂಗಳೂರು-ಜೋಲಾರಪೇಟೆ ವಿಭಾಗದ ಎಲ್‌ಸಿ ಸಂ. 94, 96, 103, 118, 119, 122, 125, 126, ಯಲಹಂಕ-ಬಂಗಾರಪೇಟೆ ವಿಭಾಗದ ಎಲ್‌ಸಿ ನಂ. 166, 163, 162, 124, 148 ಮತ್ತು ಬಂಗಾರಪೇಟೆ - ಮಾರಿಕುಪ್ಪಂ ವಿಭಾಗದ ಎಲ್‌ಸಿ ನಂ. 1 ರಲ್ಲಿ (ಒಟ್ಟು 14 ಎಲ್‌ಸಿಗಳು) ಪ್ರಸ್ತಾವಿತ ಲೆವೆಲ್ ಕ್ರಾಸಿಂಗ್‌ಗಳ ರಸ್ತೆಯ ಮೇಲ್ಮೈ ಮೇಲಿನ ಅಭಿವೃದ್ಧಿ ಕಾಮಗಾರಿಗಳು. ನಿರ್ವಹಣೆಯ ಅವಧಿ 06 ತಿಂಗಳುಗಳು.	ರೂ. 65,19,809/-
3	**ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗ: ಉಪ ಕಾಮಗಾರಿ-1:** ಮುಳನೂರು (ಎಂಎಆರ್) ನಿಲ್ದಾಣದಲ್ಲಿ ಎಲೆಕ್ಟ್ರಿಕಲ್ ಭಾಗವು ಸೇರಿದಂತೆ ಪ್ರಸ್ತಾವಿತ ಟೈಪ್-2 ಕ್ವಾರ್ಟರುಗಳ ನಿರ್ಮಾಣ (4 ಘಟಕಗಳು). **ಉಪ ಕಾಮಗಾರಿ-2:** ಸ್ಯಾಟಲೈಟ್ ಗುಡ್ಸ್ ಟರ್ಮಿನಲ್ (ಎಸ್‌ಜಿಟಿ) ವಿಭಾಗದಲ್ಲಿ ಎಲೆಕ್ಟ್ರಿಕಲ್ ಭಾಗವು ಸೇರಿದಂತೆ ಕ್ರ್ಯೂ ಲಾಬಿಯ ಪ್ರಸ್ತಾವಿತ ನಿರ್ಮಾಣ. **ಉಪ ಕಾಮಗಾರಿ-3: ಸಹಾಯಕ ವಿಭಾಗೀಯ ಇಂಜಿನಿಯರ್/ಬಂಗಾರಪೇಟೆ ಉಪ-ವಿಭಾಗ:** ಟ್ಯಾಕಲ್, ಕಾಮಸಮುದ್ರಂ, ಬಿಸನತ್ತಂ, ಗುಡುಪಲ್ಲಿ, ಮುಳನೂರು, ಪಚ್ಚೂರು, ಕೋರಮಂಡಲ್, ಊರಿಗಂ, ಚಾಂಪಿಯನ್, ಕೋಲಾರ, ಶ್ರೀನಿವಾಸಪುರ, ಚಿಂತಾಮಣಿ ನಿಲ್ದಾಣಗಳಲ್ಲಿ ಎಲೆಕ್ಟ್ರಿಕಲ್ ಭಾಗವು ಸೇರಿದಂತೆ ದಿವ್ಯಾಂಗಜನರ ಸೌಲಭ್ಯಗಳ ಮೇಲಿನ ಅಭಿವೃದ್ಧಿ ಕೆಲಸಗಳು. ನಿರ್ವಹಣೆಯ ಅವಧಿ 3 ವರ್ಷ. (ಸಂಯುಕ್ತ ಟೆಂಡರು).	ರೂ. 4,67,45,665/-
4	**ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗ:** ವೈಟ್‌ಫೀಲ್ಡ್ (ಡಬ್ಲ್ಯೂಎಫ್‌ಡಿ) - ಜೋಲಾರಪೇಟೆ (ಜೆಟಿಜೆ) ವಿಭಾಗದ ನಡುವೆ ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆ - ಎಲೆಕ್ಟ್ರಿಕಲ್ ಭಾಗವು ಸೇರಿದಂತೆ ಆಟೋ ಗೂಮ್ಟಿಗಳ ಬಿಲ್ಡಿಂಗ್‌ಗಳ ನಿರ್ಮಾಣ. ನಿರ್ವಹಣೆಯ ಅವಧಿ 3 ವರ್ಷಗಳು. (ಸಂಯುಕ್ತ ಟೆಂಡರು)	ರೂ. 8,90,39,648/-
5	**ಸಹಾಯಕ ವಿಭಾಗೀಯ ಇಂಜಿನಿಯರ್/ಬಂಗಾರಪೇಟೆ ಉಪ-ವಿಭಾಗ:** ಬಿಸನತ್ತಂ (ಬಿಎಸ್‌ಎಂ) ನಿಲ್ದಾಣದಲ್ಲಿ ವಿದ್ಯುತ್ ಭಾಗವನ್ನೊಳಗೊಂಡಂತೆ ಪ್ರಸ್ತಾವಿತ ಹೊಸ ಎಸ್ ಮತ್ತು ಟಿ ಕಟ್ಟಡದ ನಿರ್ಮಾಣ. ನಿರ್ವಹಣೆಯ ಅವಧಿ 3 ವರ್ಷಗಳು. (ಸಂಯುಕ್ತ ಟೆಂಡರು)	ರೂ. 1,99,83,973/-
6	**ಬೆಂಗಳೂರು - ಯೆಲಿಯೂರು ವಿಭಾಗ:** ಯಾರ್ಡ್ ಚಲನವಲನಗಳಿಗಾಗಿ ಕೆಂಗೇರಿ (ಕೆಜಿಐ) ಯಾರ್ಡ್‌ನಲ್ಲಿ ಕಿಮೀ. 11/000-100 ರಲ್ಲಿ ಬ್ರಿಡ್ಜ್ ನಂ. 455 ಮತ್ತು ಕಿಮೀ. 11/462 ರಲ್ಲಿ ಬ್ರಿಡ್ಜ್ ಸಂ. 456 ಅನ್ನು ವಿಸ್ತರಣೆ ಮಾಡುವುದು. ನಿರ್ವಹಣೆಯ ಅವಧಿ 4 ವರ್ಷಗಳು.	ರೂ. 1,66,27,717/-
7	**ಬೆಂಗಳೂರು ವಿಭಾಗ:** ವಾಟರ್ ಕೂಲರ್‌ಗಳ ವ್ಯವಸ್ಥೆ: ಕೆಎಸ್‌ಆರ್ ಬೆಂಗಳೂರು (ಎಸ್‌ಬಿಸಿ) - 14 ನಂ., ಯಲಹಂಕ (ವೈಎನ್‌ಕೆ) - 9 ನಂ., ಬಿಡದಿ (ಬಿಐಡಿ) - 1 ನಂ., ಚಾಂಪಿಯನ್ (ಸಿಹೆಚ್‌ಯು) - 1 ನಂ., ಕೋರಮಂಡಲ್ (ಸಿಓಎಲ್) - 1 ನಂ. ಮತ್ತು ಊರಿಗಂ (ಓಜಿಎಂ) - 1 ನಂ. (ಒಟ್ಟು - 27 ನಂ.). ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 31,87,663/-
8	**ಬೆಂಗಳೂರು - ಯೆಲಿಯೂರು ವಿಭಾಗ:** ಚನ್ನಪಟ್ಟಣ (ಸಿಪಿಟಿ) ಯಾರ್ಡ್‌ನಲ್ಲಿ ಪಾದಚಾರಿಗಳ ಚಲನವಲನಕ್ಕಾಗಿ ಎಲ್‌ಸಿ ಸಂ. 47 ರ ಹತ್ತಿರ ಕಿಮೀ. 55/200 ರಲ್ಲಿ ಫುಟ್ ಓವರ್ ಬ್ರಿಡ್ಜ್‌ನ ನಿರ್ಮಾಣ. (ಗ್ಯಾಂಗ್‌ವೇ: 32.0x3.0 ಮೀ., ಸ್ಟೇರ್ ಕೇಸ್: 2x3.0x20ಮೀ). (4ಟಿ ಕ್ರಾಸಿಂಗ್‌ಗಳು) ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 1,88,44,786/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11.05.2026, 15:00 ಗಂಟೆಯವರೆಗೆ

ಟೆಂಡರು ಸೂಚನೆ ಸಂ. 09/SBC/26, ದಿನಾಂಕ: 17.04.2026

ಕ್ರ.ಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	**ಬೆಂಗಳೂರು - ಯೆಲಿಯೂರು ವಿಭಾಗ:** ಮಂಡ್ಯ (ಎಂವೈಎ) ಕಾಲೊನಿಯಲ್ಲಿ ವಿದ್ಯುತ್ ಭಾಗವನ್ನೊಳಗೊಂಡಂತೆ ಜಿಎಲ್‌ಆರ್ 2 ಲಕ್ಷ ಲೀಟರ್ ಸಾಮರ್ಥ್ಯವುಳ್ಳ 2 ಆರ್‌ಸಿಸಿ ಓವರ್ ಹೆಡ್ ಟ್ಯಾಂಕ್ (ಓಹೆಚ್‌ಟಿ) ನ ನಿರ್ಮಾಣ. ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 96,32,952/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.05.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/55/AAF/PRB/SWR/2026-27 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ - 590 018, ಕರ್ನಾಟಕ. ಭಾರತ.

Ref. VTU/BGM/SAP/CW1/05/T-742/2026-27/414 Date.25-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ-ಲಕೋಟೆ ಪದ್ಧತಿಯಲ್ಲಿ) ಇ-ಟಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ.

ಕೆಲಸದ ಹೆಸರು: Tender for Supply of Laptops to SC/ST students of VTU PG Centres of Muddenahalli, Belagavi, Mysuru, Kalaburgi, Talakal and UBDTCE, Davangere under SCPS/TSP plan through VTU Fund.

ಟೆಂಡರಿಗಿಟ್ಟ ಮೊತ್ತ: ರೂ.4,98,75,000/- ಮುಂಗಡ ಠೇವಣಿ: ರೂ.7,50,000/- ಟೆಂಡರ್ ಪ್ರಿ-ಬಿಡ್ ಮಿಟಿಂಗ ದಿನಾಂಕ. 28-04-2026 ರಂದು 11.00 ಗಂಟೆಗೆ ಆನಲೈನ ಮೂಲಕ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 09-05-2026 ರ 2.30 ರ ವರೆಗೆ. ಟೆಂಡರ್ ತೆರೆಯುವ ದಿನಾಂಕ: 11-05-2026 ರ 11.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಮತ್ತು www.vtu.ac.in ನೋಡಬಹುದು.

ಸಹಿ/- ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ಡಿಐಪಿಆರ್/ ಬೆಳಗಾವಿ/157/ಮಣಿಪಾಲ್/2026-27

ಹಾಪ್ ಕಾಮ್ಸ್, ಲಾಲ್ ಬಾಗ್, ಬೆಂಗಳೂರು - 4

ಟೆಂಡರ್ ಪ್ರಕಟಣೆ

"ಬೆಂಗಳೂರು ಹಾಪ್‌ಕಾಮ್" ಸಂಸ್ಥೆಯು ತನ್ನ ಕೇಂದ್ರ ಕಛೇರಿ ಆವರಣದಲ್ಲಿರುವ 30 ಮೆಟ್ರಿಕ್ ಟನ್ ಸಾಮರ್ಥ್ಯದ ಎಲೆಕ್ಟ್ರಾನಿಕ್ ವೇ-ಬ್ರಿಡ್ಜ್‌ನ್ನು ದಿನಾಂಕ 01.07.2026 ರಿಂದ ಜಾರಿಗೆ ಬರುವಂತೆ ಮುಂದಿನ 3 ವರ್ಷಗಳ ಅವಧಿಗೆ ಮಾಹೆಯಾನ ರೂ.1,00,000.00 ಮೇಲ್ಪಟ್ಟು ಗರಿಷ್ಠ ಬಾಡಿಗೆ ಪಾವತಿಸಿ ನಿರ್ವಹಣಾ ಗುತ್ತಿಗೆ ನಿರ್ವಹಿಸಲು ಮುಂದೆ ಬರುವ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅದರಂತೆ ಆಸಕ್ತಿಯುಳ್ಳ ಗುತ್ತಿಗೆದಾರರು ಷರತ್ತುಗಳನ್ನು ಒಳಗೊಂಡ ಟೆಂಡರ್ ಫಾರಂ ಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

1	ಟೆಂಡರ್ ಫಾರಂ ಬೆಲೆ	ರೂ. 1000/-
2	ಇ.ಎಂ.ಡಿ. ಮೊತ್ತ	ರೂ. 80000/-
3	ಟೆಂಡರ್ ಫಾರಂ ವಿತರಿಸುವ ದಿನಾಂಕ	ದಿನಾಂಕ: 27.04.2026 ರಿಂದ 11.05.2026 ಸಂಜೆ 5.00 ಘಂಟೆಯವರೆಗೆ
4	ಟೆಂಡರ್ ಫಾರಂ ಸಲ್ಲಿಸಲು ಅಂತಿಮ ದಿನಾಂಕ	ದಿನಾಂಕ: 12.05.2026 ರ ಬೆಳಿಗ್ಗೆ 11.00 ಘಂಟೆಯವರೆಗೆ
5	ಟೆಂಡರ್ ಫಾರಂಗಳನ್ನು ನೀಡುವ ಹಾಗೂ ಪಡೆಯುವ ಅಧಿಕಾರಿ	ವ್ಯವಸ್ಥಾಪಕ ನಿರ್ದೇಶಕರು
6	ಟೆಂಡರ್ ಫಾರಂ ತೆರೆಯುವ ಅಧಿಕಾರಿ, ದಿನಾಂಕ, ಸ್ಥಳ	ವ್ಯವಸ್ಥಾಪಕ ನಿರ್ದೇಶಕರು ದಿನಾಂಕ : 12.05.2026 ಮಧ್ಯಾಹ್ನ 12.00 ಘಂಟೆಗೆ ಪ್ರಧಾನ ಕಛೇರಿ, ವ್ಯನಿ ರವರ ಕೊಠಡಿಯಲ್ಲಿ.

ಟೆಂಡರ್‌ನಲ್ಲಿ ನಮೂದಿಸಿರುವ ಮಾಹೆಯಾನ 3 ತಿಂಗಳ ಬಾಡಿಗೆ ಮೊತ್ತವನ್ನು ಭದ್ರತಾ ಠೇವಣಿಯಾಗಿ ಪಾವತಿಸತಕ್ಕದ್ದು. ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ಟೆಂಡರ್‌ಗೆ ಸಂಬಂಧಿಸಿದ ಷರತ್ತು ಹಾಗೂ ನಿಬಂಧನೆಗಳನ್ನು ಟೆಂಡರ್ ಫಾರಂನಲ್ಲಿ ನಮೂದಿಸಲಾಗಿರುತ್ತದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

ದೂರವಾಣಿ ಸಂಖ್ಯೆ: 26579017 / 265722832

Published for the Proprietors, Metropolitan Media Company Limited, by Lokesh K V at No.74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No.9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph:08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.

ಒಳಮೀಸಲು ನಿರ್ಧಾರ: ಬಿಜೆಪಿ ಹೋರಾಟದ ಎಚ್ಚರಿಕೆ

ಯಾವ್ಯಾವ ವರದಿಗಳು ಸರಕಾರಕ್ಕೆ ಅವೈಜ್ಞಾನಿಕ?: ಬಿಜೆಪಿ ದಲಿತ ನಾಯಕರ ಪ್ರಶ್ನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಒಳಮೀಸಲು ಹಂಚಿಕೆಯಲ್ಲಿ ಪರಿಶಿಷ್ಟ ಜಾತಿಗಳಿಗೆ ಮೀಸಲು ಪ್ರಮಾಣದಲ್ಲಿ ದೊಡ್ಡ ವಂಚನೆಯಾಗಿದೆ ಎಂದು ಬಿಜೆಪಿಯ ದಲಿತ ನಾಯಕರು ಆಕ್ಷೇಪಿಸಿದ್ದು, ಈ ಬಗ್ಗೆ ಹೋರಾಟ ನಡೆಸುವ ಎಚ್ಚರಿಕೆ ನೀಡಿದ್ದಾರೆ.

ರಾಜ್ಯ ಬಿಜೆಪಿ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಡಿಸಿಎಂ ಗೋವಿಂದ ಕಾರಜೋಳ, ''ಸಿಎಂ ಸಿದ್ದರಾಮಯ್ಯನವರೇ, ನೀವೇ ನೇಮಿಸಿದ ನ್ಯಾ.ನಾಗಮೋಹನ್‌ದಾಸ್ ಅವರ ವರದಿ ಅವೈಜ್ಞಾನಿಕ ಎಂಬ ಕಾರಣಕ್ಕೆ ತಿರಸ್ಕರಿಸಿದ್ದೀರಾ? ನೀವೇ ರಚಿಸಿದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಅಧ್ಯಕ್ಷತೆ ತಾಂತ್ರಿಕ ಸಮಿತಿ ವರದಿ ವೈಜ್ಞಾನಿಕವೆಂದು ಒಪ್ಪಿಕೊಂಡಿದ್ದೀರಾ ಎಂಬುದನ್ನು ಸ್ಪಷ್ಟಪಡಿಸಬೇಕು. ಬೆಟ್ಟ ಅಗೆದು ಇಲಿ ಹುಡುಕಿದಂತೆ ಸಿದ್ದರಾಮಯ್ಯನವರು ಒಳಮೀಸಲು ಜಾರಿ ನಿರ್ಧಾರ ಪ್ರಕಟಿಸಿ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡಿದ್ದಾರೆ,'' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಾ ಮೋಸಗಾರ: ''ಸಿದ್ದರಾಮಯ್ಯನವರೇ, ನಿಮಗೆ ಬದ್ಧತೆ ಎಲ್ಲಿದೆ? ಜನರಿಗೆ ಮೋಸ ಮಾಡಿ, ಬಡವರ ದಾರಿ ತಪ್ಪಿಸಿ ಬಡವರಿಗೆ ಆಹಿಂದ ನಾಯಕ ಎಂದು ಹೇಳಿ ಅಧಿಕಾರಕ್ಕೆ ಬರುವುದೊಂದೇ ನಿಮ್ಮ ಗುರಿ. ಕುರ್ಚಿ ಉಳಿಸಿಕೊಳ್ಳಲು ನೀವು ಅನುಸರಿಸುತ್ತಿರುವ ನಡೆಯನ್ನು ನೋಡಿದರೆ ಇದಕ್ಕಿಂತ ಹೆಚ್ಚಿನ ಮೋಸವನ್ನು ಪ್ರಪಂಚದಲ್ಲಿ ಬೇರೆ ಯಾರೂ ಮಾಡಲು ಸಾಧ್ಯವಿಲ್ಲ ಎನಿಸುತ್ತದೆ,'' ಎಂದು ಕಿಡಿ ಕಾರಿದರು.

ಉಪ ಜಾತಿಗಳ ನಡುವೆ ಸಂಘರ್ಷ: ''ಪರಿಶಿಷ್ಟರ ಮೀಸಲು ವಿಚಾರದಲ್ಲಿ ಶುಕ್ರವಾರ ನಡೆದ ವಿಶೇಷ ಸಂಪುಟ ಸಭೆಯ ನಿರ್ಧಾರವನ್ನು ಯಾರೂ ಒಪ್ಪಲಾಗದು. ಎ.ಜೆ.ಸದಾಶಿವ ವರದಿ, ನಾಗಮೋಹನ್ ದಾಸ್ ವರದಿ, ಹಿಂದಿನ ಬಿಜೆಪಿ ಸರಕಾರದಲ್ಲಿ ರಚನೆಯಾಗಿದ್ದ ಸಂಪುಟ ಉಪ ಸಮಿತಿ ವರದಿ, ಸುಪ್ರೀಂ ಕೋರ್ಟ್ ಆದೇಶವಿದ್ದರೂ ಯಾವುದನ್ನೂ ಪರಿಗಣಿಸದೇ ಖಾಜಿ ನ್ಯಾಯ ಮಾಡಿದ್ದಾರೆ,'' ಎಂದು ದೂರಿದರು. ''ಪರಿಶಿಷ್ಟಜಾತಿಗಳ ಉಪ ಜಾತಿಗಳಲ್ಲಿ ಸಂಘರ್ಷ ಸೃಷ್ಟಿಸುವ ಜತೆಗೆ ನ್ಯಾಯಾಲಯದಲ್ಲಿ ಹಿನ್ನಡೆಯಾಗಬೇಕೆಂಬ ಉದ್ದೇಶವೂ ಸಿದ್ದರಾಮಯ್ಯನವರಿಗಿದ್ದು, ಇಂತಹ ಮೋಸದಾಟವನ್ನು ಬಿಡಬೇಕು,'' ಎಂದು ಆಗ್ರಹಿಸಿದರು.

ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ''ಒಳಮೀಸಲಿಗೆ ಸಂಬಂಧಿಸಿದಂತೆ ಎಲ್ಲರನ್ನೂ ಬೀದಿಯಲ್ಲಿ ನಿಲ್ಲಿಸಿ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾಕೆಂಬ ರೀತಿಯಲ್ಲಿ ಸಿಎಂ ಸಿದ್ದರಾಮಯ್ಯನವರ ಕಾಂಗ್ರೆಸ್ ಸರಕಾರ ನಿರ್ಧಾರ ಕೈಗೊಂಡಿದೆ. ಈ ತೀರ್ಮಾನ ಮಾಡುವಾಗ ಡಿಸಿಎಂ ಬೆಂಗಳೂರಿನಲ್ಲೇ ಇರಲಿಲ್ಲ. ಬಹುಶಃ ಅವರಿಗೂ ಇದು ತೃಪ್ತಿಕರವಲ್ಲ ಎಂಬುದು ಗೊತ್ತಿತ್ತು ಎನಿಸುತ್ತದೆ,'' ಎಂದು ಹೇಳಿದರು.

ಸಮುದಾಯದ ಪರ ನಿಲ್ಲದ ಸಚಿವರು

''ರಾಜ್ಯ ಸರಕಾರವು ಒಂದು ಖಾಜಿ ನ್ಯಾಯದ ತೀರ್ಮಾನ ಮಾಡಿದ್ದು, ಪರಿಶಿಷ್ಟ ಜಾತಿಗಳು ಬೀದಿಗೆ ಬಿದ್ದಂತಾಗಿದೆ. ಸಮುದಾಯದ ಸಚಿವರು ಜನಾಂಗದ ಪರವಾಗಿ ನಿಲ್ಲಬೇಕಿತ್ತೇ ಹೊರತು ಕಾಂಗ್ರೆಸ್‌ನ ಪರವಾಗಿ ಅಲ್ಲ. ಸಮುದಾಯದವರಿಗೆ ಮೀಸಲು ಕೇಳುವಲ್ಲಿ ಸಚಿವರು ಸಂಪೂರ್ಣ ವಿಫಲರಾಗಿದ್ದು, ಇದನ್ನು ನಾವು ವಿರೋಧಿಸುತ್ತೇವೆ,'' ಎಂದು ಹೇಳಿದರು.

> ಅನೇಕ ಆಯೋಗಗಳನ್ನು ರಚಿಸಿ, ವರದಿ ಪಡೆದು ಅವೆಲ್ಲವನ್ನೂ ತಿರಸ್ಕರಿಸಿದ ದಾಖಲೆ ಬರೆದ ಸಿಎಂ ಸಿದ್ದರಾಮಯ್ಯ. ರಾಜ್ಯ ಕಾಂಗ್ರೆಸ್ ಸರಕಾರ ಒಳಮೀಸಲು ವಿಚಾರಕ್ಕೆ ಕೊನೆ ಮೊಳೆಯನ್ನು 3 ವರ್ಷಗಳ ಬಳಿಕ ಹೊಡೆದಿದೆ.
> **- ಎ.ನಾರಾಯಣಸ್ವಾಮಿ** ಕೇಂದ್ರದ ಮಾಜಿ ಸಚಿವ

> ಖಾಲಿಯಿರುವ ಹುದ್ದೆಗಳ ಪೈಕಿ 56,432 ಹುದ್ದೆಗಳು ಭರ್ತಿಯಾಗಬಾರದೆಂಬ ದುರುದ್ದೇಶದಿಂದ ಸರಕಾರ ಪದೇಪದೆ ತಪ್ಪು ಮಾಡುತ್ತಿದೆ. ಮೀಸಲು ವಿಚಾರದಲ್ಲೂ ಪರಿಶಿಷ್ಟ ಜಾತಿಯ 101 ಜಾತಿಗಳಿಗೂ ಅನ್ಯಾಯ ಮಾಡಿದೆ.
> **- ಪಿ.ರಾಜೀವ್** ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ

> ಬಸವರಾಜ ಬೊಮ್ಮಾಯಿಯವರು ಸಿಎಂ ಇದ್ದಾಗ ಹೆಚ್ಚಿಸಿದ ಮೀಸಲು ಪರಿಣಾಮ ನಾಲ್ಕು ಶೈಕ್ಷಣಿಕ ವರ್ಷಗಳಲ್ಲಿ ಈ ಸಮುದಾಯಗಳ ಮಕ್ಕಳಿಗೆ ಎಂಜಿನಿಯರಿಂಗ್, ಮೆಡಿಕಲ್ ಸೀಟುಗಳು ಹೆಚ್ಚುವರಿ ಮೀಸಲಿನಡಿ ಲಭಿಸಿವೆ. ಉದ್ಯೋಗ ಮೀಸಲಿಗಿದ್ದ ತಡೆಯಾಜ್ಞೆ ತೆರವಿಗೆ ಸಿಎಂ ಸಿದ್ದರಾಮಯ್ಯನವರ ಪ್ರಯತ್ನವೇನು?
> **- ಎನ್.ಮಹೇಶ್** ಮಾಜಿ ಸಚಿವ

> ಸಚಿವ ಸಂಪುಟದ ನಿರ್ಧಾರ ಭೋವಿ, ಬಂಜಾರ ಸಮುದಾಯಕ್ಕೂ ಅನ್ಯಾಯವಾಗಲಿದೆ. ಮುಂದಿನ ಪೀಳಿಗೆಯವರಿಗೂ ಅನ್ಯಾಯವಾಗಲಿರುವ ಸರಕಾರದ ನಿರ್ಧಾರದ ವಿರುದ್ಧ ರಾಜ್ಯಾದ್ಯಂತ ಹೋರಾಟ ಮಾಡುವ ಭೋವಿ, ಬಂಜಾರ, ಕೊರಮ, ಕೊರಚ ಸಮುದಾಯಕ್ಕೆ ನಮ್ಮ ಬೆಂಬಲವಿದೆ.
> **-ಮಾನಪ್ಪ ವಜ್ಜಲ್** ಬಿಜೆಪಿ ಶಾಸಕ

ಪರಿಶಿಷ್ಟ ಜಾತಿಗಳಿಗೆ ಐತಿಹಾಸಿಕ ಮೋಸ: ವಿಜಯೇಂದ್ರ ಆರೋಪ

■ **ವಿಕ ಸುದ್ದಿಲೋಕ** ಬೆಂಗಳೂರು

ಮೀಸಲು ವಿಚಾರವಾಗಿ ಕರ್ನಾಟಕದ ಪರಿಶಿಷ್ಟಜಾತಿಗಳಿಗೆ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಐತಿಹಾಸಿಕ ಮೋಸ ಮಾಡಿದ್ದು ಮತ್ತು ಬೆನ್ನಿಗೆ ಚೂರಿ ಹಾಕಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.

ಈ ಬಗ್ಗೆ 'ಎಕ್ಸ್'ನಲ್ಲಿ ಸಂದೇಶ ಹಂಚಿಕೊಂಡಿರುವ ಅವರು, ''ಸುಪ್ರೀಂಕೋರ್ಟ್ ಆದೇಶದನ್ವಯ ಮೀಸಲು ಹಂಚಿಕೆಗೆ ಎರಡೂವರೆ ವರ್ಷದವರೆಗೆ ಕಾಲಹರಣ ಮಾಡಿ ಸಂಪುಟ ಸಭೆಯಲ್ಲಿ ಎ, ಬಿ, ಮತ್ತು ಸಿ ವರ್ಗಗಳಾಗಿ ವಿಂಗಡಿಸಿದೆ. ಹಿಂದಿನ ಬಿಜೆಪಿ ಸರಕಾರ ಪರಿಶಿಷ್ಟ ಜಾತಿಗಳಿಗೆ ಶೇ.15ರಿಂದ ಶೇ.17ಕ್ಕೆ ಮೀಸಲು ಹೆಚ್ಚಿಸಿತ್ತು. ಆದರೆ ಶುಕ್ರವಾರ ನಡೆದ ವಿಶೇಷ ಸಂಪುಟ ಸಭೆಯಲ್ಲಿ ಬಿಜೆಪಿ ಸರಕಾರ 'ಎ' ವರ್ಗಕ್ಕೆ ನೀಡಿದ್ದ ಶೇ.6ರಷ್ಟು ಮೀಸಲನ್ನು ಶೇ. 5.25ಕ್ಕೆ ಹಾಗೂ 'ಬಿ' ವರ್ಗಕ್ಕೆ ನೀಡಲಾಗಿದ್ದ ಶೇ.5.5ರಷ್ಟು ಮೀಸಲನ್ನು ಶೇ.5.25ಕ್ಕೆ ಇಳಿಸುವ ಮೂಲಕ ಎಡ ಮತ್ತು ಬಲ ಸಮುದಾಯಗಳಿಗೆ ಘೋರ ಅನ್ಯಾಯ ಮಾಡಿದೆ,'' ಎಂದು ಆಕ್ಷೇಪಿಸಿದ್ದಾರೆ.

ಬಂಜಾರ, ಭೋವಿ, ಕೊರಚ ಹಾಗೂ ಕೊರಮ ಸಮುದಾಯ ಹಾಗೂ ಅಲೆಮಾರಿ ಸಮುದಾಯಗಳಿಗೆ ನೀಡಲಾಗಿದ್ದ ಪ್ರತ್ಯೇಕ ರದ್ದುಗೊಳಿಸಿದೆ. ನ್ಯಾಯಯುತವಾಗಿ ಬರಬೇಕಾಗಿದ್ದ ಶೇ.5.5ರ ಮೀಸಲು ಪ್ರಮಾಣವನ್ನು ಶೇ.4.5ಕ್ಕೆ ಇಳಿಸಿದೆ. ನ್ಯಾಯಾಲಯದ ತಡೆಯಾಜ್ಞೆ ಇಲ್ಲದಿದ್ದರೂ ರಾಜ್ಯ ಸರಕಾರವೇ ಪ್ರಮಾಣ ಪತ್ರ ಸಲ್ಲಿಸಿ ಶೇ.17ರ ಮೀಸಲನ್ನು ಶೇ.15ಕ್ಕೆ ಇಳಿಕೆ ಮಾಡುವುದಾಗಿ ಒಪ್ಪಿಕೊಂಡಿದ್ದರ ಪರಿಣಾಮ ಪರಿಶಿಷ್ಟ ಜಾತಿಗಳ ಶೇ.2ರಷ್ಟು ಮೀಸಲು ಇಳಿಕೆಗೆ ಕಾರಣವಾಗಿದೆ,'' ಎಂದು ದೂರಿದ್ದಾರೆ.

ಒಳಮೀಸಲು ಜಾರಿ ಐತಿಹಾಸಿಕ ಹೆಜ್ಜೆ: ಸತೀಶ್

ಬೆಳಗಾವಿ: ಬಿಜೆಪಿಯ ವಿರೋಧದ ನಡುವೆಯೂ ದಶಕಗಳ ಬೇಡಿಕೆಯಾಗಿದ್ದ ಒಳಮೀಸಲು ಜಾರಿಗೊಳಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಐತಿಹಾಸಿಕ ನಿರ್ಧಾರ ಕೈಗೊಂಡಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ''ಬಿಜೆಪಿಯವರು ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ಒಳಮೀಸಲು ವಿರೋಧಿಸುತ್ತಿದ್ದಾರೆ ಮತ್ತು ಸರಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ,'' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

''ವಿಶೇಷ ಸಂಪುಟ ಸಭೆಯ ನಿರ್ಧಾರವನ್ನು ಸರಕಾರ, ಸಚಿವರು ಸರ್ವಾನುಮತದಿಂದ ಕೈಗೊಂಡಿದೆ. ಪ್ರತಿಯೊಂದು ಸಮುದಾಯವೂ ಖುಷಿಯಿಂದ ಒಪ್ಪಿಕೊಂಡಿವೆ. ಪ್ರತಿಪಕ್ಷಗಳು ಸರಕಾರದ ಪ್ರತಿಯೊಂದು ಕೆಲಸದಲ್ಲೂ ಲೋಪದೋಷ ಹುಡುಕುವುದು ಸಹಜ,'' ಎಂದರು.

ಟೀಕೆ ಮಾಡುವುದೇ ಬಿಜೆಪಿ ಪ್ರವೃತ್ತಿ: ''ಬಿಜೆಪಿಯು ಶೋಷಿತ ಸಮುದಾಯಗಳಿಗೆ ನ್ಯಾಯ ಸಿಗಬೇಕೆಂದು ಬಯಸುವುದಿಲ್ಲ. ಬದಲಿಗೆ ರಾಜಕೀಯ ಉದ್ದೇಶಕ್ಕಾಗಿ ವಿರೋಧ ಮಾಡಲು ಹೊರಟಿದೆ,''ಎಂದು ಬಿಜೆಪಿ ವಿರುದ್ಧ ಸಚಿವ ಮಹದೇವಪ್ಪ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

''ಬಿಜೆಪಿ ಆಡಳಿತದ ರಾಜ್ಯದಲ್ಲಿ ಒಳಮೀಸಲು ಜಾರಿಗೊಳಿಸಿದೆಯೇ? ಏನನ್ನೂ ಮಾಡದೇ ಕೇವಲ ಟೀಕೆ ಅವರ ಪ್ರವೃತ್ತಿ. ಬಿಜೆಪಿಗೆ ಪರಿಶಿಷ್ಟರ ಮತ ಬೇಕು. ಸಾಮಾಜಿಕ ನ್ಯಾಯ ಬೇಕಿಲ್ಲ. ಕೇಂದ್ರ ಸರಕಾರ ಶೇ.17ರಷ್ಟು ಮೀಸಲು ಪ್ರಮಾಣವನ್ನು ಶೆಡ್ಯೂಲ್ 9ಕ್ಕೆ ಸೇರಿಸಿದರೆ ಅದನ್ನು ಜಾರಿಗೊಳಿಸಲು ರಾಜ್ಯ ಸರಕಾರ ಸಿದ್ಧವಿದೆ,'' ಎಂದರು.

ಸ್ಟೇಟ್ ನ್ಯೂಸ್

ಕರ್ನಾಟಕದಲ್ಲೂ ಪವನ್ ಕಲ್ಯಾಣ್ ಜನಸೇನಾ ವಿಸ್ತರಣೆ: ನಾಗಬಾಬು

ಚಿತ್ರದುರ್ಗ: ''ಜನಸೇನಾ ಪಕ್ಷದ ರಾಜಕೀಯ ದೃಷ್ಟಿಕೋನ ಬೆಂಬಲಿಸುವ ಮನಸ್ಸುಗಳು, ಪವನ್ ಕಲ್ಯಾಣ್ ನಾಯಕತ್ವ ಇಷ್ಟಪಡುವವರು, ಸಾಮಾಜಿಕ ಜಾಗೃತಿ ಉಳ್ಳವರು ಇರುವ ಕಡೆ ಪಕ್ಷದ ಚಟುವಟಿಕೆಗಳನ್ನು ವಿಸ್ತರಿಸುತ್ತೇವೆ,'' ಎಂದು ಆಂಧ್ರಪ್ರದೇಶ ವಿಧಾನ ಪರಿಷತ್ ಸದಸ್ಯ, ನಟ ಪವನ್ ಕಲ್ಯಾಣ್ ಹಿರಿಯ ಸಹೋದರ ನಾಗಬಾಬು ಹೇಳಿದರು.

ಚಳ್ಳಕೆರೆ ರಸ್ತೆಯಲ್ಲಿರುವ ಎಸ್.ಜೆ.ಕನ್ವೆಷನ್ ಹಾಲ್‌ನಲ್ಲಿ ಶನಿವಾರ ಜನಸೇನಾ ಪಕ್ಷದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ತೆಲುಗು ಭಾಷಿಕರ ಪ್ರಭಾವ ಇರುವ ಪ್ರದೇಶಗಳು ಮಾತ್ರವಲ್ಲದೆ ಜನಸೇನಾದ ರಾಜಕೀಯ ನಿಲುವು ಒಪ್ಪಿಕೊಳ್ಳುವ ರಾಜ್ಯಗಳಲ್ಲಿ ಪಕ್ಷವನ್ನು ಸಂಘಟಿಸಲಿದ್ದೇವೆ,'' ಎಂದರು. ''ಕ್ಷೇತ್ರಗಳ ಪುನರ್ ವಿಂಗಡಣೆಯಿಂದ ದಕ್ಷಿಣಕ್ಕೆ ಅನ್ಯಾಯವಾಗುತ್ತಿದೆ ಎನ್ನುವ ಅಭಿಪ್ರಾಯ ರಾಜಕೀಯ ಪ್ರೇರಿತವಾದದ್ದು. ಕ್ಷೇತ್ರ ವಿಂಗಡಣೆಗೆ ಕಾಂಗ್ರೆಸ್ ವಿರೋಧಿಸಿದರೆ ದಕ್ಷಿಣದ ರಾಜ್ಯಗಳಿಗೆ ನಿಜವಾಗಿಯೂ ಅನ್ಯಾಯವಾಗಲಿದೆ. ಕ್ಷೇತ್ರ ಪುನರ್ ವಿಂಗಡಣೆ ಆಗದಿದ್ದಲ್ಲಿ ಬಿಜೆಪಿಗೆ ಆಗುವ ನಷ್ಟವೇನಿಲ್ಲ,'' ಎಂದು ಹೇಳಿದರು.

20 ಸಾವಿರ ಹಸು ವಿತರಣೆ ಗುರಿ

ಬೆಳಗಾವಿ: ಹಸು ಖರೀದಿಗೆ ಬಜೆಟ್‌ನಲ್ಲಿ ಶೇ. 25ರಷ್ಟು ಸಬ್ಸಿಡಿ ಘೋಷಿಸಲಾಗಿದ್ದು, ಬೆಳಗಾವಿ, ಕಲಬುರಗಿ ಜಿಲ್ಲೆಗಳಲ್ಲಿ 20 ಸಾವಿರ ಹಸುಗಳನ್ನು ವಿತರಿಸುವ ಗುರಿ ಹೊಂದಲಾಗಿದೆ ಎಂದು ಸಚಿವ ಕೆ. ವೆಂಕಟೇಶ್ ಹೇಳಿದರು. ಕಾಲು ಬಾಯಿ ರೋಗದ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ''ಸದ್ಯ ಪ್ರತಿನಿತ್ಯ 70 ರಿಂದ 80 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿ,'' ಎಂದರು.

ಬೆಂಗಳೂರಿಗೆ ವಿಶ್ವದರ್ಜೆ ಸೌಕರ್ಯ

ಬೆಂಗಳೂರು: ''ವಿಶ್ವದರ್ಜೆ ನಗರ ಮೂಲಸೌಕರ್ಯದೊಂದಿಗೆ ಭವಿಷ್ಯಕ್ಕೆ ಪೂರಕವಾಗಿ ಬೆಂಗಳೂರು ನಗರವನ್ನು ನಿರ್ಮಾಣ ಮಾಡಲಾಗುವುದು,'' ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಹೊಸದಿಲ್ಲಿಯಲ್ಲಿ ಶನಿವಾರ ಆಯೋಜಿಸಿದ್ದ ಅರ್ಬನ್ ಚಾಲೆಂಜ್ ಫಂಡ್ (ಯುಸಿಎಫ್) ಹಾಗೂ ಅರ್ಬನ್ ಇನ್ವೆಸ್ಟ್ ವಿಂಡೋ 56ನೇ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಮಾತನಾಡಿ, ''ಕರ್ನಾಟಕವು 1.25 ಲಕ್ಷ ಕೋಟಿ ವೆಚ್ಚದ 1,082 ನಗರ ಮೂಲಸೌಕರ್ಯ ಯೋಜನೆಗಳನ್ನು ರೂಪಿಸಿದೆ. ಕೇಂದ್ರ ಸರಕಾರವು 5,500 ಕೋಟಿಗಿಂತ ಹೆಚ್ಚಿನ ಅನುದಾನ ಬಿಡುಗಡೆ ಮಾಡುವ ಮೂಲಕ ಸದ್ಯ ಜಾರಿಯಲ್ಲಿರುವ ಯೋಜನೆಗಳಿಗೆ ಅಗತ್ಯ ಸಹಕಾರ ನೀಡಬೇಕು'' ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಮನೋಹರ್‌ಲಾಲ್ ಖಟ್ಟರ್ ಅವರು ''ಮೂವಿಂಗ್ ಟುವರ್ಡ್ಸ್ ಎಫಿಶಿ ಸಿಟಿ ಗವರ್ಮೆಂಟ್: ಎ ಫ್ರೇಮ್ ವರ್ಕ್ ಫಾರ್ ಮಿಲಿಯನ್ ಪ್ಲಸ್ ಸಿಟೀಸ್'' ವರದಿಯನ್ನು ಬಿಡುಗಡೆ ಮಾಡಿದರು.

ನಾರಿ ಶಕ್ತಿ ವಂದನಾ ವಿಧೇಯಕವನ್ನು ಲೋಕಸಭೆಯಲ್ಲಿ ಸೋಲಿಸಿದ 'ಐಎನ್‌ಡಿಐಎ'ಕೂಟದ ವಿರುದ್ಧ ನಾರಿ ಶಕ್ತಿ ಫೋರಂ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಯಿತು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸುಮಂಗಲಿ ಸೇವಾ ಆಶ್ರಮದ ಸ್ಥಾಪಕರಾದ ಎಸ್.ಜಿ. ಸುಶೀಲಮ್ಮ, ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಸಿ.ಮಂಜುಳಾ ಭಾಗವಹಿಸಿದ್ದರು.

ರಾಜ್ ಸ್ಮಾರಕ ಭೂಮಿಗೆ ಟೀಕೆ: ಕ್ಷಮೆ ಕೋರಿದ ನಟ ಚೇತನ್

■ **ವಿಕ ಸುದ್ದಿಲೋಕ** ಬೆಂಗಳೂರು

ವರನಟ ದಿವಂಗತ ಡಾ. ರಾಜ್‌ಕುಮಾರ್ ಅವರ ಸ್ಮಾರಕಕ್ಕೆ ಸರಕಾರ ನೀಡಿರುವ ಎರಡೂವರೆ ಎಕರೆ ಭೂಮಿ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದ ನಟ ಚೇತನ್ ಅಹಿಂಸಾ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಈ ಬೆನ್ನಲ್ಲೇ ನಟ ಚೇತನ್ ಕ್ಷಮೆಯಾಚಿಸಿದ್ದಾರೆ.

ರಾಜ್‌ಕುಮಾರ್ ಅಭಿಮಾನಿಗಳು, ಕನ್ನಡ ಸಂಘಟನೆಗಳು ತೀವ್ರ ತರಾಟೆಗೆ ತೆಗೆದುಕೊಂಡಿದ್ದವು. ಕೆಲ ಸಂಘಟನೆ ಮುಖಂಡರು ಚೇತನ್ ಮನೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದ್ದರು.

ವಿವಾದದ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಚೇತನ್, 'ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ. ಜತೆಗೆ ಕ್ಷಮೆ ಯಾಚಿಸುತ್ತೇನೆ. ಯಾರ ಮನಸ್ಸನ್ನೂ ನೋಯಿಸುವ ಉದ್ದೇಶ ನನ್ನದಾಗಿಲ್ಲ. ನಾನೂ ಸಹ ರಾಜ್‌ಕುಮಾರ್ ಅವರ ಅಭಿಮಾನಿ,'' ಎಂದು ಹೇಳಿದರು.

ಡಾ. ರಾಜ್‌ಕುಮಾರ್ ಅವರ ಹುಟ್ಟುಹಬ್ಬದಂದು ನಟ ಚೇತನ್ ತಮ್ಮ 'ಎಕ್ಸ್'ಖಾತೆಯಲ್ಲಿ, ''ನಾವು ರಾಜಕುಮಾರ್ ಅವರನ್ನು ಒಬ್ಬ ಮಹಾನ್ ಕಲಾವಿದರಾಗಿ ಗೌರವಿಸುತ್ತೇವೆ. ಆದರೆ, ಬೆಂಗಳೂರು ನಗರದ ಮಧ್ಯ ಭಾಗದಲ್ಲಿ 2006ರಲ್ಲಿ ಒಬ್ಬ ನಟನ ಸಮಾಧಿಯ ಕಾಂಪ್ಲೆಕ್ಸ್‌ಗೆ 2.5 ಎಕರೆ ನೀಡುವುದು ತಿಳಿವಳಿಕೆಯ ನಿರ್ಧಾರವಾಗಿತ್ತೇ ಎಂಬುದನ್ನು ಪ್ರಶ್ನಿಸಬೇಕಾಗಿದೆ. ಭಾರತದಲ್ಲಿ ಪ್ರಮುಖ ಹೋರಾಟವೇ ಭೂಮಿ. ಸರಕಾರವು ಅದನ್ನು ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಹಾಗೂ ಸಾರ್ವಜನಿಕ ಉಪಯೋಗಕ್ಕೆ ತಕ್ಕಂತೆ ಹಂಚಬೇಕು. ಮತಗಳ ಲಾಭದ ಅವಕಾಶವಾದಿ ಉದ್ದೇಶದಿಂದ ಅಲ್ಲ,'' ಎಂದು ಪೋಸ್ಟ್ ಮಾಡಿದ್ದರು.

ಚೇತನ್ ಅವರ ಈ ಪೋಸ್ಟ್‌ಗೆ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಕರ್ನಾಟಕ ಸಾಂಸ್ಕೃತಿಕ ರಾಯಭಾರಿಗೆ, ಕಲಾ ಚೇತನ ರಾಜ್‌ಕುಮಾರ್ ಅವರಿಗೆ ಸರಕಾರ ಗೌರವ ನೀಡುವ ಉದ್ದೇಶದಿಂದ ಸ್ಮಾರಕಕ್ಕಾಗಿ ಜಾಗ ನೀಡಿದೆ. ಅದನ್ನು ಅವರ ಕುಟುಂಬ ಕೇಳಿ ಪಡೆದಿರಲಿಲ್ಲ, ಘಟನೆ ನಡೆದು 20 ವರ್ಷಗಳ ಬಳಿಕ ನಟ ಚೇತನ್ ಕೇವಲ ಪ್ರಚಾರಕ್ಕಾಗಿ ಈ ವಿಷಯ ಪ್ರಸ್ತಾಪಿಸಿದ್ದಾರೆ ಎಂದು ರಾಜ್‌ಕುಮಾರ್ ಅಭಿಮಾನಿಗಳು ಕಟುವಾಗಿ ಟೀಕಿಸಿದ್ದರು.

ಬಿಜೆಪಿಗರ ಬೌದ್ಧಿಕ ದಿವಾಳಿ: ಪ್ರಿಯಾಂಕ್

■ **ವಿಕ ಸುದ್ದಿಲೋಕ** ಬೆಂಗಳೂರು

ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕಲಬುರಗಿಗೆ ಕೊನೆ ಸ್ಥಾನದ ಬಗ್ಗೆ ಬಿಜೆಪಿ ನಾಯಕರ ಮಾತುಗಳು ಅವರಲ್ಲಿನ ಬೌದ್ಧಿಕ ದಿವಾಳಿತನದ ಪ್ರತೀಕ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

''ಶಿವಮೊಗ್ಗ ಸಿಂಗಾಪುರ ಆಗಿದೆಯಾ? ಹುಬ್ಬಳ್ಳಿಯನ್ನು ಹಾಂಕಾಂಗ್ ಮಾಡಿದ್ದಾರಾ? ಕಲಬುರಗಿಯಲ್ಲಿ ಬಿಜೆಪಿಯವರ ಮಕ್ಕಳು ಇಲ್ಲವೇ ಮತ್ತು ಅವರಿಗೆ ಬುದ್ಧಿ ಇಲ್ಲವೇ? ಪ್ರಬುದ್ಧತೆ ಇಲ್ಲದ ಟೀಕೆ ಮೂಲಕ ಮಕ್ಕಳ ಸ್ಥೈರ್ಯ ಕುಗ್ಗಿಸುವುದು ಸರಿಯೇ,'' ಎಂದು ತಿರುಗೇಟು ನೀಡಿದ್ದಾರೆ.

''ಬಿಜೆಪಿ ನಾಯಕರು ನನ್ನ ಬಗ್ಗೆ ವೈಯಕ್ತಿಕವಾಗಿ ಮಾತನಾಡುತ್ತಾರೆ. ತಂದೆ ಹಾಗೂ ಪತ್ನಿ ಬಗ್ಗೆಯೂ ಮಾತನಾಡುತ್ತಾರೆ. ಮಾತನಾಡಲು ವಿಚಾರಗಳೇ ಇಲ್ಲದೆ, ತೋಚಿದಂತೆ ವೈಯಕ್ತಿಕ ನಿಂದನೆ ಮಾಡುವುದು ಬಿಜೆಪಿ ನಾಯಕರ ಅಪ್ರಬುದ್ಧತೆಗೆ ನಿದರ್ಶನ,'' ಎಂದು ಹೇಳಿದ್ದಾರೆ.

ಛಲವಾದಿಗೆ ಬಾಯಿ ಚಪಲ: ಪರಿಶಿಷ್ಟ ಜಾತಿ ಒಳಮೀಸಲು ವಿಚಾರದಲ್ಲಿ ಮುಖ್ಯಮಂತ್ರಿಯವರು ಪ್ರಾಮಾಣಿಕ ಪ್ರಯತ್ನ ನಡೆಸಿ, ಎಲ್ಲರಿಗೂ ಸಮಾಧಾನ ತರುವಂತಹ ತೀರ್ಮಾನಕ್ಕೆ ಕಾರಣರಾಗಿದ್ದಾರೆ. ಆದರೆ, ಛಲವಾದಿ ನಾರಾಯಣಸ್ವಾಮಿ ಅವರು ಬಾಯಿ ಚಪಲಕ್ಕೆ ಮಾತಮಾಡುತ್ತಿದ್ದಾರೆ. ಇವರು ಅಧಿಕಾರದಲ್ಲಿದ್ದಾಗ ವಿಧಾನಸೌಧ 'ವ್ಯಾಪಾರಸೌಧ' ಆಗಿತ್ತು. ಪಿಎಸ್‌ಐ ಹಗರಣ ಗೊತ್ತಿಲ್ಲವೇ,'' ಎಂದು ವ್ಯಂಗ್ಯವಾಡಿದರು.

ಸಚಿವ ಡಿ.ಸುಧಾಕರ್‌ಗೆ ತೀವ್ರ ಅನಾರೋಗ್ಯ

2ನೇ ಸಲ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ ಸಿಎಂ

■ **ವಿಕ ಸುದ್ದಿಲೋಕ** ಬೆಂಗಳೂರು

ಶ್ವಾಸಕೋಶ ಸೋಂಕಿನಿಂದ ಅಸ್ವಸ್ಥರಾಗಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಮತ್ತೊಮ್ಮೆ ಭೇಟಿ ಮಾಡಿ ಆರೋಗ್ಯ ಸ್ಥಿತಿ ಬಗ್ಗೆ ವೈದ್ಯರು ಹಾಗೂ ಸುಧಾಕರ್ ಕುಟುಂಬದವರಿಂದ ಸಿಎಂ ಮಾಹಿತಿ ಪಡೆದುಕೊಂಡರು.

ಕೆಲದಿನಗಳ ಹಿಂದೆ ಮೊಣಕಾಲು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಡಿ.ಸುಧಾಕರ್ ಅವರಲ್ಲಿ ದಿಢೀರನೆ ಶ್ವಾಸಕೋಶದ ಸೋಂಕು ಕಾಣಿಸಿಕೊಂಡಿತ್ತು. ದೇಹಸ್ಥಿತಿ ಗಂಭೀರವಾದ ಹಿನ್ನೆಲೆಯಲ್ಲಿ ಅವರನ್ನು ನಾಲ್ಕು ದಿನಗಳ ಹಿಂದೆ ಎಲೆಕ್ಟ್ರಾನಿಕ್ ಸಿಟಿಯ ಕೃಷ್ಣ ಆರೋಗ್ಯ ವಿಜ್ಞಾನಗಳ ಸಂಸ್ಥೆಗೆ ಸ್ಥಳಾಂತರಿಸಲಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ ಅವರು, ''ಸಚಿವರಿಗೆ ಶ್ವಾಸಕೋಶ ಕಸಿ (ಟ್ರಾನ್ಸ್‌ಪ್ಲಾಂಟ್) ಆಗಬೇಕಿದೆ. ಟ್ರಾನ್ಸ್‌ಪ್ಲಾಂಟ್ ಮಾಡಲು ಮಿದುಳು ಪ್ರಜ್ಞೆಯಲ್ಲಿರಬೇಕು. ಆದರೆ, ಇನ್ನೂ ಪ್ರಜ್ಞೆ ಬಂದಿಲ್ಲ,'' ಎಂದು ತಿಳಿಸಿದರು.

ರೆಹಮಾನ್ ಖಾನ್ ಭೇಟಿ

ಹಲವು ತಿಂಗಳಿಂದ ಅನಾರೋಗ್ಯಕ್ಕೆ ತುತ್ತಾಗಿ ವಿಶ್ರಾಂತಿ ಪಡೆಯುತ್ತಿರುವ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಕೆ.ರೆಹಮಾನ್ ಖಾನ್ ಅವರನ್ನು ಜಯನಗರದ ಅವರ ನಿವಾಸದಲ್ಲಿ ಮುಖ್ಯಮಂತ್ರಿಗಳು ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು.

ಈ ಸಂದರ್ಭದಲ್ಲಿ ಸಚಿವರಾದ ಜಮೀರ್ ಅಹ್ಮದ್ ಖಾನ್, ಭೈರತಿ ಸುರೇಶ್ ಇದ್ದರು.

ಡಿಕೆ ನೇರಾನೇರ ಹಕ್ಕು ಮಂಡನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಸಹೋದರ ಡಿ.ಕೆ.ಸುರೇಶ್ ಜತೆಗೂಡಿಕೊಂಡು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಎದುರು ಡಿಸಿಎಂ ಡಿ.ಕೆ.ಶಿವಕುಮಾರ್ ನಾಯಕತ್ವಕ್ಕಾಗಿ ನೇರಾನೇರ ಹಕ್ಕು ಮಂಡಿಸಿದ್ದಾರೆ.

ಎರಡೂವರೆ ವರ್ಷಗಳ ನಂತರದ 6 ತಿಂಗಳು ಸಹನೆಯಿಂದ ಕಾಲ ದೂಡಿದ ನಮ್ಮ ತಾಳ್ಮೆಯನ್ನು ಮತ್ತೂ ಪರೀಕ್ಷಿಸುವುದು ಬೇಡ. ಸರಕಾರ ರಚನೆ ವೇಳೆಯ ಒಪ್ಪಂದವನ್ನು ಬಹಿರಂಗ ಮಾಡಿ, ಪವರ್ ಶೇರಿಂಗ್ ವಿಚಾರದಲ್ಲಿ ತೀರ್ಮಾನ ಹೇಳಿ ಎಂದು ಡಿ.ಕೆ ಸಹೋದರರು ಬಿಗಿಪಟ್ಟು ಹಾಕಿದ್ದಾರೆ. ಇದಕ್ಕೆ ಎಐಸಿಸಿ ನಾಯಕರಿಂದ ಸಿಕ್ಕಿರುವ ಸ್ಪಂದನೆಯು 'ಪವರ್ ಶೇರಿಂಗ್' ಗುಟ್ಟು ಬಹಿರಂಗಕ್ಕೆ ಮುಹೂರ್ತ ಫಿಕ್ಸ್ ಆಗುವ ಸಾಧ್ಯತೆಗಳಿವೆ. ಹಾಗೆಯೇ ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಸರಕಾರದ ಸ್ವರೂಪ ಹೇಗಿರಲಿದೆ? ಯಥಾಸ್ಥಿತಿಯೋ ಅಥವಾ ಬೇರೆ ಸೂತ್ರವೋ ಎಂಬ ಚರ್ಚೆ ನಡೆಯಲಿದೆ ಎಂದು ಹೇಳಲಾಗುತ್ತಿದೆ.

ಖರ್ಗೆ ಹೇಳಿದ್ದೇನು?: ಖಾಸಗಿ ಪ್ರವಾಸದಲ್ಲಿರುವ ರಾಹುಲ್ ಗಾಂಧಿ ಮೇ 28 ರಂದು ದಿಲ್ಲಿಗೆ ವಾಪಸಾದ ಬಳಿಕ ಹಾಗೂ ಮೇ 29ಕ್ಕೆ ಕೊನೆಯ ಹಂತದ ಚುನಾವಣೆ ಮುಗಿದ ಬಳಿಕ ಮುಖ್ಯಮಂತ್ರಿ ಜತೆಗೆ ಸಭೆ ನಿಗದಿ ಮಾಡಲಾಗುವುದು. ತಾವೂ ಬನ್ನಿ. ಚರ್ಚೆ ಮಾಡಿ ತೀರ್ಮಾನ ಮಾಡೋಣ ಎಂದು ಎಐಸಿಸಿ ಅಧ್ಯಕ್ಷರು ಡಿಕೆಶಿಗೆ ಸೂಚಿಸಿದ್ದಾರೆ ಎಂದು ಗೊತ್ತಾಗಿದೆ.

ಪ್ರತಿತಂತ್ರವೂ ರೆಡಿ!: ಈ ಮಧ್ಯೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಬಳಗದಿಂದ ಸಂಪುಟ ಪುನಾರಚನೆ ಪ್ರಸ್ತಾಪ ಮುನ್ನೆಲೆಗೆ ಬಂದಿದೆ. ಮೇ 20ಕ್ಕೆ ಸರಕಾರಕ್ಕೆ ಮೂರು ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಸಂಪುಟ ಸರ್ಜರಿಗೆ ಸಮ್ಮತಿಸುವಂತೆ ವರಿಷ್ಠರನ್ನು ಕೋರಲು ಸಿದ್ಧತೆಯಾಗಿದೆ. ಪ್ರಭಾವಿ ಸಚಿವರೊಬ್ಬರ ಫ್ಲಾಟ್‌ನಲ್ಲಿ ಬುಧವಾರ ರಾತ್ರಿ ಸಿಎಂ ಹಾಗೂ ಆಪ್ತ ಸಚಿವರ ಡಿನ್ನರ್ ಮೀಟಿಂಗ್‌ನಲ್ಲಿ ಈ ಸಂಬಂಧ ತಯಾರಿಯೂ ಆಗಿದೆ ಎನ್ನಲಾಗಿದೆ. ಹಾಗಾಗಿ ಡಿಸಿಎಂ ಬಯಸಿರುವ ನಾಯಕತ್ವ ಬದಲಾವಣೆ ಹಾಗೂ ಸಿಎಂ ಆಪ್ತ ವಲಯದ ಸಚಿವ ಸಂಪುಟ ಪುನಾರಚನೆ ಪೈಕಿ ಯಾವುದಕ್ಕೆ ಹೈಕಮಾಂಡ್ ಮನ್ನಣೆ ಸಿಗಲಿದೆ ಎಂಬ ಕುತೂಹಲವಿದೆ.

ಹೌದು ಅಥವಾ ಇಲ್ಲ, ಖಡಕ್ ತೀರ್ಮಾನಕ್ಕೆ ಡಿಕೆ ಸೋದರರ ಪಟ್ಟು: ''ಏ. 29ರ 2ನೇ ಹಂತದ ಚುನಾವಣೆ ಹಾಗೂ ಮೇ 4ರ ಫಲಿತಾಂಶ ಈ ಅವಧಿಯಲ್ಲಿ ರಾಹುಲ್ ಗಾಂಧಿ ಸಮ್ಮುಖದಲ್ಲಿ ಸಭೆ ನಡೆಯಬೇಕು. ಮೇ 10 ರೊಳಗೆ ನಾಯಕತ್ವ ಬದಲಾವಣೆ ವಿಚಾರದಲ್ಲಿ ಸ್ಪಷ್ಟ ತೀರ್ಮಾನ ಹೇಳಬೇಕು. ಮುಖ್ಯಮಂತ್ರಿ ಸ್ಥಾನ ಕೊಡುವ ಅಥವಾ ನಿರಾಕರಿಸುವ ಯಾವ ಆಯ್ಕೆಯಾದರೂ ಸರಿ, ತೀರ್ಮಾನ ಬೇಕು'' ಎಂದು ಡಿಕೆ ಸಹೋದರರು ಖರ್ಗೆ, ವೇಣುಗೋಪಾಲ್ ಎದುರು ಸ್ವಲ್ಪ ಭಾವುಕರಾಗೇ ವಿನಂತಿಸಿದ್ದಾರೆ ಎನ್ನಲಾಗಿದೆ. ಡಿ.ಕೆ. ಶಿವಕುಮಾರ್, ''ಎರಡೂವರೆ ವರ್ಷಗಳು ಕಳೆದು ಮೂರು ವರ್ಷ ಆಗುತ್ತಿದೆ. ನಮ್ಮ ಪಕ್ಷನಿಷ್ಠೆಯನ್ನು ಇನ್ನೂ ಪರೀಕ್ಷೆ ಮಾಡುವುದಾದರೆ ಮಾಡಿ. ಇಲ್ಲವಾದರೆ, ತೀರ್ಮಾನವನ್ನು ಹೇಳಿ,'' ಎಂದು ಖಡಕ್ಕಾಗಿ ಹೇಳಿದ್ದಾರೆ. ಜತೆಗೆ ''ನಾನಂತೂ ಪಕ್ಷದ ವಿರುದ್ಧ ಹೋಗುವುದಿಲ್ಲ,'' ಎಂಬ ಭರವಸೆ ಕೊಟ್ಟಿದ್ದಾರೆ ಎಂದು ಹೇಳಲಾಗಿದೆ.

TIMES interact

Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

personal

CHANGE OF NAME

I, Priya Kumari D/O Chakradhar Dubey R/O No. 102, Third Floor, 5th Cross, Kempegowda Layout, Laggere, Bangalore - 560058, have changed my name to Vanshika Dubey.

I, Gopal Jayaram Reddy S/o - Jayaram Reddy, Age-56 R/o No.61, 2nd Cross, Bcm Layout, Muthsandra Road, Varthur, Bengaluru 560087 have changed my name to Gopala Reddy Jayaram for all purposes

I Venkatesh Babu Ramachandra Nagaraj S/o. G R Nagaraj R/o A-G003, SS Signature, Ayyappanagar Mainroad, Hoodi, Bangalore- 560036, have changed my name to Venkatesh Babu for all purposes vide Affidavit dated 25.04.2026 Notary Bangalore.

I, Jwalanamma W/o Dharanendra Kumar Thovinakere Chandraiah, Age-71 R/o No 233, 23rd Main Road, 23rd Cross, Judicial Layout, Gkvk Post, Bengaluru, 560065, Karnataka have changed my name to Jwalanamma for all purposes

I, Babu Narayanan, r/at No. 12/8, Sri Balaji Nivas, 8th Cross, Ashok Nagar, Ganga Layout, Bangalore 560050 have changed my name to Babu for all purposes vide affidavit dt. 24.04.2026 sworn before Notary Mamatha N K, Bangalore.

I, Mumavar Pasha R/at IMS Mansion, 7th Cross, Veerasagara, Near IMS Provision Store, Tumkur City - 572102 & Dist. have changed my name has Munvar Pasha vide affidavit dt: 24.04.2026 before Tumakuru Advocate & Notary M.Shafiq Ahmed.

I, Rizwana Raja Basha R/o No. 111, 2nd Floor, 3rd Main,2nd Cross, Minaj Nagar,B'lore-560111 Have changed my name to Rizwana Raj

I, Manjunatha R ,S/o Late Ramakrishnappa, Residing at No.121, Whitefield Main Road Immadihalli Opp Milk Dairy Bengaluru 560066, have changed my name from Manjunatha R to Manjunath R for all future purposes.Vide affidavit dated 25-04-2026 before Notary Veena J Bengaluru.

I, Saarikaa Gopal Reddy D/o - Gopala Reddy Jayaram Age-19 R/o No61, 2nd Cross, Bcm Layout, Muthsandra Road, Varthur, Bengaluru 560087 Have Changed My Name to Saarikaa Gopala Reddy for all purposes

I, Venkata Nitya Sathvik Angara S/o Srinivas Angara, R/o Flat No. 11053, Prestige Falcon City, Kanakapura Road, Konanakunte Cross, Anjana pura, Bengaluru - 560062, have changed my name to Sathvik Angara for all purposes.

I, BABU.M Residing at # 28, B Cross, Anglo Indian Street, Bengaluru 560047 have changed my minor daughter name from PRATHIKSHA BABU MUNIVENKATAPPA BABU to B PRATHIKSHA M BABU for all the purpose.

I, Prashant Kumar Jain S/o Mangal Chand Jain R/o H.No 638,Samruddhi Nilaya 2nd Floor,15th Main road jnanabharathi, 2nd Block Nagadevanahalli B'lore-560056 have changed my name to Prashant Jain.

I viswakarma asha.w/o Shivakumar no.128 halgadla kellur post kalaburagi 585303.I changing my name to Asha for all purpose

GALLERIA









TIMES TRIBUTE

PAYING HOMAGE TO THE DEPARTED SOUL

ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ

ನಾವು ನಿಮ್ಮ ಮನವಿಯನ್ನು ಕರೆ / ಇಮೇಲ್ / ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ

ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ / ಜಾಹೀರಾತು ವಿನ್ಯಾಸ ಮಾಡಲಾಗುವುದು

ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ / ಎನ್‌ಇಎಫ್‌ಟಿ / ಆರ್‌ಟಿಜಿಎಸ್ ಮೂಲಕ ಪಾವತಿಸುವುದು.

ಸಂಪರ್ಕಿಸಿ: ನರಸಿಂಹ ಕುಲಕರ್ಣಿ-99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ACADEMIC

TEACHER

URGENTLY Required Experienced Pre-Primary coordinator, Primary, Middle & Higher Primary teachers of all subjects , Art & craft , Computer teacher, Dance teacher. Candiates Who are in & around North Bangalore, near Bayataraayanapura, Amruthahalli, & Jakkur. Call : 9448711695 / 9880822028

LAWRENCE High School Koramangala requires experienced- Primary/ Middle school Science Teacher - Middle/High School English Teacher - High School Social Science Teacher. Send your CV to Lawrence.Koramangala@gmail.com Ph – 8296338807

WANTED Receptionists, Security Guards, Kannada teachers and NTT, D.Ed, B.Ed trained teachers for Nursery, Primary and High school. Contact: Little Flower English High School, 16th B main, HAL 2nd stage, Indiranagar, Bengaluru. Phone: 08025263262, bluebellededucation@yahoo.in

INFOMATICS CBSE techno school & PU college Yelahanka, Rajanukunte, is hiring NTT, PGT, PRT teachers for Maths, Science, English, Art & craft, PT, CS/Robotics,Wardens etc. Send your resume to 7760729861

WANTED Mathematics and PE Teacher for High School. Clerk for PUC. Contact: "DVS INSTITUTION", Magadi main road, sunkadakatte. 9535305299 .

More Classifieds on Page 6

OTHER VACANCIES

DRIVERS

REQUIRED Drivers: SSLC Pass with minimum of 5 years experience in driving Yellow board vehicles based in Bangalore Contact (M) - 9845118000. Between 10.00 am to 06.00 pm

ಚಾಲಕ ACE ಗೆ ಅನ್ನಪೂರ್ಣ ಬೇಕಾಗಿದ್ದಾರೆ, ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 9448684912

GENERAL

WANTED

Manufacturing Company requires

SCREW MACHINE OPERATORS

- Heading Machine-Operator-1
- Threading Machine-Operator-1
- Pointing Machine Operator-1

97504 15611

URGENT Sorters / Picker / Packers Hiring for Grocery Warehouse in Attibele. Salary 16 K + upto 10 K allowances. Transport & Food facilities. Only Immediate Joiners. Contact: 9632827775 Shubham

ಎಚ್ಚರಿಕೆ ನೋಟೀಸು

ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು / ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

ಜೀವನ ಸಂಗಾತಿ

Love finds it's match.



WANTED BRIDES

ವೈವಾಹಿಕ MATRIMONIALS

WANTED BRIDES

BY CASTE

BRAHMIN

SUITABLE Match for Boy, sept 91, 5'10", Never Married, BBA, Gaur Brahmin, Own Transport Business, Mumbai, 9820101342

BRAHMIN GIRL Wanted: For Brahmin Smarth Boy, 28 years, BE grad, Works in TCS-Bangalore, 10 LPA, DIVORCED , 5' 8 " Bangalore , Knows Kannada, Telugu,Tamil, Hindi, English # Expectations # : Vegeterian, 25 to 28 yrs, Any Brahmin, Graduate /PUC / Diploma , GOOD FAMILY CULTURE, Kannada/ Telugu/Tamil/Hindi, No Dowry, Unmarried/Divorced with or without kid Contact # : 91482 51188

VOKKALIGA

ವಧು ಬೇಕಾಗಿದೆ ಒಕ್ಕಲಿಗ 45 ವರ್ಷ 5.8' ಎತ್ತರ ಎಂಎಸ್ಸಿ, ಎಂಟೆಕ್ ಮಕ್ಕಳಿಲ್ಲದ ವಿಚ್ಛೇದಿತ ಆಸ್ತಿ ವ್ಯಾಪಾರ ಮಾಡುವ ಅನುಕೂಲವಂತ ವರನಿಗೆ ವಧು ಬೇಕಾಗಿದೆ. ಸಂ: 8095732067

BY RELIGION

HINDU

WANTED -BRIDE: For a Well Settled Business Man Based in Mangalore, NEVER MARRIED Hindu Brahmin , Aged: 50/ 5'11", Seeks suitable bride, 34-39 years. Caste No Bar.WhatsApp/call:7975425487

GENERAL

CASTE NO BAR

SAXENA Boy, 32/5'11", B.Tech / M.Tech, IIT Roorkee, wrkg, at Bengaluru, handsome salary, seeks educated wrkg. Hindu girl, Wapp 9810249099

BY LANGUAGE

PUNJABI

SM4, Khatri, 21.5.95 / 11:07 PM/5'2", MSc (HM) Pusa, Sales/Mktg Mngr MNC B'lore, 15 LPA. Seeks edu. wkg bride. GGN based family. 9810975210

CAUTION

This newspaper does not vouch or subscribe to the claims and representations made by the advertisers regarding the particulars of status, age and income of the brides/ bridegrooms.

ADVERTISEMENT MANAGER

WANTED GROOMS

BY CASTE

BRAHMIN

(ಬ್ರಾಹ್ಮಣ): ವಯಸ್ಸು 18 ರಿಂದ 50 ವರ್ಷದೊಳಗಿನ PUC, Diploma, Degree ಕಲಿತಿರುವ ಮಧ್ಯಮ ಕುಟುಂಬದ ವಧುಗಳಿಗೆ ವರಗಳು ಬೇಕಾಗಿದ್ದಾರೆ. ಯಾವುದೇ ಉದ್ಯೋಗ, Business, ಪುರೋಹಿತರು ಅಭ್ಯಂತರವಿಲ್ಲ . (ಸಪ್ತಪದಿ ಬ್ರಾಹ್ಮಣ ವಧು - ವರ ವಿವಾಹ ವೇದಿಕೆ)-8884794406.

VOKKALIGA

ಒಕ್ಕಲಿಗ ವಿವಾಹ ವೇದಿಕೆ. ಒಕ್ಕಲಿಗ 42 ವರ್ಷ, ಎತ್ತರ 5.5" ವಿದ್ಯಾರ್ಹತೆ ಎಂ.ಬಿ.ಎ. ಎಂಎನ್‌ಸಿ ಕಂಪನಿಯಲ್ಲಿ ಕೆಲಸ ಮಾಡುವ ಬೆಂಗಳೂರಿನ ವಧುವಿಗೆ ಸ್ವಜಾತಿಯ ವರ ಬೇಕಾಗಿದೆ. ಸಂ: 99167 58699

BY COMMUNITY

NORTH INDIAN

BEAUTIFUL & Fair Brahmin girl working at Tier-1 US MNC, 45-50LPA, 30yrs, 5'6". Affluent family settled in Bangalore. Looking for a handsome boy 5'10" & above working in good company. M:9419181698

GENERAL

CASTE NO BAR

SLIM, Fair, B'ful, Never Married, Punjabi girl, 37, 5'3", born & brought up in Delhi. Working as Strategy Director in MNC in Bangalore, (Rs.60 LPA). Seeks smart, well-settled match based in Bangalore. Contact: 7837483747

40 ವರ್ಷದ ಸ್ವತಂತ್ರವಾಗಿರುವ ಮಹಿಳೆಗೆ ವರ ಬೇಕಾಗಿದೆ ಜಾತಿ/ ವಯಸ್ಸು ಅಭ್ಯಂತರವಿಲ ಅನುಕೂಲಸ್ಥ ವರನಿಗೆ ಮೊದಲ ಆದ್ಯತೆ ನೇರವಾಗಿ ಸಂ: 9845723846

ಬೆಂಗಳೂರಿನಲ್ಲಿ ಹೋಟೆಲಿಗೆ ಇಡ್ಲಿ ದೋಸೆಹಿಟ್ಟು ರುಬ್ಬುವವರು, ಕುಕ್ ಅಸಿಸ್ಟೆಂಟ್, ಕೌಂಟರ್ ಬಾಯ್ಸ್ ಬೇಕಾಗಿದ್ದಾರೆ. ಒಳ್ಳೆಯ ಸಂಬಳ, ವಸತಿ ನೀಡಲಾಗುವುದು. 8884555209

REQUIRED Assistant Godown incharge with Computer Knowledge.Age Limit : Below 45 years, Working Location : Near R V Eng College, Mysore Road,Mob No :78299 44556

ಬೇಕಾಗಿದ್ದಾರೆ, ತೆಂಗಿನ ತೋಟ ನೋಡಿಕೊಳ್ಳಲು ಫ್ಯಾಮಿಲಿ ಬೇಕಾಗಿದ್ದಾರೆ. ಸ್ಥಳ: ಹಿರೆಸಾವೆ, ಹಾಸನ ಜಿಲ್ಲೆ. ಆಸಕ್ತರು ಕೂಡಲೇ ಸಂಪರ್ಕಿಸಿ: 96866 06787.

WANTED SSLC, PUC, ITI, DIPLOMA for CNC MACHINE OPERATOR Contact: DAS CNC PRODUCTS PVT LTD. Phone: 98451 59737

MULTIPLE VACANCIES

Urgently Wanted following:

DESIGN ENGINEER

2 to 4 years experience with BE in Mechanical Engineering (Inventor/solid works/other CAD software)

CNC Lathe / VMC Operators

Fanuc/HAAS

ITI - ELECTRICAL / ELECTRONICS

Vita Technology Pvt. Ltd.
Contact:
adminvitatech@gmail.com
M : 9686915114 / 9686830228

WANTED Realtors & Tele callers for Realestate Company in and around Budigere Cross Call: 7349613954 /9986507655 www.chekkeraporperties.com

SECURITY

ಬೇಕು: ಸೆಕ್ಯುರಿಟಿ ಗಾರ್ಡ್‌ಗಳು / ಮೇಲ್ವಿಚಾರಕರು ತುರ್ತು 10ನೇ/ 12ನೇ ಉತ್ತೀರ್ಣ ವೇತನ: Rs 20,400 / Rs 20,800 8 ಗಂಟೆಗಳ 26 ದಿನಗಳ ESI PF ಹೆಚ್ಚುವರಿ. ದೂರವಾಣಿ: 8754440730 / 9384842068 / 8939815417

ಬೇಕಾಗಿದ್ದಾರೆ ಫೀಲ್ಡ್ ಆಫೀಸರ್ ಸೆಕ್ಯೂರಿಟಿ ಸೂಪರ್‌ವೈಸರ್ ಸೆಕ್ಯೂರಿಟಿ ಗಾರ್ಡ್ ಹೌಸ್ ಕೀಪಿಂಗ್ ಸಂಪರ್ಕಿಸಿ 99860 81712 / 91643 75199

SERVICES

HOTEL INDUSTRY

ಕೆಫೆಯಲ್ಲಿ ಕೆಲಸಕ್ಕೆ ಹುಡುಗ / ಹುಡುಗಿಯರು ಬೇಕಾಗಿದ್ದಾರೆ. ಪಾರ್ಟ್ ಟೈಂ/ ಫುಲ್ ಟೈಂ, ಉತ್ತಮ ಸಂಬಳ. ಕೂಲ್ ಕಾರ್ನರ್ ಕೆಫೆ, ಮೆಟ್ರೋ ಸ್ಟೇಷನ್ ಹತ್ತಿರ, ಚಿಕ್ಕಬಿದರಕಲ್ಲು ,ಬೆಂಗಳೂರು. ಫೋ: 9741446637 / 7760074950

TECHNICAL

GENERAL

✔ HIRING 2D CAD drafter interior designer (Residential). Proficient in AutoCAD, sketch up, 3D, Adobe, detailed 2D construction drawings. Work from home. Salary upto 1 lac pm. Mail to ns2894@outlook.com

SITUATION VACANT

MANPOWER AGENCY seeks candidate with working knowledge of KPPP portal (E-TENDER), ESI, EPF portal. Contact 81474 06607.

ಪ್ರವಾಸ TRAVEL

PACKAGE TOURS

3.5.2026, 1ದಿನ ರಂಗನಾಥಸ್ವಾಮಿ, ರಾಮನಾಥಪುರ, ಚುಂಚನಕಟ್ಟೆ ಇತ್ಯಾದಿ. 9.5, 2ದಿನ ಯಾಣ, ಸಿರ್ಸಿ ಮಾರಿಕಾಂಬ, ಬನವಾಸಿ, ಹಾಲು ರಾಮೇಶ್ವರ ಇತ್ಯಾದಿ. 9481433157

20.5.26 ರಿಂದ ಹಡಗು ಮತ್ತು ವಿಮಾನದಲ್ಲಿ ಅಂಡಮಾನ್ 9 ದಿನಗಳು 10.7.26ರಿಂದ ಅಮರನಾಥ್ ಯಾತ್ರೆ 12 ದಿನಗಳು, ಯಾತ್ರಾ ಪರ್ಮಿಟ್ ಗಾಗಿ ಈಗಲೇ ಬುಕಿಂಗ್ ಪ್ರಾರಂಭವಾಗಿದೆ. ಶ್ರೀಗಂಗಾ ಟೂರಿಸ್ಟ್ 9480253807, 8105522123

5.6.2026 ಜಾರ್ಖಂಡ್ ಕಾಶಿ ಅಯೋಧ್ಯ, ಪ್ರಯಾಗ್‌ರಾಜ್, ನೈಮಿಷಾರಣ್ಯ 7 ದಿನ. 12.6.26 ಚಾರ್ಧಾಮ್ 13 ದಿನ. 2.7.26 ಅಮರನಾಥ 11 ದಿನ. ನಂದಿನಿ ಟೂರಿಸ್ಟ್. 9916574089

TOURS & TRAVELS

ನಿಸರ್ಗ ಹಾಲಿಡೇಸ್, ರಾಜಾಜಿನಗರ, ಬೆಂಗಳೂರು, ವಿಮಾನ ಪ್ರವಾಸ ಪ್ಯಾಕೇಜ್ 6 ದಿನಗಳು ಸಿಂಗಾಪುರ, ಮಲೇಷ್ಯಾ 21-5-26, 4 ಸೀಟುಗಳು ಉಳಿದಿವೆ. ಹೆಚ್ಚಿನ ವಿವರಗಳಿಗಾಗಿ ಸಂ: 9110449861, 9880241669

09.05.2026, 10.06.2026 ರಿಂದ 14 ದಿನಗಳು ಚಾರ್ ಧಾಮ ಪ್ರವಾಸ. 28 .06.2026, 10.07.2026 ರಿಂದ 8 / 13 ದಿನಗಳು ಅಮರನಾಥ್ ಕಾಶ್ಮೀರ ಪ್ರವಾಸ. 25.07.2026 ರಿಂದ 13 ದಿನಗಳು ರಿಯಾಯಿತಿ ದರದಲ್ಲಿ ಮಾನಸ ಸರೋವರ, ಕೈಲಾಸ ಪರ್ವತ, ನೇಪಾಳ. ಸಂಪರ್ಕಿಸಿ. ಏಷ್ಯಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು 9342287551 998662444, 9986254573

ADMISSION OPEN

BHARATH EDUCATION SOCIETY®

BES Pre-University College of Science, Commerce & Arts

27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011

Email: principalas018@gmail.com
Website: www.besinstitutions.com
080-26637018 / 98863 52466

Free Integrated Course NEET, JEE, K-CET, COMED-K
Affordable Fee for I & II PUC Science

Sahakara Rathna B.L. Lakke Gowda, Founder, B.E.S Institutions

Sri S.T. Somashekhar, Hon. President, Bharath Education Society, MLA, Yeshwanthpura Constituency, Former Minister, Govt of Karnataka

COURSES OFFERED FOR : 2026-27

PUC: PCMB | PCMC | HEBA | SEBA | CEBA | HEPS

Languages Offered: English, Kannada, Hindi & Sanskrit

BES EVENING PU COLLEGE OF COMMERCE & ARTS

080-26533736 / 95387 98956 Email: beseveningpucollege@gmail.com

PUC: HEBA | HEPS

Sri Nirmal Kumar K.R., President, Bharath Education Society | Prof N.S. Vijaya, Secretary, Bharath Education Society | Sri Srinivasa C., Principal, BES PU College | Sri Suresh, Principal, BES Evening PU College

BES-26705

CELEBRATION TIMES

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.

- ಜಾಹೀರಾತು ವ್ಯವಸ್ಥಾಪಕರು

GET NOTICED

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್

ಹಳೆಯ (ಹರಿದ) ರೇಷ್ಮೆ ಸೀರೆಗಳು, ರೇಷ್ಮೆ ಪಂಚೆಗಳು, ಬೆಳ್ಳಿ ಜರಿ, ಟಿಷ್ಯೂ ಸೀರೆಗಳು, ಬನಾರಸ್, ಮೈಸೂರು ಸಿಲ್ಕ್ ಯಾವುದೇ ರೀತಿಯಲ್ಲಿದ್ದರು ಸ್ಥಳದಲ್ಲೇ ಹಣ ಕೊಟ್ಟು ಖರೀದಿಸುತ್ತೇವೆ

ದಿನಾಂಕ 26-04-2026 to 06-05-2026

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್
ನಂ. 58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ, 5ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬ್ರಿಡ್ಜ್ ಹತ್ತಿರ, ಬೆಂಗಳೂರು
ಕರೆ ಮಾಡಿ: 9632781499

NATIONAL PUBLIC SCHOOL · SMV, BANGALORE

NATIONAL PUBLIC SCHOOL

SMV- 3RD BLOCK, SIR M. VISHWESHWARAIAH LAYOUT

ADMISSIONS OPEN FOR 2026–27

A future-ready school for today's learners

Dr. K.P. Gopalkrishna

Founder Chairman, NPS Institutions

HIGHLIGHTS

- **2 acres** dedicated to academics and infrastructure
- **1 acre** allocated for sports and physical development
- **8000 sq. ft.,** three-floor library – the largest in the locality
- **500-seater** state-of-the-art auditorium
- **100-seater** seminar hall
- **100-metre** athletic running track



Located in a **3-acre campus,** NPS SMV is committed to providing an unparalleled learning experience through modern infrastructure, academic excellence, and holistic development.

SCAN FOR LOCATION

+91 77 88 9999 35 / +91 77 88 9999 36

info@npssmv.com www.npssmv.com

National Public School-SMV, CA No.8,
3rd Block, Sir M. Vishweshwaraiah Layout,
Sonnenahalli, Ullal, Bangalore – 560110

SCAN FOR WEBSITE

ಪೇಟಿಎಂ ಬ್ಯಾಂಕ್ ಪರವಾನಗಿ ರದ್ದು

ಹೊಸದಿಲ್ಲಿ: ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಲಿಮಿಟೆಡ್ (ಪಿಪಿಬಿಎಲ್)ನ ಬ್ಯಾಂಕಿಂಗ್ ಪರವಾನಗಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರದ್ದುಗೊಳಿಸಿ ಆದೇಶಿಸಿದೆ. ಮಾತ್ರವಲ್ಲದೇ ಪೇಟಿಎಂ ಬ್ಯಾಂಕ್ ಅನ್ನು ಹಣಕಾಸು ವಹಿವಾಟುಗಳಿಂದ ಮುಕ್ತಗೊಳಿಸಿ, ಬ್ಯಾಂಕ್ ಸಮಾಪನಕ್ಕೆ ಸೂಚಿಸಿದೆ.

''ಬ್ಯಾಂಕಿನ ವ್ಯವಹಾರಗಳು ಬ್ಯಾಂಕ್ ಮತ್ತು ಅದರ ಠೇವಣಿದಾರರ ಹಿತಾಸಕ್ತಿಗಳಿಗೆ ಹಾನಿಕಾರಕ ರೀತಿಯಲ್ಲಿ ನಡೆದಿವೆ ಎಂದು ಕಂಡುಬಂದಿದೆ. ಪರವಾನಗಿ ಷರತ್ತುಗಳ ಉಲ್ಲಂಘನೆಯಾಗಿದೆ. 1949ರ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ ಸೆಕ್ಷನ್ 22(4) ರ ಅಡಿಯಲ್ಲಿ ಪರವಾನಗಿಯನ್ನು ರದ್ದುಗೊಳಿಸಲಾಗಿದೆ,'' ಎಂದು ಕೇಂದ್ರ ಬ್ಯಾಂಕ್ ಹೇಳಿದೆ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಮುಚ್ಚಿದ್ದರೂ, ತನ್ನ ಸಂಪೂರ್ಣ ಠೇವಣಿಗಳನ್ನು ಮರುಪಾವತಿಸಲು ಸಾಕಷ್ಟು ಲಿಕ್ವಿಡಿಟಿ ಹೊಂದಿದೆ ಎಂದು ಆರ್‌ಬಿಐ ಹೇಳಿರುವುದು ಗ್ರಾಹಕರಿಗೆ ಧೈರ್ಯ ತುಂಬಿದಂತಾಗಿದೆ. ಕಳೆದ ಕೆಲವು ವರ್ಷಗಳಿಂದ ಬ್ಯಾಂಕಿನ ಮೇಲೆ ವಿಧಿಸಲಾದ ನಿರ್ಬಂಧಗಳನ್ನು ಅನುಸರಿಸಿ ಈ ಕ್ರಮ ಕೈಗೊಳ್ಳಲಾಗಿದೆ.

ಟೈಮ್ ಜತೆ ರಿಲಯನ್ಸ್ ಸಹಭಾಗಿತ್ವ

'ಟೈಮ್ 100 ನೆಕ್ಸ್ಟ್ ಇಂಡಿಯಾ' ಬಿಡುಗಡೆ

ನ್ಯೂಯಾರ್ಕ್/ಮುಂಬಯಿ: ನ್ಯೂಯಾರ್ಕ್ ಮೂಲದ ಪ್ರತಿಷ್ಠಿತ ಮಾಧ್ಯಮ ಸಂಸ್ಥೆ ಟೈಮ್ ಮತ್ತು ರಿಲಯನ್ಸ್ ಸಹಭಾಗಿತ್ವದಲ್ಲಿ ಮೊದಲ ಬಾರಿಗೆ 'ಟೈಮ್ 100 ನೆಕ್ಸ್ಟ್ ಇಂಡಿಯಾ' ಜಾಗತಿಕ ಆವೃತ್ತಿ ಬಿಡುಗಡೆಯಾಗಲಿದೆ. ಈ ಮೂಲಕ ಎರಡೂ ಸಂಸ್ಥೆಗಳು 100 ಭಾರತೀಯ ಮತ್ತು ಜಾಗತಿಕ ಸಾಧಕರನ್ನು ಗುರುತಿಸಿ ಗೌರವಿಸಲಿವೆ.

ಮುಂಬಯಿನಲ್ಲಿ ಇದೇ ಡಿಸೆಂಬರ್‌ನಲ್ಲಿ ನಡೆಯಲಿರುವ ಅದ್ದೂರಿ ಸಮಾರಂಭದಲ್ಲಿ ಸಾಧಕರ ಪಟ್ಟಿ ಬಿಡುಗಡೆಯಾಗಲಿದೆ. ಇದರೊಂದಿಗೆ ಟೈಮ್ 100 ನೆಕ್ಸ್ಟ್‌ನ ಫ್ರಾಂಚೈಸಿಯನ್ನು ಭಾರತಕ್ಕೆ ಮೊದಲ ಬಾರಿಗೆ ಪರಿಚಯಿಸಲಾಗುತ್ತಿದೆ. ನ್ಯೂಯಾರ್ಕ್‌ನಲ್ಲಿ ನಡೆದ ಸಮಾರಂಭದಲ್ಲಿ ಈ ಬಗ್ಗೆ ಟೈಮ್ ಸಿಇಒ ಜೆಸ್ಸಿಕಾ ಸಿಬ್ಲಿ ಮತ್ತು ರಿಲಯನ್ಸ್ ಫೌಂಡೇಷನ್‌ನ ಸ್ಥಾಪಕರು ಮತ್ತು ಅಧ್ಯಕ್ಷರಾದ ನೀತಾ ಅಂಬಾನಿ ಅವರು ಘೋಷಿಸಿದರು. ಕಂಪನಿಯ ಪ್ರಕಾರ, ವಿಜ್ಞಾನ, ಉದ್ಯಮ, ಕಲೆ, ಕ್ರೀಡೆ ಮತ್ತು ಆಡ್ವಕಸಿ ವಲಯದ 100 ಸಾಧಕರನ್ನು ಗುರುತಿಸಿ ಗೌರವಿಸಲಾಗುವುದು. ಟೈಮ್ ಸಂಪಾದಕರು ಇದನ್ನು ನಿರ್ವಹಿಸಲಿದ್ದಾರೆ.

''ಮುಂಬಯಿಯಲ್ಲಿ ನೀತಾ ಮುಕೇಶ್ ಅಂಬಾನಿ ಕಲ್ಚರಲ್ ಸೆಂಟರ್‌ನಲ್ಲಿ ಡಿಸೆಂಬರ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಸಾಧಕರನ್ನು ಗೌರವಿಸಲಾಗುವುದು. ಟೈಮ್ ನೆಕ್ಸ್ಟ್ 100 ಆವೃತ್ತಿ ಭಾರತಕ್ಕೆ ಮೊದಲ ಬಾರಿಗೆ ತರಲು ಸಂತಸವಾಗುತ್ತಿದೆ,'' ಎಂದು ಟೈಮ್ ಸಿಇಒ ಜೆಸ್ಸಿಕಾ ಸಿಬ್ಲಿ ಹೇಳಿದರು.

''ಜಗತ್ತಿನಾದ್ಯಂತ ನಾನಾ ಕ್ಷೇತ್ರಗಳಲ್ಲಿ ಭವಿಷ್ಯದ ನಾಯಕರನ್ನು ಗುರುತಿಸಿ ಗೌರವಿಸಲು ನಾವು ಸಿದ್ಧರಿದ್ದು, ಇದನ್ನು ಕಾರ್ಯಗತಗೊಳಿಸಲು ರಿಲಯನ್ಸ್ ಸಹಭಾಗಿತ್ವ ಅವಶ್ಯಕವಾಗಿದೆ. ಭಾರತದಲ್ಲಿ ಪ್ರತಿಭಾವಂತ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸಲು ರಿಲಯನ್ಸ್ ಬದ್ಧವಾಗಿದೆ,'' ಎಂದು ನೀತಾ ಅಂಬಾನಿ ತಿಳಿಸಿದರು.

ಟೈಮ್‌ನ ಕಾರ್ಯ ನಿರ್ವಾಹಕ ಸಂಪಾದಕ ಡಾನ್ ಮಸ್ಕಾಯ್ ಮಾತನಾಡಿ, ''ಮುಂಬರುವ ದಶಕದ ಪ್ರತಿಭಾವಂತ ನಾಯಕರನ್ನು ಗುರುತಿಸಲು ಟೈಮ್ ನೆಕ್ಸ್ಟ್ ಪ್ರಬಲ ವೇದಿಕೆಯಾಗಲಿದೆ,'' ಎಂದರು. ಟೈಮ್ ಸಂಸ್ಥೆಯು 2021 ರಿಂದಲೂ ಟೈಮ್ 100 ಇಂಪಾಕ್ಟ್ ಅವಾರ್ಡ್ ಸಮಾರಂಭವನ್ನು ಐದು ಖಂಡಗಳಲ್ಲಿ ಆಯೋಜಿಸಿದೆ.

ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ

ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರ, ಎಡೆಯೂರು

ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ – 572142. ದೂ: 08132-228223. e-mail:yedeyur.ssss@gmail.com
website: www.yedeyursiddalingeshwara.com

ಸಂಖ್ಯೆ: ಮಪ್ರ/ಸಿಆರ್/02/ದಿನಸಿ/ಖರೀದಿ/2026-27 ದಿನಾಂಕ: 24.4.2026

ತೆಂಗಿನಕಾಯಿ ಟೆಂಡರ್‌ನ ತಿದ್ದುಪಡಿ ಪ್ರಕಟಣೆ

ವಿಷಯ: ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರದ ಪ್ರಕಟಣೆಯನ್ನು ಪ್ರಕಟಪಡಿಸುವ ಬಗ್ಗೆ

ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರದ ಈ ಕೆಳಕಂಡಂತೆ ಇ-ಪ್ರಕ್ಯೂರ್‌ಮೆಂಟ್ ಕರ್ನಾಟಕ ವೆಬ್‌ಸೈಟ್ (ಕೆ.ಪಿ.ಪಿ.ಪಿ) ಮೂಲಕ ಟೆಂಡರ್‌ನಲ್ಲಿ ಭಾಗವಹಿಸಲು ಕೋರಿದೆ.

ಕ್ರ ಸಂ.	ವಿವರ	ಅವಧಿ	ವಿಧ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1.	ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರದಲ್ಲಿ ಮಹಾಪ್ರಸಾದವಾದ ಕಾಯಿ ಮಿಠಾಯಿ ಪ್ರಸಾದವನ್ನು ತಯಾರಿಸಲು ಹಾಗೂ ಪೂಜಾ ಕೈಂಕರ್ಯಗಳಿಗೆ ಬೇಕಾದ ತೆಂಗಿನಕಾಯಿ 700 ರಿಂದ 750 ಗ್ರಾಂ ತೂಕ ಇರುವಂತೆ ತೆಂಗಿನಕಾಯಿಗಳನ್ನು ಸರಬರಾಜು ಮಾಡುವ ಬಗ್ಗೆ	ಕಾರ್ಯಾದೇಶ ನೀಡಿದ ದಿನಾಂಕದಿಂದ ಆರು ತಿಂಗಳ ಅವಧಿಗೆ	ಇ-ಪ್ರಕ್ಯೂರ್‌ಮೆಂಟ್ ಕರ್ನಾಟಕ ವೆಬ್‌ಸೈಟ್ (ಕೆ.ಪಿ.ಪಿ. ಪೋರ್ಟಲ್) ಮೂಲಕ	14.05.2026

ಮೇಲ್ಕಂಡಂತೆ ಇ-ಪ್ರಕ್ಯೂರ್‌ಮೆಂಟ್ ಕರ್ನಾಟಕ ವೆಬ್‌ಸೈಟ್ (ಕೆ.ಪಿ.ಪಿ.ಪಿ) ಮೂಲಕ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ 08132-228223 ಅನ್ನು/ಮುದ್ದಾಂ ಕಚೇರಿ ವೇಳೆಯಲ್ಲಿ ಕಛೇರಿಗೆ ಭೇಟಿ ಕೊಟ್ಟು ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಹಣಾಧಿಕಾರಿ
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರ, ಎಡೆಯೂರು, ಕುಣಿಗಲ್ ತಾಲೂಕು.

Ministry of Culture Government of India

ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರ
(ಸಾಂಸ್ಕೃತಿಕ ಸಚಿವಾಲಯ, ಭಾರತ ಸರಕಾರದ ಪ್ರಾಯೋಜಕತ್ವದಲ್ಲಿ)

ಸಾಂಸ್ಕೃತಿಕ ಪ್ರತಿಭಾನ್ವೇಷಣೆ ವಿದ್ಯಾರ್ಥಿವೇತನ ಯೋಜನೆ –2026–27

CCRT ಯು (ಸಾಂಸ್ಕೃತಿಕ ಸಂಪನ್ಮೂಲ ಮತ್ತು ತರಬೇತಿ ಕೇಂದ್ರ), ಆಯ್ದ 10 ರಿಂದ 14 ವರ್ಷ ವಯಸ್ಸಿನ (ಕಟ್ ಆಫ್ ಅರ್ಹತಾ ದಿನಾಂಕಗಳ ಪ್ರಕಾರ) ಮಾನ್ಯತೆ ಪಡೆದ ಶಾಲೆಗಳಲ್ಲಿ ಅಥವಾ ಕಲೆಗಳನ್ನು ಅಭ್ಯಾಸ ಮಾಡುವ ಕುಟುಂಬಗಳಿಗೆ ಸೇರಿದ ಅತ್ಯುತ್ತಮ ಪ್ರತಿಭಾನ್ವಿತ ಮಕ್ಕಳಿಗೆ ವಿವಿಧ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಿಶೇಷ ತರಬೇತಿ ಪಡೆಯುವುದಕ್ಕೆ ಸೌಲಭ್ಯಗಳನ್ನು ಒದಗಿಸಲು ಸಾಂಸ್ಕೃತಿಕ ಪ್ರತಿಭಾನ್ವೇಷಣೆ ವಿದ್ಯಾರ್ಥಿವೇತನ ಯೋಜನೆಯನ್ನು ಜಾರಿಗೆ ತರುತ್ತಿದೆ. ಈ ತರಬೇತಿಯು ಸಾಂಪ್ರದಾಯಿಕ ಸಂಗೀತ, ನಾಟಕ, ಚಿತ್ರಕಲೆ, ಶಿಲ್ಪಕಲೆ, ಕರಕುಶಲ ವಸ್ತುಗಳು ಮತ್ತು ಸಾಹಿತ್ಯ ಕಲೆಗಳಂತಹ ವಿವಿಧ ಸಾಂಸ್ಕೃತಿಕ ಕ್ಷೇತ್ರಗಳು, ಹಾಗೂ ಅಳಿವಿನಂಚಿನಲ್ಲಿರುವ ಅಪರೂಪದ ಕಲಾ ಪ್ರಕಾರಗಳಿಗೆ ವಿಶೇಷ ಒತ್ತು ನೀಡುತ್ತದೆ. ಈ ಯೋಜನೆಯಡಿ ವಿದ್ಯಾರ್ಥಿವೇತನ ಎರಡು ವರ್ಷಗಳ ಅವಧಿಗೆ ಲಭ್ಯವಿದ್ದು ಇದನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ಅಂದರೆ ವಿಶ್ವವಿದ್ಯಾಲಯದ ಮೊದಲ ಪದವಿ ಶಿಕ್ಷಣ ಹಂತ ಪೂರ್ಣಗೊಳ್ಳುವ ವರೆಗೆ ಅಥವಾ 20 ವರ್ಷ ವಯಸ್ಸಿನವರೆಗೆ ಯಾವುದು ಮೊದಲೋ ಅಲ್ಲಿಯ ವರೆಗೆ ತೃಪ್ತಿದಾಯಕ ಪ್ರಗತಿ ಕಾಯ್ದುಕೊಳ್ಳುವ ಪುರಸ್ಕೃತ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ಪ್ರತಿ ವರ್ಷ 650 ವಿದ್ಯಾರ್ಥಿವೇತನಗಳನ್ನು ನೀಡಲಾಗುತ್ತದೆ. ಇದರ ವಿವರ ಈ ಕೆಳಗೆ ನೀಡಲಾಗಿದೆ:

375 ವಿದ್ಯಾರ್ಥಿವೇತನ, ಸಾಮಾನ್ಯ ಪ್ರವರ್ಗ & ಇತರರಿಗೆ	125 ವಿದ್ಯಾರ್ಥಿವೇತನ, ಸಾಂಪ್ರದಾಯಿಕ ಕಲಾ ಕುಟುಂಬಗಳಿಗೆ
100 ವಿದ್ಯಾರ್ಥಿವೇತನ, ಬುಡಕಟ್ಟು ಸಂಸ್ಕೃತಿ /ಎಸ್‌ಟಿ ಗಳಿಗೆ	20 ವಿದ್ಯಾರ್ಥಿವೇತನ, ಅಂಗವಿಕಲರಿಗೆ (ದಿವ್ಯಾಂಗ)
30 ವಿದ್ಯಾರ್ಥಿವೇತನ ಸೃಜನಾತ್ಮಕ ಬರವಣಿಗೆ / ಸಾಹಿತ್ಯ ಕಲೆಗಳು	

ವಿದ್ಯಾರ್ಥಿವೇತನ ಮೊತ್ತ ಪ್ರತಿ ವರ್ಷಕ್ಕೆ ರೂ. 3600/-(ಮೂರು ಸಾವಿರದ ಆರನೂರು) ಆಗಿದ್ದು ವಿಶೇಷ ತರಬೇತಿಗಾಗಿ ಪಾವತಿಸಿದ ನಿಜವಾದ ಬೋಧನಾ ಶುಲ್ಕವನ್ನು ವರ್ಷಕ್ಕೆ ರೂ. 9000/- (ರೂಪಾಯಿ ಒಂಬತ್ತು ಸಾವಿರ) ವರೆಗೆ ಮರು ಪಾವತಿಸಲಾಗುತ್ತದೆ.
01.07.2012 ಮತ್ತು 30.06.2016 ನಡುವೆ ಜನಿಸಿದ ಮಕ್ಕಳು 2026–27ನೇ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿ ಫಾರ್ಮ್ ಮತ್ತು ಇತರ ವಿವರಗಳನ್ನು CCRT ವೆಬ್‌ಸೈಟ್ **www.ccrtindia.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ವೈಯಕ್ತಿಕವಾಗಿ /ಅಂಚೆ ಮೂಲಕ ಉಚಿತವಾಗಿ ಈ ಕೆಳಗಿನ ಯಾವುದೇ ಒಂದು ವಿಳಾಸದಿಂದ ಪಡೆದುಕೊಳ್ಳಬಹುದಾಗಿದೆ:

ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರ 15ಎ, ಸೆಕ್ಟರ್-7, ದ್ವಾರಕಾ, ನವದೆಹಲಿ –110075 ಫೋನ್ ನಂ. 011-28040013 ಇ-ಮೇಲ್ : ddsch.ccrt@nic.in ವೆಬ್‌ಸೈಟ್ www.ccrtindia.gov.in	CCRT ಪ್ರಾದೇಶಿಕ ಕೇಂದ್ರ 1-118/ CCRT, ಸರ್ವೇ ನಂ.64, ಗೂಗಲ್ ಕಚೇರಿ ಎದುರು, ಮಾಧಾಪುರ, ಹೈದರಾಬಾದ –500084 ಫೋನ್: ((040) 23117050 ಮತ್ತು 23111910 ಇ-ಮೇಲ್ : rchyd.ccrt@nic.in
CCRT ಪ್ರಾದೇಶಿಕ ಕೇಂದ್ರ, ಹವಾಲಾ ಖುರ್ದ್, ಬಡಗಾಂವ, ಉದಯಪುರ, ರಾಜಸ್ಥಾನ- 313001 ಫೋನ್ : (0294) 2430764, 2430771 ಇ-ಮೇಲ್ : rcud.ccrt@nic.in	CCRT ಪ್ರಾದೇಶಿಕ ಕೇಂದ್ರ, 58, ಜುರಿಪಾರ, ಪಂಜಾಬಾರಿ ರೋಡ್, ಗುವಾಹತಿ, ಅಸಾಮ–781037 ಫೋನ್ ನಂ. 0361-2330152, ಇ-ಮೇಲ್ : rcgwt.ccrt@nic.in
CCRT ಪ್ರಾದೇಶಿಕ ಕೇಂದ್ರ, ಹಳೇ ಕಲೆಕ್ಟೋರೇಟ್ ಬಿಲ್ಡಿಂಗ್, ಜಿಲ್ಲಾ ಕೋರ್ಟ್ ಹತ್ತಿರ, ಡಮೊಹ ಮಧ್ಯ ಪ್ರದೇಶ – 470661 ಫೋನ್ ನಂ. 0781-2299187 ಇ-ಮೇಲ್ : rcdamoh.ccrt@nic.in	

ಸರಿಯಾಗಿ ಭರ್ತಿ ಮಾಡಿದ ಅರ್ಜಿ ಫಾರ್ಮ್‌ನ್ನು ಸೂಕ್ತ ದಾಖಲೆಗಳೊಂದಿಗೆ ರವಿವಾರ 31 ಮೇ. 2026 ರಂದು ಅಥವಾ ಅದಕ್ಕೂ ಮುಂಚಿತವಾಗಿ CCRT, ನವದೆಹಲಿಗೆ –110075 ಇಲ್ಲಿಗೆ ತಲುಪಬೇಕು, ಯಾವುದೇ ಅಂಚೆ ವಿಳಂಬಕ್ಕೆ CCRT ಜವಾಬ್ದಾರಿಯಾಗುವುದಿಲ್ಲ. ಕೊನೆಯ ದಿನಾಂಕದ ನಂತರ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

CBC 09127/11/0001/2627

TIMES interact
Connecting People, Connecting Needs.
ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಆಸ್ತಿಗಳು PROPERTY

BANGALORE PROPERTIES

BTM LAYOUT

SALE: Park Facing Semi Comml BDA Plot, MICO Layout (2nd Stage BTM), G+1 Demolition house 1650 sft (30'X55') NF, 30ft Rd, Rs34,800/- per sft (5.75Cr nego), 9880075949, 7026001122, AgarwalEstates.Com

NELMANGALA

NELAMANGALA Residential Site for Sale. 5.30 x 27.67 mtrs. Brahmin Street. Contact : 9341299950

ESTATE & PROPERTIES

SITES FOR SALE
30x40 sites in D&E Block, Vijayanagar 3rd Stage, Mysore
80x43 Commercial Site South-East corner in 80ft-60ft road, Mysore
Also available 20x30, 30x43, 40x50, 40x75, 46x83, 15 years old layout, in middle of Vasathnagar, Mysore
Contact: 97419 05998

ವ್ಯಾಪಾರ BUSINESS

FOR SALE

BUSINESS For Sale in Uttarahalli- Manufacturing unit of Snacks & Savories in good running condition incl goodwill & customers. All the machineries are just an year old in excellent condition. Price 12 lakhs (Neg) Contact: 8884253229

ಶಿಕ್ಷಣ EDUCATION

ADMISSIONS

ADMISSION ANNOUNCEMENT: PhD Programme – 2026 St. John's Research Institute (SJRI), Bengaluru, invites online applications for admission to its PhD Programme for 2026. Online applications are open from 24th April 2026 to 14th May 2026. Important: For the prospectus, additional details, disciplines and areas of research, and the date of the entrance examination, please visit: https://www.stjohns.in/research-institute/ All applicants are required to visit the website regularly, as all updates and announcements will be published only online. Registrar, SJRI

More Classifieds on Page 4

ವಾಹನ VEHICLES

PRE-OWNED VEHICLES

NEW VEHICLES

KIA SELTOS HTX 2023

CALL: 9886000297

2023 MARCH KIA - SELTOS- HTX diesel Automatic. Metallic white, KA 05 regd. Very sparingly used (9650 kms only) Expected price 19 Lakhs. Showroom condition. Ct:9886000297

ಸೇವೆಗಳು SERVICES

REPAIRS/ WATERPROOFING

WATER PROOFING HERE IS THE SOLUTION FOR LEAKAGE ... LEAKAGE ...
OLD/NEW BUILDING, Sump, Bathroom, Terrace Wallcrack Skylight, Water proofing done by New Technology. Ph: 9880916988

ರಿಲಯನ್ಸ್‌ಗೆ ₹95,754 ಕೋಟಿ ಲಾಭ

- ಪ್ರತಿ ಷೇರಿಗೆ 6 ರೂಪಾಯಿ ಡಿವಿಡೆಂಡ್ ಘೋಷಣೆ

ಮುಂಬಯಿ: ರಿಲಯನ್ಸ್ ಇಂಡಸ್ಟ್ರೀಸ್ 2026ರ ಮಾರ್ಚ್ 31ಕ್ಕೆ ಕೊನೆಯಾದ ಆರ್ಥಿಕ ವರ್ಷದಲ್ಲಿ 95,754 ಕೋಟಿ ರೂ. ಏಕೀಕೃತ ಲಾಭ ಗಳಿಸಿದೆ.

ಒಟ್ಟು ಆದಾಯ 11.76 ಲಕ್ಷ ಕೋಟಿ ರೂಪಾಯಿ ಬಂದಿದೆ. ಗ್ರಾಹಕ ವ್ಯವಹಾರದಿಂದ ಹಿಡಿದು ತೈಲದಿಂದ ರಾಸಾಯನಿಕ ವ್ಯವಹಾರದ ತನಕದ ವ್ಯವಹಾರದಲ್ಲಿನ ಉತ್ತಮ ಬೆಳವಣಿಗೆಯು ಇಡೀ ವರ್ಷದ ಕಂಪನಿಯ ವ್ಯವಹಾರ ಫಲಿತಾಂಶವನ್ನು ಮೇಲಕ್ಕೆ ಎತ್ತಿದೆ. ಇದೇ ವೇಳೆ ಕಂಪನಿಯಿಂದ ಹತ್ತು ರೂ. ಮುಖಬೆಲೆಯ ಪ್ರತಿ ಷೇರಿಗೆ 6 ರೂಪಾಯಿ ಲಾಭಾಂಶ (ಡಿವಿಡೆಂಡ್) ಘೋಷಣೆ ಮಾಡಲಾಗಿದೆ.

ಇಡೀ ವರ್ಷದಲ್ಲಿ ಕಂಪನಿಯ ಆದಾಯದಲ್ಲಿ ವರ್ಷದಿಂದ ವರ್ಷಕ್ಕೆ ವೃದ್ಧಿಸಿದ್ದು ಈ ವರ್ಷ (11,75,919 ಕೋಟಿ ರೂ.) ಶೇ.9.8ರಷ್ಟು ಹೆಚ್ಚಳ ದಾಖಲಾಗಿದೆ. ಜಿಯೋ ಪ್ಲಾಟ್ ಫಾರ್ಮ್ಸ್ ಆದಾಯವು ಶೇ.14.7ರಷ್ಟು ಏರಿಕೆ ಕಂಡಿದ್ದರೆ, ರಿಲಯನ್ಸ್ ರೀಟೇಲ್ ವೆಂಚರ್ಸ್ ಲಿ. ಆದಾಯ ಶೇ 11.8 ರಷ್ಟು ಮೇಲೇರಿದ್ದರೆ, ತೈಲದಿಂದ ರಾಸಾಯನಿಕದ ಆದಾಯ ಶೇ.5.7ರಷ್ಟು ಹೆಚ್ಚಳವಾಗಿದೆ.

ಸಿಎಂ ಧಾಮಿ ನೇತೃತ್ವದಲ್ಲೇ 2027ರ ಉತ್ತರಾಖಂಡ ವಿಧಾನಸಭೆ ಚುನಾವಣೆ

ಡೆಹ್ರಾಡೂನ್: ಮುಂಬರುವ 2027ರ ಉತ್ತರಾಖಂಡ ವಿಧಾನಸಭಾ ಚುನಾವಣೆಯನ್ನು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರ ನೇತೃತ್ವದಲ್ಲಿಯೇ ಎದುರಿಸಲಾಗುವುದು ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಸ್ಪಷ್ಟಪಡಿಸಿದ್ದಾರೆ.

- ಮುಖ್ಯಮಂತ್ರಿ ಧಾಮಿ ಕಾರ್ಯವೈಖರಿಗೆ ಬಿಜೆಪಿ ನಾಯಕರ ಶ್ಲಾಘನೆ
- ಉತ್ತಮ ಆಡಳಿತ, ಅಭಿವೃದ್ಧಿಯಿಂದ ಜನರ ವಿಶ್ವಾಸ ಗಳಿಸಿದ ಸರಕಾರ

''ಧಾಮಿ ಸರಕಾರವು ರಾಜ್ಯದಲ್ಲಿ ಅಭಿವೃದ್ಧಿ ಮತ್ತು ಉತ್ತಮ ಆಡಳಿತದ ಬಲಿಷ್ಠ ಮಾದರಿಯನ್ನು ಪ್ರಸ್ತುತಪಡಿಸಿದೆ. ಆಡಳಿತದಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವ ಮೂಲಕ ಮತ್ತು ದೂರದ ಗುಡ್ಡಗಾಡು ಪ್ರದೇಶಗಳಿಗೂ ಮೂಲ ಸೌಕರ್ಯಗಳನ್ನು ತಲುಪಿಸುವ ಮೂಲಕ ಧಾಮಿ ಅವರು ಜನರ ನಿರೀಕ್ಷೆಗಳನ್ನು ಪೂರೈಸಿದ್ದಾರೆ. ಉತ್ತರಾಖಂಡವು ಇತ್ತೀಚಿನ ವರ್ಷಗಳಲ್ಲಿ ಕ್ಷಿಪ್ರ ಅಭಿವೃದ್ಧಿಗೆ ಸಾಕ್ಷಿಯಾಗಿದೆ. ಸವಾಲುಗಳ ನಡುವೆಯೂ ಜನರ ಜೀವನಮಟ್ಟವನ್ನು ಸುಧಾರಿಸುವಲ್ಲಿ ಧಾಮಿ ಯಶಸ್ವಿಯಾಗಿದ್ದಾರೆ,'' ಎಂದು ಅವರು ಶ್ಲಾಘಿಸಿದ್ದಾರೆ.

ಬಿಜೆಪಿಯ ಹಿರಿಯ ನಾಯಕರು ಈಗಾಗಲೇ ಧಾಮಿ ಅವರ ಕಾರ್ಯವೈಖರಿಯನ್ನು ಹಲವು ಬಾರಿ ಶ್ಲಾಘಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಡೆಹ್ರಾಡೂನ್ ಭೇಟಿಯ ಸಂದರ್ಭದಲ್ಲಿ ಧಾಮಿ ಅವರ ಕೆಲಸವನ್ನು ಶ್ಲಾಘಿಸಿದ್ದರು. ಇನ್ನು ಹಲ್ದ್ವಾನಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಧಾಮಿ ಅವರನ್ನು 'ಅಪ್ರತಿಮ ನಾಯಕ' ಎಂದು ಸಚಿವ ರಾಜನಾಥ್ ಸಿಂಗ್ ಬಣ್ಣಿಸಿದ್ದರೆ, ಅಮಿತ್ ಶಾ ಅವರು ಹರಿದ್ವಾರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ''ಸರಕಾರದ ನೀತಿಗಳು ಜನಕೇಂದ್ರಿತವಾಗಿವೆ. ಬಿಜೆಪಿ ಹ್ಯಾಟ್ರಿಕ್ ಗೆಲುವು ಸಾಧಿಸುವ ವಿಶ್ವಾಸವಿದೆ,'' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಒಟ್ಟಾರೆ ಪಕ್ಷದ ಉನ್ನತ ನಾಯಕತ್ವದ ನಿರಂತರ ಬೆಂಬಲವು 2027ರ ಚುನಾವಣೆಯಲ್ಲಿ ಬಿಜೆಪಿಯು ಧಾಮಿ ಅವರನ್ನೇ ಮುನ್ನೆಲೆಗೆ ತಂದು ಕಣಕ್ಕಿಳಿಯಲಿದೆ ಎಂಬುದನ್ನು ಸ್ಪಷ್ಟಪಡಿಸಿದೆ.

ತಾಂತ್ರಿಕ ಶಿಕ್ಷಣಕ್ಕೆ ಬಲ ಎಸ್‌ವಿಐಟಿ

ಉದ್ಯಮ ಕೇಂದ್ರಿತ ಎಂಜಿನಿಯರಿಂಗ್ ಶಿಕ್ಷಣ ನೀಡುವಲ್ಲಿ ಸಾಯಿ ವಿದ್ಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮುಂಚೂಣಿ

ಸಾಯಿ ವಿದ್ಯಾ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಅಧ್ಯಕ್ಷ ಪ್ರೊ. ಎಂ.ಆರ್.ಹೊಳ್ಳ ಅವರಿಗೆ ವಿಕ-ಬಿಎಂ ಎಜುಕೇಶನ್ ಎಕ್ಸಲೆನ್ಸ್ ಆ್ಯಂಡ್ ಆನರ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿಜಯ ಕರ್ನಾಟಕ ಮತ್ತು ಬೆಂಗಳೂರು ಮಿರರ್ ಸಿಇಒ ದೀಪಕ್ ಸಲುಜ, ವಿಕ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ, ನಟ ಧರ್ಮ ಕೀರ್ತಿರಾಜ್, ಅನುಷಾ ರೈ, ರಿಷಾ ಗೌಡ ಉಪಸ್ಥಿತರಿದ್ದರು.

ಒಂದೊಳ್ಳೆ ಕಾಲೇಜಿನಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎಂಬುದು ಪ್ರತಿಯೊಬ್ಬ ಪೋಷಕರ ಕನಸು. ಆ ಕನಸಿಗೆ ನೀರೆರೆಯುವ ಮೂಲಕ ಕನಸನ್ನು ನನಸಾಗಿಸಲು ಸಾಯಿವಿದ್ಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಜ್ಜಾಗಿದೆ. ಗುಣಮಟ್ಟದ ಶಿಕ್ಷಣ, ಅತ್ಯುತ್ತಮ ಕ್ಯಾಂಪಸ್ ಮೂಲಕ ಸೇವೆ ನೀಡುತ್ತಾ ಬಂದಿರುವ ಈ ಶಿಕ್ಷಣ ಸಂಸ್ಥೆ ಉದ್ಯಮ ಕೇಂದ್ರಿತ ಎಂಜಿನಿಯರಿಂಗ್ ಶಿಕ್ಷಣ ನೀಡುವಲ್ಲಿ ಮುಂಚೂಣಿಯಲ್ಲಿದೆ.

VK & BM EDUCATION EXCELLENCE & HONOR 2026

ಕಲಿಕೆ ಜತೆಗೆ ಕೌಶಲಕ್ಕೆ ಆದ್ಯತೆ ನೀಡಿ ಶಿಕ್ಷಣ ನೀಡಲಾಗುತ್ತಿದೆ. ಸಂಸ್ಥೆಯು ಉದ್ಯಮ, ಕೈಗಾರಿಕೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದು, ಶಿಕ್ಷಣದ ನಂತರ ಉದ್ಯೋಗ ಒದಗಿಸಲು ನೆರವು ನೀಡುತ್ತಿದೆ.
-ಪ್ರೊ. ಎಂ.ಆರ್.ಹೊಳ್ಳ
ಅಧ್ಯಕ್ಷ, ಸಾಯಿ ವಿದ್ಯಾ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್

ಸಂಸ್ಥೆಯು ವಿದ್ಯಾರ್ಥಿ ಕೇಂದ್ರಿತ ಕಲಿಕೆ, ಉದ್ಯಮಗಳ ಜತೆಗಿನ ನಿಕಟ ಸಂಪರ್ಕದ ಮೂಲಕ ಉದ್ಯೋಗಾವಕಾಶ ಸೃಷ್ಟಿ, ಪ್ರಾಜೆಕ್ಟ್ ಆಧಾರಿತ ಕಲಿಕೆ, ಇಂಟರ್ನ್‌ಶಿಪ್, ಬೂಟ್ ಕ್ಯಾಂಪ್‌ಗಳ ಜತೆಗೆ ಹ್ಯಾಕಥಾನ್, ತಜ್ಞರ ಮಾರ್ಗದರ್ಶನ ನೀಡುವ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕ ವಾತಾವರಣ ಸೃಷ್ಟಿಸಿಕೊಡಲಿದೆ.
-ಶ್ರೀನಿವಾಸರಾಜು ಕಾರ್ಯದರ್ಶಿ
ಶ್ರೀ ಸಾಯಿ ವಿದ್ಯಾ ವಿಕಾಸ ಶಿಕ್ಷಣ ಸಮಿತಿ

ಯಲಹಂಕದ ರಾಜಾನುಕುಂಟೆಯಲ್ಲಿರುವ ಸಾಯಿವಿದ್ಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಸ್‌ವಿಐಟಿ), ರಾಜ್ಯದ ಪ್ರಮುಖ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಾಲಿನಲ್ಲಿ ಅಗ್ರಸ್ಥಾನ ಪಡೆದುಕೊಂಡಿದೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಎಂ.ಆರ್.ಹೊಳ್ಳ ಅವರು ಅಧ್ಯಕ್ಷರಾಗಿರುವ ಶ್ರೀ ಸಾಯಿವಿದ್ಯಾ ವಿಕಾಸ ಶಿಕ್ಷಣ ಸಮಿತಿಯಿಂದ 2008ರಲ್ಲಿ ಸ್ಥಾಪಿತಗೊಂಡ ಈ ಸಂಸ್ಥೆ, ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಂಯೋಜನೆ ಹೊಂದಿದೆ. ನ್ಯಾಕ್-ಎ ಗ್ರೇಡ್, ಎಐಸಿಟಿಇಯಿಂದ ಅನುಮೋದಿಸಲ್ಪಟ್ಟಿರುವ ಈ ಸಂಸ್ಥೆಯ ಎಲ್ಲಾ ವಿಭಾಗಗಳು ಎನ್‌ಬಿಎ ಮಾನ್ಯತೆ ಪಡೆದಿವೆ. ಕಂಪ್ಯೂಟರ್ ಸೈನ್ಸ್, ಎಐ ಮತ್ತು ಮೆಷಿನ್ ಲರ್ನಿಂಗ್, ಡೇಟಾ ಸೈನ್ಸ್, ಸೈಬರ್ ಸೆಕ್ಯುರಿಟಿ, ಕಂಪ್ಯೂಟರ್ ಸೈನ್ಸ್ ಮತ್ತು ಬ್ಯುಸಿನೆಸ್ ಸಿಸ್ಟಂ, ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್, ಮೆಕ್ಯಾನಿಕಲ್ ಮತ್ತು ಸಿವಿಲ್ ಎಂಜಿನಿಯರಿಂಗ್ ಪದವಿ ಕೋರ್ಸ್‌ಗಳ ಜತೆಗೆ, ಎಂಬಿಎ ಹಾಗೂ ಎಲ್ಲಾ ವಿಭಾಗಗಳಲ್ಲಿ ಪಿಎಚ್‌ಡಿಯನ್ನೂ ನೀಡುತ್ತಿದೆ.

ಆಟೋಮೇಷನ್ ಎನಿವೇರ್, ಎಸ್‌ಎಪಿ, ಮೊಂಗೋಡಿಬಿ, ಸ್ನೋ ಫ್ಲೇಕ್, ಎ.ಡಬ್ಲ್ಯೂ.ಎಸ್. ಅಕಾಡೆಮಿ, ಸೇಲ್ಸ್‌ಫೋರ್ಸ್, ಯುಐ ಪಾತ್ ಸೇರಿ ನಾನಾ ಕಂಪನಿಗಳ ಜತೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳಿಗೆ ಪೂರಕ ವಾತಾವರಣ ಕಲ್ಪಿಸಲಾಗಿದೆ. 200ಕ್ಕೂ ಹೆಚ್ಚು ಕಂಪನಿಗಳ ಜತೆ ನಿಕಟ ಸಂಪರ್ಕ ಇರುವುದರಿಂದ ಹೆಚ್ಚಿನ ಉದ್ಯೋಗಾವಕಾಶಗಳ ಸೃಷ್ಟಿಗೆ ಉತ್ತಮ ಆಯ್ಕೆಯಾಗಿದೆ.

ಸುಸಜ್ಜಿತ ಲ್ಯಾಬ್, ಗ್ರಂಥಾಲಯ

ಡಿಜಿಟಲ್ ತಂತ್ರಜ್ಞಾನದ ಜತೆಗೆ, ಸಾವಿರಾರು ಇ-ಜರ್ನಲ್‌ಗಳಿರುವ ಡಿಜಿಟಲ್ ಗ್ರಂಥಾಲಯ ಹಾಗೂ ಸುಸಜ್ಜಿತ ಪ್ರಯೋಗಾಲಯ, ಸ್ಮಾರ್ಟ್ ತರಗತಿಗಳು ವಿದ್ಯಾರ್ಥಿಗಳ ಕಲಿಕೆಗೆ ಮತ್ತಷ್ಟು ಬಲ ತುಂಬಲಿದೆ. ಸುಸಜ್ಜಿತ ವಿದ್ಯಾರ್ಥಿನಿಲಯ, ವೈಫೈ ಸೌಲಭ್ಯ , ಜಿಪಿಎಸ್ ಆಧಾರಿತ ಸಾರಿಗೆ ವ್ಯವಸ್ಥೆ, ಕ್ರೀಡೆ ಮತ್ತು ಫಿಟ್ನೆಸ್ ಕೇಂದ್ರಗಳು ದೈಹಿಕ ಆರೋಗ್ಯಕ್ಕೂ ಪೂರಕ ವಾತಾವರಣ ಕಲ್ಪಿಸಲಿದೆ. ಕ್ಯಾಂಪಸ್‌ನಲ್ಲಿಯೇ ವೈದ್ಯಕೀಯ ಸೌಲಭ್ಯವನ್ನೂ ಒದಗಿಸಲಾಗುತ್ತಿದೆ. 28 ತಾಂತ್ರಿಕ ಕ್ಲಬ್‌ಗಳು, ಎನ್‌ಎಸ್‌ಎಸ್, ಎನ್‌ಸಿಸಿ ಜತೆಗೆ, 'ಸಂಚಲನ' ಹಾಗೂ 'ಟೆಕ್‌ವಿದ್ಯಾ' ಸಾಂಸ್ಕೃತಿಕ ಹಬ್ಬಗಳು ಮನರಂಜನೆ ಜತೆಗೆ ವಿದ್ಯಾರ್ಥಿಗಳಿಗೆ ಉತ್ತಮ ಅನುಭವ ನೀಡಲಿದೆ.

SAI VIDYA Institute of Technology
(Proposed Autonomous Institute under VTU)
GRADE A ACCREDITED BY NAAC NATIONAL ASSESSMENT AND ACCREDITATION COUNCIL

PROGRAMS OFFERED
ECE | CSE | CSE-AIML | CSE-DATA SCIENCE
CSE-CYBER SECURITY | CSBS | CIVIL ENGG | MECHANICAL ENGG
MBA (FINANCE/MARKETING/HR/BUSINESS ANALYTICS)

ACCREDITATIONS & RECOGNITIONS
AICTE | NBA | NIRF | NAAC 'A'

ADMISSIONS OPEN 2026-27
CET CODE E173 | COMEDK CODE E113 | PGCET CODE B269

STUDENT LEARNING ACTIVITIES
- Industry Aligned Curriculum
- Adjunct Faculty from Industry
- Internships with Leading Companies
- Project Based & Experiential Learning
- Industry Visits and Expert Guest Lectures
- Training & Strong Placement Support
- Hackathons / Ideathons / Bootcamps
- Co-Curricular Activities
- Mini Project & Major Project Expos
- Innovation Design Thinking Lab
- Incubation facility
- 20+ Skill Centres
- Higher Education Centre
- Tech-Enabled Campus

Cognizant, amazon, Tech Mahindra, Johnson Controls, MICROLAND, Capgemini, HCLTech, JUSPAY, Infosys, TCS, IBM, Blackstone, Deloitte, accenture, Morgan Stanley, ORACLE, Goldman Sachs, BOSCH, KPMG, EY

Highest Package 33LPA | Average Package 7.5LPA | Companies visited 200+

+91-9108575191
+91-9364912981
https://admissions.saividya.ac.in
Apply Now
Rajanukunte, Yelahanka Bengaluru-560119
www.saividya.ac.in
admissions@saividya.ac.in

ಉತ್ತರ ಪ್ರದೇಶದ ಆಮೂಲಾಗ್ರ ಪರಿವರ್ತನೆಯ



ವರ್ಷಗಳು

ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸುತ್ತಿರುವ ಗಂಗಾ ಎಕ್ಸ್ ಪ್ರೆಸ್‌ವೇ, ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಪ್ರಮುಖ ಮೈಲಿಗಲ್ಲಾಗಿದ್ದು , ಕೋಟ್ಯಂತರ ಜನರಿಗೆ ನೇರ ಪ್ರಯೋಜನವಾಗಲಿದೆ.

ಈ ಉದ್ಘಾಟನೆ ಬಳಿಕ ಮೀರತ್‌ನಿಂದ ಪ್ರಯಾಗ್‌ರಾಜ್ ವರೆಗೆ 594 ಕಿ.ಮೀ. ಉದ್ದದ ಎಕ್ಸ್ ಪ್ರೆಸ್‌ವೇ ಹೆದ್ದಾರಿ ಸಾರ್ವಜನಿಕರಿಗೆ ಮುಕ್ತವಾಗಲಿದೆ.

ಗಂಗಾ ಎಕ್ಸ್ ಪ್ರೆಸ್‌ವೇ ಮೀರತ್, ಹಾಪುರ್ ಬುಲಂದ್‌ಶಹರ್, ಅಮ್ರೋಹಾ, ಸಂಭಾಲ್, ಬದೌನ್, ಶಹಜಹಾನ್ಪುರ್, ಹರ್ದೋಯಿ, ಉನ್ನಾವೋ, ರಾಯ್ ಬರೇಲಿ, ಪ್ರತಾಪಗಢ ಮತ್ತು ಪ್ರಯಾಗ್‌ರಾಜ್ ಸೇರಿದಂತೆ 12 ಜಿಲ್ಲೆಗಳು ಸಂಪರ್ಕಿಸಲಿದೆ.

ಪ್ರಸ್ತುತ ದೇಶದ ಒಟ್ಟು ಎಕ್ಸ್ ಪ್ರೆಸ್‌ವೇ ಜಾಲದಲ್ಲಿ ಉತ್ತರ ಪ್ರದೇಶವು ಸುಮಾರು ಶೇ.55ರಷ್ಟು ಹೊಂದಿದೆ.

ಗಂಗಾ ಎಕ್ಸ್ ಪ್ರೆಸ್‌ವೇ ಉದ್ಘಾಟನೆಯೊಂದಿಗೆ, ಈ ಪಾಲು ಸುಮಾರು ಶೇ.60ರಷ್ಟು ಹೆಚ್ಚಾಗಲಿದ್ದು , ಎಕ್ಸ್ ಪ್ರೆಸ್‌ವೇ ಅಭಿವೃದ್ಧಿಯಲ್ಲಿ ಪ್ರಮುಖ ರಾಜ್ಯವಾಗಿ ಯುಪಿ ತನ್ನ ಸ್ಥಾನವನ್ನು ಮತ್ತಷ್ಟು ಬಲಪಡಿಸುತ್ತದೆ.

ರಾಜ್ಯದ ಎಕ್ಸ್ ಪ್ರೆಸ್‌ವೇಗಳ ನೆರೆಯ 26 ಜಿಲ್ಲೆಗಳಲ್ಲಿ 27 ಸ್ಥಳಗಳನ್ನು ಕೈಗಾರಿಕಾ ಅಭಿವೃದ್ಧಿಗೆ ಗುರುತಿಸಲಾಗಿದೆ.

ಪ್ರಸ್ತುತ, ಉತ್ತರ ಪ್ರದೇಶದ ಮೂಲಕ 90 ರಾಷ್ಟ್ರೀಯ ಹೆದ್ದಾರಿಗಳು ಹಾದುಹೋಗುತ್ತವೆ.

ದೇಶದಲ್ಲಿ ಯುಪಿ ಎರಡನೇ ಅತ್ಯಂತ ವಿಸ್ತಾರವಾದ ರಾಷ್ಟ್ರೀಯ ಹೆದ್ದಾರಿ ಜಾಲವನ್ನು ಹೊಂದಿದೆ.

ಪಿಎಂ ಗತಿ ಶಕ್ತಿ ನ್ಯಾಷನಲ್ ಮಾಸ್ಟರ್ ಪ್ಲಾನ್ ಅನುಷ್ಠಾನದ ಮೂಲಕ ಉತ್ತರ ಪ್ರದೇಶವು ರಾಷ್ಟ್ರವನ್ನು ಮುನ್ನಡೆಸುತ್ತದೆ.

ರಸ್ತೆ ಸಂಪರ್ಕದ ಸುವರ್ಣ ಯುಗ

ಉತ್ತರ ಪ್ರದೇಶದ ಮೂಲ ಸೌಕರ್ಯ ಪ್ರಯಾಣದಲ್ಲಿ ಗಂಗಾ ಎಕ್ಸ್ ಪ್ರೆಸ್‌ವೇ ಉದ್ಘಾಟನೆಯು ನಿರ್ಣಾಯಕ ಮೈಲಿಗಲ್ಲನ್ನು ಗುರುತಿಸಲ್ಪಡುತ್ತಿದೆ. ಇದು ಪ್ರಮುಖ ಇ-ವೇ ನಿರ್ಮಾಣದ ಜೊತೆಗೆ ರಾಜ್ಯಕ್ಕೆ ಹೊಸ ಪ್ರಗತಿಯ ಕಾರಿಡಾರ್ ಅಸ್ತಿತ್ವವನ್ನು ಸಂಕೇತಿಸುತ್ತದೆ. ಪ್ರಮುಖ ಜಿಲ್ಲೆಗಳಲ್ಲಿ ವ್ಯಾಪಿಸಿರುವ ಹಾಗೂ



ಪಶ್ಚಿಮ ಮತ್ತು ಪೂರ್ವ ಪ್ರದೇಶಗಳನ್ನು ಸಂಪರ್ಕಿಸುವ ಈ ಎಕ್ಸ್ ಪ್ರೆಸ್‌ವೇ, ಆರ್ಥಿಕ ವಿಸ್ತರಣೆ ಮತ್ತು ಕೈಗಾರಿಕಾ ಅಭಿವೃದ್ಧಿ & ಉದ್ಯೋಗ ಸೃಷ್ಟಿಯನ್ನು ವೇಗವರ್ಧಕವಾಗಿ ಪರಿವರ್ತಿಸಲು ಕಳೆದ ಒಂಬತ್ತು ವರ್ಷಗಳಿಂದ ಯುಪಿ ಸರ್ಕಾರಕ್ಕೆ ಮಾರ್ಗದರ್ಶನ ನೀಡಿರುವುದನ್ನು ಪ್ರತಿಬಿಂಬಿಸುತ್ತದೆ. ಈ ಅವಧಿಯಲ್ಲಿ ಯುಪಿ 'ಭಾರತದ ಎಕ್ಸ್ ಪ್ರೆಸ್‌ವೇ ರಾಜಧಾನಿ' ಎಂಬ ಹೆಗ್ಗುರುತನ್ನು ಅಚಲವಾಗಿ ಗಳಿಸಿದೆ. ಪೂರ್ವಾಂಚಲ್ ಎಕ್ಸ್ ಪ್ರೆಸ್‌ವೇ, ಬುಂದೇಲ್‌ಖಂಡ್ ಎಕ್ಸ್ ಪ್ರೆಸ್‌ವೇ, ಗೋರಖ್‌ಪುರ ಲಿಂಕ್ ಎಕ್ಸ್ ಪ್ರೆಸ್‌ವೇ ಮತ್ತು ಯಮುನಾ ಎಕ್ಸ್ ಪ್ರೆಸ್‌ವೇನಂತಹ ಹೆಗ್ಗುರುತಿನ ಯೋಜನೆಗಳು ರಾಜ್ಯದ ಭೂ ದೃಶ್ಯವನ್ನು ಬದಲಾಯಿಸಿವೆ. ಈ ಹೈಸ್ಪೀಡ್ ಕಾರಿಡಾರ್‌ಗಳು ಸ್ವತಂತ್ರ ಸಾಧನೆಗಳಲ್ಲ ; ಬದಲಿಗೆ ದೂರದ ಪ್ರದೇಶಗಳನ್ನು ಆರ್ಥಿಕ ಕೇಂದ್ರಗಳೊಂದಿಗೆ ಸಂಪರ್ಕಿಸಲು, ಪಯಣದ ಸಮಯವನ್ನು ತಗ್ಗಿಸಲು ಮತ್ತು ಒಂದು ಕಾಲದಲ್ಲಿ ಭೌಗೋಳಿಕವಾಗಿ ದೂರವೆಂದು ಪರಿಗಣಿಸಲ್ಪಟ್ಟ ಜಿಲ್ಲೆಗಳ ಸಾಮರ್ಥ್ಯವನ್ನು ಅನ್‌ಲಾಕ್ ಮಾಡಲು ವಿನ್ಯಾಸಗೊಳಿಸಿದ ಸಮಗ್ರ ರಸ್ತೆ ಜಾಲದ ಭಾಗವಾಗಿವೆ. ಅಲ್ಲದೆ, ಸುಧಾರಿತ ರಸ್ತೆ ಮೂಲಸೌಕರ್ಯವು ಹೂಡಿಕೆದಾರರು ಮತ್ತು ಯುಪಿ ಜನತೆಗೆ ಪ್ರಬಲ ನಿರೀಕ್ಷೆಗಳನ್ನು ತೆರೆದಿಟ್ಟಿವೆ.

READER ENGAGEMENT INITIATIVE

ಅನ್ಯಾಯ ತಪ್ಪಿಸಿದ ಒಳ ಮೀಸಲು ನ್ಯಾಯ

ರಾಜ್ಯಕಾರಣ
ಶಶಿಧರ ಹೆಗಡೆ
shashidhar.nandikal@timesofindia.com

ಒಳ ಮೀಸಲಿಗೆ ಸದ್ಯದ ಪರಿಸ್ಥಿತಿಯಲ್ಲಿ ಇದಕ್ಕಿಂತಲೂ ಸಮತೋಲನದ ನಿರ್ಣಯ ಸಾಧ್ಯವಿರಲಿಲ್ಲ. ಪರಿಶಿಷ್ಟರ ಅಭ್ಯುದಯದ ಎಸ್‌ಸಿಪಿ, ಟಿಎಸ್‌ಪಿ ಯೋಜನೆ ಸಿದ್ದರಾಮಯ್ಯ ಅವರ ಅವಧಿಯಲ್ಲೇ ಜಾರಿಯಾಗಿತ್ತು. ಈಗ ಒಳ ಮೀಸಲು ಅಧ್ಯಾಯವೂ ಆರಂಭವಾಗಿದೆ.

ಕರತಾಡನ ಮಾಡಲು ಎರಡೂ ಕೈಗಳು ಸರಿಯಿರಬೇಕಾಗುತ್ತದೆ. ಈ ದೃಷ್ಟಿಯಿಂದ ಪರಿಶಿಷ್ಟ ಜಾತಿಯ ಎಡ, ಬಲ ಪಂಗಡಗಳನ್ನು ಒಂದೇ ತಕ್ಕಡಿಗೆ ಹಾಕುವಲ್ಲಿ ರಾಜ್ಯದ ಕಾಂಗ್ರೆಸ್ ಸರಕಾರ ಯಶಸ್ವಿಯಾಗಿದೆ. ಒಳ ಮೀಸಲು ಬಗ್ಗೆ ಪಕ್ಷ ವಾಗ್ದಾನ ಮಾಡಿತ್ತು. ಚಿತ್ರದುರ್ಗದ ಸಮಾವೇಶದಲ್ಲಿ ಈ ಕುರಿತು ನಿರ್ಣಯಿಸಲಾಗಿತ್ತು. ಅದರನುಸಾರ ಅಂತೂ ಇಂತೂ ಒಳ ಮೀಸಲು ಹಂಚಿಕೆಗೆ ತೀರ್ಮಾನವಾಗಿದೆ. ವಿಶೇಷ ಸಂಪುಟ ಸಭೆ ನಂತರ ಸಿಹಿ ಹಂಚಿದವರು ಎಡಗೈ ಪಂಗಡದ ದಲಿತ ನಾಯಕರು. ಆದರೆ, ಒಳಗೊಳಗೇ ನಕ್ಕು ಖುಷಿ ಪಟ್ಟವರು ಕಾಂಗ್ರೆಸ್‌ನಲ್ಲಿ ಯಾವಾಗಲೂ ಮುಂದಿನ ಸಾಲಿನಲ್ಲಿ ವಿರಾಜಮಾನರಾಗುವ ಬಲಗೈ ಪಂಗಡದ ನೇತಾರರು.

ಒಳ ಮೀಸಲು ಹೋರಾಟಕ್ಕೆ ಮೂರೂವರೆ ದಶಕದ ಹಿನ್ನೆಲೆಯಿದೆ. ಇದನ್ನೊಂದು ಪಕ್ಕೊತ್ತಾಯವಾಗಿ ನಡೆಸಿಕೊಂಡು ಬಂದವರು ಮಾದಿಗ ಸಮುದಾಯದವರು ಅರ್ಥಾತ್ ಎಡಗೈನವರು. ಪರಿಶಿಷ್ಟ ಜಾತಿಯಲ್ಲಿ ಬಲಗೈನವರಿಗಿಂತ ಹೆಚ್ಚಿನ ಜನಸಂಖ್ಯೆ ನಮ್ಮದಿದೆ ಎಂದು ಎಡಗೈನವರು ಕಾಲಕಾಲಕ್ಕೆ ನೆನಪಿಸುತ್ತಲೇ ಬಂದಿದ್ದರು. ಹರಿಜನೋದ್ಧಾರದ ಚಾಂಪಿಯನ್ ಎನಿಸಿಕೊಂಡಿರುವ ಕಾಂಗ್ರೆಸ್ ಪಕ್ಷವೇ ಈ ವಿಚಾರದಲ್ಲಿ ಮುಗುಮ್ಮಾಗಿತ್ತು. ಒಳ ಮೀಸಲು ಸಂಬಂಧ ನ್ಯಾಯಮೂರ್ತಿ ಸದಾಶಿವ ಆಯೋಗ ನೀಡಿದ್ದ ವರದಿ ಕೋಲ್ಡ್ ಸ್ಟೋರೇಜ್ ಸೇರಿತ್ತು. ಕಾಂಗ್ರೆಸ್ ವೇದಿಕೆಯಲ್ಲಿ ಒಳ ಮೀಸಲು ಬಗ್ಗೆ ಪ್ರಸ್ತಾಪವಾದಾಗೆಲ್ಲ ಅಲ್ಲಿಯೇ ಅದಕ್ಕೆ ತಣ್ಣೀರು ಎರಚುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿತ್ತು. ಏಕೆಂದರೆ, ಪಕ್ಷದಲ್ಲಿ ಬಲಿಷ್ಠರೂ ಪ್ರಭಾವಿಗಳೂ ಮತ್ತು ನಿರ್ಣಾಯಕರೂ ಆಗಿರುವ ಬಲಗೈ ಗುಂಪಿನ ನಾಯಕರಿಗೆ ಈ ಪ್ರಕ್ರಿಯೆ ನಡೆಯುವುದೇ ಬೇಕಿರಲಿಲ್ಲ. ಒಳ ಮೀಸಲು ಹಂಚಿಕೆಗೆ ಅಂತಿಮ ಫೈಸಲಾ ಆದರೆ ಎಡಗೈನವರಿಗೆ ಹೆಚ್ಚು ಪಾಲು ಹೋಗುತ್ತದೆ ಎನ್ನುವುದು ಈ ವಿರೋಧಕ್ಕೆ ಕಾರಣವಾಗಿತ್ತು.

ಸತತ 7 ಬಾರಿ ಸಂಸದರಾಗಿ ಯುಪಿಎ ಅವಧಿಯಲ್ಲಿ ಪೂರ್ತಿ 10 ವರ್ಷವೂ ಸಚಿವರಾಗಿದ್ದವರು ಕೆ.ಎಚ್. ಮುನಿಯಪ್ಪ. ಆದರೆ, ಕಡೆಯವರೆಗೂ ಸಂಪುಟ ದರ್ಜೆಗೆ ಪ್ರಮೋಷನ್ ಪಡೆಯಲು ಮುನಿಯಪ್ಪ ಅವರಿಗೆ ಸಾಧ್ಯವಾಗಿರಲಿಲ್ಲ. ಅದೇ ಮಲ್ಲಿಕಾರ್ಜುನ ಖರ್ಗೆಯವರು 2009ರಲ್ಲಿ ಸಂಸದರಾಗಿ ದಿಲ್ಲಿಗೆ ಹೋಗುತ್ತಿದ್ದಂತೆ ಸಂಪುಟ ದರ್ಜೆ ಸಚಿವರಾಗಿ ಅಧಿಕಾರ ವಹಿಸಿಕೊಂಡಿದ್ದರು. ಮುನಿಯಪ್ಪ ಎಡಗೈ ಸಮುದಾಯಕ್ಕೆ ಸೇರಿದವರಾದರೆ ಖರ್ಗೆಯವರು ಬಲಗೈ ಪಂಗಡದವರು. ಖರ್ಗೆಯವರು ಈ ಸ್ಥಾನಮಾನಕ್ಕೆ ಎಲ್ಲ ರೀತಿಯಿಂದಲೂ ಅರ್ಹರಾಗಿದ್ದರು ಎಂಬುದು ಬೇರೆ ಮಾತು. ಮುನಿಯಪ್ಪ ಅವರಿಗೂ ಅನುಭವ, ಸಾಮರ್ಥ್ಯವಿದ್ದರೂ ರಾಜ್ಯ ದರ್ಜೆಯ(ಎಂಒಎಸ್) ಸಚಿವ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಗಿ ಬಂದಿತ್ತು. ಸದ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಂಪುಟದಲ್ಲೂ ಪರಿಶಿಷ್ಟ ಜಾತಿಯ ಪ್ರಾತಿನಿಧ್ಯದಲ್ಲಿ ಬಲಗೈನವರೇ ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಮುನಿಯಪ್ಪ ಕೂಡ ಸಚಿವರಾಗಿದ್ದರೂ ಅವರಿಗಿಂತಲೂ ಬಲಗೈ ಸಮಾಜದ ಸಚಿವರ ಅಭಿಪ್ರಾಯಕ್ಕೆ ಹೆಚ್ಚಿನ ಮನ್ನಣೆಯೆಂಬ ಮಾತುಗಳಿವೆ. ಕಾಂಗ್ರೆಸ್‌ನಲ್ಲಿ ದಲಿತರ ಬಲಗೈ ಗುಂಪಿನವರು ಎಷ್ಟು ಪ್ರಬಲರು ಎಂಬುದರತ್ತ ಕ್ಷಕಿರಣ ಬೀರಲು ಇಷ್ಟನ್ನೆಲ್ಲ ಹೇಳಬೇಕಾಯಿತು. ಇದರ ಜಾಡು ಹಿಡಿದರೆ ವಿಶೇಷ ಸಂಪುಟದ ನಿರ್ಧಾರದ ಬಳಿಕ ಬಲಗೈನವರು ಒಳಗೊಳಗೇ ಖುಷಿ ಪಟ್ಟಿದ್ದು ಯಾಕೆಂದು ಅರ್ಥವಾಗಬಹುದು. ಇದ್ದಿದ್ದರಲ್ಲಿ ಮಾಜಿ ಸಚಿವ ಎಚ್. ಆಂಜನೇಯ ಒಬ್ಬರೇ ಎಡಗೈನವರಲ್ಲಿ ದನಿ ಏರಿಸಿದ್ದರು ಎನ್ನುವುದು ಉಲ್ಲೇಖಾರ್ಹ.

ಅದೇನಿದ್ದರೂ ಒಳ ಮೀಸಲಿಗೆ ಸರಕಾರ ಕೈಗೊಂಡ ತೀರ್ಮಾನ ಸ್ವಾಗತಾರ್ಹವಾದುದು. ಅಷ್ಟರ ಮಟ್ಟಿಗಾದರೂ ದಲಿತ ಉಪ ಜಾತಿಗಳಿಗೆ ನ್ಯಾಯ ಒದಗಿಸಿದಂತಾಗಿದೆ. ಹಾಗೆ ನೋಡಿದರೆ, ಸಿದ್ದರಾಮಯ್ಯನವರು ಮೊದಲ ಅವಧಿಯಲ್ಲೇ ಈ ನಿಟ್ಟಿನಲ್ಲಿ ಮುಂದುವರಿದಿದ್ದರು. ಎಡಗೈ, ಬಲಗೈ ಪಂಗಡಗಳ ನಡುವೆ ಸಂಧಾನ ಸಭೆ ನಡೆಸಲು ಒಮ್ಮತಾಭಿಪ್ರಾಯ ಮೂಡಿಸಲು ಪ್ರಯತ್ನಿಸಿದ್ದರು. ಒಳ ಮೀಸಲು ಇತ್ಯರ್ಥವಾಗದಿದ್ದರೆ 2018ರ ಚುನಾವಣೆಗೆ ಹೋಗುವುದು ಕಾಂಗ್ರೆಸ್‌ಗೆ ಕಠಿಣವಾಗಲಿದೆ ಎಂಬ ವಾತಾವರಣವಿತ್ತು. ಹಾಗಾಗಿ ಸಾಕಷ್ಟು ಬಾರಿ ಮಾತುಕತೆ ನಡೆಸಿದ್ದರೂ ಒಂದು ಸೂತ್ರಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಏಕೆಂದರೆ, ಬಲಗೈ ಸಮಾಜದವರು ರಾಜೀ ಸಂಧಾನಕ್ಕೆ ಬಿಲ್ಕುಲ್ ಸಿದ್ಧರಿರಲಿಲ್ಲ ಎಂಬ ಆಕ್ಷೇಪ ಕಾಂಗ್ರೆಸ್ ಪಾಳಯದಿಂದಲೇ ಕೇಳಿ ಬಂದಿತ್ತು. ಇಷ್ಟರ ನಡುವೆ ಮುಖ್ಯಮಂತ್ರಿಯ ಸ್ಥಾನಬಲದಿಂದ ಸಿದ್ದರಾಮಯ್ಯನವರೇ ಕರೆದಿದ್ದ ನಿರ್ಣಾಯಕ ಸಭೆಗೆ ಬಲಗೈ ಪಂಗಡದ ದೊಡ್ಡ ನಾಯಕರೇ ಗೈರಾಗಿದ್ದರು.

ಬೊಮ್ಮಾಯಿ ಹಾದಿ: ಒಳ ಮೀಸಲು ಸಂಬಂಧದಲ್ಲಿ ದೃಢ ಹೆಜ್ಜೆಯಿಟ್ಟಿದ್ದವರು ಬಸವರಾಜ ಬೊಮ್ಮಾಯಿ. ಬಿಜೆಪಿಯಲ್ಲಿ ದಲಿತರ ಎಡಗೈ ನಾಯಕರಿಗೆ ಪ್ರಾಶಸ್ತ್ಯವಿದೆ. ಬಹುಮಟ್ಟಿಗೆ ಎಡಗೈ ವೋಟ್‌ಬ್ಯಾಂಕ್ ಬಿಜೆಪಿಯೊಂದಿಗಿದೆ. ರಮೇಶ್ ಜಿಗಜಿಣಗಿ, ಗೋವಿಂದ ಕಾರಜೋಳ ಅವರನ್ನು ಮುಂದಿಟ್ಟುಕೊಂಡ ಬಿಜೆಪಿ ಈ ನಿಟ್ಟಿನಲ್ಲಿ ಸಮೀಕರಣ ಮಾಡಿದ್ದು ಫಲ ಕೊಟ್ಟಿದೆ. ಹಾಗಾಗಿ ಎಸ್‌ಸಿ ಲೆಫ್ಟ್ ತನ್ನ ಬುಟ್ಟಿಯಿಂದ ಬಿಜೆಪಿಯತ್ತ ಹೋಗಿದೆ ಎಂಬ ಭಾವನೆ ಕಾಂಗ್ರೆಸ್‌ನಲ್ಲೂ ಇದೆ. ಬಿಜೆಪಿಯಿಂದ ಮುಖ್ಯಮಂತ್ರಿಗಳಾದವರಲ್ಲಿ ಮೀಸಲು ಬಗ್ಗೆ ಮುಂದುವರಿದು ಜೇನುಗೂಡಿಗೆ ಕೈಹಾಕುವ ಧೈರ್ಯ ತೋರಿದವರು ಬೊಮ್ಮಾಯಿ. ಎಸ್‌ಸಿ ಮೀಸಲು ಪ್ರಮಾಣವನ್ನು ಶೇ.15 ರಿಂದ ಶೇ.17ಕ್ಕೆ ಮತ್ತು ಎಸ್‌ಟಿ ಮೀಸಲನ್ನು ಶೇ.3 ರಿಂದ ಶೇ.7ಕ್ಕೆ ಹೆಚ್ಚಿಸುವ ಮಹತ್ವದ ತೀರ್ಮಾನವನ್ನು ಬೊಮ್ಮಾಯಿಯವರು ತೆಗೆದುಕೊಂಡಿದ್ದರು. ಆದರಿಂದ ಪರಿಶಿಷ್ಟರ ಒಟ್ಟಾರೆ ಮೀಸಲು ಶೇ.18ರ ಬದಲು ಶೇ.24ಕ್ಕೆ ಹೆಚ್ಚಳಗೊಂಡಿತ್ತು. ಎಸ್‌ಸಿಯಲ್ಲಿ ಎಡಗೈಗೆ ಶೇ.6, ಬಲಗೈಗೆ ಶೇ.5.5, ಸ್ಪೃಶ್ಯ ಜಾತಿಗಳಿಗೆ ಶೇ.4.5 ಮತ್ತು ಇತರರಿಗೆ ಶೇ.1ರಷ್ಟು ಒಳ ಮೀಸಲು ಹಂಚಿಕೆ ಬೊಮ್ಮಾಯಿ ಸರಕಾರದ ನಿರ್ಧಾರವಾಗಿತ್ತು. ಅದಕ್ಕೆ ಮುನ್ನ ಸರ್ವಪಕ್ಷಗಳ ಸಭೆಯನ್ನೂ ನಡೆಸಿದ್ದ ಬೊಮ್ಮಾಯಿ ಸಲಹೆ ಪಡೆದಿದ್ದರು. ಆದರೆ, ಈ ಐತಿಹಾಸಿಕ ಕ್ರಮದ ಲಾಭ ಪಡೆಯುವಲ್ಲಿ ಬಿಜೆಪಿ ವಿಫಲವಾಗಿತ್ತು. ಇದು ಚುನಾವಣೆ ಸಮೀಪದಲ್ಲಿ ಕೈಗೊಂಡ ರಾಜಕೀಯ ತೀರ್ಮಾನವೆಂದು ಪ್ರತಿಪಕ್ಷಗಳು ಟೀಕಿಸಿದರೆ ಬಿಜೆಪಿಗರು ಶಸ್ತ್ರ ಕೆಳಗಿಟ್ಟವರಂತೆ ನಿಸ್ತೇಜರಾಗಿದ್ದರು.

ಸಿದ್ದರಾಮಯ್ಯನವರ ಎರಡನೇ ಅವಧಿಯಲ್ಲಿ ಕಾಂಗ್ರೆಸ್‌ನಲ್ಲಿ ಪರಿಸ್ಥಿತಿ ಬದಲಾಗಿಲ್ಲ. ಈ ನಡುವೆಯೂ ಕಳೆದ ಆಗಸ್ಟ್‌ನಲ್ಲಿ ಶೇ.17ರ ಮೀಸಲಿನಡಿಯೇ ಒಳ ಮೀಸಲಿಗೆ ತೀರ್ಮಾನಿಸಲಾಗಿತ್ತು. ಆಗಲೂ ಎಡಗೈ, ಬಲಗೈಗೆ ತಲಾ ಶೇ.6ರಷ್ಟು ಮೀಸಲು ನಿಗದಿಯಾಗಿತ್ತು. ಈಗ ಶೇ.15ರಡಿ ಎಡಗೈ, ಬಲಗೈಗೆ ತಲಾ ಶೇ.5.25 ಒಳ ಮೀಸಲು ಹಂಚಿಕೆಯಾಗಿದೆ. ಇದರರ್ಥವೇನೆಂದರೆ, ಕಾಂಗ್ರೆಸ್‌ನಲ್ಲಿ ಮತ್ತೆ ಬಲಗೈ ಮೇಲುಗೈ. ಇಷ್ಟರ ಹೊರತಾಗಿಯೂ ಸಿದ್ದರಾಮಯ್ಯನವರು ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ಈ ವಿಚಾರವನ್ನು ಬಗೆಹರಿಸಿದ್ದಾರೆ. ಇದೇ ಅಂತಿಮವೆಂದೂ ಅಲ್ಲ, ಸದ್ಯದ ಪರಿಸ್ಥಿತಿಯಲ್ಲಿ ಇದಕ್ಕಿಂತಲೂ ಸಮತೋಲನದ ನಿರ್ಣಯ ಸಾಧ್ಯವಿರಲಿಲ್ಲ ಎನ್ನುವುದು ವಾಸ್ತವ. ಒಟ್ಟಾರೆ ಮೀಸಲು ಪ್ರಮಾಣ ಹೆಚ್ಚಳಕ್ಕೆ ಕೋರ್ಟ್ ಅನುಮತಿಸಿದರೆ ನ್ಯಾ. ಸದಾಶಿವ ಆಯೋಗ, ನ್ಯಾ. ನಾಗಮೋಹನ್ ದಾಸ್ ಆಯೋಗ, ಮಾಧುಸ್ವಾಮಿ ಸಮಿತಿ ಶಿಫಾರಸಿನಂತೆ ಶೇ.6ರ ಒಳ ಮೀಸಲು ಪಡೆದುಕೊಳ್ಳುವ ಯತ್ನದಲ್ಲಿ ಎಡಗೈನವರಿಗೆ ಬಾಗಿಲು ತೆರೆಯಬಹುದು.

ಪರಿಶಿಷ್ಟರ ವಿಷಯದಲ್ಲಿ ಅಳೆದೂ ತೂಗಿ ಹೆಜ್ಜೆ ಹಾಕುವುದು ಕಾಂಗ್ರೆಸ್‌ಗೆ ಅನಿವಾರ್ಯ. ಈ ದಿಶೆಯಲ್ಲಿ ಅಲೆಮಾರಿಗಳೂ ಸೇರಿದಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಿದ್ದರಾಮಯ್ಯನವರ ಸಂಪುಟ ಒಳ ಮೀಸಲು ತೀರ್ಮಾನ ಮಾಡಿರುವುದು ಕಾಂಗ್ರೆಸ್‌ಗೆ ತುಸು ನಿಟ್ಟುಸಿರು ಬಿಡುವ ಸಂಗತಿಯಾಗಿದೆ. ■

ಯಾರೂ ಸುಮ್ಮನೆ ಲೆಜೆಂಡ್ ಆಗೋದಿಲ್ಲ



ತಿಳಿಜಲ
ಪ್ರೊ.ಎಂ. ಕೃಷ್ಣೇಗೌಡ
editor@vijaykarnataka.com

ಅವರು ಬದುಕಿದ್ದಿದ್ದರೆ ಈ ಏಪ್ರಿಲ್ 24 ಕ್ಕೆ 97 ತುಂಬುತ್ತಿತ್ತು. ಇಪ್ಪತ್ತು ವರ್ಷಗಳ ಹಿಂದೆ ಅವರು ತೀರಿಕೊಂಡ ದಿನ ನಮ್ಮ ಮನೆ ಟಿ.ವಿ.ಯ ಮುಂದೆ ಕುಳಿತುಕೊಂಡು ಅವ್ವ ಬಿಕ್ಕಳಿಸಿಕೊಂಡು ಅಳುತ್ತಿತ್ತು. ಅವ್ವ ಅವರದೊಂದಿಷ್ಟು ಸಿನಿಮಾಗಳನ್ನು ನೋಡಿದ್ದು ಬಿಟ್ಟರೆ ಇನ್ನಾವ ಪರಿಚಯವೂ ಇಲ್ಲ. ಒಮ್ಮೆಯಾದರೂ ಅವರನ್ನು ಎದುರಾ ಎದುರು ನೋಡಿರಲೂ ಇಲ್ಲ. ಆದರೂ ನಮ್ಮ ಮನೆಯಲ್ಲೇ ಸಾವಾದಂತೆ ಉಮ್ಮಳಿಸಿ ಉಮ್ಮಳಿಸಿ ಅಳುತ್ತಿತ್ತು. ಅವ್ವನನ್ನು ಸಮಾಧಾನ ಪಡಿಸಲಾಗದೆ ನಾನೂ ಕಣ್ಣೀರಾಗಿ ಕೂತಿದ್ದೆ. ನನ್ನ ಮಡದಿ ತಟ್ಟೆಗೆ ಅನ್ನ ಹಾಕಿಕೊಂಡು ಬಂದು ''ಆವಾಗಿಂದಲೂ ಹೊಟ್ಟೆಗೆ ಏನೂ ತಿಂದಿಲ್ಲ, ಸ್ವಲ್ಪ ಊಟ ಮಾಡಮ್ಮ,'' ಅಂತ ತಟ್ಟೆ ಎದುರಿಗಿಟ್ಟರೆ ಅವ್ವ ತಟ್ಟೆಯನ್ನು ದೂರಕ್ಕೆ ತಳ್ಳಿ, ಗದಗದಿಸುತ್ತಲೇ ''ನಾವು ಉಣ್ಣೋದು ತಿನ್ನೋದು ಇದ್ದೇ ಇರ್ತದೆ ಬಿಡವ್ವ, ಎಂಥಾ ದೊಡ್ಡ ಜೀವ ಹೊಂಟೋಯ್ತಲ್ಲ! ಸಿನಿಮಾದಲ್ಲಿ ನೋಡಿದ್ರೆ ನಮ್ಮೊಂದಿಗೆ ಹುಟ್ಟಿದ ಅಣ್ಣನೋ ತಮ್ಮನೋ, ಹೊಟ್ಟೇಲಿ ಹುಟ್ಟಿದ ಮಗನೋ ಅನ್ನಿಸೋದು. ಹಸ್...!! ಹೊಟ್ಟೆಗೆ ಸುಣ್ಣ ಹೂದಂಗೆ ಆಗ್ತಾ ಅದೆ... ಪುಣ್ಯಾತ್ಮ.. ಇನ್ನಷ್ಟ್ ದಿನ ಇರಬೇಕಾಗಿತ್ತು...,'' ಅನ್ನುತ್ತಾ ಮತ್ತೆ ಕಣ್ಣೀರೊರೆಸಿಕೊಂಡಿತು.

ಅವರು ನಿಧನರಾದ ದಿನ ಹೀಗೆ ಕೂತಕೂತಲ್ಲೇ ಕಣ್ಣೀರಿಟ್ಟವರು ನಮ್ಮವ್ವ, ನಾನು ಮಾತ್ರ ಅಲ್ಲ, ಈ ನಾಡಿನ ಲಕ್ಷ ಲಕ್ಷ ಜನ! ಅವರನ್ನು ನಟಸಾರ್ವಭೌಮ, ಕನ್ನಡಿಗರ ಕಣ್ಮಣಿ, ಆರಾಧ್ಯ ದೈವ, ರಸಿಕರ ರಾಜ, ವರನಟ ಹಾಗಂತೆಲ್ಲಾ ಕನ್ನಡಿಗರು ಏನೇನೋ ಕರೆದರಲ್ಲ, ಅವೆಲ್ಲಾ ಅವರಿಗೆ ಬರೀ ಬಿರುದು ಬಾವಲಿಗಳಲ್ಲ, ಅನ್ವರ್ಥ ಹಾಗೇ ಇದ್ದವರು, ಬಾಳಿದವರು ರಾಜ್‌ಕುಮಾರ್. ಕೊಳ್ಳೇಗಾಲ ತಾಲೂಕಿನ ಒಂದು ಬೆಂಗಾಡಿನ ಊರಿನಲ್ಲಿ ಬಡತನವನ್ನೇ ಉಂಡುಟ್ಟು ಬೆಳೆದ ಮುತ್ತುರಾಜ ಎಂಬ ಹುಡುಗ ಕನ್ನಡ ಚಿತ್ರರಂಗದ, ಅಷ್ಟೇಕೆ, ಕನ್ನಡ ನಾಡಿನ ಆಸ್ತಿ, ಒಂದು ಮಹಾನ್ ವ್ಯಕ್ತಿತ್ವವಾಗಿ ಬೆಳೆದದ್ದು, ಇಡೀ ಭಾರತೀಯ ಚಿತ್ರರಂಗದ ಮಹಾ ಮಹಾ ಕಲಾವಿದರೆಲ್ಲರಿಂದ ಅನನ್ಯವೆಂಬಂಥ ಗೌರವ ಪಡೆದದ್ದು, ಒಬ್ಬ ಸಾಧಾರಣ ವ್ಯಕ್ತಿ, ತನ್ನ ಪ್ರತಿಭೆಯಿಂದ, ಪರಿಶ್ರಮದಿಂದ, ಶ್ರದ್ಧೆಯಿಂದ, ಬದ್ಧತೆಯಿಂದ ಯಾವ ಎತ್ತರವನ್ನು ತಲುಪಬಹುದೆಂಬುದಕ್ಕೆ ನಮ್ಮ ಕಣ್ಣೆದುರಿನ ಉದಾಹರಣೆ ಡಾ. ರಾಜ್‌ಕುಮಾರ್. ಅವರನ್ನು ಒಬ್ಬ ವ್ಯಕ್ತಿ ಅನ್ನಲಾಗದು. ಅದೊಂದು ಪರಂಪರೆ, ಕನ್ನಡ ನಾಡು ಕಳೆದ ಶತಮಾನದಲ್ಲಿ ಕಂಡ ಬಹು ದೊಡ್ಡ ವಿದ್ಯಮಾನ.

ನಟನಾಗಿ ರಾಜಕುಮಾರ್ ಅನನ್ಯರು, ಅಸದೃಶರು. ಅವರು ನಿರ್ವಹಿಸಿದಷ್ಟು ವೈವಿಧ್ಯಮಯ ಪಾತ್ರಗಳನ್ನು ಪ್ರಪಂಚದ ಯಾವ ನಟನೂ ನಿರ್ವಹಿಸಿಲ್ಲ. ಅದು ಸಾಮಾಜಿಕವಾಗಿರಲಿ, ಐತಿಹಾಸಿಕ, ಪೌರಾಣಿಕ, ಜಾನಪದ ಯಾವುದೇ ಪಾತ್ರವಿರಲಿ ರಾಜ್‌ಕುಮಾರ್ ಅದನ್ನು ಆವಾಹಿಸಿಕೊಳ್ಳಬಲ್ಲವರಾಗಿದ್ದರು. ಒಮ್ಮೆ ನನಗೆ ನಮ್ಮ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಹೇಳಿದ್ದರು. ''ಗೌಡ್ರೆ, ರಾಜ್‌ಕುಮಾರ್ ಅವರ ಶರೀರವೇ ಒಂದು ವಿಸ್ಮಯ ನನಗೆ. ಯಾವುದೇ ಪಾತ್ರವಾಗಲಿ ಅದನ್ನು ಸ್ವೀಕರಿಸಿಬಿಡುತ್ತದೆ ಅವರ ದೇಹ ಸೌಷ್ಟವ. ಅದು ಹಳ್ಳಿಯ ಗಮಾರನಾಗಲಿ, ಜೇಮ್ಸ್ ಬಾಂಡ್ ಆಗಲಿ, ರಾಜನಾಗಲಿ, ಸಿಪಾಯಿಯಾಗಲಿ, ಕೃಷ್ಣನಾಗಲಿ, ಕಂಸನಾಗಲಿ, ರಾಮನಾಗಲಿ, ರಾವಣನಾಗಲಿ, ಭಕ್ತನಾಗಲಿ, ಭಗವಂತನಾಗಲಿ, ಮುಗ್ಧನಾಗಲಿ, ಜಾಣನಾಗಲಿ, ಕಳ್ಳನಾಗಲಿ, ಪೊಲೀಸ್ ಆಗಲಿ, ಬ್ರಾಹ್ಮಣನಾಗಲಿ, ಚಮ್ಮಾರನಾಗಲಿ ಅದ್ಯಾವುದೇ ಪಾತ್ರವಾಗಲಿ, ಅವರ ದೇಹ ಸ್ವೀಕರಿಸಿಬಿಡುತ್ತದೆ. ಕಡೆಗೆ ಹೆಣ್ಣು ಪಾತ್ರಕ್ಕೆ ಮೇಕ್ ಅಪ್ ಮಾಡಿ ನೋಡಿ ಬೇಕಾದರೆ, ಒಂದು ಸುಂದರ ಹೆಣ್ಣಾಗಿ ಕಾಣಿಸುತ್ತಾರೆ ಅಣ್ಣಾವ್ರು. ಕೃಷ್ಣನಾದರೆ ತುಂಟನಾಗಿ ಕಾಣಿಸುವ ಅವರು ರಾಮನಾದರೆ ಗಂಭೀರವಾಗಿ ಕಾಣಿಸುತ್ತಾರೆ. ಇಂಥದೊಂದು ಅದ್ಭುತ ಶರೀರವನ್ನು ನಾನು ಕಲಾವಿದನಾಗಿ ಯಾರಲ್ಲೂ ನೋಡಿಲ್ಲ, ಹಾಗೆ ನೋಡಿದರೆ ಅಂಥ ಎತ್ತರದ ಆಳಲ್ಲ ಅವರು, ಒಂದೈದೂವರೆ ಅಡಿ ಇರಬಹುದಷ್ಟೆ. ಒರಟು ಶರೀರ ರಚನೆಯೂ ಅಲ್ಲ, ಆ ಶರೀರಕ್ಕೆ ಹಿರಣ್ಯ ಕಶ್ಯಪುವಿನ ಮೇಕ್ ಅಪ್ ಮಾಡಿ ವೇಷ ತೊಡಿಸಿದರೆ ಘೋರವಾಗಿ ಕಾಣಿಸುತ್ತದೆ. ಆಮೇಲೆ ಇನ್ನೊಂದು. ಅವರು ಪಾತ್ರದಲ್ಲಿ ಪಂಚೆ ಉಟ್ಟುಕೊಂಡರೆ, ಸೂಟು ಬೂಟು ಹಾಕಿಕೊಂಡರೆ, ಕಸೆ ಅಂಗಿ, ಕಚ್ಚೆ ಪಂಚೆ ಧರಿಸಿದರೆ , ರಾಜ ಪೋಷಾಕು ಹಾಕಿಕೊಂಡರೆ, ಹೀಗೆ ಏನೇ ಉಡುಗೆ ತೊಡಿಸಿ ಅದರಲ್ಲಿ ಅಣ್ಣಾವ್ರು ಸಹಜವೆಂಬಂತೆ ನಡೆದಾಡುತ್ತಾರೆ. ಸೊಂಟದಲ್ಲಿ ಕತ್ತಿ ಕಟ್ಟಿಕೊಂಡರೆ, ತಲೆಗೆ ಕಿರೀಟ ಇಟ್ಟುಕೊಂಡರೆ ಇವರು ಹುಟ್ಟಿದಾಗಿನಿಂದಲೂ ಈ ವೇಷದಲ್ಲೇ ಇದ್ದಾರೇನೋ ಎಂಬಷ್ಟು ಸಹಜವಾಗಿ ಅದನ್ನೆಲ್ಲಾ ಹ್ಯಾಂಡಲ್ ಮಾಡುತ್ತಾರೆ. ಇಲ್ಲ, ನಾನೆಲ್ಲೂ ನೋಡಿಲ್ಲ ಬಿಡಿ. ಇನ್ನು ಡೈಲಾಗ್ ಹೇಳಿದರೆ, ಎದುರಿಗೆ ಸಾವಿರ ಜನ ಕೂತು ನೋಡುತ್ತಿದ್ದರೂ ಅಲ್ಲಿ ಪ್ರತಿಯೊಬ್ಬರೂ ರಾಜ್‌ಕುಮಾರ್ ತನಗೇ ಹೇಳುತ್ತಿದ್ದಾರೇನೋ ಎಂಬಂತೆ ಮಾತಾಡುತ್ತಾರೆ. ಮಾತುಗಳನ್ನು ಕಿವಿಗಲ್ಲ, ನೇರ ಕರುಳಿಗೆ, ಹೃದಯಕ್ಕೆ ಮುಟ್ಟಿಸುತ್ತಾರೆ. ಅಬ್ಬಾ! ಯಾರಾದರೂ ಒಬ್ಬ ವ್ಯಕ್ತಿ ಸುಮ್ಮ ಸುಮ್ಮನೆ ಲೆಜೆಂಡ್ ಆಗೋದಕ್ಕೆ ಸಾಧ್ಯವಿಲ್ಲ!''

ಬರಿಯ ನಟನಾಗಿ ಇಷ್ಟು ಶ್ರದ್ಧಾವಂತನಾಗಿದ್ದರೂ, ಪ್ರತಿಭಾವಂತನಾಗಿದ್ದರೂ ನಾವು ಅವರನ್ನು ಕುರಿತು ಇಷ್ಟು ಮಾತಾಡಬೇಕಾಗಿಲ್ಲ, ರಾಜ್‌ಕುಮಾರ್ ಒಬ್ಬ ಸಾಮಾಜಿಕ ವ್ಯಕ್ತಿಯಾಗಿ ಬೆಳೆಯುತ್ತಾ ಹೋದ ರೀತಿಯೂ ಅನನ್ಯವೇ.

ರಾಜ್‌ಕುಮಾರ್ ಅವರನ್ನು ಅವರ ಬದುಕಿನ ಉತ್ತರಾರ್ಧದಲ್ಲಿ ನೋಡಿ. ಅವರಿಗೆ ಏನಿರಲಿಲ್ಲ? ರೂಪವಿತ್ತು, ಪ್ರತಿಭೆಯಿತ್ತು, ಅದ್ಭುತ ವಾಗ್ಮಿತೆಯಿತ್ತು, ಅಗಾಧ ಜನಪ್ರಿಯತೆಯಿತ್ತು, ಸಾಕಷ್ಟು ಐಶ್ವರ್ಯವೂ ಇತ್ತು. ಇವುಗಳಲ್ಲಿ ಒಂದಿದ್ದರೂ ಮನುಷ್ಯನ ತಲೆ ಕೆಡುವುದು ಸುಲಭ. ಆದರೆ, ಇವೆಲ್ಲವೂ ಅವರಲ್ಲಿ ಏಕೀಭವಿಸಿದ್ದರೂ ಅವರು ಅತ್ಯಂತ, (ಇನ್ನೊಮ್ಮೆ ಹೇಳೋಣ), ಅತ್ಯಂತ ವಿನಯಶೀಲರಾಗಿಯೇ ಬದುಕಿದರು. ಗೋಕಾಕ್ ವರದಿಯ ಹೋರಾಟದ ಸಂದರ್ಭದಲ್ಲಿ ಅವರ ಜನಪ್ರಿಯತೆ ಶಿಖರದಲ್ಲಿತ್ತು. ಚಿಟಿಕೆ ಹೊಡೆದಿದ್ದರೆ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿರುತ್ತಿದ್ದರು. ಆದರೆ, ಜನ ನನ್ನನ್ನು ರಾಜನನ್ನಾಗಿ ಮಾಡಿದ್ದಾರೆ. ನಾನು ಮಂತ್ರಿಯಾಗಬೇಕಾ? ಅಂತ ಚತುರೋಕ್ತಿಗಳನ್ನಾಡಿ ಆ ಆಮಿಷಗಳನ್ನೆಲ್ಲ ಗೆದ್ದುಬಿಟ್ಟರು. ತಾರಾ ವರ್ಚಸ್ವಿಯಾಗಿದ್ದಾಗಲೂ, ಐಶ್ವರ್ಯವಂತರಾಗಿದ್ದಾಗಲೂ ಅಂತರಂಗದಲ್ಲಿ ಸಾಮಾನ್ಯನಾಗೇ ಉಳಿದುಬಿಟ್ಟರು. ಹಣದ ರಾಶಿಯೇ ಇದ್ದಾಗಲೂ ಖಾಲಿ ಜೇಬಿನಲ್ಲಿ ಓಡಾಡಿದರು. ತಾವು ನಟನಾದ್ದರಿಂದ ತಮ್ಮನ್ನು ಅಭಿಮಾನಿಗಳು ಅನುಕರಿಸುತ್ತಾರಾದ್ದರಿಂದ ಪ್ರತಿ ಮಾತನ್ನೂ ಎಚ್ಚರದಿಂದ ಆಡಿದರು. ತಾವು ಯಾವ ಪಾತ್ರವನ್ನು ಮಾಡಬೇಕು, ಏನು ಮಾಡಬಾರದು ಎಂಬ ವಿವೇಚನೆಯನ್ನಿಟ್ಟುಕೊಂಡಿದ್ದರು. ಈ ಶರೀರವನ್ನು ನೋಡುವುದಕ್ಕಾಗಿ ನಮ್ಮ ಜನ ದುಡ್ಡು ಕೊಟ್ಟು ಬರುತ್ತಾರಾದ್ದರಿಂದ ಶರೀರವನ್ನು ಹುರಿಯಾ ಗಿಟ್ಟುಕೊಂಡಿರಬೇಕೆಂದು ನಿರಂತರ ಯೋಗ, ವ್ಯಾಯಾಮ ಮಾಡುತ್ತಿದ್ದರು. ತಮ್ಮನ್ನು ಅಭಿಮಾನಿಗಳು ದೇವರು ಮಾಡಿಬಿಡುತ್ತಾರೆಂದು ಅಭಿಮಾನಿಗಳನ್ನೇ ದೇವರುಗಳೆಂದು ಭಾವಿಸಿ ಹಾಗೇ ಕರೆದುಬಿಟ್ಟರು. ಯಾವ್ಯಾವುದೋ ಕಾರಣಗಳಿಂದ ತಮಗೆ ಅನ್ಯಾಯವಾದಾಗಲೂ, ಅವಮಾನವಾದಾಗಲೂ ಅವಡುಗಚ್ಚಿಕೊಂಡು ಸಹಿಸಿಕೊಂಡರು. ಎತ್ತೆತ್ತರದ ಗೌರವ ಪ್ರಶಸ್ತಿಗಳು ಬಂದಾಗಲೂ ಅದೆಲ್ಲಾ ನೀವು ಕೊಟ್ಟ ಭಿಕ್ಷೆ ಅಂದು ವಿನೀತರಾದರು. ಯಾರಾದರೂ ಬುದ್ಧಿವಂತರಿಗೆ ಇದೆಲ್ಲಾ ನಾಟಕ ಅಂತ ಅನ್ನಿಸಿದರೆ, ಅವರಿಗೆ ಒಂದೇ ಪ್ರಶ್ನೆ, ಇಂಥಾ ನಾಟಕವನ್ನು ಒಂದೆರಡು ಬಾರಿ, ಒಂದೆರಡು ವರ್ಷ ಆಡಬಹುದು. ಅರ್ಧ ಶತಮಾನ ಕಾಲ, ಅದೂ ಸಾರ್ವಜನಿಕ ವ್ಯಕ್ತಿ ಆಡೋದಕ್ಕೆ ಸಾಧ್ಯವಾ ನೋಡಿ.

ನಿಮಗೆ ಗೊತ್ತಿದೆ ಅಂದುಕೊಂಡಿದ್ದೇನೆ. ರಾಜ್‌ಕುಮಾರ್ ಅವರ ಬಗ್ಗೆ ಬಂದಿರುವಷ್ಟು ಪುಸ್ತಕಗಳು, ಲೇಖನಗಳು ಇಡೀ ದೇಶದಲ್ಲಿ ಯಾವ ನಟನ ಬಗ್ಗೆಯೂ ಬಂದಿಲ್ಲ, ಅವರ ಪ್ರತಿಮೆಗಳನ್ನು ನಿಲ್ಲಿಸಿರುವಷ್ಟು ಇನ್ನಾವ ನಟನ ಪ್ರತಿಮೆಗಳನ್ನೂ ನಿಲ್ಲಿಸಿಲ್ಲ, ಅವರಿಗಿರುವಷ್ಟು ಅಭಿಮಾನಿ ಸಂಘಗಳು ಇನ್ನಾವ ನಟನಿಗೂ ಇಲ್ಲ.

ಮುಖ್ಯಮಂತ್ರಿ ಚಂದ್ರು ಹೇಳಿದ ಮಾತುಗಳನ್ನು ಮತ್ತೆ ಹೇಳಿಬಿಡುತ್ತೇನೆ. ''ಯಾರೂ ಸುಮ್ಮ ಸುಮ್ಮನೆ ಲೆಜೆಂಡ್ ಆಗೋದಕ್ಕೆ ಆಗೋದಿಲ್ಲ'' ■

ನಿತ್ಯ ಬೆಳಗ್ಗೆ ಬ್ರಷ್ ಮಾಡುವವರಿಗೆ ಈತನೇ ಪ್ರಾತಃ ಸ್ಮರಣೀಯ

ವಿಕ ಟರ್ನಿಂಗ್ ಪಾಯಿಂಟ್
ಹ.ಚ. ನಟೇಶ ಬಾಬು
nateshababu.hc@timesofindia.com

ಬೆಳಗಿನ ಮೊಬೈಲ್ ಅಲಾರಂ ಕೂಗುತ್ತದೆ. ನಾವು ಎದ್ದು ಬಾತ್‌ರೂಮಿಗೆ ಹೋಗಿ ಟೂತ್‌ಬ್ರಷ್ ಹಿಡಿದು ಹಲ್ಲು ತಿಕ್ಕುತ್ತೇವೆ. ಇದು ಬಹುತೇಕರ ಪಾಲಿಗೆ ದಿನದ ಮೊದಲ ಕೆಲಸ. ಒಂದು ರೀತಿಯಲ್ಲಿ ಇದೆಲ್ಲವೂ ಯಾಂತ್ರಿಕ ಪ್ರಕ್ರಿಯೆ. ಬ್ರಷ್ ಮಾಡುವಾಗ- 'ಅರೇ, ಈ ಟೂತ್‌ಬ್ರಷ್ ಎಂಬ ಸರಳ ಸಾಧನ ಹೇಗೆ ಹುಟ್ಟಿತು?' ಎಂದು ಯಾರೂ ಯೋಚಿಸಲಾರರು. ಆದರೆ, ಈ ಪ್ರಶ್ನೆಯ ಉತ್ತರವು ನಮ್ಮನ್ನು 18ನೇ ಶತಮಾನದ ಬ್ರಿಟನ್ ಕಡೆಗೆ ಕರೆದೊಯ್ಯುತ್ತದೆ. ಅಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿ, ಆದರೆ ಅಸಾಮಾನ್ಯ ದೃಷ್ಟಿಯುಳ್ಳವನಿದ್ದ. ಅವನ ಹೆಸರು ವಿಲಿಯಂ ಅಡಿಸ್. ಟೂತ್‌ಬ್ರಷ್ ಬಳಸುವ ಪ್ರತಿಯೊಬ್ಬರ ಪಾಲಿಗೂ ಪ್ರಾತಃ ಸ್ಮರಣೀಯ.

ಆ ಕಾಲದ ಬ್ರಿಟನ್‌ನಲ್ಲಿ ಇಂದಿನಂತೆ ಸ್ವಚ್ಛತೆ, ಆರೋಗ್ಯದ ಬಗ್ಗೆ ಜಾಗೃತಿ ಇರಲಿಲ್ಲ. ಹಲ್ಲು ತಿಕ್ಕುವುದು ಒಂದು ಕ್ರಮಬದ್ಧ ಅಭ್ಯಾಸವಾಗಿರಲಿಲ್ಲ. ಜನರು ಕೈಗೆ ಏನು ಸಿಗುತ್ತಿತ್ತೋ ಅದನ್ನೇ ಬಳಸುತ್ತಿದ್ದರು. ಕೆಲವರು ಉಪ್ಪು, ಬೂದಿ, ಕಲ್ಲಿನ ಪುಡಿಯನ್ನು ಎಡಗೈನ ಅಂಗೈನಲ್ಲಿ ಹಿಡಿದು ಬೆರಳನ್ನು ಬಳಸಿ ಹಲ್ಲುಜ್ಜುತ್ತಿದ್ದರು. ಕೆಲವರು ಬೆರಳಿಗೆ ಬಟ್ಟೆ ಸುತ್ತಿಕೊಂಡು ಹಲ್ಲುಗಳನ್ನು ಒರೆಸುತ್ತಿದ್ದರು. ಇದರಲ್ಲಿ ವಿಜ್ಞಾನವೂ ಇರಲಿಲ್ಲ, ಪರಿಣಾಮಕಾರಿತ್ವವೂ ಇರಲಿಲ್ಲ. ವಿಲಿಯಂ ಅಡಿಸ್ ಕೂಡ ಈ ಸಮಾಜದ ಭಾಗವೇ ಆಗಿದ್ದವನು. ಅಂದವಾಗೆ, ಅವನು ಸಣ್ಣ ಮಟ್ಟದ ವ್ಯಾಪಾರಿ. ಬದುಕು ಒಂದು ಆವರೇಜ್ ಎನ್ನುವ ಮಟ್ಟಿಗೆ ಸಾಗುತ್ತಿತ್ತು. ದೊಡ್ಡ ಕನಸುಗಳಿರಲಿಲ್ಲ, ಆದಾಗ್ಯೂ, ವಿಲಿಯಂನಲ್ಲಿನ ಒಂದು ಗುಣವೇ ಅವನನ್ನು ಪ್ರತ್ಯೇಕ ವ್ಯಕ್ತಿಯನ್ನಾಗಿ ರೂಪಿಸಿತು. ಅವನು ತನ್ನ ಸುತ್ತಲಿನ ಜಗತ್ತನ್ನು ಸೂಕ್ಷ್ಮವಾಗಿ ಗಮನಿಸುವ ಗುಣವನ್ನು ಹೊಂದಿದ್ದ.

ಹೇಗೋ ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡಿದ್ದ ವಿಲಿಯಂ ಬದುಕಲ್ಲಿ ಒಂದು ಟರ್ನಿಂಗ್ ಪಾಯಿಂಟ್ ಬಂತು. ಅದು ಯಶಸ್ಸಿನ ಕತೆಗಳಲ್ಲಿ ಬರುವಂತೆ ಸುಂದರವಾದ ತಿರುವಲ್ಲ. 1770ರ ಸುಮಾರಿಗೆ ಲಂಡನ್‌ನಲ್ಲಿ ಗಲಭೆಯೊಂದು ನಡೆಯಿತು. ಜನರ ಆಕ್ರೋಶ, ಗೊಂದಲ, ಗದ್ದಲ ಮಿತಿಮೀರಿದ್ದ ಸಂದರ್ಭವದು. ಈ ಗಲಭೆಯಲ್ಲಿ ಅವನ ಪಾತ್ರವಿಲ್ಲದಿದ್ದರೂ, ಪೊಲೀಸರ ಸೆರೆಯಾದ. ಪರಿಣಾಮ ಜೈಲು ಸೇರಬೇಕಾಯಿತು. ಜೈಲು ಅನ್ನುವುದು ಕನಸುಗಳ ಕೊನೆಯ ತಾಣವಾಗಬೇಕು. ಆದರೆ, ವಿಲಿಯಂ ಪಾಲಿಗೆ ಅದು ಹೊಸ ಆರಂಭದ ನೆಲೆ. ಜೈಲಿನ ಮೊದಲ ಕೆಲವು ದಿನಗಳು ನರಕವನ್ನು ನೆನಪಿಸಿದವು. ಅಲ್ಲಿನ ಗಲೀಜು, ದುರ್ಗಂಧ, ಅಸಹ್ಯ ವಾತಾವರಣ. ಸುತ್ತಲಿನ ಕೈದಿಗಳು ಎಲ್ಲವೂ ಕಿರಿಕಿರಿಯೇ. ಜೈಲಿನ ನಿಯಮಗಳು, ನಿರ್ಬಂಧಗಳು ಸ್ವಾತಂತ್ರ್ಯದ ಮಹತ್ವವನ್ನು ಅರ್ಥ ಮಾಡಿಸಿದವು. ಇಂಥ ಪರಿಸ್ಥಿತಿಯಲ್ಲಿ ಸಾಮಾನ್ಯವಾಗಿ ಮನುಷ್ಯನ ಮನಸ್ಸು ಕುಗ್ಗುತ್ತದೆ. ಆದರೆ, ವಿಲಿಯಂ ಸ್ವಲ್ಪ ದಿನಗಳಲ್ಲೇ ಜೈಲಿನ ವಾತಾವರಣಕ್ಕೆ ಹೊಂದಿಕೊಂಡ. ಅದರ ಹೊರತು ಬೇರೆ ದಾರಿಯಾದರೂ ಏನಿತ್ತು?

ಅವನು ಜೈಲಿನ ವಾತಾವರಣವನ್ನು ಸೂಕ್ಷ್ಮವಾಗಿ ನೋಡಲು ಶುರುಮಾಡಿದ. ಆದೊಂದು ಬೆಳಗ್ಗೆ ಕೈದಿಗಳು ಹಲ್ಲು ತಿಕ್ಕುತ್ತಿರುವುದನ್ನು ಗಮನಿಸಿದ. ಒಬ್ಬಾತ ಬಟ್ಟೆ ತುಂಡಿನಿಂದ ತನ್ನ ಹಲ್ಲುಗಳನ್ನು ಒರೆಸುತ್ತಿದ್ದ. ಇನ್ನೊಬ್ಬನು ಬೂದಿ ಬಳಸಿ ಹಲ್ಲು ತೊಳೆಯುತ್ತಿದ್ದ. ಕೆಲವರು ಕೇವಲ ನೀರಿನಿಂದ ತೊಳೆಯುತ್ತಿದ್ದರು. ಇದೆಲ್ಲವನ್ನೂ ನೋಡುತ್ತಲೇ- ''ಇಲ್ಲಿ ಒಬ್ಬರನ್ನೊಬ್ಬರು ಅನುಕರಿಸುತ್ತಿದ್ದಾರೆ. ಇದು ಸ್ವಚ್ಛತೆಯಾ? ಹಲ್ಲುಗಳ ಸ್ವಚ್ಛತೆಗೆ ಇಷ್ಟು ಸಾಕಾಗುತ್ತದೆಯಾ?,'' ಎಂದು ತನ್ನನ್ನು ತಾನೇ ಕೇಳಿಕೊಂಡ. ಅವನ ಕಣ್ಣುಗಳಲ್ಲಿ ಇನ್ನಷ್ಟು ಪ್ರಶ್ನೆಗಳು ಹೊಳೆಯಲು ಶುರುವಾದವು.

''ಹಲ್ಲಿನ ನಡುವೆ ಸಿಕ್ಕಿಕೊಂಡ ಕಸ ಹೇಗೆ ಹೊರಬರುತ್ತದೆ? ಏಕೆ ಹಲ್ಲುಗಳ ಸ್ವಚ್ಛತೆಗೆ ವಿಶೇಷ ಸಾಧನ ಇರಬಾರದು?,'' ಎನ್ನುವ ಪ್ರಶ್ನೆ- ಆಲೋಚನೆ ಮನದಲ್ಲಿ ನೆಲೆಯೂರಿತು. ಒಂದು ದಿನ ಜೈಲಲ್ಲಿ ಮಾಂಸದ ಊಟವಿತ್ತು. ಊಟದ ತಟ್ಟೆಯಲ್ಲಿ ಸಿಕ್ಕಿದ ಒಂದು ಎಲುಬು ಅವನ ಗಮನ ಸೆಳೆಯಿತು. ಎಲುಬನ್ನು ಕೈಯಲ್ಲಿ ತಿರುಗಿಸುತ್ತಾ ನೋಡುತ್ತಿದ್ದ. ''ಇದನ್ನು ಉಪಯೋಗಿಸಬಹುದೇ?'' ಎಂಬ ಪ್ರಶ್ನೆ ಮಿದುಳಿನಲ್ಲಿ ಮಿಂಚಿತು. ಆದೊಂದು ಸಣ್ಣ ಕ್ಷಣ. ಆದರೆ, ಜೀವನವನ್ನೇ ಬದಲಿಸುವಂಥ ಕ್ಷಣ.

ಊಟದ ಬಳಿಕ ಆ ಎಲುಬನ್ನು ತೊಳೆದ. ನಂತರ ಅದರಲ್ಲಿ ಸಣ್ಣಸಣ್ಣ ರಂಧ್ರಗಳನ್ನು ಮಾಡಿದ. ಜೈಲಿನಲ್ಲಿದ್ದ ಗಾರ್ಡ್‌ಗಳ ಸಹಾಯದಿಂದ ಪ್ರಾಣಿಗಳ ಕೂದಲುಗಳನ್ನು (ಬ್ರಿಸಲ್)



ಸಂಗ್ರಹಿಸಿದ. ಅವನ್ನು ಆ ಎಲುಬಿನ ರಂಧ್ರಗಳಲ್ಲಿ ಕೂರಿಸಿ ಅಂಟಿಸಿದ. ಹೀಗೆ ಒಂದು ಹೊಸ ಸಾಧನ ರೂಪುಗೊಂಡಿತು. ಇದು ಮೊದಲ ಟೂತ್‌ಬ್ರಷ್! ಇದು ಯಾವ ದೊಡ್ಡ ಪ್ರಯೋಗಾಲಯದಲ್ಲೂ ಹುಟ್ಟಲಿಲ್ಲ, ಯಾವುದೇ ವಿಜ್ಞಾನಿಗಳ ತಂಡವೂ ಅಲ್ಲಿ ಇರಲಿಲ್ಲ, ಕೇವಲ ಒಂದು ಎಲುಬು, ಒಂದಿಷ್ಟು ಕೂದಲು ಮತ್ತು ಒಂದು ಕುತೂಹಲದ ಮನಸ್ಸಿನ ಸಹಯೋಗದಿಂದ ಟೂತ್‌ಬ್ರಷ್ ರೂಪುಗೊಂಡಿತು.

ಆ ಬ್ರಷ್ ಅನ್ನು ವಿಲಿಯಂ ಬಳಸಲು ಪ್ರಾರಂಭಿಸಿದ. ಮೊದಲ ಪ್ರಯತ್ನ ಸ್ವಲ್ಪ ವಿಚಿತ್ರವಾಗಿತ್ತು. ಕೂದಲುಗಳು ಬಾಯಲ್ಲಿ ಹಲ್ಲುಗಳ ನಡುವೆ ಸೇರಿಕೊಳ್ಳುತ್ತಿದ್ದವು. ಆದರೆ, ಕೆಲವೇ ದಿನಗಳಲ್ಲಿ ಪ್ರಯೋಗ ಸುಧಾರಿಸಿತು. ಹಲ್ಲುಗಳು ಹೆಚ್ಚು ಸ್ವಚ್ಛಗೊಂಡು ದುರ್ಗಂಧ ಕಡಿಮೆಯಾಯಿತು. ಬ್ರಷ್ ಮಾಡುವುದೊಂದು ಹಿತಾನುಭವ ನೀಡಿತು. ಇದನ್ನು ನೋಡಿದ ಇತರ ಕೈದಿಗಳು ಕುತೂಹಲದಿಂದ ''ಏನಿದು?,'' ಎಂದು ಕೇಳಿದರು. ವಿಲಿಯಂ ನಗುತ್ತಾ, ''ನೋಡಿ, ಇದು ಹಲ್ಲು ತೊಳೆಯುವ ಹೊಸ ವಿಧಾನ! ನೀವೂ ಪ್ರಯತ್ನಿಸಬಹುದು,'' ಎಂದ. ನೋಡಿದವರು ಆಶ್ಚರ್ಯಪಟ್ಟರು. ಕೆಲವರು ಪ್ರಯತ್ನಿಸಿದರು. ನಂತರ? ಜೈಲಿನೊಳಗೆ 'ಟೂತ್‌ಬ್ರಷ್' ಒಂದು ಸಣ್ಣ ಕ್ರಾಂತಿಯಾಗಿಬಿಟ್ಟಿತು.

ಐಡಿಯಾವನ್ನು ಉತ್ಪನ್ನವಾಗಿಸಿದ್ದಾಯಿತು. ಅದನ್ನು ಮಾರ್ಕೆಟಿಂಗ್ ಮಾಡುವ ಎರಡನೇ ಹಂತವನ್ನು ವಿಲಿಯಂ ಪ್ರವೇಶಿಸಿದ. ಜೈಲಿನಿಂದ ಬಿಡುಗಡೆಯಾದ ನಂತರ, ತನ್ನ ಈ ಆಲೋಚನೆಯನ್ನು ಮರೆಯಲಿಲ್ಲ. ಸಂಕಷ್ಟದಲ್ಲಿ ಹುಟ್ಟಿದ ಆಲೋಚನೆ, ಸಂಕಷ್ಟದೊಂದಿಗೆ ಮರೆತುಹೋಗುತ್ತದೆ. ಆದರೆ ವಿಲಿಯಂ ಹಾಗೆ ಮಾಡಲಿಲ್ಲ.

ಅವನು ಟೂತ್‌ಬ್ರಷ್ ತಯಾರಿಕೆಯನ್ನು ಪ್ರಾರಂಭಿಸಿದ. ಮೊದಲಿಗೆ ಕೈಯಾರೆ. ಬೇಡಿಕೆ ಹೆಚ್ಚಾದಂತೆ ದೊಡ್ಡ ಮಟ್ಟದಲ್ಲಿ ಉತ್ಪಾದನೆ ಶುರು ಮಾಡಿದ. ಜನರು ಮೆಚ್ಚಿ 'ಭಲೇ' ಎಂದರು. ಜನರ ಹಲ್ಲುಗಳ ಆರೋಗ್ಯ ಸುಧಾರಿಸಿತು. ದಂತ ಸ್ವಚ್ಛತೆಯ ಹಳೆ ಪದ್ಧತಿ ಮರೆಯಾಗಿ, ನಿಧಾನವಾಗಿ ಟೂತ್ ಬ್ರಷ್ ಮನೆಮಾತಾಯಿತು. ಸಣ್ಣ ಆವಿಷ್ಕಾರದಿಂದ ಹುಟ್ಟಿದ ವ್ಯವಹಾರ, ಮುಂದೆ 'ವಿಸ್‌ಡಮ್ ಟೂತ್‌ಬ್ರಷ್' ಎಂಬ ದೊಡ್ಡ ಕಂಪನಿಯಾಗಿ ಬ್ರಿಟನ್‌ನಲ್ಲಿ ಬೆಳೆಯಿತು. 1808ರಲ್ಲಿ ವಿಲಿಯಂ ನಿಧನರಾದರು. ಅವರ ದೊಡ್ಡ ಮಗ ವಿಲಿಯಂ, ಉದ್ಯಮವನ್ನು ವಿಸ್ತರಿಸಿದ. ಇದಕ್ಕೂ ಮುನ್ನ ಟೂತ್‌ಬ್ರಷ್‌ಗೆ ಸಂಬಂಧಿಸಿದ ನಾನಾ ಪ್ರಯತ್ನಗಳನ್ನು ಇತಿಹಾಸದಲ್ಲಿ ಕಾಣಬಹುದು. ಆದರೆ, ಮೊದಲ ಬಾರಿಗೆ ಮಾಡರ್ನ್ ಟೂತ್‌ಬ್ರಷ್ ಅಭಿವೃದ್ಧಿ ಮಾಡಿ, ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಿ ಮಾರುಕಟ್ಟೆಗೆ ತಲುಪಿಸಿದ ಕೀರ್ತಿ ವಿಲಿಯಂಗೆ ಸಲ್ಲುತ್ತದೆ. ಇಂದು ನಾವು ಪ್ಲಾಸ್ಟಿಕ್ ಟೂತ್‌ಬ್ರಷ್, ಎಲೆಕ್ಟ್ರಿಕ್ ಬ್ರಷ್, ಸ್ಮಾರ್ಟ್ ಬ್ರಷ್ ಎಲ್ಲವನ್ನೂ ನೋಡುತ್ತಿದ್ದೇವೆ. ಆದರೆ, ಮೂಲ ಆಲೋಚನೆ? ಇದು ನಿಜಕ್ಕೂ ಕೇವಲ ಒಂದು ಆವಿಷ್ಕಾರದ ಕತೆಯಲ್ಲ, ಒಂದು ಮನಸ್ಥಿತಿಯ ಕತೆ. ನಮ್ಮ ಸುತ್ತಲೂ ಟ್ರಾಫಿಕ್, ಸಮಯದ ಕೊರತೆ, ಹಣಕಾಸಿನ ಗೊಂದಲ, ಆರೋಗ್ಯದ ಸಮಸ್ಯೆಗಳಿವೆ. ಏನೇನೋ ಸಮಸ್ಯೆಗಳ ರಾಶಿಯೇ ಇದೆ. ನೋಡುವ ಮನಸ್ಥಿತಿ ಬದಲಾದರೆ, 'ಟೂತ್‌ಬ್ರಷ್ ಐಡಿಯಾ'ದಂತೆ ಇನ್ನೇನಾದರೂ ಹೊಳೆದೀತು. ■

ಪುಸ್ತಕದ ಓದೆಂದರೆ ಪರಿಮಳದ ಪಯಣ

ಮುಗಿಲ ಹಕ್ಕಿ
ವಿದ್ಯಾರಶ್ಮಿ ಪೆಲತ್ತಡ್ಕ
vidyarashmi.bhat@timesofindia.com

ಹಳೆಯ ಪುಸ್ತಕದಂಗಡಿ. ಒಳಗೆ ಹೋದಾಕ್ಷಣ ಆವರಿಸುವ ಒಂದು ವಿಶಿಷ್ಟ ಗಂಧ. ಅದನ್ನೇ ಆಘ್ರಾಣಿಸುತ್ತ ಹಳೆಯ ಪುಸ್ತಕಗಳ ಪುಟಪುಟಗಳನ್ನೂ ತೆರೆಯುತ್ತಲಿದ್ದರೆ ಅದರಲ್ಲೇ ತೇಲಿಹೋದಂತೆ. ಪುಸ್ತಕದ ಪರಿಮಳವದು. ವೆನಿಲ್ಲಾವೋ ಬಾದಾಮಿಯೋ ಹೊರಸೂಸುವ ಘಮದಂತೆ ಅನಿಸುವ, ವಿನೆಗರ್ ಕೂಡ ಸೇರಿಕೊಂಡಂತೆ ಭಾಸವಾಗುವ, ಆದರೆ ಅದಲ್ಲ ಇದೊಂದು ಬೇರೆಯೇ ಅನಿಸುವ ವಾಸನೆ. ಇಷ್ಟವಾದರೆ ಮತ್ತೆ ಮತ್ತೆ ಸೇವಿಸುವ ಸೆಳೆತ. ಇಲ್ಲವಾದರೆ, ಅಕ್ಷೀ ಎಂದು ಎಡೆಬಿಡದೆ ಸೀನಲು ಕಾರಣವಾಗಿ ದೂರೀಕರಿಸುವ ಘಾಟು.

ನಮ್ಮ ಸುತ್ತಮುತ್ತಲಿನ ನೈಸರ್ಗಿಕ ವಸ್ತುಗಳಿಗೆಲ್ಲ ಒಂದು ವಾಸನೆ ಇದೆ. ರಾಸಾಯನಿಕ ವಸ್ತುಗಳಲ್ಲೂ ಆಕರ್ಷಣೆಗಾಗಿ ಎಂಬಂತೆ ಘಮವೊಂದನ್ನು ಸೇರಿಸಿರುತ್ತಾರೆ. ಪುಸ್ತಕದಲ್ಲಿರುವ ಕಾಗದವೂ ಸಸ್ಯಜನ್ಯವಾದ್ದರಿಂದ ನೈಸರ್ಗಿಕವೇ. ಈ ಕಾಗದ ಮತ್ತು ಶಾಯಿಗಳೆರಡೂ ಕಾಲಾನುಕ್ರಮದಲ್ಲಿ ರಾಸಾಯನಿಕ ವಿಘಟನೆಗೊಳಗಾಗಿ ಈ ಬಗೆಯ ವಾಸನೆಯೊಂದು ಹೊರಸೂಸಿಬರುತ್ತದೆ. ಪುಸ್ತಕಪ್ರೇಮಿಗಳಿಗೆ ಇದೆಷ್ಟು ಇಷ್ಟವೆಂದರೆ ಈ ಘಮದ ಮೋಡಿಗೊಳಗಾಗಿಯೇ ಒಂದೊಂದೇ ಪುಟ ತೆರೆದು ಓದುತ್ತ ಕುಳಿತರೆ ಇನ್ನಾವುದೋ ಲೋಕಕ್ಕೆ ಸರಿದಂತೆ... ಅಪ್ಪನ ಕಾಲದ್ದೋ ತಾತನ ಕಾಲದ್ದೋ ಪುಸ್ತಕವಾದರೆ ಆ ಹಿರಿಯರ ನೆನಪನ್ನೂ ನಯವಾಗಿ ನೇವರಿಸಿದಂತೆ... ಈ ಗಂಧವಿದೆಯಲ್ಲ, ಇದಕ್ಕೆ ಇಂಗ್ಲಿಷ್‌ನಲ್ಲಿ ಹೆಸರೊಂದಿದೆ, 'ಬಿಬಿಲಿಯೋಸ್ಮಿಯಾ'.

ಈಗಷ್ಟೇ ಮುದ್ರಣಗೊಂಡು ಬಂದ ಹೊಸ ಪುಸ್ತಕಕ್ಕೂ ಗಂಧವಿದೆ. ಆದರೆ, ಇದು ಹಳೆಯ ಪುಸ್ತಕದರಂತಿರುವುದಿಲ್ಲ. ಹೊಸದಾಗಿ ಬಳಸಿದ ಕಾಗದ, ಶಾಯಿ, ಅಂಟಿಸಲು ಬಳಸಿದ ಗೋಂದು ಎಲ್ಲವುಗಳ ಮಿಶ್ರವಾಸನೆ ಇದು. ಹೊಸತಿನಲ್ಲಿರುವ ಈ ಘಮ ಕಾಲಕ್ರಮೇಣ ಕಡಿಮೆಯಾಗುತ್ತಾ ಹೋಗುತ್ತದೆ. ಹಳೆಯ ಪುಸ್ತಕಗಳ ಘಮ ವರ್ಷಗಳು ಕಳೆದಂತೆ ಗಾಢವಾಗುತ್ತಾ ಸಾಗುತ್ತವೆ.

ಹಳೆಯ ಪುಸ್ತಕಗಳೆಂದರೆ ಅವುಗಳು ಹಸ್ತಾಂತರಿಸುವ ನೆನಪುಗಳ ಸುಗಂಧವೂ ಅಲ್ಲಿ ಸವಾರಿ ಹೊರಡುತ್ತದೆ. ಅಜ್ಜ ಓದಿದ್ದ ಪುಸ್ತಕ, ಅವರೆಲ್ಲೋ ಗುರುತು ಹಾಕಿದ ಪುಟಗಳು, ಅಪ್ಪ ಟಿಪ್ಪಣಿ ದಾಖಲಿಸಿದ ಅಕ್ಷರಗಳು ಎಲ್ಲ ಎದ್ದು ಬಂದು ಮಾತಿಗಿಳಿಯುವಾಗ ಅಲ್ಲಿ ತಲೆಮಾರಿನ ಬಂಧಗಳ ಮೆರವಣಿಗೆ... ಲೈಬ್ರರಿಯಿಂದ ಹಳೆ ಪುಸ್ತಕವನ್ನು ಎರವಲು ಪಡೆದರೂ ನೋಡಿ, ಅದರಲ್ಲಿ ಯಾವ್ಯಾವ ಕೈಯ ಗುರುತಿರುತ್ತದೋ ಭಾವದ ಸ್ಪರ್ಶವಿರುತ್ತದೋ. ಹಿರಿಯ ವಿದ್ಯಾರ್ಥಿಗಳ ಪಠ್ಯಪುಸ್ತಕ ಪಡೆದರೂ ಹೀಗೆಯೇ, ಅವರ ಓದಿನ ರೀತಿ-ಗ್ರಹಿಕೆಯನ್ನು ಊಹಿಸುತ್ತ ಆ ಜಾಡಿನಲ್ಲಿ ಸಾಗುವುದೇ ಒಂದು ಉಲ್ಲಸಿತ ನಡಿಗೆ. ಪುಸ್ತಕದ ಹೊರಕವಚದಿಂದ ತೊಡಗಿ ಪ್ರತಿಪುಟದಲ್ಲಿ ಅಚ್ಚಾಗಿರುವ, ಯಾರೋ ಬರೆದುಹೋದ ಅಕ್ಷರಗಳು, ಚಿತ್ತುಗಳು ಕಾಟುಗಳು ಎಲ್ಲವೂ ನಮಗೆ ಇನ್ನೇನೋ ಕಥೆಗಳನ್ನು ಹೇಳುತ್ತವೆ. ಇದನ್ನೇ ಲೇಖಕ ಸದಾಶಿವ ಸೊರಟೂರು ತಮ್ಮ 'ನಿನ್ನೆ ಯಾರದ್ದೋ ಇಂದು ನನ್ನದು' ಪ್ರಬಂಧದಲ್ಲಿ 'ಆ ಹಳೆ ಪುಸ್ತಕಗಳು ನಮಗೊಂದು ಅಭಯದಂತಿದ್ದವು. ಅವುಗಳೊಂದಿಗೆ ನಮ್ಮ ಗೆಳೆತನ ಹಳೆಯದು ಎನಿಸುತ್ತಿತ್ತು... ಹೊಸ ಪುಸ್ತಕ ಕಂಡರೆ ನಮಗೊಂದು ಅಳುಕು. ಅದು ನಮ್ಮ ಲೋಕದ್ದಲ್ಲ ಅನ್ನುವ ಭಾವನೆ. ಹೊಸ ಪುಸ್ತಕದ ವಾಸನೆ ಒಂಥರಾ ಆತಂಕವೊಡ್ಡುತ್ತಿತ್ತು' ಎಂದು ಬರೆಯುತ್ತಾರೆ.

ಶ್ರೀನಿವಾಸ ವೈದ್ಯರು ಕೂಡ, ತಮ್ಮ ಹಳೆ ಪುಸ್ತಕಗಳಂತೂ ಯಾವುದೋ ಒಂದು ಅವರ್ಣನೀಯ ಮಾಯಾಲೋಕಕ್ಕೆ ಕರೆದುಕೊಂಡು ಹೋಗುತ್ತವೆ, ಆಯಾ ಪುಸ್ತಕಗಳ ಒಡೆಯ ಒಡತಿಯರ ನೂರೆಂಟು ಕಥೆಗಳನ್ನು ಹೇಳುತ್ತವೆ ಎಂದು ಪುಸ್ತಕಪ್ರೀತಿ ಸಾರಿದವರು. ಅವರ 'ಪುಸ್ತಕದ ಹುಳು' ಎಂಬ ಪ್ರಬಂಧದಲ್ಲಿ ಪುಸ್ತಕಗಳ ಘಮ ಅನಾವರಣಗೊಳ್ಳುವ ಬಗೆಯೇ ಚೆಂದ. 'ಖರೇ ಹೇಳಬೇಕಂದ್ರೆ ನನ್ನ ಎಲ್ಲಾ ಪುಸ್ತಕಗಳ ಜತೆಗೆ ಹಳೇ ಇರ್‍ಲಿ, ಹೊಸದಿರ್‍ಲಿ, ದಪ್ಪಂದಿರ್‍ಲಿ, ತೆಳ್ಳಂದಿರ್‍ಲಿ, ಅಂಚು ಮಡಚಿರ್‍ಲಿ, ರಟ್ಟು ಹರಿದಿರ್‍ಲಿ, ಎಲ್ಲ ಅಂದರೆ ಎಲ್ಲ ಪುಸ್ತಕಗಳ ಜತೆಗೆ ಒಂದು ಗಾಢವಾದ ಅಂತಃ ಕರಣಪೂರ್ವಕ ಸಂಬಂಧ ಏರ್ಪಟ್ಟಿದೆ. ಈ ಪುಸ್ತಕಗಳು ನನ್ ಸಂಗ್ತಿ ಮಾತಾಡ್ತಾವ, ಹರಟಿ ಹೊಡೀತಾವ, ಸುಖದುಃಖ ಹೇಳ್ಕೊತ್ತಾವ, ಈ ಪುಸ್ತಕಗಳ ಜತೆ ತಾಸುಗಟ್ಲೆ ಕುಜುಬುಜು ನಡೆಸಿರ್ತೀನಿ...' ಎಂದು ಬರೆಯುವ ಅವರ ಈ ಪ್ರಬಂಧವನ್ನು ಪುಸ್ತಕಪ್ರೇಮಿಗಳೆಲ್ಲ ಓದಲೇಬೇಕು.



ಪುಸ್ತಕದ ಒಳಹೊರಗೆಲ್ಲ ಒಡನಾಡಿದ ಬಳಿಕ ಅದರ ಒಳ ಪ್ರವೇಶ ಮಾಡಲೇಬೇಕು. ಈಗಲೇ ಮೊದಲು ಸೆಳೆಯುವುದು ಕೃತಿಕಾರರ ಭಾಷೆಯಗಂಧ. ಇಡೀ ಕೃತಿಯ ವಸ್ತು, ಕೃತಿಕಾರನ ಅಭಿವ್ಯಕ್ತಿಯೆಲ್ಲವನ್ನೂ ಭರಿಸಿಕೊಳ್ಳುವ ಶಕ್ತಿ ಅವರ ಭಾಷೆಗೆ ಇರಲೇಬೇಕು. ಪ್ರತಿಯೊಬ್ಬ ಲೇಖಕರಿಗೂ ಅವರದೇ ಭಾಷೆ ಇರುತ್ತದೆ ಕೂಡ.

'ಉಪಮಾ ಕಾಳಿದಾಸಸ್ಯ' ಎಂದೇ ಖ್ಯಾತನಾದ ಕಾಳಿದಾಸನ ಉಪಮೆಗಳಿಂದ ಕೂಡಿದ ಭಾಷೆಗೆ ಇನ್ನಾರದೂ ಸಾಟಿಯಲ್ಲ. ಕಪ್ಪಗಿನ ಮೋಡದಲ್ಲಿ ಕಾಮನಬಿಲ್ಲು ಮೂಡಿದಾಗ ಅದು ಕೃಷ್ಣನ ತಲೆಯ ಮೇಲಿನ ನವಿಲುಗರಿಯಂತೆ ಕಾಣುತ್ತದೆ ಎನ್ನುವ ಈ ಮಹಾಕವಿ, ಬೆಟ್ಟದ ಮೇಲೆ ನದಿ ಹರಿಯುವಾಗ ಕಾಣುವ ಬೆಳ್ನೊರೆಯನ್ನು ಆನೆಯ ದೇಹದ ಮೇಲಿನ ಬಿಳಿ ಗುರುತಿಗೆ ಹೋಲಿಸುತ್ತಾನೆ. ಅವನದು ಹಾಗಾದರೆ, 'ಅರಿವಿನ ಸೆರಗು ಹಾರಿತು', 'ನರಶರದ ಜುಂಜುವೊಳೆಯಲಿ ಜಾರುವನೆ ಜಾಹ್ನವೀಧರ' ಎಂದೆಲ್ಲ ಬರೆಯುವ ಕುಮಾರವ್ಯಾಸ ರೂಪಕ ಸಾಮ್ರಾಜ್ಯ ಚಕ್ರವರ್ತಿ. ಹೀಗೆಯೇ ಪಂಪ, ರನ್ನ, ಅಲ್ಲಮ, ಅಕ್ಕಮಹಾದೇವಿ, ಮುದ್ದಣ, ಮಾಸ್ತಿ, ಕುವೆಂಪು, ಬೇಂದ್ರೆ, ಚಿತ್ತಾಲ, ಪೂರ್ಣಚಂದ್ರ ತೇಜಸ್ವಿ, ಜಯಂತ ಕಾಯ್ಕಿಣಿ, ದೇವನೂರು... ಪ್ರತಿಯೊಬ್ಬರ ಭಾಷೆಗೂ ಅನನ್ಯ ಘಮ. ಅತ್ತ ಇಂಗ್ಲಿಷ್‌ಗೆ ಹೊರಳಿದರೆ ಅಲ್ಲಿಯೂ ಶೇಕ್ಸ್‌ಪಿಯರ್‌ನಿಂದ ತೊಡಗಿ ಒಬ್ಬೊಬ್ಬ ಕವಿ, ಕಾದಂಬರಿಕಾರರಲ್ಲೂ ಭಿನ್ನ ಭಾಷೆಯ ಅರಳು. ಇಂಥವರೆಲ್ಲ ಬೇರಾವುದೋ ಹೆಸರಿನಲ್ಲಿ ಬರೆದರೂ ಅದು ಇಂಥವರದೇ ಎಂದು ನಿಸ್ಸಂದೇಹವಾಗಿ ಹೇಳಿಬಿಡಬಹುದು. ಪ್ರತಿ ವ್ಯಕ್ತಿಯೂ ತನ್ನ ವ್ಯಕ್ತಿತ್ವದಿಂದ ಅನನ್ಯನಾಗುವಂತೆ ಪ್ರತಿ ಸಾಹಿತಿಯೂ ತನ್ನ ಭಾಷೆಯ ರೀತಿಯಿಂದ ವಿಶಿಷ್ಟರಾಗಿ ನಿಲ್ಲುತ್ತಾರೆ.

ಭಾಷೆಯೊಂದಿಗೇ ಕೃತಿಯೊಳಗೆ ಪ್ರವೇಶ ಪಡೆದು ಆಳಕ್ಕಿಳಿಯುತ್ತೇವೆ. ವಸ್ತು, ಬಂಧ, ಆಕೃತಿ ಎಲ್ಲ ಜತೆಯಾಗಿ ನಿಲ್ಲುವುದು ಈಗಲೇ. ಇಲ್ಲಿಯೂ ಲೇಖಕರಿಗನುಗುಣವಾಗಿ ಭಿನ್ನ ಪರಿಮಳ. ಕಥೆಯನ್ನೇ ಬರೆಯಲಿ, ಕಾದಂಬರಿಯೇ ಇರಲಿ ಪ್ರತಿಯೊಬ್ಬರದೂ ಭಿನ್ನ ರೀತಿ. ಆರ್ಥರ್ ಹೈಲಿ ಎಂಬ ಬ್ರಿಟಿಷ್ ಕಾದಂಬರಿಕಾರನಿದ್ದ. ಈತ ಬರೆಯುತ್ತಿದ್ದ ಕಾದಂಬರಿಗಳ ಕಥೆಗಳೆಲ್ಲ ಒಂದೊಂದು ಉದ್ಯಮವನ್ನು ಹಿನ್ನೆಲೆಯಲ್ಲಿರಿಸಿಕೊಂಡು ಹೆಣೆದವುಗಳಾಗಿರುತ್ತಿದ್ದವು. ಹೋಟೆಲ್ ಉದ್ಯಮವನ್ನಿರಿಸಿಕೊಂಡು ಕಥೆ ಬರೆದನೆಂದರೆ ಆ ಉದ್ಯಮದ ಸಕಲ ವಿವರಗಳನ್ನೂ ಒಂದೆಡೆ ನೀಡುತ್ತಾ ಇನ್ನೊಂದೆಡೆ ಕಥೆಯೂ ಅಬಾಧಿತವಾಗಿ ಸಾಗುವಂತೆ ನಿರೂಪಿಸುವುದು ಅವನ ಬಗೆ. ನಮ್ಮ ದೇವುಡು ಬರೆದ ರೀತಿಯೂ ಹೀಗೆಯೇ, ಅವರ ಕಾದಂಬರಿಗಳನ್ನು ಓದಿದರೆ ವೇದ, ಉಪನಿಷತ್ತುಗಳ ಸಮಗ್ರ ವಿವರ ಅಲ್ಲಿಯೇ ಸಿಕ್ಕಿಬಿಡುತ್ತದೆ. ಆರ್ಥರ್ ಕನಾನ್ ಡಾಯ್ಲ್ ತನ್ನ ಬಲುಪ್ರಸಿದ್ಧ ಶೆರ್ಲಾಕ್ ಹೋಮ್ಸ್‌ನ ಮೂಲಕ ಇದಲ್ಲ-ಇದಲ್ಲ ಎಂದು ಸಾಕ್ಷಿ, ಪುರಾವೆಗಳನ್ನು ನಿರಾಕರಿಸುತ್ತಾ ಕೊನೆಗೆ ಅಪರಾಧಿಯನ್ನು ನಿರೂಪಿಸುವ 'ಫ್ರೀ ಫ್ಲೋಯಿಂಗ್ ಡಿಡಕ್ಷನ್' ನಿರೂಪಣೆ ಮಾಡುತ್ತಿದ್ದನಲ್ಲ, ಅದಕ್ಕೆ ಅವನೇ ಸಾಟಿ. ಹಾಸ್ಯದಲ್ಲೂ ಸಹ, ಲೇಖಕರು ಎಷ್ಟೇ ಇರಬಹುದು, ಪ್ರತಿಯೊಬ್ಬರದೂ ಒಂದೊಂದು ಶೈಲಿಯಲ್ಲಿವೇ? ಕೈಲಾಸಂ ಅವರು ಚಾಟೂಕ್ತಿಗಳಿಂದ ಕುಟುಕಿದರೆ ವೈಯೆನ್ಕೆ ಪನ್ ಪಂಡಿತರಾದರು. ಅ.ರಾ.ಮಿತ್ರರು 'ಆಲೂಗಡ್ಡೆ ಬೋಂಡಾಂತಂದ್ರೆ/ ಬಾಯ್ಬಾಯ್ ಬಿಡ್ತಾನೆ ನಮ್ ಪಾಪ' ಎನ್ನುತ್ತ ಕ್ಲಿಷ್ಟಕರ ಛಂದಸ್ಸಿನಲ್ಲಿಯೂ ನಗೆಯಲೆ ಉಕ್ಕಿಸಿದವರು. ಹೀಗೆ ಪುಸ್ತಕದ ಓದು ಎಂದರೆ ಅದೊಂದು ಪರಿಮಳದ ಪಯಣ. ಪುಸ್ತಕದ ಪುಟಗಳು ಬೀರುವ ಭೌತಿಕ ಪರಿಮಳ ಆಘ್ರಾಣಿಸಿ ಒಳ ಪ್ರವೇಶಿಸಿದರೆ ಅಲ್ಲಿ ಸಿಗುವ ಭಾಷೆ, ವಸ್ತು, ನಿರೂಪಣೆಯ ಒಟ್ಟಂದದ ಗಂಧವೂ ಸೇರಿದರೆ ಅಲ್ಲೊಂದು ಸುಗಂಧದ ಭಂಡಾರವೇ ತೆರೆದಂತೆ. ವಿಶೇಷವೆಂದರೆ, ಇದನ್ನು ಆಸ್ವಾದಿಸಿದಷ್ಟು ಅದು ಕಡಿಮೆಯಾಗುವುದಿಲ್ಲ, ವೃದ್ಧಿಯಾಗುತ್ತದೆ, ನಾವೂ ಪರಿಮಳಭರಿತರಾಗುತ್ತೇವೆ. ■

ಸದನದೊಳಗೆ ಸಾಮಾನ್ಯನ ಸಂಕಟದ ಸದ್ದು

ವ್ಯಕ್ತಿಗನ್ನಡಿ
ಆತೀಶ್ ಬಿ. ಕನ್ನಾಳೆ
aatish.kannale@timesofindia.com

'ರಾಜಕೀಯ ಸೇವೆಯೇ, ಹಾಗಾದರೆ ಸಂಬಳವೇಕೆ?', 'ಉದ್ಯೋಗ ಎಂದಾದರೆ ಅರ್ಹತಾ ಪರೀಕ್ಷೆ ಏಕಿಲ್ಲ?', 'ಸ್ಕೂಲ್‌ಗೆ ಡೊನೇಷನ್ ಕಟ್ಟಿದ ಮೇಲೆ ಮತ್ತೆಮತ್ತೆ ಫೀಸ್ ಕಟ್ಟುವುದೇಕೆ?', 'ವಿಶೇಷ ಪ್ಯಾಕೇಜ್‌ಗೆ ಹೆಚ್ಚುವರಿ ಹಣ ಪಡೆಯುವ ವಿಮಾನಯಾನ ಸಂಸ್ಥೆಗಳು ವಿಮಾನ ವಿಳಂಬಕ್ಕೆ ಗ್ರಾಹಕರಿಗೆ ಪರಿಹಾರ ಪಾವತಿಸಬೇಕು...'

ಇಂಥ ಹತ್ತಾರು ಪ್ರಶ್ನೆಗಳು ಶ್ರೀಸಾಮಾನ್ಯರ ಮನದಲ್ಲಿವೆ. ಆದರೆ, ಇದನ್ನು ಈಗ ಗಟ್ಟಿಯಾಗಿ ಕೇಳುತ್ತಿರುವುದು ಸಂಸದ ರಾಘವ್ ಚಡ್ಡಾ. ಆಪ್ ತೆಕ್ಕೆಯಿಂದ ಬಿಜೆಪಿಯ ಮನೆಗೆ ಚಡ್ಡಾ ಕಾಲಿಟ್ಟಿದ್ದಾರೆ. ಬರೀ 37ರ ವಯಸ್ಸಿನಲ್ಲಿಯೇ ಜನನಾಯಕರಾದ ಪ್ರತಿಭೆ. ಹೀಗೆ ಇವರು ಜನಸಾಮಾನ್ಯನ ಮನಸ್ಸು ಗೆಲ್ಲಲು, ಇಂಥ ಖ್ಯಾತಿಗೆ ಕಾರಣ ಯಾವುದೋ ರಿಯಾಲಿಟಿ ಶೋ ಅಲ್ಲ, ಬದಲಿಗೆ ಇವರು ಸಂಸತ್ತಿನಲ್ಲಿ ಪ್ರಸ್ತಾಪಿಸಿದ ವಿಷಯಗಳು!

ಪಂಜಾಬ್ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾದವರು ಚಡ್ಡಾ. ಜನನ ದಿಲ್ಲಿ. ಅಲ್ಲಿನ ಮಾಡರ್ನ್ ಸ್ಕೂಲ್‌ನಲ್ಲಿ ಶಾಲಾ ಶಿಕ್ಷಣ, ದಿಲ್ಲಿ ವಿಶ್ವವಿದ್ಯಾಲಯದಿಂದ ಪದವಿ, ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್‌ನಿಂದ ಸಿ.ಎ., ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್‌ನಲ್ಲಿ ಅಧ್ಯಯನ. 2023ರಲ್ಲಿ ಬಾಲಿವುಡ್ ನಟಿ ಪರಿಣಿತಿ ಚೋಪ್ರಾ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಅವರು 2025ರಲ್ಲಿ 'ಜಲಸ್ಯ ರೂಪಂ, ಪ್ರೇಮಸ್ಯ ಸ್ವರೂಪಂ ತತ್ರ ಏವ 'ನೀರ್'- ಎನ್ನುವ ಸಂಸ್ಕೃತ ಶ್ಲೋಕದ ಮೂಲಕ ತಮ್ಮ ಪುತ್ರನ ಹೆಸರನ್ನು ಬಹಿರಂಗ ಪಡಿಸಿದ್ದರು.

ಚಳವಳಿಯಿಂದ ರಾಜಕೀಯಕ್ಕೆ: 2011ರ ಭ್ರಷ್ಟಾಚಾರ ವಿರೋಧಿ ಚಳವಳಿಯ ಮೂಲಕ ಹೋರಾಟಕ್ಕೆ ಧುಮುಕಿದ ರಾಘವ್ ಚಡ್ಡಾ ಅವರು ಚಳವಳಿಯಿಂದ ಪ್ರೇರಿತರಾಗಿ ರಾಜಕೀಯಕ್ಕೂ ಕಾಲಿಟ್ಟರು. ಆಮ್ ಆದ್ಮಿ ಪಾರ್ಟಿ (ಆಪ್) ಸೇರಿ ದಿಲ್ಲಿ ಶಾಸಕರಾದ ಅಲ್ಪಾವಧಿಯಲ್ಲೇ 2022ರ ಲೋಕಸಭೆ ಚುನಾವಣೆಯಲ್ಲಿ ಗೆದ್ದು ಪಂಜಾಬ್‌ನಿಂದ ಸಂಸದರಾದರು. ಇವರ ಮನೆಯ ಗ್ರಂಥಾಲಯ ನೋಡುವುದೇ ಒಂದು ಸೊಬಗು. ಸುತ್ತಲೂ ಹೊತ್ತಗೆ, ಮಧ್ಯದಲ್ಲಿ ಅಧ್ಯಯನಶೀಲರಾಗಿರುವ ರಾಘವ್ ಚಡ್ಡಾ. ತಮ್ಮ ಅಧ್ಯಯನ ಮತ್ತು ವಿಷಯಗಳ ಆಳದಿಂದಲೇ ಭಾರತೀಯರ ಮನಸ್ಸು ಗೆದ್ದಿದ್ದಾರೆ. ಸಂಸತ್‌ನಲ್ಲಿ ಇವರು ವಿಷಯಗಳನ್ನು ಪ್ರಸ್ತಾಪಿಸುವಾಗ ಯಾರೂ ವಿರೋಧಿಸದೇ ತದೇಕ ಚಿತ್ತರಾಗಿ ಇವರ ವಾದಗಳನ್ನು ಆಲಿಸುತ್ತಾರೆ. ಈ ಮೂಲಕ ಕಡಿಮೆ ವಯಸ್ಸಿನಲ್ಲೇ 'ಉತ್ತಮ ಸಂಸದೀಯ ಪಟು' ಎಂಬ ಹೆಗ್ಗಳಿಕೆಗೆ ಪಾತ್ರರಾದವರು ಚಡ್ಡಾ.

ತೀಕ್ಷ್ಣ ವಿಶ್ಲೇಷಣೆ, ಪ್ರಖರ ಮಾತು, ಮಿಂಚಿನ ವೇಗದ ಕಾರ್ಯವೈಖರಿಯಿಂದಲೇ ಗುರುತಿಸಿಕೊಂಡಿರುವ ಚಡ್ಡಾ ಪ್ರಬಲವಾಗಿ ನಂಬಿರುವುದು, 'ರಾಜಕೀಯವನ್ನು ನಾನು ಆವರಿಸಿಕೊಂಡಿಲ್ಲ, ರಾಜಕೀಯವೇ ನನ್ನನ್ನು ಆವರಿಸಿಕೊಂಡಿದೆ' ಎಂಬ ಮಾತನ್ನು. ಜನಸಾಮಾನ್ಯರ ದೃಷ್ಟಿಯಲ್ಲಿ ರಾಜಕೀಯ, ಸಂಸತ್ ಅಧಿವೇಶನಗಳೆಂದರೆ, 'ಪಕ್ಷಗಳ ನಡುವೆ ಪರಸ್ಪರ ಕೆಸರೆರಚಾಟ, ಭ್ರಷ್ಟಾಚಾರ ಆರೋಪ, ವೈಯಕ್ತಿಕ ಟೀಕೆ, ಇಲ್ಲವೇ ಧರ್ಮ, ಜಾತಿಯ ಹೆಸರಿನಲ್ಲಿ ಕಲಾಪದ ಸಮಯ ಹಾಳು ಮಾಡುವುದು' ಎಂಬ ಕಲ್ಪನೆ ಇದೆ. ಆದರೆ, ಚಡ್ಡಾ ಅವರು ಕಲಾಪದಲ್ಲಿ ವಿಶಿಷ್ಟ ಮತ್ತು ಜನಪರ ವಿಷಯಗಳನ್ನು ಪ್ರಸ್ತಾಪಿಸುವ ಮೂಲಕ ಜನರಿಗೆ ಹತ್ತಿರವಾಗಿದ್ದಾರೆ. ಹಾಗೆ ನೋಡಿದರೆ, ಸದನದ ಕಲಾಪಗಳಿಗೆ ಅಂಥ ವೀಕ್ಷಣೆಗಳೇನೂ ಇಲ್ಲ. ಆದರೆ, ಚಡ್ಡಾ ಅವರ ಭಾಷಣ ತುಣುಕುಗಳು ಈಗೀಗ ಸೋಷಿಯಲ್ ಮೀಡಿಯಾಗಳಲ್ಲಿ ಸಾಕಷ್ಟು ಸದ್ದು ಮಾಡುತ್ತಲೇ ಇವೆ. 'ನಮ್ಮ ಬದುಕಿಗೆ ಸಂಬಂಧಿಸಿದ ಟಾಪಿಕನ್ನೇ ಎತ್ತುತ್ತಾನಲ್ಲ ಈ ವಯ್ಯಾ' ಎನ್ನುವ ಅಭಿಪ್ರಾಯಗಳೇ ಜನರಲ್ಲಿ ಹೆಚ್ಚು.

ಚಡ್ಡಾ ಚರ್ಚಿಸಿದ ವಿಷಯಗಳು: ಪ್ರೀಪೇಯ್ಡ್ ಮೊಬೈಲ್ ಬಳಕೆದಾರ ರೀಚಾರ್ಜ್ ಮಾಡಿಕೊಳ್ಳದಿದ್ದರೆ ಹೊರಹೋಗುವ ಕರೆಗಳ ಸೇವೆ ಕಡಿತವಾಗ ಬೇಕೇ ವಿನಾ ಒಳಬರುವ ಸೇವೆ ನಿರಂತರವಾಗಿರಬೇಕು. ನಿತ್ಯ ಬಳಕೆಯಾಗುವ ಮೊಬೈಲ್ ಡೇಟಾ ಬಾಕಿ ಉಳಿದರೆ ಅದು ಮುಂದಿನ ದಿನಕ್ಕೆ ಕ್ಯಾರಿ ಫಾರ್ವರ್ಡ್ ಆಗಬೇಕು. ಬ್ಯಾಂಕ್ ಖಾತೆಗಳಲ್ಲಿ ಕನಿಷ್ಠ ಬ್ಯಾಲೆನ್ಸ್ ಇಲ್ಲವೆಂಬ ಕಾರಣಕ್ಕೆ ದಂಡ ಹಾಕುವುದು ನಿಲ್ಲಬೇಕು. ಪಿತೃತ್ವ ರಜೆ ಕಾನೂನಾತ್ಮಕ ಹಕ್ಕಾಗಬೇಕು. ಟೋಲ್ ನೀತಿಗಳಲ್ಲಿ ಸುಧಾರಣೆ, ಕಲಬೆರಕೆ ಆಹಾರಕ್ಕೆ ತಡೆ, ಗಿಗ್ ಕಾರ್ಮಿಕರ ಹಕ್ಕುಗಳ ರಕ್ಷಣೆ, ಮಾಸಿಕ ರಿಚಾರ್ಜ್ ಯೋಜನೆಯಲ್ಲಿ 24, 28 ದಿನಗಳೇಕೆ ಇರುತ್ತವೆ? ಪೂರ್ಣ 30 ದಿನಗಳಿರಬೇಕು. ಅವಧಿ ಮುಗಿಯುವ ಮೊದಲು ಮತದಾರರು ಕಾರ್ಯನಿರ್ವಹಿಸದ ಸಂಸದ, ಶಾಸಕರನ್ನು ಹಿಂತೆಗೆದುಕೊಳ್ಳುವ ಅವಕಾಶ ಮತದಾರರಿಗೆ ಇರಬೇಕು. ಆರ್ಥಿಕ ಸುಧಾರಣೆ ಮತ್ತು ಹೂಡಿಕೆ ಸುಧಾರಣೆ, ಮುಟ್ಟಿನ ಬಗ್ಗೆ ಜಾಗೃತಿ, ಗ್ರಾಹಕರ ಹಕ್ಕುಗಳ ರಕ್ಷಣೆ... ಹೀಗೆ ಸಾಲು ಸಾಲು ಶ್ರೀಸಾಮಾನ್ಯನ ಸಮಸ್ಯೆಗಳನ್ನು ಸಂಸತ್ತಿನಲ್ಲಿ ಚರ್ಚಿಸಿದ್ದಾರೆ.

'ನಮ್ಮ ಪರ ಯಾರೂ ದನಿ ಎತ್ತುವವರೇ ಇಲ್ಲವೇ?' ಎಂಬ ಕಾಲಘಟ್ಟದಲ್ಲಿ ಸಣ್ಣಪುಟ್ಟದ್ದೆನಿಸಿದರೂ ನೇರವಾಗಿ ಜನರ ನಿತ್ಯ ಬದುಕಿನೊಂದಿಗೆ ಸಂಬಂಧ ಹೊಂದಿರುವ ಅಂಶಗಳೆಡೆಗೆ ಸಂಸತ್ತಿನಲ್ಲಿ ವಿಶ್ಲೇಷಿಸಿದ್ದಕ್ಕೆ ನಿರ್ಲಕ್ಷಿತ ವಿಷಯಗಳು ಚರ್ಚೆಯ ವಿಷಯವಸ್ತುಗಳಾಗಿ ಸಮಾಜದ ಮುಖ್ಯವಾಹಿನಿಗೆ ಬಂದಿವೆ. 'ಯಾವ ಹಮ್ಮು ಬಿಮ್ಮಿಲ್ಲದೇ ಬ್ಲಿಂಕ್ ಇಟ್ ಬಾಯ್ ಜತೆಗೆ ಹೆಗಲಿಗೆ ಬ್ಯಾಗ್ ಹಾಕಿಕೊಂಡು ಬೈಕ್ ಹತ್ತಿ ಹೊರಟು ಅವರ ಸಮಸ್ಯೆಗಳ ಬಗ್ಗೆ ಸಂಸತ್ ಅಧಿವೇಶನದಲ್ಲಿ ಚರ್ಚಿಸಿ ಕೇಂದ್ರ ಸರಕಾರದ ಗಮನಕ್ಕೆ ತಂದರು. ಈ ಮೂಲಕ ರಾಘವ್ ಚಡ್ಡಾ ಶ್ರೀಸಾಮಾನ್ಯರ ಹೀರೊ ಆಗಿ ಮಾರ್ಪಟ್ಟಿದ್ದಾರೆ. ಇವರ ಮಾತುಗಳೀಗ ಸಾಮಾಜಿಕ ಜಾಲತಾಣಗಳಲ್ಲಿ ಪರಿಣಿತಿ ಚೋಪ್ರಾ, ರಾಘವ್‌ಗೆ 'ನೀರ್' ಜನಿಸಿದ್ದಾನೆಂಬ ವಿಷಯಕ್ಕಿಂತ ವೈರಲ್ ಆಗಿವೆ!. ■

ವಿಕ ಮನಿ From The House of THE ECONOMIC TIMES — ಕನ್ನಡದ ಏಕೈಕ ಹಣಕಾಸು ವಾರಪತ್ರಿಕೆ

ಚಿಪ್ ಪವರ್: ದೇಶದಲ್ಲಿ ಹೊಸ ಕ್ರಾಂತಿ ಶುರು

ದೇಶದ ಆರ್ಥಿಕತೆ, ಉದ್ಯೋಗ ಕ್ಷೇತ್ರಕ್ಕೆ ಸೆಮಿಕಂಡಕ್ಟರ್ ಕೊಡುಗೆ ದೊಡ್ಡದು. ಉದ್ಯಮದ ಏಳಿಗೆ, ಭವಿಷ್ಯದಲ್ಲಿನ ಉಪಯೋಗಗಳ ಕುರಿತು **ಡಾ.ಡಿ.ಸಿ. ನಂಜುಂಡ** ಕವರ್ ಸ್ಟೋರಿ.

ಗೊಂದಲದ ಚಕ್ರವ್ಯೂಹದಲ್ಲಿ ಪೆನ್ಶನ್ ಸ್ಕೀಮ್: ಅನ್ಯಾಯಕ್ಕೆ ಕೊನೆ ಎಲ್ಲಿ? **ರಮಾನಂದ ಶರ್ಮಾ** ಸ್ಪೆಷಲ್ ಸ್ಟೋರಿ

ಕಂಪನಿಗೂ, ನಿಮಗೂ ನಿಯಮಗಳು ಅನ್ವಯ! **ರಂಗಸ್ವಾಮಿ ಮೂಕನಹಳ್ಳಿ ಕಾಲಂ**

ಈ 5 ಕಡೆ ಹೂಡಿಕೆಗೆ ಮೊದಲು 10 ಸಲ ಯೋಚಿಸಿ: **ಶರತ್ ಎಂ.ಎಸ್.** ಗೈಡೆನ್ಸ್

ಸಮುದ್ರದಲೆಗಳ ಮೇಲೆ ಭಾರತ-ದಕ್ಷಿಣ ಕೊರಿಯಾ ಸಹಕಾರದ ಅಧ್ಯಾಯ: **ಚೈತನ್ಯ ಹೆಗಡೆ** ಒಳನೋಟ

ಮಾರ್ಕೆಟ್ ರಿಸರ್ಚ್: ಇದು ಯಶಸ್ವಿ ಉದ್ಯಮದ ಕೀಲಿಕೈ ಎನ್ನುತ್ತಾರೆ **ಜಿ.ಕೆ. ಪ್ರಮೋದ್**

ಅಮೆರಿಕದ ವಾರ್ ಮಷಿನ್: ವಿನಾಶದ ಹಾದಿಯಲ್ಲಿ ಲಾಭದ ಹುಡುಕಾಟ! ಡಾ.ವಿನೋದ್ ಕೃಷ್ಣ ವಿಶ್ಲೇಷಣೆ

ಸಂಚಿಕೆಯ ಹೈಲೈಟ್ಸ್

- **ಕಾಸ್‌ಬಾತ್:** ಹಣ ಗಳಿಕೆಯಲ್ಲೂ ನಟ ರಣವೀರ್ ಸಿಂಗ್ ದುರಂಧರ್; 400 ಕೋಟಿ ರೂ. ಆಸ್ತಿಗೆ ಅಧಿಪತಿ
- **ಕಾರ್ಪೊರೇಟ್ ಜಗತ್ತು:** ಸ್ಟೀವ್ ಜಾಬ್ಸ್ ನೆಟ್ಟ ಗಿಡವನ್ನು ಹೆಮ್ಮರ ಮಾಡಿದ ಟಿಮ್ ಕುಕ್
- **ಮಾರ್ಕೆಟ್ ಸ್ಕ್ಯಾನ್:** ಮಾರುಕಟ್ಟೆ ಅನ್ನುವುದು ಒಂದು ದಿನದಲ್ಲಿ ಗೆಲ್ಲುವ ಆಟವಲ್ಲ
- **ಬಿಗ್ ನ್ಯೂಸ್:** ದೇಶದ ಜನರಿಗೆ ಪೆಟ್ರೋಲ್, ಡೀಸೆಲ್ ಬೆಲೆಯೇರಿಕೆಯ ಭೀತಿ

ಪತ್ರಿಕೆಗಾಗಿ ಸಂಪರ್ಕಿಸಿ 72594 58080 ಪ್ರತಿ ಭಾನುವಾರ ನಿಮ್ಮ ಕೈ ಸೇರಲಿದೆ | ಬೆಲೆ ₹5 | ಪ್ರತಿ ಭಾನುವಾರ ಮಾರುಕಟ್ಟೆಯಲ್ಲಿ ವಿಕ ಮನಿ ಬಿಡುಗಡೆ | ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

5 ಕಾರ್ಖಾನೆಗಳ ಬಂದ್‌ಗೆ ನೋಟಿಸ್

ಮಾಲಿನ್ಯ ನಿಯಂತ್ರಣ ಮಂಡಳಿ ಸಮಿತಿ ನಿರ್ಣಯ | ಕೊಪ್ಪಳದಲ್ಲಿ ಹೋರಾಟಕ್ಕೆ ಆಶಾಕಿರಣ

■ **ವಿಕ ಸುದ್ದಿಲೋಕ** ಕೊಪ್ಪಳ

ಜಿಲ್ಲೆಯ ಜನಜೀವನಕ್ಕೆ ಮಾರಕವಾಗಿರುವ ಮಾಲಿನ್ಯಕಾರಕ ಐದು ಕಾರ್ಖಾನೆಗಳಿಗೆ ಮುಚ್ಚುವ ನೋಟಿಸ್ ನೀಡಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಜಾರಿ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಂಡಿದ್ದು, ಕಾರ್ಖಾನೆಗಳ ವಿರುದ್ಧ ನಡೆಯುತ್ತಿರುವ ಅನಿರ್ದಿಷ್ಟಾವಧಿ ಹೋರಾಟಕ್ಕೆ ಮೊದಲ ಜಯ ಸಿಕ್ಕಂತಾಗಿದೆ.

ಕೊಪ್ಪಳ ತಾಲೂಕು ವ್ಯಾಪ್ತಿಯಲ್ಲಿ 17 ಬೃಹತ್ ಕಾರ್ಖಾನೆಗಳು ನೆಲೆಪಡೆದಿವೆ. ಒಂದು ಕೈಗಾರಿಕಾ ಘಟಕದಿಂದ ಇನ್ನೊಂದಕ್ಕೆ ಇರಬೇಕಾದ ಅಂತರ, ಕಾರ್ಖಾನೆಗಳ ಬಫರ್ ವಲಯ, ವಾಯು ಮಾಲಿನ್ಯ ನಿಯಂತ್ರಣ ಮಾರ್ಗಸೂಚಿ ಸಂಪೂರ್ಣ ಉಲ್ಲಂಘನೆಯಾಗಿರುವುದು ಬೆಳಕಿಗೆ ಬಂದಿದೆ. ಈ ಕೈಗಾರಿಕೆಗಳಿಂದ ಹಿರೇಬಗನಾಳ, ಅಲ್ಲಾನಗರ, ಕಾಸನಕಂಡಿ, ಹಾಲವರ್ತಿ, ಕುಣಿಕೇರಿ ಸೇರಿ ಸುತ್ತಲಿನ 20 ಗ್ರಾಮಗಳು ಮಾಲಿನ್ಯ ಪೀಡಿತವಾಗಿದ್ದು, ಜೀವಸಂಕುಲ ತೀವ್ರ ಸಂಕಷ್ಟಕ್ಕೆ ಸಿಲುಕಿದೆ.

ವರದಿ ಸಲ್ಲಿಕೆ: ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಇಲಾಖೆ ಎರಡು ವರ್ಷಗಳ ಹಿಂದೆ ಕಾರ್ಖಾನೆಗಳ ಸ್ಥಳ ಪರಿಶೀಲನೆ ನಡೆಸಿತ್ತು. ಕೊಪ್ಪಳ ಭಾಗದ ಕಾರ್ಖಾನೆಗಳು ಪರಿಸರ ನಿಯಮ ಉಲ್ಲಂಘಿಸಿರುವ ಬಗ್ಗೆ ಪೂರಕ ದಾಖಲೆಗಳೊಂದಿಗೆ ಇಲಾಖೆ ವರದಿ ಸಲ್ಲಿಸಿತ್ತು. ಭವಿಷ್ಯದಲ್ಲಿ ಕೈಗೊಳ್ಳಬೇಕಾದ ತುರ್ತು ಸುಧಾರಣಾ ಕ್ರಮಗಳ ಕುರಿತೂ ಶಿಫಾರಸು ಮಾಡಲಾಗಿತ್ತು. ಆದರೆ, ಕೈಗಾರಿಕೆಗಳ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಕ್ರಮಕೈಗೊಳ್ಳದಿರುವುದು ಪರಿಸರಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿತ್ತು.



ಪ್ರತಿಭಟನೆ ನಂತರ ಎಚ್ಚೆತ್ತ ಇಲಾಖೆ: ಜೀವಕಂಟಕ ಕಾರ್ಖಾನೆಗಳ ವಿರುದ್ಧ ಜಿಲ್ಲೆಯ ಜನ ಸಿಡಿದೆದ್ದರು. 175 ದಿನಗಳಿಂದ ನಿರಂತರ ಹೋರಾಟ, ಪ್ರತಿಭಟನೆ, ಜನಪ್ರತಿನಿಧಿಗಳಿಗೆ ಮುತ್ತಿಗೆ ಹಾಕಲಾಯಿತು. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ಅವರು ಕಳೆದ ಮಾರ್ಚ್ 13ರಂದು ಹಿರೇಬಗನಾಳ ಸೇರಿ ಇತರ ಗ್ರಾಮ ಹಾಗೂ ಕೆಲವು ಕಾರ್ಖಾನೆಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿದ್ದರು. ಏ.9ರಂದು ಮಂಡಳಿ ನೇತೃತ್ವದಲ್ಲಿ ರಾಜ್ಯ ಮಟ್ಟದ ಜಾರಿ ಸಮಿತಿ ಸಭೆ ನಡೆದಿದ್ದು, ಅಲ್ಲಿ ಪರಿಸರ ಇಲಾಖೆ ಐದು ಕಂಪನಿಗಳಿಂದ ನಿಯಮ ಉಲ್ಲಂಘನೆಯಾಗಿದ್ದನ್ನು ಉಲ್ಲೇಖಿಸಿ ಸಲ್ಲಿಸಿದ ವರದಿಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಈ ಐದು ಕಾರ್ಖಾನೆಗಳನ್ನು ಮುಚ್ಚುವಂತೆ ನಿರ್ದೇಶನ ನೀಡಲು ಸಭೆ ಶಿಫಾರಸು ಮಾಡಿದೆ.

> ಏ.9ರಂದು ಬೆಂಗಳೂರಿನಲ್ಲಿ ಮಂಡಳಿಯ ಜಾರಿ ಸಮಿತಿ ಸಭೆ ನಡೆಸಲಾಗಿದೆ. ಕೊಪ್ಪಳ ತಾಲೂಕಿನ ಐದು ಕಾರ್ಖಾನೆಗಳಿಗೆ ಕ್ಲೋಸರ್ ನೋಟಿಸ್ ನೀಡಲು ನಿರ್ಣಯ ಕೈಗೊಳ್ಳಲಾಗಿದೆ. ಮುಂದಿನ ಕ್ರಮ ಶೀಘ್ರವೇ ಜಾರಿಯಾಗಲಿದೆ.
>
> **-ವೈ.ಎಸ್.ಹರಿಶಂಕರ** ಪರಿಸರ ಅಧಿಕಾರಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೊಪ್ಪಳ

ಯಾವ ಕಾರ್ಖಾನೆಗಳು?

ಮೈನ್ಸ್ ಅಂಡ್ ಮೆಟಾಲರ್ಜಿ ವಿಭಾಗದಲ್ಲಿ ರಾಜ್ಯದ 17 ಕಾರ್ಖಾನೆಗಳನ್ನು ಮುಚ್ಚಲೆಂದು ನಿರ್ದೇಶನ ನೀಡಲು ನಿರ್ಣಯ ಕೈಗೊಳ್ಳಲಾಗಿದೆ. ಇವುಗಳಲ್ಲಿ ಕೊಪ್ಪಳ ತಾಲೂಕಿನ ಅಲ್ಲಾನಗರದ ಹೊಸಪೇಟೆ ಇಸ್ಪಾತ್ ಪ್ರೈ.ಲಿ., ಹಿರೇಕಾಸನಕಂಡಿಯ ಎಚ್‌ಆರ್‌ಜಿ ಅಲಯ್ಸ್ ಆ್ಯಂಡ್ ಸ್ಟೀಲ್ಸ್ ಪ್ರೈ.ಲಿ., ಹಿರೇಬಗನಾಳದ ವಸ್ಯ ಸ್ಟೀಲ್ಸ್ ಪ್ರೈ.ಲಿ. ಯೂನಿಟ್-1 ಮತ್ತು ಯೂನಿಟ್ 2 ಹಾಗೂ ಹಾಲವರ್ತಿಯ ಪಿ.ಬಾಲಸುಬ್ಬಶೆಟ್ಟಿ ಪವರ್ ಆ್ಯಂಡ್ ಸ್ಟೀಲ್ಸ್ ಸೇರಿವೆ.

ತುಂಗಭದ್ರಾ ಜಲಾಶಯದ ಎಲ್ಲ ಕ್ರಸ್ಟ್‌ಗೇಟ್ ಅಳವಡಿಕೆ ಪೂರ್ಣ

ತುಂಗಭದ್ರಾ ಡ್ಯಾಂನ ಕ್ರಸ್ಟ್‌ಗೇಟ್ ಅಳವಡಿಕೆಯನ್ನು ಅಧಿಕಾರಿಗಳು ಪರಿಶೀಲಿಸಿದರು.

■ **ಹೊಸಪೇಟೆ** (ವಿಜಯನಗರ)

ತುಂಗಭದ್ರಾ ಜಲಾಶಯದಲ್ಲಿ ಹೊಸದಾಗಿ ಎಲ್ಲ 33 ಕ್ರಸ್ಟ್‌ಗೇಟ್‌ಗಳ ಅಳವಡಿಕೆ ಶನಿವಾರ ಪೂರ್ಣಗೊಂಡಿದೆ. 2024 ಆ.10ರಂದು ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್‌ಗೇಟ್ ಕೊಂಡಿ ಕಳಚಿ ಅಪಾರ ಪ್ರಮಾಣದ ನೀರು ನದಿ ಪಾಲಾಗಿತ್ತು. 19ನೇ ಕ್ರಸ್ಟ್‌ಗೇಟ್ ಸೇರಿ ಎಲ್ಲ 33 ಕ್ರಸ್ಟ್ ಗೇಟ್‌ಗಳನ್ನು ಹೊಸದಾಗಿ ಅಳವಡಿಸುವ ಕಾರ್ಯ 2025ರ ಡಿಸೆಂಬರ್ 24ರಿಂದ ಆರಂಭಿಸಲಾಗಿತ್ತು. ಹಲವು ಸವಾಲುಗಳ ಮಧ್ಯೆಯೂ 121 ದಿನ ನಿರಂತರ ಕೆಲಸ ನಿರ್ವಹಿಸುವ ಮೂಲಕ 33 ಕ್ರಸ್ಟ್‌ಗೇಟ್‌ಗಳ ಅಳವಡಿಕೆಗೆ ತಜ್ಞರು, ಅಧಿಕಾರಿಗಳು, ಕಾರ್ಮಿಕರು ಶ್ರಮಿಸಿದ್ದರು. ವೆಲ್ಡಿಂಗ್ ಮತ್ತು ಪೇಂಟಿಂಗ್ ಸೇರಿ ಸಣ್ಣಪುಟ್ಟ ಕೆಲಸಗಳನ್ನು ಮೇ 15ರೊಳಗೆ ಮುಗಿಸುವ ವಿಶ್ವಾಸವನ್ನು ಅಧಿಕಾರಿಗಳು ಹೊಂದಿದ್ದಾರೆ.

ಅಣು ವಿದ್ಯುತ್ ಸ್ಥಾವರ ಪ್ರಸ್ತಾವನೆ ಕೈಬಿಡಲು ಶಿವಮೊಗ್ಗ ಜಿಲ್ಲಾಡಳಿತ ಪತ್ರ

ಶಿವಮೊಗ್ಗ: ಸಾಗರ ತಾಲೂಕು ಶರಾವತಿ ಹಿನ್ನೀರು ಪ್ರದೇಶದ ವ್ಯಾಪ್ತಿಯಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಚಿಂತನೆ ನಡೆಸಿದ್ದ ಕೇಂದ್ರ ಸರಕಾರದ ಪರಮಾಣು ಶಕ್ತಿ ಇಲಾಖೆಯ ಪ್ರಸ್ತಾವನೆಗೆ ಜಿಲ್ಲಾಡಳಿತ ನಕಾರ ಸೂಚಿಸಿದೆ. ಸಾಗರ ತಾಲೂಕು ಆವಿನಹಳ್ಳಿ ಹೋಬಳಿಯ ಬೇಸೂರಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಜಾಗ ಗುರುತಿಸಲು ಸರ್ವೆ ನಡೆಸುವಂತೆ ಪರಮಾಣು ಶಕ್ತಿ ಇಲಾಖೆಯು ಜಿಲ್ಲಾಧಿಕಾರಿಗೆ ಸೂಚನೆ ನೀಡಿತ್ತು.

ಈ ಸಂಬಂಧವಾಗಿ ಜಿಲ್ಲಾಧಿಕಾರಿಗಳು ಸಾಗರ ತಾಲೂಕು ತಹಸೀಲ್ದಾರ್ ಅವರಿಗೆ ಫೆಬ್ರವರಿ 2ರಂದು ದೂರವಾಣಿ ಕರೆ ಮಾಡಿ ಸರ್ವೆ ನಡೆಸಿ ವರದಿ ನೀಡುವಂತೆ ಮೌಖಿಕ ಸೂಚನೆ ನೀಡಿದ್ದರು. ತಹಸೀಲ್ದಾರ್ ಅದೇ ದಿನವೇ ರಾಜಸ್ವ ನಿರೀಕ್ಷಕರ ಮೂಲಕ ಸರ್ವೆ ಮಾಡಿಸಿದ್ದರು. ''ಬೇಸೂರು ಗ್ರಾಮವು 3190.39 ಎಕರೆ ವಿಸ್ತೀರ್ಣ ಹೊಂದಿದ್ದು 68.12 ಎಕರೆ ಖುಷ್ಕಿ, 311.25 ಎಕರೆ ತರಿ, 16.10 ಎಕರೆ ಬಾಗಾಯ್ತು, 499.20 ಎಕರೆ ಅರಣ್ಯ ಭೂಮಿ, 238.31 ಎಕರೆ ಕೆಪಿಸಿ ಭೂ ಸ್ವಾಧೀನದ ಭೂಮಿ ಮತ್ತು 300 ಮೀಟರ್ ಹಿನ್ನೀರು ವಿಸ್ತೀರ್ಣ ಇದೆ. ಗ್ರಾಮದಲ್ಲಿ 173 ಮನೆಗಳು, 670 ಜನಸಂಖ್ಯೆ, 156 ಖಾತೆದಾರರು, 1,003 ಜಾನುವಾರು ಮತ್ತು 4 ಎಕರೆ ಸ್ಮಶಾನ ಭೂಮಿ ಇದೆ. ಈ ಗ್ರಾಮದ ಪಕ್ಕದಲ್ಲಿ ಲಿಂಗನಮಕ್ಕಿ ಜಲಾಶಯ ನಿರ್ಮಾಣಕ್ಕೂ ಪೂರ್ವದಲ್ಲಿ ಹಿರೇಭಾಸ್ಕರ ಜಲಾಶಯ ನಿರ್ಮಾಣವಾಗಿತ್ತು. ಇವರು ಹಿನ್ನೀರು ಸಂತ್ರಸ್ತರಾಗಿರುವುದರಿಂದ ಈ ಗ್ರಾಮದಲ್ಲಿ ಪರಮಾಣು ಸ್ಥಾವರ ಸ್ಥಾಪಿಸುವ ಪ್ರಸ್ತಾವನೆಯನ್ನು ಕೈಬಿಡುವಂತೆ ಕೋರುತ್ತೇನೆ,''ಎಂದು ತಹಸೀಲ್ದಾರ್ ಅವರು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದಾರೆ. ತಹಸೀಲ್ದಾರ್ ಅವರ ವರದಿ ಅನುಸಾರ ಜಿಲ್ಲಾಧಿಕಾರಿ ಅವರು ಪರಮಾಣು ಶಕ್ತಿ ಇಲಾಖೆಗೆ ಪ್ರಸ್ತಾವನೆಯನ್ನು ಕೈಬಿಡುವಂತೆ ಫೆಬ್ರವರಿ ಮೊದಲ ವಾರವೇ ಪತ್ರ ಬರೆದಿದ್ದಾರೆ ಎನ್ನಲಾಗಿದೆ. ಇದೇ ವಿಷಯವಾಗಿ ಸಾಗರದಲ್ಲಿ ಶಾಸಕ ಗೋಪಾಲಕೃಷ್ಣ ಬೇಳೂರು ಪ್ರತಿಕ್ರಿಯಿಸಿ, ಬೇಸೂರು ಗ್ರಾಮದಲ್ಲಿ ಅಣು ವಿದ್ಯುತ್ ಸ್ಥಾವರ ನಿರ್ಮಾಣಕ್ಕೆ ಜಾಗ ಕೊಡುವುದಿಲ್ಲ, ಇದರ ಬಗ್ಗೆ ಜನರಲ್ಲಿ ಗೊಂದಲ ಬೇಡ ಎಂದು ಹೇಳಿದ್ದಾರೆ.



ಸಾಗರ ತಾಲೂಕು ತಹಸೀಲ್ದಾರ್ ಜಿಲ್ಲಾಧಿಕಾರಿಗೆ ಬರೆದ ಪತ್ರ.

ಸ್ಟೇಟ್ ನ್ಯೂಸ್

ಸ್ವರ್ಣವಲ್ಲೀ ಮಠದಲ್ಲಿ 29ರಿಂದ ಎರಡು ದಿನ ಕೃಷಿ ಜಯಂತಿ

ಶಿರಸಿ (ಉ.ಕ.): ಸೋಂದಾ ಸ್ವರ್ಣವಲ್ಲೀ ಮಠದಲ್ಲಿ ನೃಸಿಂಹ ದೇವರ ಜಯಂತಿ ದಿನದ ಹಿನ್ನೆಲೆಯಲ್ಲಿ ಏ.29 ಹಾಗೂ 30ರಂದು ಕೃಷಿ ಜಯಂತಿ ಹಮ್ಮಿಕೊಳ್ಳಲಾಗಿದೆ.

29ರಂದು ಕಾಫಿ-ಏಲಕ್ಕಿ-ಕಾಳುಮೆಣಸು ಅಡಕೆ ತೋಟದಲ್ಲಿದ್ದರೆ ಸೊಗಸು ಎಂಬ ವಿಷಯದ ಕುರಿತು ವಿಚಾರ ಸಂಕಿರಣ ಜರುಗಲಿದ್ದು,ಏ.30ರ ರೈತರು, ಮಾತೆಯರಿಗೆ ವಿವಿಧ ಸ್ಪರ್ಧೆಗಳು ನಡೆಯಲಿವೆ. ಏಲಕ್ಕಿ ಹಾಗೂ ಬಿದಿರು ಬೇಸಾಯ ಕುರಿತು ಚರ್ಚೆ ನಡೆಯಲಿದೆ,'' ಎಂದು ಸ್ವರ್ಣವಲ್ಲೀ ಮಠಾಧೀಶ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ಹೇಳಿದರು. ''ಸಂಜೆ ಸಮಾರೋಪ ಸಮಾರಂಭ ನಡೆಯಲಿದ್ದು, ಉತ್ತಮ ಕೃಷಿಕ, ಸಾಧಕ ಕೃಷಿ ಮಹಿಳೆ ಹಾಗೂ ಉತ್ತಮ ಅವಿಭಕ್ತ ಕೃಷಿ ಕುಟುಂಬಕ್ಕೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ರಾತ್ರಿ ಲಕ್ಷ್ಮೀನೃಸಿಂಹ ಮಹಾರಥೋತ್ಸವ ನಡೆಯಲಿದೆ,'' ಎಂದರು.

ತಲಕಾಡಲ್ಲಿ ಪ್ರವಾಸಿಗರಿಗೆ ನಿರ್ಬಂಧ

ತಲಕಾಡು (ಮೈಸೂರು): ಇಲ್ಲಿನ ಅರಣ್ಯ ನಿಸರ್ಗಧಾಮದ ಬಳಿಯ ನದಿಗೆ ಇಳಿಯದಂತೆ ಪ್ರವಾಸಿಗರನ್ನು ನಿರ್ಬಂಧಿಸಲಾಗಿದೆ.

ಏ.21ರಂದು ಬೆಂಗಳೂರು ಮೂಲದ ಅನಾಥಶ್ರಮದ ಇಬ್ಬರು ಬಾಲಕಿಯರು ಇಲ್ಲಿನ ನದಿಯಲ್ಲಿ ಮುಳುಗಿ ಮೃತಪಟ್ಟ ನಂತರ ನಿಸರ್ಗಧಾಮದ ನದಿ ಸೇರಿ ಹೆಮ್ಮಿಗೆ ಮುಖ್ಯಸೇತುವೆ, ಮಾಧವಮಂತ್ರಿ ಅಣೆಕಟ್ಟೆ ಬಳಿಯ ನದಿಯಲ್ಲಿ ಪ್ರವಾಸಿಗರು ಇಳಿಯದಂತೆ ನಿರ್ಬಂಧ ವಿಧಿಸಲಾಗಿದೆ. ''ಪ್ರವಾಸಿಗರ ಜೀವ ಸುರಕ್ಷತೆಗೆ ಸಂಬಂಧಪಟ್ಟವರು ಜವಾಬ್ದಾರಿ ತೆಗೆದುಕೊಳ್ಳುವ ತನಕ, ನಿರ್ಬಂಧ ಮುಂದುವರೆಯಲಿದೆ,'' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನದಿಯಲ್ಲಿ ಮುಳುಗಿ ಮರಣ

ಕಲಾದಗಿ (ಬಾಗಲಕೋಟೆ): ಓಕುಳಿ ಹೊಂಡಕ್ಕೆ ನೀರು ತರಲು ಶನಿವಾರ ಕೃಷ್ಣಾ ನದಿಗೆ ಹೋಗಿದ್ದ ತುಳಸಿಗೇರಿಯ ಯುವಕ ಮಹಾಂತೇಶ ಲೋಕೂರ (19) ಮುಳುಗಿ ಮೃತಪಟ್ಟಿದ್ದಾನೆ. ಏ.27ರಂದು ತುಳಸಿಗೇರಿಯ ಮಾರುತೇಶ್ವರ ದೇವರ ಓಕುಳಿ ನಡೆಯಲಿದೆ. ಇದಕ್ಕೂ ಮುನ್ನ ಸಂಪ್ರದಾಯದಂತೆ ಓಕುಳಿ ಹೊಂಡಕ್ಕೆ ನೀರು ತರಲು ವಿಜಯಪುರ ಜಿಲ್ಲೆಯ ಕೊಲ್ಹಾರ ಸಮೀಪದ ಕೃಷ್ಣಾ ನದಿಗೆ ಯುವಕ ತೆರಳಿದ್ದ. ನದಿಗೆ ಇಳಿದಾಗ ಆಕಸ್ಮಿಕವಾಗಿ ಮುಳುಗಿ ಮೃತಪಟ್ಟಿದ್ದಾನೆ. ಬೀಳಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

TRADE MARK / COPYRIGHT PUBLIC NOTICE

Our Client, **INNOVATIONS GARMENT PVT. LTD.,** a private limited company incorporated and existing under the Companies Act, 1956, having its corporate office at 85, Parel Post Office Lane, Dr. B. R. Ambedkar Road, Mumbai-400012, is the common law and statutory owner of the trade mark and copyright logo (Device);

which stands registered under Registration Nos. 3700255, 3700256, 3700257, 3700258 and 3700259 respectively dated 12/12/2017; in classes 18, 21, 25, 26 and 35 respectively, under the Trade Marks Act, 1999 and registration no. A-136633/2021 under the Copyright Act, 1957.

Our client alone is entitled to use the aforementioned trade mark or authorize others to use it pursuant to a licensing agreement to such effect. Notice is given to whomsoever it may concern that any use of the aforesaid trade mark or trade mark(s) deceptively similar thereto, by any person(s) that is not explicitly authorized by our client, will amount to violation of our client's statutory rights and result in our client initiating appropriate legal proceedings under civil/criminal laws including police raids without any further notice, solely at their costs and consequences. Therefore, the public is hereby cautioned against purchasing goods from any unauthorized individuals/entities.

R. K. Dewan & Co.,
Trade Marks and Patent Attorneys
Horniman Circle Building, Post Box No.: 711,
S.A. Brelvi Road, Fort,
Mumbai - 400001

26th April, 2026

ಪ್ರಶ್ನೆ: ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದೇನೆ. ಪರಿಹಾರ ತಿಳಿಸಿಕೊಡಿ ಗುರೂಜಿ.?

ಜನ್ಮ ದಿನಾಂಕ: 08.12.1969

ನಕ್ಷತ್ರ: ಪುಷ್ಯ

ಪರಿಹಾರ: ದೈವವನ್ನು ನಂಬಿರಿ. ಆರೋಗ್ಯದ ಕುರಿತು ಗಮನ ಹರಿಸಿ. ಸಣ್ಣಪುಟ್ಟ ಸಮಸ್ಯೆಗಳಿದ್ದರೂ ದೈವಬಲದಿಂದ ಪಾರಾಗುವಿರಿ. ವೈದ್ಯರೇ ನಾರಾಯಣ ಸ್ವರೂಪ ಎಂದು ಅರಿತು, ಅವರ ಸಹಾಯ ಪಡೆಯಿರಿ. ಖಂಡಿತವಾಗಿಯೂ ಉತ್ತಮ ಆರೋಗ್ಯ ಪಡೆಯುವಿರಿ.

ನೀವೂ ಪ್ರಶ್ನೆ ಕೇಳಬಹುದು...

ನೀವು ನಿಮ್ಮ ವೈಯಕ್ತಿಕ ಪ್ರಶ್ನೆಯನ್ನು ಇಲ್ಲಿ ಕೇಳಬಹುದು. **ರಾಜಗುರು ಬಿ.ಎಸ್. ದ್ವಾರಕನಾಥ್** ಅವರು ನಿಮ್ಮ ಒಂದು ಪ್ರಶ್ನೆಗೆ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಯನ್ನು ಜನ್ಮದಿನಾಂಕ, ಸಮಯ (ಬೆಳಗ್ಗೆ/ಮಧ್ಯಾಹ್ನ/ರಾತ್ರಿ), ಹುಟ್ಟಿದ ಸ್ಥಳ, ರಾಶಿ-ನಕ್ಷತ್ರದೊಂದಿಗೆ ಈ ಕೆಳಗಿನ ನಂಬರ್‌ಗೆ ವಾಟ್ಸ್ಆ್ಯಪ್ ಮಾಡಿ. ದಿನಕ್ಕೊಬ್ಬರ ಪ್ರಶ್ನೆಗೆ ಉತ್ತರ ಪ್ರಕಟಿಸಲಾಗುವುದು.

ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 26-04-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ವಸಂತ. **ಮಾಸ:** ವೈಶಾಖ.
ಪಕ್ಷ: ಶುಕ್ಲ. **ಮಳೆ ನಕ್ಷತ್ರ:** ಅಶ್ವಿನಿ.
ನಿತ್ಯನಕ್ಷತ್ರ: ಮಖಾ.
ತಿಥಿ: ದಶಮಿ. **ಯೋಗ:** ವೃದ್ಧಿ.
ಕರಣ: ತೈತಿಲ.
ವಾರ: ಭಾನುವಾರ.

ರಾಹು ಕಾಲ: ಸಂ. 4.30 - 6.00
ಗುಳಿಕ ಕಾಲ: ಮ. 3.00-4.30
ಯಮಗಂಡ ಕಾಲ: ಮ. 12.00-1.30
ಸೂರ್ಯ ಉದಯ: ಬೆ. 6.02
ಸೂರ್ಯ ಅಸ್ತ: ಸಂ. 6.32

ಲಾಜಿಸ್ಟಿಕ್ ವೆಚ್ಚ ಇಳಿಕೆಗೆ ಕೇಂದ್ರ ದಿಟ್ಟ ಕ್ರಮ: ಜೋಶಿ

ಹುಬ್ಬಳ್ಳಿಯಲ್ಲಿ 'ಇನ್ ಕಾಮೆಕ್ಸ್-2026' ಬೃಹತ್ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಕೆಸಿಸಿಐ ಸಂಸ್ಥೆ ಗೌರವ ಕಾರ್ಯಾಧ್ಯಕ್ಷ ಡಾ.ಪ್ರಭಾಕರ ಕೋರೆ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಸನ್ಮಾನಿಸಲಾಯಿತು.

■ **ವಿಕ ಸುದ್ದಿಲೋಕ** ಹುಬ್ಬಳ್ಳಿ

ಇನ್‌ಕಾಮೆಕ್ಸ್-2026ಕ್ಕೆ ಚಾಲನೆ

ಭಾರತದಲ್ಲಿ ಸೇವೆ ಮತ್ತು ಉತ್ಪಾದನೆ ದೊಡ್ಡ ಮಟ್ಟದಲ್ಲಿ ಹೆಚ್ಚಿದೆ. ಆದರೆ, ಶೇ.12ರಷ್ಟಿದ್ದ ಲಾಜಿಸ್ಟಿಕ್ ವೆಚ್ಚದ ಪರಿಣಾಮ ಕೈಗಾರಿಕೆಗಳಿಗೆ ಹೊರೆಯಾಗಿದೆ. ಈ ವೆಚ್ಚ ಇಳಿಸುವ ನಿಟ್ಟಿನಲ್ಲಿ ವಿಮಾನ ನಿಲ್ದಾಣ, ಬಂದರುಗಳನ್ನು ಅಭಿವೃದ್ಧಿಗೊಳಿಸಲು ಕೇಂದ್ರ ಸರಕಾರ ಮುಂದಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ನಗರದಲ್ಲಿ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹಮ್ಮಿಕೊಂಡಿರುವ 'ಇನ್‌ಕಾಮೆಕ್ಸ್-2026 ಬೃಹತ್ ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

''ಬೆಂಗಳೂರು-ಪುಣೆ ಹೈಸ್ಪೀಡ್ ರೈಲು ಕಾರಿಡಾರ್ ನಿರ್ಮಾಣಕ್ಕೆ ತಾಂತ್ರಿಕ ಒಪ್ಪಿಗೆ ನೀಡಲಾಗಿದೆ. ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗಕ್ಕೆ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದರಿಂದ 2 ಬಂದರು ನಿರ್ಮಾಣಕ್ಕೆ ಅವಕಾಶ ಸಿಗಲಿದೆ. ಉತ್ತರ ಕರ್ನಾಟಕ ಭಾಗದ ಉತ್ಪನ್ನಗಳನ್ನು ರಫ್ತು ಮಾಡಲು ಇದು ಅನುಕೂಲವಾಗಲಿದೆ,'' ಎಂದರು. ಸಂಸದ ಬಸವರಾಜ ಬೊಮ್ಮಾಯಿ, ಸಚಿವ ಸಂತೋಷ ಲಾಡ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ಕೆಎಲ್‌ಇ ಸಂಸ್ಥೆ ಗೌರವ ಕಾರ್ಯಾಧ್ಯಕ್ಷ ಡಾ.ಪ್ರಭಾಕರ ಕೋರೆ ಅವರನ್ನು ಸನ್ಮಾನಿಸಲಾಯಿತು. ಜೆಎಸ್‌ಡಬ್ಲ್ಯೂ ಗ್ರೂಪ್ ಚೇರಮನ್ ಸಜ್ಜನ ಜಿಂದಾಲ್ ಅವರ ಅನುಪಸ್ಥಿತಿಯಲ್ಲಿ ಮುರುಗನ್ ಅವರಿಗೆ ಕೆಸಿಸಿಐನಿಂದ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೇ 2ರಂದು ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆ

ಚಿಕ್ಕಮಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಎಣಿಕೆ ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನಲ್ಲಿ ಮೇ 2ರಂದು ನಡೆಯಲಿದೆ. 2023ರಲ್ಲಿ ನಡೆದ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಚಲಾವಣೆಯಾಗಿದ್ದ 1,811 ಅಂಚೆ ಮತಗಳ ಪೈಕಿ ತಿರಸ್ಕೃತಗೊಂಡ 279 ಅಂಚೆ ಮತಗಳನ್ನು ಮರು ಪರಿಶೀಲಿಸಿ ನಂತರ ಎಲ್ಲ ಅಂಚೆ ಮತಗಳನ್ನು ಎಣಿಕೆ ಮಾಡಿ ಹೊಸದಾಗಿ ಫಲಿತಾಂಶ ಪ್ರಕಟಿಸಬೇಕು ಎಂದು ಹೈಕೋರ್ಟ್ ಏ.6ರಂದು ಆದೇಶಿಸಿತ್ತು.

ಶಾಸಕ ಟಿ.ಡಿ.ರಾಜೇಗೌಡ ಅವರ ಮನವಿ ಮೇರೆಗೆ ಆಕ್ಷೇಪಣೆ ಸಲ್ಲಿಸುವುದಕ್ಕೆ ಕೋರ್ಟ್ ಎರಡು ವಾರಗಳ ಕಾಲಾವಕಾಶ ನೀಡಿತ್ತು. ಆಕ್ಷೇಪಣೆ ಸಲ್ಲಿಸುವ ಅವಧಿ ಏ.20ಕ್ಕೆ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ಮತ ಎಣಿಕೆ ಕಾರ್ಯಕ್ಕೆ ಕ್ರಮ ಕೈಗೊಂಡಿದ್ದಾರೆ. 201 ಮತದಿಂದ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಗೆಲುವು ಸಾಧಿಸಿದ್ದರು. ಪರಾಜಿತ ಬಿಜೆಪಿ ಅಭ್ಯರ್ಥಿ ಜೀವರಾಜ್ ಅಂಚೆ ಮತಗಳ ಎಣಿಕೆ ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದರು.

12 ಅಭ್ಯರ್ಥಿಗಳಿಗೆ ನೋಟಿಸ್: ಅಂಚೆ ಮತಗಳ ಎಣಿಕೆಯ ಹಿನ್ನೆಲೆಯಲ್ಲಿ 2023ರ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದ ಎಲ್ಲ 12 ಅಭ್ಯರ್ಥಿಗಳಿಗೆ ಚುನಾವಣೆ ವಿಭಾಗದಿಂದ ನೋಟಿಸ್ ಜಾರಿಗೊಳಿಸಲಾಗಿದೆ. ಚುನಾವಣಾಧಿಕಾರಿಯಾಗಿ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ (ಅಭಿವೃದ್ಧಿ) ಗೌರವ್‌ಕುಮಾರ್ ಶೆಟ್ಟಿ ಅವರನ್ನು ನೇಮಕ ಮಾಡಿ ಆದೇಶಿಸಲಾಗಿದೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, (ಈ ಕೆಳಕಂಡ 'ಷೆಡ್ಯೂಲ್' ನಲ್ಲಿ ವಿವರವಾಗಿ ವಿವರಿಸಿರುವ ಮತ್ತು ಇದನ್ನು ಇನ್ನು ಮುಂದೆ "ಷೆಡ್ಯೂಲ್ ಸ್ವತ್ತುಗಳು" ಎಂದು ಕರೆಯಲ್ಪಡುವ), ಈ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಜಂಟಿ ಅಭಿವೃದ್ಧಿ ವಹಿವಾಟನ್ನು ಮಾಡಿಕೊಳ್ಳಲು ಇಚ್ಛಿಸಿದ್ದು ಇವರ ಪರವಾಗಿ ಸದರಿ ಸ್ವತ್ತಿನ ಮಾಲೀಕತ್ವದ ಹಕ್ಕನ್ನು ಪರಿಶೀಲನೆ ನಡೆಸಲು ಇಚ್ಛಿಸಿರುತ್ತೇವೆ ಮತ್ತು ಸದರಿ ಷೆಡ್ಯೂಲ್‌ನಲ್ಲಿ ತಿಳಿಸಿರುವ ಮಾಲೀಕರು ('ಮಾಲೀಕರು') ನಮ್ಮ ಕಕ್ಷಿದಾರರಿಗೆ ತಾವುಗಳೇ ಷೆಡ್ಯೂಲ್ ಸ್ವತ್ತುಗಳ ತಮ್ಮ ಭಾಗಗಳ ಸಂಪೂರ್ಣ ಮಾಲೀಕರು ಮತ್ತು ಪರಭಾರೆ ಮಾಡುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಹೋಣೆಗಾರಿಕೆ, ಕ್ಲೇಮ್‌ಗಳು ಅಥವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮುಗಳನ್ನು ಅಥವಾ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ 15 (ಹದಿನೈದು) ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ದಿನಗಳ ಕಾಲಾವಧಿಯ ಒಳಗೆ ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಋಣಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮುಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ಎಲ್ಲಾ ಉದ್ದೇಶಗಳು ಮತ್ತು ಉದ್ದೇಶಗಳಿಗಾಗಿ ಉದ್ದೇಶಪೂರ್ವಕವಾಗಿ ಮನ್ನಾ ಮಾಡಲಾಗಿದೆ/ ನಿರ್ಲಕ್ಷಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ತಿಳಿಸಿದ ಕಾಲಾವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳು ನಮ್ಮ ಕಕ್ಷಿದಾರರು ಬದ್ಧವಾಗಿರುವುದಿಲ್ಲ ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್

(ಷೆಡ್ಯೂಲ್ ಸ್ವತ್ತುಗಳ ವಿವರಗಳು)

ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ಮುಳ್ಳೂರು ಗ್ರಾಮದಲ್ಲಿವ ಸ್ಥಿರಾಸ್ತಿ ಸ್ವತ್ತುಗಳನ್ನು, ಈ ಕೆಳಕಂಡ ಟೇಬಲ್‌ನಲ್ಲಿ ವಿವರಿಸಲಾಗಿದೆ.

ಕ್ರಮ ಸಂಖ್ಯೆ.	ಸರ್ವೆ ನಂಬರು	ವಿಸ್ತೀರ್ಣ	ಚಕ್ಕುಬಂಧಿ: ಪೂರ್ವ	ಚಕ್ಕುಬಂಧಿ: ಪಶ್ಚಿಮ	ಚಕ್ಕುಬಂಧಿ: ಉತ್ತರ	ಚಕ್ಕುಬಂಧಿ: ದಕ್ಷಿಣ	ಪ್ರಸ್ತುತ ಮಾಲೀಕರುಗಳ ಹೆಸರುಗಳು
1.	35/2	15 ಗುಂಟೆಗಳು	ಸರ್ವೆ ನಂ. 36ರ ಜಮೀನು	ಸರ್ವೆ ನಂ. 35/13ರ ಜಮೀನು	ಸರ್ವೆ ನಂ. 34ರ ಜಮೀನು	ಸರ್ವೆ ನಂ. 35/3ರ ಜಮೀನು	ಶ್ರೀ. ಸಂತೋಷ್ ತಾಳತ್ ಬಿನ್ ಲೇಟ್ ಡಾ. ಮ್ಯಾಥ್ಯೂ ತಾಳತ್
2.	35/9	02 ಗುಂಟೆಗಳು	ಸರ್ವೆ ನಂ. 35/10ರ ಜಮೀನು	ಸರ್ವೆ ನಂ. 35/1ರ ಜಮೀನು	ಸರ್ವೆ ನಂ. 34 ರ ಜಮೀನು	ಸರ್ವೆ ನಂ. 35/16ರ ಜಮೀನು	1. ಶ್ರೀ ಪ್ರವೀಣ್ ವಾಸುದೇವ ಬಿನ್ ಶ್ರೀ. ಎನ್ ವಾಸುದೇವ ರೆಡ್ಡಿ 2. ಶ್ರೀ. ಎಸ್ ಪ್ರದೀಪ್ ಬಿನ್ ಶ್ರೀ. ಎನ್ ಸೋಮಣ್ಣ 3. ಶ್ರೀ. ವಿ.ಆರ್. ಚೌದರಿ ಬಿನ್ ಶ್ರೀ. ವಿ. ಬೆನರ್ಜಿ 4. ಶ್ರೀ. ಮುಲ್ಲಂಗಿ ಸಂದೀಪ್ ಚೌಧರಿ ಬಿನ್ ಶ್ರೀ. ಎಂ. ಚಂದ್ರಶೇಖರ ಚೌಧರಿ 5. ಶ್ರೀ. ತಮ್ಮಿನೇನಿ ಪವನ್ ಕುಮಾರ್ ಬಿನ್ ಶ್ರೀ. ಟಿ. ಶ್ರೀರಾಮುಲು 6. ಶ್ರೀ. ಎಂ ಮಂಜುನಾಥ್ ಬಿನ್ ಲೇಟ್ ಶ್ರೀ. ಮುನಿರಾಜು
3.	35/10	03 ಗುಂಟೆಗಳು	ಸರ್ವೆ ನಂ. 35/11ರ ಜಮೀನು	ಸರ್ವೆ ನಂ. 35/9ರ ಜಮೀನು	ಸರ್ವೆ ನಂ. 34ರ ಜಮೀನು	ಸರ್ವೆ ನಂ. 35/16ರ ಜಮೀನು	
4.	35/11	6.08 ಗುಂಟೆಗಳು	ಸರ್ವೆ ನಂ. 35/12ರ ಜಮೀನು	ಸರ್ವೆ ನಂ. 35/10ರ ಜಮೀನು	ಸರ್ವೆ ನಂ. 34ರ ಜಮೀನು	ಸರ್ವೆ ನಂ. 35/16ರ ಜಮೀನು	
5.	35/12	04.12 ಗುಂಟೆಗಳು	ಸರ್ವೆ ನಂ. 35/13ರ ಜಮೀನು	ಸರ್ವೆ ನಂ. 35/11ರ ಜಮೀನು	ಸರ್ವೆ ನಂ. 34ರ ಜಮೀನು	ಸರ್ವೆ ನಂ. 35/16ರ ಜಮೀನು	
6.	35/13	05.04 ಗುಂಟೆಗಳು	ಸರ್ವೆ ನಂ. 35/3ರ ಜಮೀನು	ಸರ್ವೆ ನಂ. 35/13ರ ಜಮೀನು	ಸರ್ವೆ ನಂ. 34ರ ಜಮೀನು	ಸರ್ವೆ ನಂ. 35/16ರ ಜಮೀನು	
7.	35/5	07 ಗುಂಟೆಗಳು	ಸರ್ವೆ ನಂ. 35/7ರ ಜಮೀನು	ಸರ್ವೆ ನಂ. 42ರ ಜಮೀನು	ಸರ್ವೆ ನಂ. 34ರ ಜಮೀನು	ಸರ್ವೆ ನಂ. 35/14ರ ಜಮೀನು	
8.	35/7	07 ಗುಂಟೆಗಳು	ಸರ್ವೆ ನಂ. 35/6ರ ಜಮೀನು	ಸರ್ವೆ ನಂ. 35/5ರ ಜಮೀನು	ಸರ್ವೆ ನಂ. 34 ರ ಜಮೀನು	ಸರ್ವೆ ನಂ. 35/14ರ ಜಮೀನು	
9.	35/6	07 ಗುಂಟೆಗಳು	ಸರ್ವೆ ನಂ. 35/8ರ ಜಮೀನು	ಸರ್ವೆ ನಂ. 35/7ರ ಜಮೀನು	ಸರ್ವೆ ನಂ. 34ರ ಜಮೀನು	ಸರ್ವೆ ನಂ. 35/14ರ ಜಮೀನು	
10.	35/8	07 ಗುಂಟೆಗಳು	ಸರ್ವೆ ನಂ. 35/1ರ ಜಮೀನು	ಸರ್ವೆ ನಂ. 35/6ರ ಜಮೀನು	ಸರ್ವೆ ನಂ. 34ರ ಜಮೀನು	ಸರ್ವೆ ನಂ. 35/14ರ ಜಮೀನು	
11.	35/1	07 ಗುಂಟೆಗಳು	ಸರ್ವೆ ನಂ. 35/9ರ ಜಮೀನು	ಸರ್ವೆ ನಂ. 35/8ರ ಜಮೀನು	ಸರ್ವೆ ನಂ. 34ರ ಜಮೀನು	ಸರ್ವೆ ನಂ. 35/14ರ ಜಮೀನು	
12.	35/17	01.12 ಗುಂಟೆಗಳು	ಸರ್ವೆ ನಂ. 35/13ರ ಜಮೀನು	ಸರ್ವೆ ನಂ. 35/11ರ ಜಮೀನು	ಸರ್ವೆ ನಂ. 35/12ರ ಜಮೀನು	ಸರ್ವೆ ನಂ. 35/14ರ ಜಮೀನು	
13.	35/15	02.12 ಗುಂಟೆಗಳು	ಸರ್ವೆ ನಂ. 35/2ರ ಜಮೀನು	ಸರ್ವೆ ನಂ. 35/12ರ ಜಮೀನು	ಸರ್ವೆ ನಂ. 35/13ರ ಜಮೀನು	ಸರ್ವೆ ನಂ. 35/14ರ ಜಮೀನು	
14.	35/14	11.12 ಗುಂಟೆಗಳು	ಸರ್ವೆ ನಂ. 35/16ರ ಜಮೀನು	ಸರ್ವೆ ನಂ. 42ರ ಜಮೀನು	ಸರ್ವೆ ನಂ. 35/5, 35/6, 35/7, 35/8, 35/1, 35/9, 35/10, 35/11, 35/12 ಮತ್ತು 35/13ರ ಜಮೀನುಗಳು	ಸರ್ವೆ ನಂ. 35/14ರ ಉಳಿಕೆ ಜಮೀನು	1. ಶ್ರೀ ಪ್ರವೀಣ್ ವಾಸುದೇವ ಬಿನ್ ಶ್ರೀ. ಎನ್ ವಾಸುದೇವ ರೆಡ್ಡಿ 2. ಶ್ರೀ. ಎಸ್ ಪ್ರದೀಪ್ ಬಿನ್ ಶ್ರೀ. ಎನ್ ಸೋಮಣ್ಣ 3. ಶ್ರೀ. ವಿ.ಆರ್. ಚೌದರಿ ಬಿನ್ ಶ್ರೀ. ವಿ. ಬೆನರ್ಜಿ 4. ಶ್ರೀ. ಮುಲ್ಲಂಗಿ ಚಂದ್ರಶೇಖರ ಚೌದರಿ ಬಿನ್ ಶ್ರೀ. ಎಂ. ಚಿನ್ನ ಬಸಪ್ಪ ಚೌದರಿ 5. ಶ್ರೀ. ಮುಲ್ಲಂಗಿ ಸಂದೀಪ್ ಚೌದರಿ ಬಿನ್ ಶ್ರೀ. ಎಂ. ಚಂದ್ರಶೇಖರ ಚೌದರಿ 6. ಶ್ರೀ. ತಮ್ಮಿನೇನಿ ಪವನ್ ಕುಮಾರ್ ಬಿನ್ ಶ್ರೀ. ಟಿ. ಶ್ರೀರಾಮುಲು
15.	35/16	28.04 ಗುಂಟೆಗಳು	ಸರ್ವೆ ನಂ. 35/2ರ ಜಮೀನು	ಸರ್ವೆ ನಂ. 35/14ರ ಜಮೀನು	ಸರ್ವೆ ನಂ. 35/9, 35/10, 35/11, 35/15 ಮತ್ತು 35/17ರ ಜಮೀನುಗಳು	ಸರ್ವೆ ನಂ. 36ರ ಜಮೀನು	
ಒಟ್ಟಾರೆ ವಿಸ್ತೀರ್ಣ		2 ಎಕರೆ 36 ಗುಂಟೆಗಳು					

ಸಹಿ/- ಶ್ರೀ. ಶ್ರೀನಿವಾಸ್ ಬಿ.ಆರ್., ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7,
ಬ್ರೈಂಟನ್ ರಸ್ತೆ, ಬೆಂಗಳೂರು – 560025, ದೂ. ಸಂ. 080-69548770.

ಸ್ಥಳ: ಬೆಂಗಳೂರು
ದಿನಾಂಕ: 26.04.2026

ಶ್ರೀದೇವಿ ಶಾಲೆಗೆ ಶೇ.100 ಫಲಿತಾಂಶ

ನಮ್ಮ ಸಂಸ್ಥೆಯಲ್ಲಿ ಸಾಧಕಿಗೆ ಪಿಯು ಉಚಿತ ಶಿಕ್ಷಣ: ಡಾ.ಎಂ.ಆರ್.ಹುಲಿನಾಯ್ಕರ್

■ **ವಿಕ ಸುದ್ದಿಲೋಕ** ತುಮಕೂರು

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸಾಧಿಯಾ ಬಾನು 624 (99.84%) ಅಂಕ ಪಡೆದು ರಾಜ್ಯಕ್ಕೆ 2ನೇ ಸ್ಥಾನ, ಜಿಲ್ಲೆಗೆ ಮೊದಲ ಸ್ಥಾನ ಬಂದಿರುವುದು, ಹಾಗೆ ನಮ್ಮ ಸಂಸ್ಥೆಯ ಶ್ರೀದೇವಿ ಶಾಲೆ ಶೇ.100 ಫಲಿತಾಂಶ ದಾಖಲಿಸಿರುವುದು ಹೆಮ್ಮೆಯ ವಿಷಯ ಎಂದು ಸಂಸ್ಥೆಯ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ತಿಳಿಸಿದರು.

ಸಾಧಿಯಾ ಬಾನು- 624 ರಾಜ್ಯಕ್ಕೆ 2ನೇ ಸ್ಥಾನ

ನಗರದ ಶ್ರೀದೇವಿ ವಿದ್ಯಾ ಸಂಸ್ಥೆಯಿಂದ ಶಾಲೆಯ ವಿದ್ಯಾರ್ಥಿನಿ ಸಾಧಿಯಾ ಭಾನು ಅವರನ್ನು ಅಭಿನಂದಿಸಿ ಮಾತನಾಡಿದ ಹುಲಿನಾಯ್ಕರ್, ಸಾಧಿಯ ಬಾನು ನಮ್ಮ ಸಂಸ್ಥೆಯಲ್ಲಿ ಪಿಯುಸಿ ಸೇರ ಬಯಸಿದರೆ ಉಚಿತ ಶಿಕ್ಷಣ ನೀಡುವುದಾಗಿ ತಿಳಿಸಿದರು.

ನಮ್ಮ ಶಾಲೆಯ 38 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಶಾಲೆಯ ತೇಜಸ್ ಟಿ.-570, ರಹಮದ್ ಬಿ.-565, ಸುಚಿತ್ರಾ ಎಲ್. -542, ಹಂಸ ಜೆ. -541, ಹರಿಪ್ರಸಾದ್ ಆರ್. -535 , ತನ್ಮಯ್ ಜಿ. -528, ವನಿತಾ ಬಿ. -525 , ಪ್ರಿಯಾಂಕ -515 , ಕಾರ್ತಿಕ್ ವಿ. ಹುಲಿನಾಯ್ಕರ್ -506, ಸೈಯಿದಾ ಹಫೀಜಾ ಬಿ. -500 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದರು. ಸಂಸ್ಥೆಯ ಟ್ರಸ್ಟಿ ಡಾ.ರಮಣ್ ಆರ್. ಹುಲಿನಾಯ್ಕರ್, ಟ್ರಸ್ಟಿ ಹಾಗೂ ನೇತ್ರ ತಜ್ಞೆ ಡಾ.ಲಾವಣ್ಯ, ಪ್ರವೇಶಾತಿ ಮುಖ್ಯಸ್ಥೆ ರೂಪಾ ನಟೇಶ್, ಕಾಲೇಜಿನ ಪ್ರಾಂಶುಪಾಲರಾದ ಡಾ. ನರೇಂದ್ರ ವಿಶ್ವನಾಥ್, ಮುಖ್ಯ ಶಿಕ್ಷಕರಾದ ಆರ್.ವಿಜಯ್ ಕುಮಾರ್, ಸಂಸ್ಥೆಯ ಕ್ಷೇತ್ರ ಶಿಕ್ಷಣಾಧಿಕಾರಿ ರಂಗಧಾಮಯ್ಯ, ಕಾಲೇಜಿನ ಪ್ರಾಂಶುಪಾಲರಾದ ಅಂಜಯ್ ಸಿ., ಕ್ಷೇತ್ರ ಶಿಕ್ಷಣಾಧಿಕಾರಿ ಪ್ರೊ.ಹನುಮಂತಪ್ಪ ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ತುಮಕೂರಿನ ಶ್ರೀದೇವಿ ವಿದ್ಯಾ ಸಂಸ್ಥೆಯಿಂದ ವಿದ್ಯಾರ್ಥಿನಿ ಸಾಧಿಯಾ ಬಾನುಳನ್ನು ಅಭಿನಂದಿಸಲಾಯಿತು.

> ನನ್ನ ತಂದೆ ಮಹಮದ್ ಜಫೀರ್ ಉದ್ದೀನ್, ಟೈಲರ್ ವೃತ್ತಿ ಮಾಡುತ್ತಿದ್ದು, ತಾಯಿ ವಹಿದಾಬಾನು ಗೃಹಿಣಿ. ಅವರ ಆಶೀರ್ವಾದ ನನಗೆ ಪ್ರೇರಣೆಯಾಗಿದ್ದು, ನನ್ನ ಸಹೋದರ ಬೆನ್ನೆಲುಬಾಗಿ ನಿಂತಿದ್ದು, ಯಶಸ್ಸಿಗೆ ಕಾರಣ. ನಿತ್ಯ ರಾತ್ರಿ 1 ಗಂಟೆಯವರೆಗೂ ಓದುತ್ತಿದ್ದೆ, ಬೆಳಗ್ಗೆ ಸಮಯದಲ್ಲಿ 3 ಗಂಟೆಗಳ ಕಾಲ ಓದುತ್ತಿದ್ದೆ. ಪಠ್ಯಕ್ರಮಗಳನ್ನು 2, 3 ಬಾರಿ ಓದಿದರೆ, ಹಳೆಯ ಪ್ರಶ್ನೆಪತ್ರಿಕೆಗಳನ್ನು ಅಭ್ಯಾಸ ಮಾಡುತ್ತಿದ್ದೆ. ಪ್ರತಿದಿನ ಪುನರಾವರ್ತನೆ ಮಾಡುತ್ತಿದ್ದೆ. ಮುಂದಿನ ಗುರಿ ಪಿಯುಸಿ ಹಾಗೂ ನೀಟ್ ಪರೀಕ್ಷೆಯಲ್ಲಿ ಉನ್ನತ ರ‍್ಯಾಂಕ್ ಪಡೆದು ಎಂಬಿಬಿಎಸ್ ಪದವಿ ಮುಗಿಸಿ, ಸ್ನಾತಕೋತ್ತರ ಪದವಿಯಲ್ಲಿ ಚರ್ಮರೋಗ ವೈದ್ಯೆಯಾಗುವ ಆಕಾಂಕ್ಷೆ ಹೊಂದಿದ್ದೇನೆ.
>
> **-ಸಾಧಿಯಾ ಬಾನು** ರಾಜ್ಯಕ್ಕೆ 2ನೇ ಸ್ಥಾನ (624 ಅಂಕ) ಪಡೆದ ವಿದ್ಯಾರ್ಥಿನಿ

ವಿಕ ಈ ದಿನ ವಿಶೇಷ ಏ.26

ಅಂತಾರಾಷ್ಟ್ರೀಯ ಬೌದ್ಧಿಕ ಆಸ್ತಿ ದಿನ

ಪ್ರತಿವರ್ಷ ಏ.26ರಂದು ಅಂತಾರಾಷ್ಟ್ರೀಯ ಬೌದ್ಧಿಕ ಆಸ್ತಿ ದಿನವನ್ನಾಗಿ ಆಚರಿಸಲಾಗುತ್ತದೆ. ಯಾವುದೇ ಬಗೆಯ ಉತ್ಪನ್ನಗಳ ಹಕ್ಕುಗಳನ್ನು ರಕ್ಷಿಸುವ ಪೇಟೆಂಟ್, ಕಾಪಿರೈಟ್, ಟ್ರೇಡ್ ಮಾರ್ಕ್‌ಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶವಾಗಿದೆ.

ಚೆರ್ನೋಬಿಲ್ ದುರಂತ ಸ್ಮರಣೆ ದಿನ

1986ರಲ್ಲಿ ಮಾನವ ಕುಲವೇ ಬೆಚ್ಚಿಬೀಳುವ ಚೆರ್ನೋಬಿಲ್ 'ಅಣು ದುರಂತ' ಸೋವಿಯತ್ ಒಕ್ಕೂಟದಲ್ಲಿ ಸಂಭವಿಸಿತು. ಇದರ ಸ್ಮರಣಾರ್ಥ ಏ.26ರಂದು ಅಂತಾರಾಷ್ಟ್ರೀಯ ಚೆರ್ನೋಬಿಲ್ ದುರಂತ ಸ್ಮರಣೆ ದಿನವನ್ನಾಗಿ ವಿಶ್ವಸಂಸ್ಥೆ ಘೋಷಿಸಿದೆ. ಚೆರ್ನೋಬಿಲ್ ಪರಮಾಣು ಘಟಕದಲ್ಲಿನ ಸೋರಿಕೆ ಸಂಭವಿಸಿ ಆಸುಪಾಸಿನ ಮೂರು ದೇಶಗಳನ್ನೂ ಒಳಗೊಂಡು 80 ಲಕ್ಷಕ್ಕೂ ಅಧಿಕ ಮಂದಿ ವಿಕಿರಣಕ್ಕೆ ತುತ್ತಾದರು. ವಿಕಿರಣದಿಂದ ದೀರ್ಘಕಾಲೀನ ಆರೋಗ್ಯ ಸಮಸ್ಯೆಗಳಿಂದ ಜನರು ನರಳುವಂತಾಯಿತು.

ಸ್ಮರಣೆ
ಶ್ರೀನಿವಾಸ ರಾಮಾನುಜನ್

ಜಗದ್ವಿಖ್ಯಾತ ಭಾರತೀಯ ಗಣಿತಜ್ಞ ಶ್ರೀನಿವಾಸ ರಾಮಾನುಜನ್ 1920ರ ಏ.26ರಂದು ತಮಿಳುನಾಡಿನ ಕುಂಭಕೋಣಂನಲ್ಲಿ ನಿಧನರಾದರು. ಗಣಿತವನ್ನು ಶಾಸ್ತ್ರೀಯವಾಗಿ ಅಭ್ಯಸಿಸದೇ ಇದ್ದರೂ ಗಣಿತ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ ಶ್ರೇಯ ರಾಮಾನುಜನ್ ಅವರದ್ದು. ಅವರು ಬದುಕಿದ್ದು ಕೇವಲ 32 ವರ್ಷ. ಅಷ್ಟು ಕಡಿಮೆ ಜೀವಿತಾವಧಿಯಲ್ಲಿಯೇ ಜಗತ್ತಿನ ಗಮನ ಸೆಳೆದಿದ್ದು ಅವರ ಹೆಗ್ಗಳಿಕೆ.

ಐಷಾರಾಮಿ ಬಂಗಲೆಯಲ್ಲಿ ಮಾಜಿ ಸಿಎಂ ಸರಳ ಜೀವನ ಎಂದು ಬಿಜೆಪಿ ಟೀಕೆ

ಕೇಜ್ರಿಗೆ ಮತ್ತೆ ಶೀಷ್ ಮಹಲ್ ಭೂತ

ಹೊಸದಿಲ್ಲಿ: ಮಾಜಿ ಮುಖ್ಯಮಂತ್ರಿ ಹಾಗೂ ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರಿಗೆ ದಿಲ್ಲಿ ಅಧಿಕಾರ ಗದ್ದುಗೆ ಕಳೆದುಕೊಳ್ಳಲು ಕಾರಣವಾಗಿದ್ದ ಶೀಷ್ ಮಹಲ್ ಬಂಗಲೆ ವಿವಾದ ಮತ್ತೆ ಹೆಗಲೇರಿದೆ.

''ಸರಳ ಜೀವನದ ಬಗ್ಗೆ ಬೋಧನೆ ಮಾಡುತ್ತಿದ್ದ ಕೇಜ್ರಿವಾಲ್ ಅವರು ಅಧಿಕಾರ ಕಳೆದುಕೊಂಡಿದ್ದರೂ ಐಷಾರಾಮಿ ಬಂಗಲೆಯಲ್ಲಿ ವಾಸಿಸುತ್ತಿದ್ದಾರೆ,'' ಎಂದು ಆರೋಪಿಸಿರುವ ದಿಲ್ಲಿ ಸಚಿವ ಪರ್ವೇಶ್ ವರ್ಮಾ ಅವರು ಶೀಷ್ ಮಹಲ್-2 ಹೆಸರಿನಲ್ಲಿ ಬಂಗಲೆಯ ಹೊಸ ಫೋಟೊಗಳನ್ನು ಬಿಡುಗಡೆ ಮಾಡಿದ್ದಾರೆ. ''ದಿಲ್ಲಿಯ ಲೋಧಿ ಎಸ್ಟೇಟ್‌ನಲ್ಲಿರುವ ಐಷಾರಾಮಿ ಬಂಗಲೆಯಲ್ಲಿ ಕೇಜ್ರಿವಾಲ್ ಸರಳ ಜೀವನ ಮುಂದುವರಿಸಿದೆ,'' ಎಂದು ಸಚಿವ ಪರ್ವೇಶ್ ವರ್ಮಾ ಟೀಕಾ ಪ್ರಹಾರ ನಡೆಸಿದ್ದಾರೆ.

ಆರೋಪ ನಿರಾಕರಿಸಿದ ಆಪ್: ''ಬಿಜೆಪಿ ಬಿಡುಗಡೆ ಮಾಡಿದ ಶೀಷ್ ಮಹಲ್-2 ಬಂಗಲೆಯ ಫೋಟೊಗಳು ನಕಲಿ. ಅಂತರ್ಜಾಲದಲ್ಲಿ ಸಿಗುವ ಫೋಟೊಗಳನ್ನು ಕೇಜ್ರಿವಾಲ್ ಬಂಗಲೆ ಎಂಬಂತೆ ಬಿಂಬಿಸುತ್ತಿದೆ. ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದಲ್ಲಿ ರೂಪಿಸಿದ ಫೋಟೊಗಳಿವು. ಬಿಜೆಪಿ ಆರೋಪ ಸುಳ್ಳಿನ ಕಂತೆಯಾಗಿದೆ,'' ಎಂದು ಮಾಜಿ ಸಿಎಂ ಅತಿಶಿ ಮರ್ಲೆನಾ ಪ್ರತ್ಯಾರೋಪ ಮಾಡಿದ್ದಾರೆ.

ಕೇಜ್ರಿಗೆ ಚಡ್ಡಾ ಡಿಚ್ಚಿ: ''ದಿಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ ಸೋಲಿಗೆ ಕೇಜ್ರಿವಾಲ್ ಅವರ ಐಷಾರಾಮಿ ಬಂಗಲೆ ಕಾರಣವಾಗಿತ್ತು. ಆರೋಪ ಹಸಿಯಾಗಿ ಇರುವಾಗಲೇ ಬಂಗಲೆಯ ಎರಡನೇ ಹಂತದ ವಿವಾದ ಹೊರ ಬಂದಿದೆ. ಸಾಮಾನ್ಯ ಜನ ಬವಣೆಯಲ್ಲಿದ್ದರೆ, ಮಾಜಿ ಸಿಎಂ ಮಾತ್ರ ಐಷಾರಾಮಿ ಬಂಗಲೆ ಕಟ್ಟಿಸಿಕೊಳ್ಳುತ್ತಿದ್ದಾರೆ. ಅಧಿಕಾರ ಕಳೆದುಕೊಂಡಿದ್ದರೂ ಬೃಹತ್ ಬಂಗಲೆ ಕಟ್ಟಿಕೊಳ್ಳಲು ಹಣ ಎಲ್ಲಿಂದ ಬರುತ್ತಿದೆ,'' ಎಂದು ಆಪ್ ತೊರೆದು ಬಿಜೆಪಿ ಸೇರಿರುವ ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ ಪ್ರಶ್ನೆ ಮಾಡಿದ್ದಾರೆ.

ಬಜ್ಜಿಗೆ ಗದ್ದರ್ ಪಟ್ಟ: ಬಿಜೆಪಿ ಸೇರುತ್ತಾರೆ ಎಂದು ಹೇಳಲಾಗುತ್ತಿರುವ ಮಾಜಿ ಕ್ರಿಕೆಟಿಗ ಹರ್ಭಜನ್ ಸಿಂಗ್ ಸೇರಿದಂತೆ ಇತರ ಏಳು ಸಂಸದರ ವಿರುದ್ಧ ಪ್ರತಿಭಟನೆ ನಡೆಸಿರುವ ಆಮ್ ಆದ್ಮಿ ಪಕ್ಷ ಕಾರ್ಯಕರ್ತರು ಸಂಸದರನ್ನ 'ದ್ರೋಹಿಗಳು' ಎಂದು ಪಟ್ಟ ಕಟ್ಟಿದ್ದಾರೆ. ಜಲಂಧರ್‌ನಲ್ಲಿರುವ ಸಂಸದ ಹರ್ಭಜನ್ ಸಿಂಗ್ ನಿವಾಸಕ್ಕೆ ಮುತ್ತಿಗೆ ಹಾಕಿರುವ ಆಪ್ ಕಾರ್ಯಕರ್ತರು, ಮನೆಯ ಗೋಡೆಗಳ ಮೇಲೆ 'ಪಂಜಾಬ್ ದೆ ಗದ್ದರ್' (ಪಂಜಾಬ್ ದ್ರೋಹಿ) ಎಂದು ಬರೆದಿದ್ದಾರೆ.

ಸ್ವಾರ್ಥ ರಾಜಕೀಯ

ಚಡ್ಡಾ ಸೇರಿ ಏಳು ಸಂಸದರು ಆಪ್ ತೊರೆದ ಕುರಿತು ಪ್ರತಿಕ್ರಿಯೆ ನೀಡಿರುವ ಭ್ರಷ್ಟಾಚಾರ ವಿರೋಧಿ ಹೋರಾಟಗಾರ ಅಣ್ಣಾ ಹಜಾರೆ, ''ಭಿನ್ನಮತದ ಹೆಸರಲ್ಲಿ ಅಧಿಕಾರಕ್ಕೆ ಒಂದು ಪಕ್ಷದಿಂದ ಮತ್ತೊಂದು ಪಕ್ಷ ಸೇರುವುದು ರಾಜಕೀಯ ಸ್ವಾರ್ಥವಾಗಿದೆ. ಪಕ್ಷದ ನಾಯಕತ್ವ ಸರಿಯಾದ ಹಾದಿಯಲ್ಲಿದ್ದರೆ ಯಾರೂ ಪಕ್ಷ ತೊರೆಯುವುದಿಲ್ಲ. ಆಮ್ ಆದ್ಮಿ ಪಕ್ಷದಲ್ಲಿ ನಾಯಕತ್ವವು ಸರಿಯಾದ ಹಾದಿಯಲ್ಲಿ ಇಲ್ಲ, ಪಕ್ಷವೂ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿಲ್ಲ,'' ಎಂದು ಹಜಾರೆ ಟೀಕಿಸಿದ್ದಾರೆ.

ಒಂದು ಕಾಲದಲ್ಲಿ ತಮ್ಮನ್ನು ತಾವೇ ಸಾಮಾನ್ಯರಲ್ಲಿ ಸಾಮಾನ್ಯರೆಂದು ಬಿಂಬಿಸಿಕೊಂಡಿದ್ದ ಕೇಜ್ರಿವಾಲ್ ಅವರು ಶೀಷ್ ಮಹಲ್ ಅಂತಹ ಐಷಾರಾಮಿ ಬಂಗಲೆಯಲ್ಲಿ ಬದುಕುತ್ತಿದ್ದರು. ಅಧಿಕಾರ ಕಳೆದುಕೊಂಡ ಬಳಿಕ ಪಂಜಾಬ್ ಅನ್ನು ಎಟಿಎಂ ಮಾಡಿಕೊಂಡಿದ್ದಾರೆ. ಸುಳ್ಳು, ಭ್ರಷ್ಟಾಚಾರ, ಗೂಂಡಾಗಿರಿ ಮೈಗೂಡಿಸಿಕೊಂಡಿದ್ದಾರೆ. ಇಂತಹವರ ಜತೆ ಉತ್ತಮ ವ್ಯಕ್ತಿಗಳು ಹೆಚ್ಚು ದಿನ ಕೆಲಸ ಮಾಡುವುದಿಲ್ಲ.
- **ಸ್ವಾತಿ ಮಲಿವಾಲ್** ರಾಜ್ಯಸಭೆ ಸದಸ್ಯೆ

ಬಂಡಾಯ ಸಂಸದರ ಅನರ್ಹತೆಗೆ ಉಪರಾಷ್ಟ್ರಪತಿಗೆ ಪತ್ರ

ಬಿಜೆಪಿ ಜತೆಗೂಡಿರುವ ಏಳು ರಾಜ್ಯಸಭಾ ಸಂಸದರ ಕ್ರಮವು ಸಂವಿಧಾನಬಾಹಿರ. ಹಾಗಾಗಿ ಅವರ ಸಂಸತ್ ಸದಸ್ಯತ್ವವನ್ನು ರದ್ದುಗೊಳಿಸುವಂತೆ ಉಪರಾಷ್ಟ್ರಪತಿ ಅವರಿಗೆ ಪತ್ರ ಬರೆಯಲಾಗಿದೆ. ಮೇಲ್ಮನೆಯಿಂದ 7 ಮಂದಿಯನ್ನು ಅನರ್ಹಗೊಳಿಸುವಂತೆ ಕೋರಿ ಪಕ್ಷವು ರಾಜ್ಯಸಭಾ ಅಧ್ಯಕ್ಷರಿಗೂ ಪತ್ರ ಬರೆಯಲಿದೆ ಎಂದು ಆಪ್ ನಾಯಕ ಸಂಜಯ್ ಸಿಂಗ್ ಹೇಳಿದ್ದಾರೆ. ರಾಜ್ಯಸಭಾ ಮತ್ತು ಲೋಕಸಭೆಯಲ್ಲಿ ಯಾವುದೇ ರೀತಿಯ ಬಂಡಾಯ ಅಥವಾ ಬಣಕ್ಕೆ ಮೂರನೇ ಎರಡರಷ್ಟು ಬಹುಮತವಿದ್ದರೂ ಸಹ, ಯಾವುದೇ ಕಾನೂನು ಮಾನ್ಯತೆಯಿಲ್ಲ ಎಂದು ಪಕ್ಷಾಂತರ ವಿರೋಧಿ ಕಾನೂನು ಸ್ಪಷ್ಟವಾಗಿ ಹೇಳುತ್ತದೆ ಎಂದು ಸಂಜಯ್ ಸಿಂಗ್ ಹೇಳಿದರು.

ಮಣಿಪುರ ಪುನಃ ಉದ್ವಿಗ್ನ

ಇಂಫಾಲ: ಏಪ್ರಿಲ್‌ನಲ್ಲಿ ನಾಗರಿಕರೊಬ್ಬರ ಮನೆ ಮೇಲೆ ಶಂಕಿತ ರಾಕೆಟ್ ದಾಳಿಯಲ್ಲಿ ಇಬ್ಬರು ಮಕ್ಕಳು ಮೃತಪಟ್ಟ ನಂತರದಲ್ಲಿ ಭುಗಿಲೆದ್ದಿರುವ ನಾಗರಿಕರ ಆಕ್ರೋಶಕ್ಕೆ ಮಣಿಪುರದ ರಾಜಧಾನಿ ತತ್ತರಿಸಿದೆ.

ಪ್ರತಿಭಟನಾಕಾರರ ತಂಡವಾದ 'ಸಮನ್ವಯ ಸಮಿತಿಯು' (ಸಿಒಸಿಒಎಂಐ) ಮುಖ್ಯಮಂತ್ರಿ ನಿವಾಸಕ್ಕೆ ಚಲೋ ಕರೆ ನೀಡಿ ಶನಿವಾರ ನಿವಾಸಕ್ಕೆ ಮುತ್ತಿಗೆ ಯತ್ನಿಸಿತು. ಮಧ್ಯಾಹ್ನ 1 ಗಂಟೆಗೆ ಪ್ರತಿಭಟನಾಕಾರರು ನೂರಾರು ಸಂಖ್ಯೆಯಲ್ಲಿ ಜಮಾವಣೆಗೊಂಡಾಗ ಅವರನ್ನು ಚದುರಿಸಲು ಪೊಲೀಸರು ಅಶ್ರುವಾಯು ಸಿಡಿಸಿದರು. ಸಿಎಂ ಯುಮ್ನಮ್ ಖೇಮ್‌ಚಂದ್ ಸಿಂಗ್ ನಿವಾಸಕ್ಕೆ ಪ್ರತಿಭಟನಾಕಾರರು ಮುತ್ತಿಗೆ ಯತ್ನಿಸಿದಾಗ ಪೊಲೀಸರು ಹಾಗೂ ಸ್ಥಳೀಯರ ನಡುವೆ ತೀವ್ರ ಘರ್ಷಣೆ ಉಂಟಾಗಿದೆ. ನಾಗರಿಕ ಸುರಕ್ಷತೆ ಹಾಗೂ ಮಣಿಪುರದ ಪ್ರಾಂತೀಯ ಸಾರ್ವಭೌಮತ್ವ ರಕ್ಷಣೆ ಸಂಬಂಧ ಆರು ನೀತಿಗಳನ್ನು ರೂಪಿಸಲು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ. ಏಪ್ರಿಲ್ 5ರಂದು ಬಿಷ್ಣುಪುರ ಜಿಲ್ಲೆಯಲ್ಲಿ ಸಂಭವಿಸಿದ ಶಂಕಿತ ರಾಕೆಟ್ ದಾಳಿಯಲ್ಲಿ 5 ವರ್ಷದ ಬಾಲಕ ಹಾಗೂ ಆರು ತಿಂಗಳ ಹೆಣ್ಣು ಮಗು ಮೃತಪಟ್ಟಿತ್ತು.

3 ಮಂದಿ ಸಾವು: ಮತ್ತೊಂದೆಡೆ, ಉಖ್ರುಲ್ ಜಿಲ್ಲೆಯಲ್ಲಿ ಕುಕಿ-ನಾಗಾ ಸಮುದಾಯದ ನಡುವೆ ಘರ್ಷಣೆ ಉಂಟಾಗಿ ಮೂವರು ಹತ್ಯೆಯಾಗಿದ್ದಾರೆ. ಘರ್ಷಣೆಯಲ್ಲಿ ಎರಡೂ ಸಮುದಾಯದ ಗುಂಪುಗಳು ಶಸ್ತ್ರಗಳನ್ನು ಬಳಸಿವೆ ಎಂದು ವರದಿಯಾಗಿದೆ.

Quick ನ್ಯೂಸ್

- **ರಷ್ಯಾದಿಂದ ಉಕ್ರೇನ್‌ನ ನಿಪ್ರೊ ಪಟ್ಟಣದ ಮೇಲೆ ಡ್ರೋನ್-ಕ್ಷಿಪಣಿ ದಾಳಿ, 5 ಮಂದಿ ಸಾವು**
- ಪಾಕಿಸ್ತಾನ ಪ್ರಧಾನಿ ಆಸಿಫ್ ಅಲಿ ಜರ್ದಾರಿ ಚೀನಾಗೆ ಭೇಟಿ, ವ್ಯಾಪಾರ ಸಹಕಾರ ಹಾಗೂ ಆರ್ಥಿಕ ಕಾರಿಡಾರ್ ಬಗ್ಗೆ ಮಹತ್ವದ ಚರ್ಚೆ
- **ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಕರ್ತವ್ಯಲೋಪ, ಐವರು ಅಧಿಕಾರಿಗಳನ್ನು ಅಮಾನತುಗೊಳಿಸಿದ ಚುನಾವಣಾ ಆಯೋಗ**
- ಎಲ್ಲ ಹವಾಮಾನದಲ್ಲೂ ಸರಾಗವಾಗಿ ಸಂಚರಿಸುವ ಶ್ರೀನಗರ-ಜಮ್ಮು ನಡುವಿನ ವಂದೇ ಭಾರತ್ ರೈಲು ಸೇವೆ ಏ.30ರಿಂದ ಶುರು
- **ಅಪ್ರಕಟಿತ ಆತ್ಮಚರಿತ್ರೆ ಪುಸ್ತಕ ವಿಷಯದಲ್ಲಿ ಅನಗತ್ಯವಾಗಿ ನನ್ನನ್ನು ಎಳೆದು ತರಲಾಯಿತು: ಮಾಜಿ ಸೇನಾ ಮುಖ್ಯಸ್ಥ ಎಂ.ಎಂ. ನರವಣೆ ಬೇಸರ**
- ಇಂಡಿಗೊ ಏರ್‌ಲೈನ್ಸ್ ತನ್ನ ಉದ್ಯೋಗಿಗಳಿಗೆ ಬಿಂದಿ, ಕುಂಕುಮ ಧರಿಸುವುದನ್ನು ನಿಷೇಧಿಸಿದೆ ಎಂಬ ಸುದ್ದಿಯನ್ನು ಅಲ್ಲಗಳೆದ ವಿಮಾನಯಾನ ಸಂಸ್ಥೆ

ಟೆಹರಾನ್‌ನಲ್ಲಿ ವಾಣಿಜ್ಯ ವಿಮಾನ ಹಾರಾಟ ಶುರು

ಟೆಹರಾನ್: ಅಮೆರಿಕದೊಂದಿಗೆ ಸಂಘರ್ಷ ಆರಂಭವಾದ ಸುಮಾರು ಎರಡು ತಿಂಗಳ ನಂತರ ಇರಾನ್ ರಾಜಧಾನಿ ಟೆಹರಾನ್‌ನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಾಣಿಜ್ಯ ಬಳಕೆಯ ವಿಮಾನಗಳ ಹಾರಾಟವನ್ನು ಇರಾನ್ ಆಡಳಿತವು ಪುನಾರಂಭಿಸಿದೆ. ಟೆಹರಾನ್‌ನ ಇಮಾಮ್ ಖಮೇನಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ

ಇಸ್ತಾಂಬುಲ್, ಒಮನ್ ರಾಜಧಾನಿ ಮಸ್ಕತ್ ಮತ್ತು ಸೌದಿ ಅರೇಬಿಯಾದ ಮದೀನಾ ನಗರಗಳಿಗೆ ವಿಮಾನಗಳು ನಿರ್ಗಮಿಸಿವೆ ಎಂದು ಇರಾನ್‌ನ ಸರಕಾರಿ ಸ್ವಾಮ್ಯದ ಮಾಧ್ಯಮ ವರದಿ ಮಾಡಿದೆ. ಶನಿವಾರ ಬೆಳಗ್ಗೆ ಇಸ್ತಾಂಬುಲ್‌ಗೆ ಕನಿಷ್ಠ ಮೂರು ವಿಮಾನಗಳು ಟೇಕ್ ಆಫ್ ಮಾಡಿವೆ ಎಂದು ವರದಿಯಾಗಿದೆ.

ಏತನ್ಮಧ್ಯೆ, ಪಾಕಿಸ್ತಾನಕ್ಕೆ ಭೇಟಿ ನೀಡಿರುವ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘಚಿ ನೇತೃತ್ವದ ನಿಯೋಗವು, ಅಮೆರಿಕದೊಂದಿಗೆ ನೇರ ಮಾತುಕತೆ ನಡೆಸಲು ನಿರಾಕರಿಸಿದೆ. ''ಇರಾನ್ ಮತ್ತು ಅಮೆರಿಕದ ನಡುವೆ ಯಾವುದೇ ಸಭೆ ನಿಗದಿಯಾಗಿಲ್ಲ, ನಮ್ಮ ಅಭಿಪ್ರಾಯವನ್ನು ಪಾಕಿಸ್ತಾನಕ್ಕೆ ತಿಳಿಸಲಾಗುವುದು,'' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೇಯ್ ತಿಳಿಸಿದ್ದಾರೆ.

ರಿಪಬ್ಲಿಕನ್ ಸಂಸದರಿಂದ ಮಂಡನೆ | ಭಾರತೀಯ ಉದ್ಯೋಗಿಗಳಿಗೆ ಹೊಸ ಸಂಕಷ್ಟ

ಎಚ್-1ಬಿ ವೀಸಾ ನಿಷೇಧಿಸಲು ವಿಧೇಯಕ

ವಾಷಿಂಗ್ಟನ್: ಅಮೆರಿಕದಲ್ಲಿ ಉದ್ಯೋಗ ಕನಸು ಹೊತ್ತ ವಿದೇಶಿ ಯುವಕರ ಪಾಲಿಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದಲ್ಲಿ ಮತ್ತೊಂದು ಅಡೆತಡೆ ಎದುರಾಗುತ್ತಿದೆ. 3 ವರ್ಷಗಳ ಕಾಲ ಎಚ್-1ಬಿ ವೀಸಾ ನಿಷೇಧಿಸುವಂತೆ ಒತ್ತಾಯಿಸಿರುವ ರಿಪಬ್ಲಿಕನ್ ಸಂಸದರು ಸಂಸತ್‌ನಲ್ಲಿ ಹೊಸ ವಿಧೇಯಕ ಮಂಡಿಸಿದ್ದಾರೆ.

ಎಚ್-1ಬಿ ವೀಸಾ ಅರ್ಜಿಗಳ ಮೇಲೆ 1 ಲಕ್ಷ ಡಾಲರ್ (93 ಲಕ್ಷ ರೂ.) ಶುಲ್ಕ ಜಾರಿಗೊಳಿಸಿದ ಬೆನ್ನಿಗೆ ಮೂರು ವರ್ಷಗಳ ಕಾಲ ಎಚ್-1ಬಿ ವೀಸಾ ಕಾರ್ಯಕ್ರಮವನ್ನು ಅಮಾನತಿನಲ್ಲಿಡಲು ವಿಧೇಯಕದಲ್ಲಿ ಒತ್ತಾಯಿಸಲಾಗಿದೆ.

ಆಡಳಿತ ಪಕ್ಷ ರಿಪಬ್ಲಿಕ್ ಸಂಸದರ ಗುಂಪು ಎಚ್-1ಬಿ ವೀಸಾ ಕಾರ್ಯಕ್ರಮವನ್ನು ಮೂರು ವರ್ಷ ನಿಷೇಧಿಸುವಂತೆ ಪ್ರಸ್ತಾಪಿಸಿ ಸಂಸತ್‌ನಲ್ಲಿ ವಿಧೇಯಕ ಮಂಡಿಸಿದೆ. ವಿದೇಶಿ ಕಾರ್ಮಿಕರನ್ನು ಆಮದು ಮಾಡಿಕೊಳ್ಳುತ್ತಿರುವ ದೇಶದ ಐಟಿ-ಬಿಟಿ ಕಂಪನಿಗಳು ದೇಶಿಯ ಕಾರ್ಮಿಕರನ್ನು ಕಡೆಗಣಿಸುತ್ತಿವೆ ಎಂದು ಆರೋಪಿಸಿದ್ದಾರೆ.

ರಿಪಬ್ಲಿಕನ್ ಪಕ್ಷದ ಆರಿಜೋನಾ ಸಂಸದ ಎಲಿ ಕ್ರೇನ್ ಅವರು 'ಎಚ್-1ಬಿ ವೀಸಾ ದುರುಪಯೋಗ ವಿಧೇಯಕ-2026' ಮಂಡಿಸಿದ್ದಾರೆ. ಮೂರು ವರ್ಷ ಎಚ್-1ಬಿ ವೀಸಾ ಕಾರ್ಯಕ್ರಮ ನಿರ್ಬಂಧಿಸುವಂತೆ ಮನವಿ ಮಾಡಿದ್ದಾರೆ. ಬ್ರಿಯಾನ್ ಬಾಬಿನ್, ಬ್ರಾಂಡನ್ ಗಿಲ್, ವೆಸ್ಲಿ ಹಂಟ್, ಕೀತ್ ಸೆಲ್ಫ್, ಆಂಡಿ ಒಗ್ಲೆಸ್, ಪೌಲ್ ಗೋಸರ್, ಟಾಮ್ ಮೆಕ್‌ಕ್ಲಿಂಟಕ್ ಅವರುಗಳು ವಿಧೇಯಕ ಬೆಂಬಲಿಸಿದ್ದಾರೆ.

ವಿಧೇಯಕದಲ್ಲೇನಿದೆ?: ಪ್ರಸ್ತಾಪಿತ ವಿಧೇಯಕದಲ್ಲಿ ಎಚ್-1ಬಿ ವೀಸಾ ಕಾರ್ಯಕ್ರಮದಲ್ಲಿ ಹಲವು ಬದಲಾವಣೆಗೆ ಮನವಿ ಮಾಡಲಾಗಿದೆ. ಪ್ರಸ್ತುತ ನೀಡಲಾಗುತ್ತಿರುವ 65 ಸಾವಿರ ಎಚ್-1ಬಿ ವೀಸಾ ಸಂಖ್ಯೆಯನ್ನು 25 ಸಾವಿರಕ್ಕೆ ಕಡಿತಗೊಳಿಸಬೇಕು. ವಾರ್ಷಿಕ ಕನಿಷ್ಠ 2 ಲಕ್ಷ ಡಾಲರ್ (1.86 ಲಕ್ಷ ರೂ.) ವೇತನ ಹೊಂದಿದವರಿಗೆ ಮಾತ್ರ ವೀಸಾ ನೀಡಬೇಕು. ಎಚ್-1ಬಿ ವೀಸಾದಾರರು ತಮ್ಮ ಅವಲಂಬಿತರನ್ನು ಅಮೆರಿಕಗೆ ಕರೆ ತರದಂತೆ ನಿರ್ಬಂಧಿಸಬೇಕು ಎಂದು ಒತ್ತಾಯಿಸಲಾಗಿದೆ.

ಮುಖ್ಯಾಂಶಗಳು

- ಎಚ್-1ಬಿ ವೀಸಾ ನೀಡುವ ಪ್ರಕ್ರಿಯೆಗೆ ಈಗಿನ ಲಾಟರಿ ವ್ಯವಸ್ಥೆಯನ್ನು ವೇತನ ಆಧರಿತ ವ್ಯವಸ್ಥೆಯಾಗಿ ಜಾರಿಗೊಳಿಸಬೇಕು
- ಅಮೆರಿಕದಲ್ಲಿ ಅರ್ಹ ಕೆಲಸಗಾರರು ಸಿಗುತ್ತಿಲ್ಲ ಎಂಬ ನೆಪ ಹೇಳಿ ದೇಶದ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಬಾರದು
- ಎಚ್-1ಬಿ ವೀಸಾದಡಿ ಕೆಲಸ ಮಾಡುವ ವಿದೇಶಿ ಉದ್ಯೋಗಿಗಳು ಒಂದಕ್ಕಿಂತ ಹೆಚ್ಚು ಕಂಪನಿಗಳಲ್ಲಿ ಕೆಲಸ ಮಾಡಬಾರದು
- ಉದ್ಯೋಗದಾತ ಕಂಪನಿಗಳು ಮೂರನೇ ವ್ಯಕ್ತಿ ಅಥವಾ ಏಜೆನ್ಸಿ ಮೂಲಕ ವಿದೇಶಿ ಉದ್ಯೋಗಿಗಳ ನೇಮಕ ನಿರ್ಬಂಧಿಸಬೇಕು
- ಫೆಡರಲ್ ಏಜೆನ್ಸಿ ಮೂಲಕ ವಲಸೆರಹಿತ ಕಾರ್ಮಿಕರ ನೇಮಕಾತಿಯನ್ನು ಸಂಪೂರ್ಣ ನಿರ್ಬಂಧಿಸಬೇಕು
- ಎಚ್-1ಬಿ ವೀಸಾದಾರರು ಅಮೆರಿಕದ ಶಾಶ್ವತ ನಿವಾಸಿಗಳಾಗಿ ಪರಿವರ್ತನೆಗೊಳ್ಳುವುದಕ್ಕೆ ಅವಕಾಶ ನೀಡಬಾರದು

ನಿಷೇಧ ಸಾಧ್ಯವೇ?

ಅಮೆರಿಕ ಸಂಸತ್‌ನಲ್ಲಿ ವಿಧೇಯಕ ಅಂಗೀಕಾರಗೊಂಡರೆ ಕಾನೂನು ಬದ್ಧವಾಗಿಯೇ ಎಚ್-1ಬಿ ವೀಸಾ ಕಾರ್ಯಕ್ರಮವನ್ನು ನಿಷೇಧಿಸಬಹುದು. ಒಂದು ವೇಳೆ ತಾತ್ಕಾಲಿಕವಾಗಿ ವೀಸಾ ನಿರ್ಬಂಧಿಸಿದರೆ ಭಾರತ ಸೇರಿದಂತೆ ಕೆಲವು ದೇಶಗಳ ಉದ್ಯೋಗಿಗಳ ಮೇಲೆ ಪರಿಣಾಮ ಬೀರಲಿದೆ. ಪ್ರಸ್ತಾಪಿತ ವಿಧೇಯಕದಂತೆ ವೀಸಾ ನಿಷೇಧಿಸಿದರೆ ಎಚ್-1ಬಿ ವೀಸಾ ಹೊಂದಿದವರು ಅಮೆರಿಕ ತೊರೆಯಬೇಕಾಗುತ್ತದೆ. ಇಲ್ಲವೇ ಬೇರೊಂದು ವೀಸಾಗೆ ವರ್ಗಾವಣೆಗೊಳ್ಳಬೇಕು. ಉದ್ಯೋಗ ಆಧಾರಿತ ಗ್ರೀನ್ ಕಾರ್ಡ್ ವೀಸಾ ನಿರೀಕ್ಷೆಯಲ್ಲಿರುವ ಭಾರತೀಯ ಉದ್ಯೋಗಿಗಳ ಅಮೆರಿಕ ಕನಸು ಭಗ್ನಗೊಳ್ಳಲಿದೆ.

ಸರಕಾರ ಜನರ ಹಿತ ಕಾಯಬೇಕು: ''ಫೆಡರಲ್ ಸರಕಾರ ದೇಶದ ಹಿತ, ನಾಗರಿಕ ಶ್ರೇಯೋಭಿವೃದ್ಧಿಗೆ ಕೆಲಸ ಮಾಡಬೇಕು. ಬೃಹತ್ ಕಂಪನಿಗಳು ಲಾಭ ಮಾಡಿಕೊಳ್ಳಲು ದಾರಿ ಮಾಡಿಕೊಟ್ಟಿರುವ ಎಚ್-1ಬಿ ವೀಸಾ ಕಾರ್ಯಕ್ರಮವನ್ನು ನಿರ್ಬಂಧಿಸಬೇಕು. ದೇಶದ ಕಾರ್ಮಿಕರನ್ನು ಬಿಟ್ಟು ಹೊರಗಿನವರನ್ನು ಕರೆ ತರುವ ಕಂಪನಿಗಳಿಗೆ ಬ್ರೇಕ್ ಹಾಕಬೇಕು. ಅಮೆರಿಕ ಜನರಿಗಾಗಿ ಅಮೆರಿಕನ್ ಕಂಪನಿಗಳು ಕೆಲಸ ಮಾಡಬೇಕು,'' ಎಂದು ವಿಧೇಯಕ ಮಂಡಿಸಿರುವ ಸಂಸದ ಎಲಿ ಕ್ರೇನ್ ಹೇಳಿದ್ದಾರೆ.

ದಾವೂದ್ ಬಂಟ ಸಲೀಂ ಅರೆಸ್ಟ್

ಹೊಸದಿಲ್ಲಿ: ಮಹತ್ವದ ಬೆಳವಣಿಗೆಯಲ್ಲಿ ಭೂಗತ ಪಾತಕಿ ದಾವೂದ್ ಇಬ್ರಾಹಿಂ ಬಂಟ ಹಾಗೂ ಭಾರತದ ಮೋಸ್ಟ್ ವಾಂಟೆಡ್ ಡ್ರಗ್ ಮಾಫಿಯಾ ಡಾನ್ ಸಲೀಂ ದೋಲಾನನ್ನು ಟರ್ಕಿಯ ಇಸ್ತಾಂಬುಲ್‌ನಲ್ಲಿ ಬಂಧಿಸಲಾಗಿದೆ. ಆತನನ್ನು ಭಾರತಕ್ಕೆ ಕರೆ ತರಲು ತನಿಖಾ ಸಂಸ್ಥೆಗಳು ಕಾರ್ಯಪ್ರವೃತ್ತವಾಗಿವೆ.

ಈ ಸಂಬಂಧ ಟರ್ಕಿ ಜತೆಗೆ ಯುಎಇ ಅಧಿಕಾರಿಗಳ ಜತೆ ಭಾರತೀಯ ಅಧಿಕಾರಿಗಳು ಮಾತುಕತೆ ನಡೆಸಲಿದ್ದಾರೆ. ಜಾಗತಿಕ ಡ್ರಗ್ ಮಾರುಕಟ್ಟೆ ಜಾಲದಲ್ಲಿ ಪ್ರಮುಖ ವ್ಯಕ್ತಿಯಾಗಿದ್ದ ಸಲೀಂ ದೋಲಾ ವಿರುದ್ಧ ರೆಡ್ ಕಾರ್ನರ್ ನೋಟಿಸ್ ಹೊರಡಿಸಲಾಗಿತ್ತು. ಸಂಘಟಿತ ಅಪರಾಧ ಕೃತ್ಯದಲ್ಲಿ ಭಾಗಿಯಾಗಿದ್ದ ದೋಲಾ ಪತ್ತೆಗೆ ಎನ್‌ಸಿಬಿ ಸೇರಿದಂತೆ ಭಾರತದ ತನಿಖಾ ಸಂಸ್ಥೆಗಳು ಕಳೆದ ಕೆಲವು ವರ್ಷಗಳಿಂದ ಬಲೆ ಬೀಸಿದ್ದವು. ಮುಂಬಯಿ ಮೂಲದ ದೋಲಾ ವಿರುದ್ಧ ಪೊಲೀಸರು ಕಾರ್ಯಾಚರಣೆಗೆ ಇಳಿದ ಬಳಿಕ ದುಬೈಗೆ ಸ್ಥಳಾಂತರಗೊಂಡಿದ್ದ. ಅಲ್ಲಿಂದಲೇ ಡ್ರಗ್ ಮಾರಾಟದ ಜಾಲ ಬೆಳೆಸಿದ್ದ. ಭಾರತ ಸೇರಿದಂತೆ ವಿವಿಧ ದೇಶಗಳಿಗೆ ಡ್ರಗ್ ಸರಬರಾಜು ಮಾಡುತ್ತಿದ್ದ.

ಟ್ರಂಪ್ ಗೋಲ್ಡ್ ಕಾರ್ಡ್ ವೀಸಾ ಫ್ಲಾಪ್

ನ್ಯೂಯಾರ್ಕ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 'ಗೋಲ್ಡ್ ಕಾರ್ಡ್' ವೀಸಾ ಕಾರ್ಯಕ್ರಮ ವಿಫಲವಾಗಿದೆ. ಕಳೆದ ಏಳು ತಿಂಗಳಲ್ಲಿ ಒಬ್ಬರಿಗೆ ಮಾತ್ರ ವೀಸಾ ನೀಡಲಾಗಿದ್ದು, ದೊಡ್ಡ ಪ್ರಮಾಣದ ಆದಾಯ ನಿರೀಕ್ಷೆಯಿಂದ ಘೋಷಣೆ ಮಾಡಿದ ಯೋಜನೆ ಹಳ್ಳ ಹಿಡಿದಿದೆ.

ಕಳೆದ ವರ್ಷದ ಸೆಪ್ಟೆಂಬರ್ 19 ರಂದು1 ಬಿಲಿಯರ್ ಡಾಲರ್ (100 ಕೋಟಿ ರೂ.) ಮೌಲ್ಯದ ಗೋಲ್ಡ್ ಕಾರ್ಡ್ ಘೋಷಣೆ ಮಾಡಲಾಗಿತ್ತು. ''ಗೋಲ್ಡ್ ಕಾರ್ಡ್' ವೀಸಾಗೆ 1,300 ಅರ್ಜಿ ಸಲ್ಲಿಕೆಯಾಗಿದ್ದರೂ ಒಬ್ಬರಿಗೆ ಮಾತ್ರ ಗೋಲ್ಡ್ ಕಾರ್ಡ್ ವೀಸಾಗೆ ಅನುಮೋದನೆ ನೀಡಲಾಗಿದೆ ಎಂದು ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಮಾಹಿತಿ ನೀಡಿದ್ದಾರೆ.

ಯುದ್ಧದ ಬಳಿಕ ಗಾಜಾದಲ್ಲಿ ಮೊದಲ ಬಾರಿಗೆ ಮತದಾನ

ರಾಮಾಲ್ಲಾ: ಇಸ್ರೇಲ್ ಜತೆಗಿನ ಸಮರದ ಬಳಿಕ ಬಹುಪಾಲು ನಾಶವಾಗಿರುವ ಗಾಜಾದಲ್ಲಿ ಶನಿವಾರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಸಂಬಂಧ ಮತದಾನ ನಡೆದಿದೆ. ಇಸ್ರೇಲ್ ಆಕ್ರಮಿತ ಪಶ್ಚಿಮ ತೀರದಲ್ಲಿ 15 ಲಕ್ಷ ಮಂದಿ ಪ್ಯಾಲೆಸ್ತೀನಿಯರು ಮತದಾನ ಮಾಡಿದ್ದಾರೆ. ಹಾಲಿ ಅಧ್ಯಕ್ಷ ಮಹಮೂದ್ ಅಬ್ಬಾಸ್ ನೇತೃತ್ವದ ಫತಾಹ್ ಪಕ್ಷದ ಅಭ್ಯರ್ಥಿಗಳು ಹಾಗೂ ಪಕ್ಷೇತರರು ಕಣದಲ್ಲಿದ್ದಾರೆ. ಬೆಳಗ್ಗೆ 7 ರಿಂದ ರಾತ್ರಿ 7ರವರೆಗೆ ಮತದಾನಕ್ಕೆ ಅವಕಾಶ ನೀಡಲಾಗಿದೆ. ಸಮರ್ಪಕ ವಿದ್ಯುತ್ ಸಂಪರ್ಕದ ಕೊರತೆಯಿಂದಾಗಿ ಮತ ಎಣಿಕೆ ಕಾರ್ಯವನ್ನು ಹಗಲು ಹೊತ್ತಿನಲ್ಲಿ ನಡೆಸಲಾಗುವುದು ಎಂದು ವಿಶ್ವಸಂಸ್ಥೆ ಸಮನ್ವಯ ಅಧಿಕಾರಿ ರಾಮಿಜ್ ಅಲಾಕ್‌ಬರೊವ್ ತಿಳಿಸಿದ್ದಾರೆ. ಕಳೆದ 2007ರಿಂದ ಗಾಜಾವು ಹಮಾಸ್ ಬಂಡುಕೋರರ ಹಿಡಿತದಲ್ಲಿದೆ. 2006ರಲ್ಲಿ ವಿಧಾನಸಭಾ ಚುನಾವಣೆ ನಡೆದಿದ್ದು, ಇಸ್ಲಾಮಿಸ್ಟ್ ಮೂಮೆಂಟ್ ಪಕ್ಷವು ಜಯ ಗಳಿಸಿತ್ತು.

ಶಿವಾಜಿ ಮಹಾರಾಜರು ಯುದ್ಧ ಮಾಡಿ ಬೇಸತ್ತಿದ್ದರು!

ನಾಗಪುರ: ಬಾಗೇಶ್ವರ್ ಧಾಮ್ ಎಂದೇ ಖ್ಯಾತರಾದ ಧೀರೇಂದ್ರ ಕೃಷ್ಣಶಾಸ್ತ್ರಿ ಅವರು ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ನೀಡಿರುವ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ. ಭರತದುರ್ಗ ಶಕ್ತಿಸ್ಥಳದ ಶಿಲಾನ್ಯಾಸ ಸಮಾರಂಭದಲ್ಲಿ ಮಾತನಾಡಿದ ಶಾಸ್ತ್ರಿ, ''ಭಾರತೀಯ ಸನಾತನ ಸಂಪ್ರದಾಯದಲ್ಲಿ ಜನಿಸಿರುವುದು ನಮಗೆ ಇನ್ನಷ್ಟು ಹೆಮ್ಮೆಯನ್ನುಂಟು ಮಾಡುತ್ತದೆ. ಛತ್ರಪತಿ ಶಿವಾಜಿ ಮಹಾರಾಜರು ಯುದ್ಧಗಳನ್ನು ಮಾಡಿ ತುಂಬಾ ದಣಿದಿದ್ದಾರೆಂದು ಭಾವಿಸಿದರು. ಒಂದು ದಿನ ಅವರು ಸಮರ್ಥ ರಾಮದಾಸ ಸ್ವಾಮಿಗಳ ಬಳಿಗೆ ಹೋದರು. ಅವರು ತಮ್ಮ ಕಿರೀಟವನ್ನು ತೆಗೆದು, ನಾವು ಬಹಳಷ್ಟು ಯುದ್ಧಗಳನ್ನು ಮಾಡಿದ್ದೇವೆ. ನಾವು ಹೆಚ್ಚು ಹೋರಾಡಲು ಬಯಸುವುದಿಲ್ಲ, ಈ ರಾಜ್ಯವನ್ನು ನೋಡಿಕೊಳ್ಳಿ. ನಾವು ನಿಮ್ಮ ಆದೇಶದ ಮೇರೆಗೆ ನಡೆಯುತ್ತೇವೆ ಎಂದಿದ್ದರು,'' ಎಂದು ಹೇಳಿದ್ದಾರೆ. ಈ ಹೇಳಿಕೆಗೆ ಮಹಾರಾಷ್ಟ್ರ ಕಾಂಗ್ರೆಸ್ ವಕ್ತಾರ ಸಚಿನ್ ಸಾವಂತ್ ಪ್ರತಿಕ್ರಿಯಿಸಿದ್ದು, ''ಐತಿಹಾಸಿಕವಾಗಿ ಸುಳ್ಳು ಮಾಹಿತಿಯನ್ನು ಹಬ್ಬಿಸಲಾಗು ತ್ತಿದೆ. ಮರಾಠ ಇತಿಹಾಸವನ್ನು ತಿದ್ದಲು ಯತ್ನಿಸಲಾಗುತ್ತಿದೆ,'' ಎಂದು ಕಿಡಿಕಾರಿದ್ದಾರೆ.



ಬಾಗೇಶ್ವರ್ ಧಾಮ್ ಬಾಬಾ ಹೇಳಿಕೆ ವಿವಾದ

ಸಂಧಾನ ಸಭೆ 2.0 ಬ್ರೇಕಪ್

» ಮೊದಲ ಪುಟದಿಂದ

ಶುಕ್ರವಾರ ರಾತ್ರಿ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದ ಅರಾಘಚಿ ಅವರು, ಪಾಕ್ ಪ್ರಧಾನಿ ಶಹಬಾಜ್ ಷರೀಫ್, ವಿದೇಶಾಂಗ ಸಚಿವ ಇಶಾಖ್ ದರ್, ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಸಂಘರ್ಷ ಅಂತ್ಯಗೊಳಿಸುವ ನಿಟ್ಟಿನಲ್ಲಿ ಇರಾನ್ ಷರತ್ತುಗಳ ಪಟ್ಟಿ ಸಲ್ಲಿಸಿದರು. ''ನಮ್ಮ ಬೇಡಿಕೆಗಳಿಗೆ ಅಮೆರಿಕ ಸಮ್ಮತಿಸಿದರೆ ಮುಂದಿನ ಹಂತದ ಮಾತುಕತೆಗೆ ಸಿದ್ಧ. ಇಲ್ಲವಾದಲ್ಲಿ ನಮ್ಮ ದಾರಿ ನಮಗೆ,'' ಎಂದು ಕಠಿಣ ಸಂದೇಶ ನೀಡಿದ್ದಾರೆ.

ಐಆರ್‌ಜಿಸಿ ಹೊಸ ಬೇಡಿಕೆ: ವಿದೇಶಾಂಗ ಸಚಿವರು ಇಸ್ಲಾಮಾಬಾದ್‌ಗೆ ಭೇಟಿ ನೀಡಿದ ಹೊತ್ತಲ್ಲೇ ಇರಾನಿಯನ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಸಂಧಾನ ಮಾತುಕತೆಗೆ ಹೊಸ ಬೇಡಿಕೆ ಮಂಡಿಸಿದೆ. ಐಆರ್‌ಜಿಸಿ ಮುಖ್ಯಸ್ಥರಾಗಿ ನೇಮಕಗೊಂಡಿರುವ ಬ್ರಿಗೇಡಿಯರ್ ಜನರಲ್ ಅಹ್ಮದ್ ವಹೀದಿ ಅವರು ಸಂಧಾನ ಮಾತುಕತೆಗೆ ಹೊಸದಾಗಿ ಕಠಿಣ ಷರತ್ತು ಮುಂದಿಟ್ಟಿದ್ದಾರೆ.

ಇಸ್ಲಾಮಾಬಾದ್‌ನಲ್ಲಿ ಲಾಕ್‌ಡೌನ್: ಇರಾನ್-ಅಮೆರಿಕ ನಡುವಿನ 2ನೇ ಸುತ್ತಿನ ಸಂಧಾನ ಮಾತುಕತೆಗೆ ಸಜ್ಜಾಗಿರುವ ಇಸ್ಲಾಮಾಬಾದ್‌ನಲ್ಲಿ ಅಕ್ಷರಶಃ ಲಾಕ್‌ಡೌನ್ ಸ್ಥಿತಿ ನಿರ್ಮಾಣವಾಗಿದೆ. ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅವರು ಸ್ವಯಂ ಭದ್ರತೆ ಹೊಣೆ ಹೊತ್ತು ಕಾರ್ಯ ನಿರ್ವಹಿಸುತ್ತಿದ್ದಾರೆ.

ವಿದೇಶಿ ರಾಜತಾಂತ್ರಿಕ ಗಣ್ಯರ ಆಗಮನ ಹಿನ್ನೆಲೆಯಲ್ಲಿ ಇಸ್ಲಾಮಾಬಾದ್-ರಾವಲ್ಪಿಂಡಿಯಲ್ಲಿ ಕಂಡು ಕೇಳರಿಯದ ಭದ್ರತೆ ಕೈಗೊಳ್ಳಲಾಗಿದೆ. ಪೊಲೀಸರ ಜತೆ ರಕ್ಷಣಾ ಪಡೆಗಳನ್ನು ಭದ್ರತೆಗೆ ನಿಯೋಜನೆ ಮಾಡಲಾಗಿದೆ. ಇಸ್ಲಾಮಾಬಾದ್ ಏರ್‌ಪೋರ್ಟ್, ನೂರ್‌ಖಾನ್ ವಾಯುನೆಲೆ, ವಿದೇಶಿ ಅತಿಥಿಗಳು ವಾಸ್ತವ್ಯದ ಹೋಟೆಲ್, ಸಂಧಾನ ಮಾತುಕತೆ ನಡೆಯುವ ಹೋಟೆಲ್‌ಗಳ ಬಳಿ ಭಾರಿ ಬಿಗಿ ಭದ್ರತೆ ಕಲ್ಪಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಮುಖ್ಯ ರಸ್ತೆಗಳು, ಪ್ರಮುಖ ಕಟ್ಟಡಗಳು, ಗಣ್ಯರ ವಸತಿ ಸಮುಚ್ಚಯಗಳ ಬಳಿ ಹೈಅಲರ್ಟ್ ಘೋಷಣೆ ಮಾಡಲಾಗಿದೆ. ಚೆಕ್‌ಪೋಸ್ಟ್‌ಗಳಲ್ಲಿ ತೀವ್ರ ತಪಾಸಣೆ ನಡೆಸಲಾಗಿದೆ.

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-1,
ಮೊಬೈಲ್: 9448999424 WEB SITE: (http://www.schooleducation.kar.nic.in)

No:DPI-CPI0PLN1/IVA-TENDER/2026-27 Date:24/04/2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕರ್ನಾಟಕದಲ್ಲಿ 500 ಕೆ.ಪಿ.ಎಸ್ ಶಾಲೆಗಳನ್ನು ಏಷಿಯನ್ ಡೆವೆಲಪ್‌ಮೆಂಟ್ ಬ್ಯಾಂಕ್ ರವರ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದ್ದು, Independent Verification Agency ಯನ್ನು ಆಯ್ಕೆ ಮಾಡಲು ಅಲ್ಪಾವಧಿಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1	ಟೆಂಡರ್ ಉಲ್ಲೇಖ ಸಂಖ್ಯೆ	DPI/2026-27/SE0441
2	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡಲು ಪ್ರಾರಂಭ ದಿನಾಂಕ	24/04/2026 ರಿಂದ
3	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	30/04/2026 5:30 PM
4	ಪೂರ್ವ-ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ	30/04/2026 11:00 ಗಂಟೆಗೆ. ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯ ಸಭಾಂಗಣ, ಮೊದಲನೆಯ ಮಹಡಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ ಬೆಂಗಳೂರು-560001
5	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್‌ನಲ್ಲಿ ಇ-ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	11/05/2026 5:00 PM
6	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್‌ನಲ್ಲಿ ಇ-ಟೆಂಡರ್ ಅರ್ಜಿಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	12/05/2026 5:10 PM
7	ಇ-ಟೆಂಡರ್ ಅರ್ಜಿಗಳನ್ನು ತೆರೆಯುವ ಸ್ಥಳ	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್‌ನಲ್ಲಿ
8	ಪ್ರಾಜೆಕ್ಟ್ ವಿಧಾನದ ಪ್ರಸ್ತುತಿಪಡಿಸುವ ದಿನಾಂಕ ಮತ್ತು ಸಮಯ	15/05/2026 ರಂದು ಮಧ್ಯಾಹ್ನ 12:00 ಗಂಟೆಗೆ
9	ಸಂಪರ್ಕ ವಿಳಾಸ	ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಮೊದಲನೆಯ ಮಹಡಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ ಬೆಂಗಳೂರು-560001. ಇ-ಮೇಲ್ ವಿಳಾಸ: ddpiplanning@gmail.com, ದೂರವಾಣಿ: 080-22270072, 9448999424.

ಗಮನಿಸಿ 1) ಪೂರ್ಣಗೊಂಡ ಟೆಂಡರ್‌ಗಳನ್ನು ಟೆಂಡರುದಾರರು ತಮ್ಮ ಬಳಕೆದಾರ ಐಡಿ ಬಳಸಿ ಕೊನೆಯ ದಿನಾಂಕ ಮತ್ತು ಸಮಯದ ಒಳಗೆ ಇ-ಟೆಂಡರಿಂಗ್ ವ್ಯವಸ್ಥೆಯ ಮೂಲಕ ಅಪ್‌ಲೋಡ್ ಮಾಡಬೇಕು. 2) ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ನಿರ್ದಿಷ್ಟ ದಿನಾಂಕವು ಖರೀದಿದಾರರಿಗೆ ರಜಾ ದಿನವೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನದಂದು ತಾಂತ್ರಿಕ ಬಿಡ್/ಆರ್ಥಿಕ ಬಿಡ್ ತೆರೆಯಲಾಗುತ್ತದೆ. 3) ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (KPPP) ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಲಾದ ಪ್ರಶ್ನೆಗಳನ್ನಷ್ಟೇ ಸ್ವೀಕರಿಸಲಾಗುತ್ತದೆ. ಪತ್ರಗಳು, ಇಮೇಲ್‌ಗಳು ಅಥವಾ ಯಾವುದೇ ಇತರ ವಿಧಾನಗಳ ಮೂಲಕ ಕಳುಹಿಸಲಾದ ಪ್ರಶ್ನೆಗಳು ಪರಿಗಣಿಸಲಾಗುವುದಿಲ್ಲ.

ಸಹಿ/-
ಉಪ ನಿರ್ದೇಶಕರು(ಯೋಜನೆ)

ವಾಸಾಸಂಇ/ವಾಪ್ರ/ಜಿಎ/361/2026-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ-2,3,4,5/.ಟೆಂಡರ್.ಅಧಿಸೂಚನೆ/2026-27/268 ದಿನಾಂಕ: 22.04.2026

:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ (CMIDP) 20 ಕಾಮಗಾರಿಗಳು, ಕೆ.ಕೆ.ಆರ್.ಡಿ.ಬಿ. ಯೋಜನೆಯಡಿಯಲ್ಲಿ 11 ಕಾಮಾಗಾರಿಗಳು, ಎಸ್.ಎಫ್.ಸಿ ಯೋಜನೆಯಡಿಯಲ್ಲಿ 05, 5054 ಅಪೆಂಡಿಕ್ಸ ಇ ಯೋಜನೆಯಡಿಯಲ್ಲಿ 03, 5054 KRDCL BRIDGE ಯೋಜನೆಯಡಿಯಲ್ಲಿ 05 ಕಾಮಾಗಾರಿಗಳು, 2059 ನಿರ್ವಹಣೆ ಯೋಜನೆಯಡಿಯಲ್ಲಿ 01 ಕಾಮಾಗಾರಿ ಮತ್ತು MLC LAD ಯೋಜನೆಯಡಿಯಲ್ಲಿ 01 ಕಾಮಾಗಾರಿ ಒಟ್ಟು 48 ಕಾಮಗಾರಿಗಳಿಗೆ ಟೆಂಡರ ಆಹ್ವಾನಿಸಲಾಗಿದೆ ಇಂಡೆಂಟ್ ಸಂಖ್ಯೆ: 35777 (work Reserved for ST Category), 33928, 33929 (work Reserved for SC Category), 35541,35827 (work Reserved for 2A Category), 35004, 35005, 35006, 35544, 35816, 35693, 35817, 35797, 35770, 35815, 35692, 35691, 35808, 35807, 35628, 35629, 35733, 35740, 35763, 35845, 35831, 35833, 35796, 33840, 33841, 34035, 34379, 33942, 35762, 35630, 35087, 34451, 35759, 35764, 34446, 35467, 35529, 34406, 35765, 35678, 33484, 34954, SE0622. 2) ಕಾಮಗಾರಿ ಅಂದಾಜು ಮೊತ್ತ : **ಕನಿಷ್ಠ ರೂ. 10.00 ಲಕ್ಷಗಳು ಗರಿಷ್ಠ ರೂ. 800.00 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಇ ಎಮ್ ಡಿ ಮೊತ್ತ : ಕನಿಷ್ಠ ರೂ. 21,500.00 ಗರಿಷ್ಠ ರೂ. 10,17,000.00, 5) ಪ್ರೀ ಬಿಡ್ ಮೀಟಿಂಗ್ : **04.05.2026 (11.00 Hrs),** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **05.05.2026 (17.30 Hrs),** 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **06.05.2026 (16.00 Hrs),** 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **07.05.2026 (16.30 Hrs),** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **08.05.2026 (16.30 Hrs),** 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ. 11) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು. 12) ಅಂತರ್ಜಾಲ ತಾಣದ ವಿಳಾಸ : https://kppp.karnataka.gov.in, 13) ಗಮನಿಸಬೇಕಾದ ಅಂಶಗಳು : **ಟಿಪ್ಪಣಿ:** 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜನಿಯರರು,
ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/73/ಕೆ.ಎಸ್.ಎಂ.ಸಿ.&ಎ/2026-27

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಚಾಮರಾಜನಗರ ವಿಭಾಗ, ಚಾಮರಾಜನಗರ-571313
ದೂರವಾಣಿ /ಫ್ಯಾಕ್ಸ್ ಸಂಖ್ಯೆ: 08226-295048
ಇಮೇಲ್ : eccnr@kpwd.gov.in/pwdeechngr@gmail.com
ಸಂಖ್ಯೆ/ಕಾ.ಪಾ.ಅ/ಚಾ.ವಿ.ಚಾ/ಟೆಂಡರ್/2026-27 ದಿನಾಂಕ :23.04.2026

(ಎರಡು ಲಕೋಟೆ),
ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ 06/2025-26
ದಿನಾಂಕ 23.04.2026 (2ನೇ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು **KW-4** (ಸ್ಟಾಂಡರ್ ಟೆಂಡರ್ ಡಾಂಕುಮೆಂಟ್) ಹಾಗೂ **KTTP Act 1999 and KTTP rule 2000** ರಲ್ಲಿ (ಸಿವಿಲ್) ಗುತ್ತಿಗೆದಾರರುಗಳಿಂದ ಕೆ.ಪಿಪಿಪಿ, ಪೋರ್ಟಲ್ ಮೂಲಕ ಲೆ.ಶಿ: 8443 ಠೇವಣಿವಂತಿಕೆ ಅಡಿಯಲ್ಲಿ ಗರಿಷ್ಠ ಅಂದಾಜು ಮೊತ್ತ ರೂ 9000.00 ಲಕ್ಷಗಳ 1 ಕಾಮಗಾರಿಗೆ, ಟೆಂಡರ್ ಆಹ್ವಾನಿಸಲಾಗಿದೆ, ಆನ್‌ಲೈನ್‌ನಲ್ಲಿ ಡೌನ್ ಲೋಡ್ ಮಾಡಬಹುದಾದ ದಿನಾಂಕ 24.04.2026 ರಿಂದ 18.05.2026 ಸಂಜೆ 16.00 ಗಂಟೆವರೆಗೆ, ಟೆಂಡರ್ ಪೂರ್ವಭಾವಿ ಸಭೆ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿಯ ಸಭಾಂಗಣದಲ್ಲಿ ದಿನಾಂಕ 30.04.2026 ರಂದು ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ 18.05.2026 ಸಂಜೆ 16.00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 11.05.2026 ಸಂಜೆ 16.30 ಗಂಟೆಯ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 18.05.2026 ಬೆಳಿಗ್ಗೆ 11.00 ಗಂಟೆಗೆ ಹಾಗೂ ಇನ್ನೂ ಮುಂದೆ ಈ ನೋಟಿಫಿಕೇಷನ್‌ಗೆ ಸಂಬಂಧ ಪಟ್ಟ ಬದಲಾವಣೆಗಳನ್ನು ಕೆ.ಪಿಪಿಪಿ, ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿ / ವಿವರಗಳನ್ನು **https: // www. Kppp.karnataka. gov.in** ಜಾಲದಲ್ಲಿ ಹಾಗೂ ಕೆಳಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಪಡೆಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ವಿಭಾಗ ಚಾಮರಾಜನಗರ, ಚಾಮರಾಜನಗರ.
ಸಂ:ವಾಸಾಸಂಇ:ಚಾನಗರ:68:2026-27

ಚರ್ಚ್ ಸ್ಟ್ರೀಟ್‌ನಲ್ಲಿ 'ಡೋಂಟ್ ಸ್ಪಿಟ್' ಅಭಿಯಾನ ಪ್ರಯುಕ್ತ ಜಾಗೃತಿ ಮೂಡಿಸಲಾಯಿತು. ಪಾಲಿಕೆ ಮಾರ್ಷಲ್‌ಗಳು, ಸ್ವಯಂ ಸೇವಾ ಸಂಘದ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸರಕಾರಿ ಕೆಲಸದ ಆಮಿಷ: 1.83 ಕೋಟಿ ರೂಪಾಯಿ ವಂಚನೆ »12

₹1,950 ಕೋಟಿ ದುರ್ಬಳಕೆ

2023-24ರ ಲೆಕ್ಕ ಪರಿಶೋಧನಾ ವರದಿ: 1704.69 ಕೋಟಿ ರೂ. ಮೊತ್ತಕ್ಕೆ ಆಕ್ಷೇಪಣೆ ಸಲ್ಲಿಕೆ
ಅಧಿಕಾರಿಗಳ ಆಡಳಿತಾವಧಿಯಲ್ಲಿ ಪಾಲಿಕೆಯ ವಿವಿಧ ವಿಭಾಗಗಳಲ್ಲಿ ಭಾರಿ ಅಕ್ರಮ

■ **ನಾಗಪ್ಪ ನಾಗನಾಯಕಹಳ್ಳಿ** ಬೆಂಗಳೂರು
nagappa.narayanappa@timesofindia.com

ಬಿಬಿಎಂಪಿಯ (ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರ) 2023-24ನೇ ಸಾಲಿನ ಸಾಲಿನ ಹಣಕಾಸು ನಿರ್ವಹಣೆಯಲ್ಲಿ ಭಾರಿ ಅಕ್ರಮ ನಡೆದಿದ್ದು, 1950.82 ಕೋಟಿ ರೂ. ದುರ್ಬಳಕೆಯಾಗಿರುವುದು ಲೆಕ್ಕ ಪರಿಶೋಧನಾ ವರದಿಯಿಂದ ಬೆಳಕಿಗೆ ಬಂದಿದೆ.

ಪಾಲಿಕೆಯ 2022-23ನೇ ಸಾಲಿನ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ 376 ಪುಟಗಳ ಲೆಕ್ಕ ಪರಿಶೋಧನಾ ವರದಿ ಸಿದ್ಧಪಡಿಸಿದ್ದು, ಇದರಲ್ಲಿ ಸಾಮಾನ್ಯ ಆಡಳಿತ, ಕಾಮಗಾರಿ, ಕಂದಾಯ, ನಗರ ಯೋಜನೆ, ತೋಟಗಾರಿಕೆ, ಹಣಕಾಸು, ಅರಣ್ಯ, ಆರೋಗ್ಯ ಮತ್ತು ಶಿಕ್ಷಣ ವಿಭಾಗಗಳಲ್ಲಿ ನಡೆದಿರುವ ಅವ್ಯವಹಾರಗಳನ್ನು ಬಯಲು ಮಾಡಲಾಗಿದೆ. ಒಟ್ಟು 1950.82 ಕೋಟಿ ರೂ. ಅಕ್ರಮ ನಡೆದಿದ್ದು, ಈ ಪೈಕಿ 1704.69 ಕೋಟಿ ರೂ. ಮೊತ್ತಕ್ಕೆ ಆಕ್ಷೇಪಣೆ ಸಲ್ಲಿಸಲಾಗಿದೆ. 246.12 ಕೋಟಿ ರೂ.ಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಂದ ವಸೂಲು ಮಾಡುವಂತೆ ಶಿಫಾರಸು ಮಾಡಲಾಗಿದೆ.

ಈ ವಿಭಾಗಗಳಲ್ಲಿ ನಡೆದಿರುವ ಕಾನೂನುಬಾಹಿರ ಪಾವತಿ, ಅಧಿಕಾರಿ, ಸಿಬ್ಬಂದಿಯ ಬೇಜವಾಬ್ದಾರಿತನ ಹಾಗೂ ಕರ್ತವ್ಯ ನಿರ್ಲಕ್ಷ್ಯದಿಂದ ಉಂಟಾಗಿರುವ ಆರ್ಥಿಕ ನಷ್ಟ, ಇನ್ನಿತರೆ ನ್ಯೂನತೆಗಳ ಕುರಿತು ಅಂಕಿ-ಅಂಶಗಳ ಸಹಿತ ವಿವರಣಾತ್ಮಕ ಅಂಶಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಪಾಲಿಕೆಯಲ್ಲಿ ಚುನಾಯಿತ ಕೌನ್ಸಿಲರ್‌ಗಳ ಅಧಿಕಾರಾವಧಿ 2020ರ ಸೆ.10ಕ್ಕೆ ಅಂತ್ಯಗೊಂಡಿತು. ಆಗಿನಿಂದಲೂ ನಗರದಲ್ಲಿ ಅಧಿಕಾರಿಗಳೇ ಆಡಳಿತ ನಿರ್ವಹಿಸುತ್ತಿದ್ದಾರೆ. ಆದರೆ, ಭ್ರಷ್ಟಾಚಾರಕ್ಕೆ ಕಡಿವಾಣ ಬಿದ್ದಿಲ್ಲ.

ಕಾಮಗಾರಿಗಳ ಅನುಷ್ಠಾನ ಮತ್ತು ಸಾಮಗ್ರಿಗಳ ಖರೀದಿಯಲ್ಲಿ ಕೆಟಿಪಿಪಿ ಕಾಯಿದೆಯ ಉಲ್ಲಂಘನೆ, ಗುತ್ತಿಗೆದಾರರಿಗೆ ನಿಗದಿಗಿಂತ ಹೆಚ್ಚು ಮೊತ್ತ ಪಾವತಿ, ಕಡಿಮೆ ಒಎಫ್‌ಸಿ ಶುಲ್ಕ ಸಂಗ್ರಹ, ಕಾಮಗಾರಿ ಪೂರ್ಣಗೊಳಿಸದ ಗುತ್ತಿಗೆದಾರರ ಠೇವಣಿ ಮುಟ್ಟುಗೋಲು ಹಾಕಿಕೊಳ್ಳದಿರುವುದು, ಒಂದೇ ಕೆಲಸಕ್ಕೆ ಎರಡೆರಡು ಬಾರಿ ಬಿಲ್ ಪಾವತಿಯಿಂದ ಪಾಲಿಕೆಗೆ ಕೋಟ್ಯಂತರ ರೂ. ನಷ್ಟವಾಗಿರುವುದನ್ನು ಆಡಿಟ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

3171.95 ಕೋಟಿ; ಸಲ್ಲಿಕೆಯಾಗದ ದಾಖಲೆ: 2024ರ ಮಾ.31ರ ಅಂತ್ಯಕ್ಕೆ ಪಾಲಿಕೆಯ 300ಕ್ಕೂ ಅಧಿಕ ಬ್ಯಾಂಕ್ ಖಾತೆಗಳಲ್ಲಿ 3171.95 ಕೋಟಿ ರೂ. ಬ್ಯಾಲೆನ್ಸ್ ಇರುವುದಾಗಿ ವಾರ್ಷಿಕ ಲೆಕ್ಕಪತ್ರಗಳಲ್ಲಿ ನಮೂದಿಸಲಾಗಿದೆ. ಆದರೆ, ಬ್ಯಾಂಕ್ ಖಾತೆಗಳು ಯಾವುವು, ಯಾವ ಯಾವ ಬ್ಯಾಂಕ್‌ಗಳಲ್ಲಿ ಎಷ್ಟೆಷ್ಟು ಮೊತ್ತವಿದೆ, ವರ್ಷಾಂತ್ಯಕ್ಕೆ ಈ ಮೊತ್ತವನ್ನು ದೃಢೀಕರಿಸುವ ಬಗ್ಗೆ ಸಂಬಂಧಿಸಿದ ಬ್ಯಾಂಕ್‌ನಿಂದ ಪಡೆದ ದೃಢೀಕೃತ ಪ್ರತಿಯು ಲೆಕ್ಕ ಪರಿಶೋಧನೆಗೆ ಲಭ್ಯವಾಗಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಬ್ಯಾಲೆನ್ಸ್ ಶೀಟ್ ಪರಿಶೀಲಿಸಿದಾಗ 2024ರ ಮಾ.31ರ ಅಂತ್ಯಕ್ಕೆ 2,374.38 ಕೋಟಿ ರೂ. ಚಾಲ್ತಿ ಹೊಣೆಗಾರಿಕೆ ತೋರಿಸಲಾಗಿದೆ. ಇದರಲ್ಲಿ 747.50 ಕೋಟಿ ರೂ.ಗಳನ್ನು ಪಾವತಿಸಬೇಕಾದ ಉಪಕರ (ಸೆಸ್) ಎಂದು ಹೇಳಲಾಗಿದೆ.

ಇಲಾಖಾವಾರು ಆಕ್ಷೇಪಣೆ, ವಸೂಲಾತಿ ಮೊತ್ತದ ವಿವರ

ಇಲಾಖೆ	ಆಕ್ಷೇಪಣೆ ಮೊತ್ತ (ಕೋಟಿ ರೂ.ಗಳಲ್ಲಿ)	ವಸೂಲಾತಿ ಮೊತ್ತ
ಕಾಮಗಾರಿ	459.55	32.76
ಹಣಕಾಸು	1004.28	62.27
ಕಂದಾಯ	22.39	84.98
ನಗರ ಯೋಜನೆ	140.20	10.13
ಆರೋಗ್ಯ	31.08	3.51
ಶಿಕ್ಷಣ	551.15 ಲಕ್ಷ	24 ಸಾವಿರ
ಕಲ್ಯಾಣ	39.22	3.79 ಲಕ್ಷ
ಅರಣ್ಯ	31 ಸಾವಿರ	--
ತೋಟಗಾರಿಕೆ	9.46 ಲಕ್ಷ	13.61 ಲಕ್ಷ
ಸಾಮಾನ್ಯ	7.29	52.27
ಒಟ್ಟು	1704.69	246.12

ವಸೂಲಾಗದ 4245.05 ಕೋಟಿ ರೂ.

1964-65 ರಿಂದ 2023-24ನೇ ಸಾಲಿನವರೆಗಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಬಾಕಿ ಉಳಿದಿರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ 2024-25ನೇ ಸಾಲಿನಲ್ಲಿ ತೀರುವಳಿಗೆ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ. ಹೀಗಾಗಿ, ಈವರೆಗೆ ಒಟ್ಟು 14,653.62 ಕೋಟಿ ರೂ. ಆಕ್ಷೇಪಣೆ ಮೊತ್ತ ಮತ್ತು 4245.02 ಕೋಟಿ ರೂ. ವಸೂಲಾತಿಯು ತೀರುವಳಿಯಾಗದೆ ಬಾಕಿ ಉಳಿದಿದೆ ಎಂದು ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಿಸಲಾಗಿದೆ. ಲೆಕ್ಕ ಪರಿಶೋಧನಾ ವರದಿಗಳಲ್ಲಿ ಪ್ರಸ್ತಾಪಿಸಿರುವ ಬಾಕಿ ಕಂಡಿಕೆಗಳಲ್ಲಿನ ನ್ಯೂನತೆ, ವಸೂಲಾತಿಗಳ ಬಗ್ಗೆ ಸಕಾಲದಲ್ಲಿ ಕ್ರಮ ಜರುಗಿಸದ ಕಾರಣ, ಕರ್ತವ್ಯಲೋಪವೆಸಗಿದ ಅಧಿಕಾರಿ, ಸಿಬ್ಬಂದಿಯು ನಿವೃತ್ತಿ ಅಥವಾ ಮರಣ ಹೊಂದಿದರೆ ಬಾಕಿ ವಸೂಲಿ ಸಾಧ್ಯವಾಗುವುದಿಲ್ಲ. ಆದ ಕಾರಣ, ಬಾಕಿ ವಸೂಲಾತಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ ಎಂದು ಶಿಫಾರಸು ಮಾಡಲಾಗಿದೆ.

ಲೆಕ್ಕಪತ್ರ ನಿರ್ವಹಣೆಯಲ್ಲಿ ಲೋಪ

ಬಿಬಿಎಂಪಿ ಕಾಯಿದೆ ಅನ್ವಯ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿಲ್ಲ. ಆದಾಯ ಮತ್ತು ವೆಚ್ಚಗಳ ಸ್ವೀಕೃತಿ, ಪಾವತಿ ಲೆಕ್ಕಗಳು, ನಗದು ಹರಿವನ್ನು ಬ್ಯಾಂಕ್ ಲೆಕ್ಕಗಳೊಂದಿಗೆ ಸಮನ್ವಯ ಮಾಡದ ಕಾರಣ, ಇವು ತಾಳೆಯಾಗಿಲ್ಲ. ಆಯವ್ಯಯ ಅಂದಾಜುಗಳು ಅವಾಸ್ತವಿಕವಾಗಿವೆ. ಪಾವತಿಗಳಲ್ಲಿ ಹಣಕಾಸಿನ ನಿಯಮಗಳನ್ನು ಪಾಲನೆ ಮಾಡಿರುವುದಿಲ್ಲ. ನಗದು ಪುಸ್ತಕವನ್ನು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿಲ್ಲ. ಸಂಬಂಧಪಟ್ಟ ವಿಭಾಗದ ಅಧಿಕಾರಿ, ಸಿಬ್ಬಂದಿಗಳು ಹಾಜರಿರದೆ ಅಸಹಕಾರ ಮನೋಭಾವ ತೋರಿದರು. ನಿಗದಿತ ಅವಧಿಯಲ್ಲಿ ದಾಖಲೆಗಳನ್ನು ಒದಗಿಸದೆ ವಿಳಂಬಧೋರಣೆ ಅನುಸರಿಸಿದರು. ವಾರ್ಷಿಕ ಲೆಕ್ಕಪತ್ರಗಳನ್ನು ನಿಗದಿತ ಅವಧಿಯಲ್ಲಿ ಸಿದ್ಧಪಡಿಸಿ, ಲೆಕ್ಕ ಪರಿಶೋಧನೆಗೆ ಸಲ್ಲಿಸಿಲ್ಲ. ನಿಯಮಾನುಸಾರ ಲೆಕ್ಕಪತ್ರಗಳ ಲೆಕ್ಕ ಸಮನ್ವಯ ಕೈಗೊಂಡಿಲ್ಲ ಎಂದು ಬೊಟ್ಟು ಮಾಡಲಾಗಿದೆ.

ಆದರೆ, ಮುಖ್ಯ ಲೆಕ್ಕ ಪರಿಶೋಧಕರು 2022-23ನೇ ಸಾಲಿಗೆ ಬಾಕಿ ಉಳಿದ ಉಪಕರದ ಮೊತ್ತ 2444.86 ಕೋಟಿ ರೂ. ಎಂದು ವರದಿ ಮಾಡಿದ್ದಾರೆ. ವಾರ್ಷಿಕ ಲೆಕ್ಕಪತ್ರಗಳ ವರದಿಯಲ್ಲಿ ಮತ್ತು ಲೆಕ್ಕ ಪರಿಶೋಧನಾ ವರದಿಯಲ್ಲಿನ ವ್ಯತ್ಯಾಸವನ್ನು ಪರಿಹರಿಸುವ ಸಂಬಂಧ ಸೂಕ್ತ ದಾಖಲೆಗಳನ್ನು ಸಲ್ಲಿಸಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಇಂದು ರುಮಟಾಲಜಿ ಜಾಗೃತಿ ಜಾಥಾ

ಬೆಂಗಳೂರು: ಭಾರತೀಯ ರುಮಟಾಲಜಿ ವೈದ್ಯರ ಸಂಘದಿಂದ ಭಾನುವಾರ (ಏ.26ರ) ಲಾಲ್‌ಬಾಗ್‌ನ ಪಶ್ಚಿಮ ದ್ವಾರದ ಬಳಿ ರುಮಟಾಲಜಿ ಜಾಗೃತಿ ವಾಕಥಾನ್ ನಡೆಯಲಿದೆ. ಬೆಳಗ್ಗೆ 7 ರಿಂದ 9 ಗಂಟೆವರೆಗೆ ನಡೆಯಲಿರುವ ಜಾಥಾದಲ್ಲಿ ಸುಮಾರು 250 ಕ್ಕೂ ಅಧಿಕ ಮಂದಿ ಭಾಗವಹಿಸಲಿದ್ದಾರೆ. ಜಾಥಾದಲ್ಲಿ 50 ರುಮಟಾಲಜಿಸ್ಟ್‌ಗಳು ಪಾಲ್ಗೊಳ್ಳಲಿದ್ದಾರೆ. ಸಂಧಿವಾತ, ಬೆನ್ನುನೋವು ಹಾಗೂ ಸಂಧಿಗಳ ಊತ ಇತ್ಯಾದಿ ಸಮಸ್ಯೆ ಬಗ್ಗೆ ಜಾಗೃತಿ ಮೂಡಿಸಲಾಗುವುದು ಎಂದು ಸಂಘದ ಕಾರ್ಯದರ್ಶಿ ಡಾ. ವಿಕ್ರಮರಾಜ್ ಕೆ.ಜೈನ್ ತಿಳಿಸಿದ್ದಾರೆ.

ಬೆಂಗಳೂರಿನಿಂದ ಐಆರ್‌ಸಿಟಿಸಿ ವಿಮಾನ ಪ್ರವಾಸ ಪ್ಯಾಕೇಜ್

ಬೆಂಗಳೂರು: ಭಾರತೀಯ ರೈಲ್ವೆ ಕ್ಯಾಟರಿಂಗ್ ಮತ್ತು ಪ್ರವಾಸೋದ್ಯಮ ನಿಗಮವು (ಐಆರ್‌ಸಿಟಿಸಿ) ಪ್ರಯಾಣಿಕರ ಅನುಕೂಲತೆ ಮತ್ತು ಸೌಲಭ್ಯವನ್ನು ದೃಷ್ಟಿಯಲ್ಲಿರಿಸಿಕೊಂಡು ಬೆಂಗಳೂರಿನಿಂದ ವಿಮಾನ ಪ್ರವಾಸ ಪ್ಯಾಕೇಜ್‌ಗಳನ್ನು ಘೋಷಿಸಿದೆ.

ಶ್ರೀಲಂಕಾ ರಾಮಾಯಣ ಯಾತ್ರೆ: ಇದು ಮೇ 14ರಿಂದ ಆರಂಭವಾಗುತ್ತದೆ. ಇದು 5 ರಾತ್ರಿ /ಇದುವ 6 ದಿನಗಳ ಪ್ರವಾಸವಾಗಿರುತ್ತದೆ. ಕೊಲಂಬೊ, ಕ್ಯಾಂಡಿ ಸೇರಿದಂತೆ ಹಲವು ಸಾಂಸ್ಕೃತಿಕ ತಾಣಗಳಿಗೆ ಕರೆದೊಯ್ಯಲಾಗುತ್ತದೆ. ಪ್ಯಾಕೇಜ್ ಬೆಲೆ ಪ್ರತಿ ವ್ಯಕ್ತಿಗೆ 63 ಸಾವಿರ ರೂ. ನಿಂದ ಆರಂಭವಾಗುತ್ತದೆ.

ಚಾರ್‌ಧಾಮ್ ಯಾತ್ರೆ: ಈ ಯಾತ್ರೆಯು ಬೆಂಗಳೂರಿನಿಂದ ಜೂನ್ 2ರಿಂದ ಆರಂಭವಾಗುತ್ತದೆ. 12 ರಾತ್ರಿ/13 ದಿನಗಳ ಧಾರ್ಮಿಕ ಪ್ರವಾಸ. ಹರಿದ್ವಾರ, ಯಮುನೋತ್ರಿ, ಗಂಗೋತ್ರಿ, ಕೇದಾರನಾಥ, ಬದರಿನಾಥ ಸೇರಿದಂತೆ ಹಲವು ಸ್ಥಳಗಳನ್ನು ಒಳಗೊಂಡಿದೆ. ಪ್ರತಿಯೊಬ್ಬರಿಗೆ ಪ್ಯಾಕೇಜ್ ಶುಲ್ಕ 65,900 ರೂ. ಆಗಿರುತ್ತದೆ.

ಮ್ಯಾಗ್ನಿಫಿಸೆಂಟ್ ಲಡಾಖ್: ಇದು ಸಹ ಬೆಂಗಳೂರಿನಿಂದ ಆರಂಭವಾಗುವ ಯಾತ್ರೆಯಾಗಿದ್ದು, ಜೂನ್ 24 ಹಾಗೂ ಆಗಸ್ಟ್ 12ರಿಂದ ಆರಂಭವಾಗುತ್ತದೆ. ಇದು 6 ರಾತ್ರಿ/7 ದಿನಗಳ ಪ್ರವಾಸವಾಗಿರುತ್ತದೆ. ಪ್ರತಿ ವ್ಯಕ್ತಿಗೆ ಪ್ಯಾಕೇಜ್ ಶುಲ್ಕ 49 ಸಾವಿರ ರೂ. ಆಗಿರುತ್ತದೆ. ಹೆಚ್ಚಿನ ಮಾಹಿತಿಗೆ 8595931292/8595931291 ಸಂಪರ್ಕಿಸಬಹುದು.

ಸಿಇಟಿ ಅರ್ಜಿ ತಿದ್ದುಪಡಿಗೆ ಮೇ 3ರವರೆಗೆ ಅವಕಾಶ

ಬೆಂಗಳೂರು: 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಹಲವು ಅಭ್ಯರ್ಥಿಗಳಿಗೆ ಅರ್ಜಿಯಲ್ಲಿನ ಸಣ್ಣಪುಟ್ಟ ದೋಷಗಳನ್ನು ಸರಿಪಡಿಸಿಕೊಳ್ಳಲು ಮೇ 3ರವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ವ್ಯಾಸಂಗದ ವಿವರ, ಮೀಸಲು, ಇತರ ಕ್ಲೈಮ್ ದಾಖಲಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಇದೇ ಕೊನೆ ಅವಕಾಶವಾಗಿದ್ದು, ಮತ್ತೊಮ್ಮೆ ತಿದ್ದುಪಡಿಗೆ ಅವಕಾಶ ನೀಡುವುದಿಲ್ಲ, ಕೊನೆಯ ದಿನದ ಬಳಿಕ ತಿದ್ದುಪಡಿಗೆ ಅವಕಾಶ ಇರುವುದಿಲ್ಲ ಎಂದು ಕೆಇಎ ತಿಳಿಸಿದೆ.

ವಾಸವಿ ಜಯಂತಿ ಮಹೋತ್ಸವ ಇಂದು

ಬೆಂಗಳೂರು: ಕೋದಂಡರಾಮ ಸ್ವಾಮಿ ವಾಸವಿ ಸಂಘವು ಏ. 26ರ ಭಾನುವಾರ ಜಯನಗರ 2ನೇ ಬ್ಲಾಕ್‌ನ 9ನೇ ಮುಖ್ಯರಸ್ತೆಯಲ್ಲಿರುವ ಕೋದಂಡರಾಮಸ್ವಾಮಿ ದೇವಸ್ಥಾನದಲ್ಲಿ 'ವಾಸವಿ ಜಯಂತಿ ಮಹೋತ್ಸವ' ಆಯೋಜಿಸಿದೆ. ಪಾರ್ವತಿ ಸ್ವರೂಪ

ಪಂಚಭೂತಗಳನ್ನೊಳಗೊಂಡ ವಿರಾಟ್ ಸ್ವರೂಪದ ಅಲಂಕಾರ ಗಮನಸೆಳೆಯಲಿದೆ. ಆರ್ಯ ವೈಶ್ಯ ಜನರ ಕುಲದೇವರಾದ ವಾಸವಿ ಜಯಂತಿ ಅಂಗವಾಗಿ ಅಂದು ಬೆಳಗ್ಗೆ 5.45ಕ್ಕೆ ಮೆರವಣಿಗೆ ಮೂಲಕ ಗಂಗೆ ತರುವುದು, 6.30ಕ್ಕೆ ಗಂಗಾಪೂಜೆ, 9.15ಕ್ಕೆ ವಾಸವಾಂಬಾ ಪೂಜಾ, 10 ಗಂಟೆಗೆ ವಾಸವಿ ಹೋಮ, ಲಕ್ಷ ಕುಂಕುಮಾರ್ಚನೆ ಮತ್ತು ಕನ್ಯಾ ಪೂಜೆ, 11 ಗಂಟೆಗೆ ಅಷ್ಟಾವಧಾನ ಸೇವೆ, 11.30ಕ್ಕೆ ಆರತಿ ಸ್ಪರ್ಧೆ, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ ಮತ್ತು ಮಹಾಮಂಗಳಾರತಿ, 12.45ಕ್ಕೆ ಅಷ್ಟಾವಧಾನಿ ಆರತಿ, 1 ಗಂಟೆಗೆ ಲಕ್ಕಿಡಿಪ್ ಮೂಲಕ 25 ಭಕ್ತರಿಗೆ ವಿಶೇಷ ಉಡುಗೊರೆ, ಸಂಜೆ 4.30ಕ್ಕೆ ಭಜನೆ, 5.45ಕ್ಕೆ ರಥೋತ್ಸವ, 7.30ಕ್ಕೆ ವಾಸವಾಂಬ ಪಲ್ಲಕ್ಕಿ ಉತ್ಸವ, ರಾತ್ರಿ 8 ಗಂಟೆಗೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ನೆರವೇರಲಿದೆ ಎಂದು ಖಜಾಂಚಿ ಎಲ್.ನಾಗರಾಜ ಶೆಟ್ಟಿ ತಿಳಿಸಿದ್ದಾರೆ.

ಉಪನಗರ ರೈಲು ಯೋಜನೆಯಲ್ಲಿ ಉತ್ತಮ ಪ್ರಗತಿ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆ ಕಾಮಗಾರಿಯ ಪ್ರಗತಿ ಉತ್ತಮವಾಗಿದ್ದು ಕಳೆದ ಕೆಲ ತಿಂಗಳಲ್ಲಿ ವಿವರವಾದ ಮೇಲ್ವಿಚಾರಣಾ ಪ್ರಕ್ರಿಯೆ ನಡೆದಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಬಿಇಎಂಎಲ್‌ನಲ್ಲಿ ನಿರ್ಮಿಸಲಾಗುವ 'ಆದಿತ್ಯ ಹೈಸ್ಪೀಡ್ ಬುಲೆಟ್ ರೈಲು ಬಿ28 ಬೋಗಿ ಉತ್ಪಾದನಾ ಕೇಂದ್ರ'ವನ್ನು ಉದ್ಘಾಟಿಸಿದ ಅವರು ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. "ಬಿಎಸ್‌ಆರ್‌ಪಿ ಕೆಲಸಗಳು ಪ್ರಗತಿಯಲ್ಲಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿ, ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದು ರೈಲ್ವೆ ತಾಂತ್ರಿಕ ಕಾರ್ಯವಾಗಿದ್ದರಿಂದ, ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿಗೆ (ಕೆ-ರೈಡ್) ತಾಂತ್ರಿಕ ಪರಿಣತರನ್ನು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಲು ಕೇಳಿದ್ದೆವು. ಅದರಂತೆ ರಾಜ್ಯ ಸರ್ಕಾರ ಸಮ್ಮತಿಸಿ ಇದೀಗ ಲಕ್ಷ್ಮಣ್ ಸಿಂಗ್ ಅವರನ್ನು ಎಂಡಿಯಾಗಿ ನೇಮಿಸಿದೆ," ಎಂದು ಹೇಳಿದರು.

ದಕ್ಷಿಣ ನಗರ ಪಾಲಿಕೆ ಕಚೇರಿಯಲ್ಲಿ ಸಮಾಲೋಚನಾ ಸಭೆ | ಕಾಲೇಜು ವಿದ್ಯಾರ್ಥಿಗಳಿಗೆ ಪಾಲಿಕೆಯಲ್ಲಿ ಇಂಟರ್ನ್‌ಶಿಪ್‌ಗೆ ಅವಕಾಶ

ಮೂಲಸೌಕರ್ಯ ವೃದ್ಧಿಗೆ ತಜ್ಞರ ಸಮಿತಿ ರಚನೆ

■ ವಿಕ ಸುದ್ದಿಲೋಕ ಬೆಂಗಳೂರು

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಸೌಕರ್ಯ ವೃದ್ಧಿಗೆ ಹಾಗೂ ನಾಗರಿಕ ಜೀವನ ಮಟ್ಟ ಸುಧಾರಣೆ ಸಂಬಂಧ ತಜ್ಞರ ಸಮಿತಿ ರಚಿಸಲಾಗುವುದು ಎಂದು ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

ಜಯನಗರ ವಲಯ ಕಚೇರಿಯಲ್ಲಿ ಶನಿವಾರ ಹಲವು ತಜ್ಞರೊಂದಿಗೆ ವಿಶೇಷ ಸಮಾಲೋಚನಾ ಸಭೆ ನಡೆಸಿ ಮಾತನಾಡಿದ ಅವರು, "ನಗರದ ಸುಸ್ಥಿರ ಬೆಳವಣಿಗೆಗಾಗಿ ಕೇವಲ ಪಾಲಿಕೆಯ ಸಿಬ್ಬಂದಿ ಮೇಲೆ ಅವಲಂಬಿತರಾಗದೆ, ತಜ್ಞರು ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಒತ್ತು ನೀಡಲಾಗುವುದು. ತಜ್ಞರ ಸಲಹೆ ಪರಿಶೀಲಿಸಿ ಬಜೆಟ್ ಮತ್ತು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು. ಈ ಸಮಿತಿಯು ನಿರಂತರವಾಗಿ ಕಾರ್ಯನಿರ್ವಹಿಸಲಿದ್ದು, ಅಗತ್ಯವಿದ್ದಲ್ಲಿ ಸದಸ್ಯರ ಸಂಖ್ಯೆ ಹೆಚ್ಚಿಸಲಾಗುವುದು," ಎಂದು ಹೇಳಿದರು.

"ನಗರ ವಿನ್ಯಾಸ, ಯೋಜನೆ ಮತ್ತು ಆರೋಗ್ಯ ಸೇವೆಗಳಂತಹ ವಿಷಯಗಳಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಪಾಲಿಕೆಯಲ್ಲಿ ಇಂಟರ್ನ್‌ಶಿಪ್ ಅವಕಾಶ ಕಲ್ಪಿಸಿ, ಅವರ ಹೊಸ ಆಲೋಚನೆಗಳನ್ನು ಬಳಸಿಕೊಳ್ಳಲಾಗುವುದು. ತಜ್ಞರು ಮತ್ತು ಪಾಲಿಕೆ ನಡುವೆ ನಿರಂತರ ಸಂವಹನ ಕಾಯ್ದುಕೊಳ್ಳಲು ಇ-ಮೇಲ್ ಮತ್ತು ವಿಡಿಯೊ ಕಾನ್ಫರೆನ್ಸ್‌ಗಳ ಮೂಲಕ ನಿಯಮಿತ ಸಮಾಲೋಚನೆ ನಡೆಸಲಾಗುವುದು," ಎಂದರು.

ಜಯನಗರ ವಲಯ ಕಚೇರಿಯಲ್ಲಿ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ತಜ್ಞರೊಂದಿಗೆ ವಿಶೇಷ ಸಮಾಲೋಚನಾ ಸಭೆ ನಡೆಸಿದರು.

ದಿನಕ್ಕೆ 2 ಬಾರಿ ಕಸ ಸಂಗ್ರಹ

ದಿನಕ್ಕೆ 2-3 ಬಾರಿ ಕಸ ಸಂಗ್ರಹಿಸುವುದು ಮತ್ತು 'ಕಸ ಕಿಯೋಸ್ಕ್'ಗಳನ್ನು ಸ್ಥಾಪಿಸುವುದು, ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ಕಡ್ಡಾಯವಾಗಿ ತಮ್ಮದೇ ಆದ ಸಂಸ್ಕರಣಾ ವ್ಯವಸ್ಥೆ ಹೊಂದಬೇಕು ಎಂದು ತಜ್ಞರು ಸಲಹೆ ನೀಡಿದರು.

ಮಾಹಿತಿ ತಂತ್ರಜ್ಞಾನ ತಜ್ಞ ಪಾರ್ಥಸಾರಥಿ, ನಗರ ವಿನ್ಯಾಸ ಮತ್ತು ಸಂಚಾರ ತಜ್ಞ ಅಶ್ವಿನ್ ಮಹೇಶ್, ಘನತ್ಯಾಜ್ಯ ನಿರ್ವಹಣಾ ತಜ್ಞೆ ಪದ್ಮಶ್ರೀ, ಎಚ್‌ಎಸ್‌ಆರ್ ಬಡಾವಣೆ ನಾಗರಿಕ ವೇದಿಕೆಯ ಡಾ.ಶಾಂತಿ, ನಗರ ವಿನ್ಯಾಸ ಮತ್ತು ವಾಸ್ತುಶಿಲ್ಪ ತಜ್ಞ ಪ್ರಸನ್ನ ರಾವ್, ಪಾಲಿಕೆಯ ಹೆಚ್ಚುವರಿ ಆಯುಕ್ತ ನವೀನ್ ಕುಮಾರ್ ರಾಜು, ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ಸಭೆಯಲ್ಲಿದ್ದರು.

ಸಮಸ್ಯೆಗಳಿಗೆ ತಜ್ಞರು ಸೂಚಿಸಿದ ಪರಿಹಾರಗಳು: ರಚನಾತ್ಮಕ ಕಾರ್ಯವಿಧಾನ: ನಗರ ನಿರ್ವಹಣೆಗೆ ವ್ಯವಸ್ಥಿತವಾದ ಪ್ರಕ್ರಿಯೆ ಮತ್ತು ದಕ್ಷ ಸಂವಹನ ವ್ಯವಸ್ಥೆ ರೂಪಿಸುವುದು.

ದತ್ತಾಂಶ ಆಧಾರಿತ ಯೋಜನೆ: ರಸ್ತೆಗಳು, ಕೆರೆಗಳು, ಉದ್ಯಾನಗಳು, ಒಳಚರಂಡಿ ಮತ್ತು ವಾಣಿಜ್ಯ ಮಳಿಗೆಗಳ ಸಮಗ್ರ ದತ್ತಾಂಶ (Data) ವ್ಯವಸ್ಥೆ ಅಭಿವೃದ್ಧಿಪಡಿಸುವುದು.

ತ್ಯಾಜ್ಯ ನಿರ್ವಹಣಾ ಸವಾಲುಗಳು: ಮಳೆಗಾಲದ ದೃಷ್ಟಿಯಿಂದ ಸಮರ್ಪಕ ಮೇಲ್ವಿಚಾರಣಾ ವ್ಯವಸ್ಥೆ ಜಾರಿಗೆ ತರುವುದು.

ಆಂತರಿಕ ಅಧ್ಯಯನ ಮತ್ತು ಮಾನವ ಸಂಪನ್ಮೂಲ: ಸಮಸ್ಯೆಗಳ ಮೂಲ ಕಂಡುಕೊಳ್ಳಲು ನಿಯಮಿತ ಆಂತರಿಕ ಅಧ್ಯಯನ ನಡೆಸುವುದು. ನಿರ್ವಹಣಾ ಕಾರ್ಯಗಳಿಗೆ ಅಗತ್ಯ ಮಾನವ ಸಂಪನ್ಮೂಲ ನಿಯೋಜಿಸುವುದು.

ಪಾಲಿಕೆ ಬಜೆಟ್: ಪ್ರತಿ ಪೈಸೆ ಜನಹಿತಕ್ಕಾಗಿ ಬಳಸಲು ತೀರ್ಮಾನ

ಬೆಂಗಳೂರು: ಬೆಂಗಳೂರು ಉತ್ತರ ನಗರ ಪಾಲಿಕೆಯ 2026-27ನೇ ಸಾಲಿನ 4,344 ಕೋಟಿ ರೂ. ವೆಚ್ಚದ ಬಜೆಟ್‌ಗೆ ಸರ್ಕಾರದ ಅನುಮೋದನೆ ದೊರೆತಿದೆ. ಪಾಲಿಕೆಗೆ ಹಂಚಿಕೆಯಾಗಿರುವ ಪ್ರತಿಯೊಂದು ಪೈಸೆಯನ್ನೂ ಜನಹಿತಕ್ಕಾಗಿ ಪರಿಣಾಮಕಾರಿಯಾಗಿ ಬಳಸಬೇಕು ಎಂದು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ಬಜೆಟ್‌ನ 4,344 ಕೋಟಿ ರೂ. ಅನುದಾನದ ವೆಚ್ಚಕ್ಕೆ ಕ್ರಿಯಾಯೋಜನೆ ಸಿದ್ಧಪಡಿಸುವ ಸಂಬಂಧ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಬಜೆಟ್ ಟು ಆಕ್ಷನ್ ಪ್ಲಾನ್' ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

"ಪಾಲಿಕೆಯ ಎಂಜಿನಿಯರ್‌ಗಳು ಹಾಗೂ ಅಧಿಕಾರಿಗಳೊಂದಿಗೆ ಸಾರ್ವಜನಿಕರೂ ಸಕ್ರಿಯವಾಗಿ ಪಾಲ್ಗೊಂಡು ಯೋಜನೆಗಳನ್ನು ರೂಪಿಸಬೇಕು. ಇದರಿಂದ ಉತ್ತಮ ಯೋಜನೆಗಳು ರೂಪುಗೊಂಡು, ಅವುಗಳನ್ನು ವಾಸ್ತವವಾಗಿ ಕಾರ್ಯಗತಗೊಳಿಸಲು ಸಾಧ್ಯವಾಗುತ್ತದೆ," ಎಂದು ಹೇಳಿದರು.

"ಉತ್ತರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳು ಗುಲಾಬಿ ಮತ್ತು ನೀಲಿ ಮೆಟ್ರೋ ಮಾರ್ಗಗಳ ಮೂಲಕ ಉತ್ತಮ ಸಂಪರ್ಕ ಪಡೆಯಲಿವೆ. ಒಟ್ಟು 18 ಮೆಟ್ರೋ ನಿಲ್ದಾಣಗಳು ನಿರ್ಮಾಣವಾಗಲಿವೆ. ಈ ಹಿನ್ನೆಲೆಯಲ್ಲಿ ಪಾದಚಾರಿ ಮಾರ್ಗ, ಸೈಕ್ಲಿಂಗ್, ಬಸ್ ಹಾಗೂ ಮೆಟ್ರೊ ಸಂಪರ್ಕ ಜಾಲವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕಿದೆ," ಎಂದರು.

"ಬಜೆಟ್ ಅನುದಾನದಲ್ಲಿ ರಸ್ತೆ ಸಂಪರ್ಕ ಮತ್ತು ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು. ಸಾಮಾಜಿಕ ಸಂಸ್ಥೆ ಹಾಗೂ ಕಾರಿಡಾರ್‌ಗಳ ಸುತ್ತ ಮೊದಲ ಮತ್ತು ಕೊನೆ ಮೈಲಿ ಸಂಪರ್ಕವನ್ನು ಬಲಪಡಿಸಲಾಗುತ್ತದೆ. ಉದ್ಯಾನಗಳ ಅಭಿವೃದ್ಧಿ, ಹಸಿರೀಕರಣಕ್ಕೆ ಒತ್ತು ನೀಡಲಾಗುವುದು. ಪ್ರವಾಹ ನಿರ್ವಹಣೆ, ಮಳೆ ನೀರಿನ ವ್ಯವಸ್ಥೆಗಳ ಸುಧಾರಣೆ, ಕೆರೆಗಳು, ನೈಸರ್ಗಿಕ ನೀರಿನ ವ್ಯವಸ್ಥೆಗಳನ್ನು ಬಲಪಡಿಸಲಾಗುವುದು," ಎಂದು ಹೇಳಿದರು.

ಕಾರ್ಯಾಗಾರದಲ್ಲಿ ನಾನಾ ಇಲಾಖೆಗಳ ಅಧಿಕಾರಿಗಳು, ತಜ್ಞರು, ಎನ್‌ಜಿಒ ಪ್ರತಿನಿಧಿಗಳು ಭಾಗವಹಿಸಿ, ಬಜೆಟ್‌ನಲ್ಲಿ ಘೋಷಿಸಲಾದ ಯೋಜನೆಗಳನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರಲು ಅಗತ್ಯವಿರುವ ಕ್ರಿಯಾಯೋಜನೆಗಳನ್ನು ಸಿದ್ಧಪಡಿಸುವ ಕುರಿತು ಚರ್ಚಿಸಿದರು.

ಪರಂಪರೆಯಲ್ಲಿದ್ದುಕೊಂಡೇ ವಿಶಾಲ ದೃಷ್ಟಿಕೋನ ಬೆಳೆಸಿಕೊಳ್ಳಿ

■ ವಿಕ ಸುದ್ದಿಲೋಕ ಬೆಂಗಳೂರು

ಯುವಜನರು ತಮ್ಮ ಪರಂಪರೆಯಲ್ಲಿ ನೆಲೆಸುವ ಜತೆಜತೆಗೆ ವಿಶಾಲ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು ಎಂದು ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ ತಿಳಿಸಿದರು.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಆಶ್ರಯದಲ್ಲಿ ದಿ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ನಡೆದ BIMSTEC ಯುವ ನಾಯಕತ್ವ ವಿನಿಮಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

"ನಮ್ಮ ಸಂಸ್ಕೃತಿ, ಸಂಪ್ರದಾಯ ಮತ್ತು ಭಾಷೆಗಳಲ್ಲಿನ ವೈವಿಧ್ಯತೆ ಪ್ರತಿಯೊಬ್ಬರನ್ನೂ ಸುಂದರವನ್ನಾಗಿಸಿದೆ. ಎಲ್ಲರೂ ನಿಮ್ಮ ಮೂಲಗಳನ್ನು ಗೌರವಿಸಿ, ಅದರೊಳಗೆ ಆಳವಾಗಿ ಹೋಗಬೇಕು. ಜತೆಗೆ, ನಿಮ್ಮ ದೃಷ್ಟಿಕೋನವನ್ನು ವಿಸ್ತರಿಸಿ, ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಿ," ಎಂದು ಕಿವಿಮಾತು ಹೇಳಿದರು.

ಕೇಂದ್ರ ಸರಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ BIMSTEC ಮತ್ತು ಸಾರ್ಕ್ ವಿಭಾಗದ ಜಂಟಿ ಕಾರ್ಯದರ್ಶಿ ಸಿಎಸ್‌ಆರ್ ರಾಮ್ ಮಾತನಾಡಿ, "ಯುವ ನಾಯಕರನ್ನು ಒಂದಾಗಿಸಿ, ಆಲೋಚನೆಗಳನ್ನು ಹಂಚಿಕೊಳ್ಳಲು ಮತ್ತು ಸವಾಲುಗಳನ್ನು ಅರ್ಥ ಮಾಡಿಕೊಂಡು ಪರಿಹಾರಗಳಿಗೆ ಸಹಕರಿಸಲು ಈ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ. ಯುವ ನಾಯಕರು ಒಗ್ಗೂಡಿ ಪ್ರದೇಶದ ಅಭಿವೃದ್ಧಿ, ಸಮೃದ್ಧಿ ಹಾಗೂ ಆಂತರಿಕ ಮತ್ತು ಬಾಹ್ಯ ಶಾಂತಿಯನ್ನು ಕಂಡುಕೊಳ್ಳುವ ದೃಷ್ಟಿಕೋನದೊಂದಿಗೆ ನಾವು ಆರ್ಟ್ ಆಫ್ ಲಿವಿಂಗ್ ಜತೆಗೆ ಕೆಲಸ ಮಾಡುತ್ತಿದ್ದೇವೆ," ಎಂದರು.

ಕೇರಳದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪಿ. ವಿಜಯನ್ ಮಾತನಾಡಿ, "ನಾಯಕರಲ್ಲಿ ಎರಡು ವಿಧದ ಜನರಿರುತ್ತಾರೆ. ಸಮಸ್ಯೆ ಸೃಷ್ಟಿಸುವವರು ಮತ್ತು ಪರಿಹಾರ ನೀಡುವವರು. ಪರಿಹಾರಕ್ಕೆ ಕೊಡುಗೆ ನೀಡುವವರು ನಾಯಕರು," ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾರತ, ನೇಪಾಳ, ಭೂತಾನ್, ಶ್ರೀಲಂಕಾ, ಮ್ಯಾನ್ಮಾರ್, ಬಾಂಗ್ಲಾದೇಶ ಮತ್ತು ಥೈಲೆಂಡ್‌ನ ನಾಯಕರು ಭಾಗವಹಿಸಿದ್ದರು.

ಏ.26, 27ರಂದು ನೇಮಕಾತಿ ಪರೀಕ್ಷೆ

ಬೆಂಗಳೂರು: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಬೆಂಗಳೂರು ಜಲಮಂಡಳಿಯಲ್ಲಿ ಖಾಲಿ ಇರುವ ಸಹಾಯಕ ಎಂಜಿನಿಯರ್, ವ್ಯವಸ್ಥಾಪಕರು ಮತ್ತು ಸಹಾಯಕ ವ್ಯವಸ್ಥಾಪಕರ ಹುದ್ದೆಗಳಿಗೆ ಏ.26 ಮತ್ತು 27ರಂದು ಲಿಖಿತ ಪರೀಕ್ಷೆ ನಡೆಯಲಿದ್ದು ಇದಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬಿಗಿ ಕ್ರಮಗಳನ್ನು ಕೈಗೊಂಡಿದೆ.

ಉಳಿಕೆ ಮೂಲ ವೃಂದದ ಅಭ್ಯರ್ಥಿಗಳಿಗೆ ಏ.26ರಂದು ಬೆಂಗಳೂರಿನ 11 ಮತ್ತು ಕಲಬುರಗಿಯ ಮೂರು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಕಲ್ಯಾಣ ಕರ್ನಾಟಕ ವೃಂದದ ಅಭ್ಯರ್ಥಿ ಗಳಿಗೆ ಏ.27ರಂದು ಕಲಬುರಗಿಯ ಮೂರು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ವೆಬ್‌ಕ್ಯಾಸ್ಟಿಂಗ್ ಮೂಲಕ ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿನ ಚಲನವಲನಗಳ ಮೇಲೆ ಬೆಂಗಳೂರಿನ ಕೆಇಎ ಕಚೇರಿಯಲ್ಲಿ ಸ್ಥಾಪಿಸಿರುವ ಕಮಾಂಡ್ ಸೆಂಟರ್‌ನಿಂದಲೇ ನಿಗಾ ವಹಿಸಲಾಗುವುದು. ಅಕ್ರಮಗಳಿಗೆ ಅವಕಾಶ ಇಲ್ಲದಂತೆ ಪಾರದರ್ಶಕವಾಗಿ ಪರೀಕ್ಷೆ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಸತೀಶ್ ಕಡತನಮಲೆ ವಿರುದ್ಧ ಎಫ್‌ಐಆರ್

■ ವಿಕ ಸುದ್ದಿಲೋಕ ಬೆಂಗಳೂರು

ಸಹಕಾರ ಸಂಘಗಳ ಕಾಯಿದೆಯ ನಿಯಮಗಳ ಉಲ್ಲಂಘನೆ ಹಿನ್ನೆಲೆಯಲ್ಲಿ ಕಡತನಮಲೆ ಹಾಲು ಉತ್ಪಾದಕರ ಸಂಘದ ನಿರ್ದೇಶಕ ಸ್ಥಾನದಿಂದ ಕೆ.ಆರ್.ಸತೀಶ್ ಕಡತನಮಲೆ ಅವರನ್ನು ಅನ'ರ್ಹಗೊಳಿಸ'ಲಾಗಿದೆ. ಇದರಿಂದ ಬಮೂಲ್ ನಿರ್ದೇಶಕ ಸ್ಥಾನದಿಂದಲೂ ಅನರ್ಹಗೊಳ್ಳುವ ಸಾಧ್ಯತೆ ಇದೆ.

ನಿರ್ದೇಶಕ ಸ್ಥಾನದಿಂದ ಅನರ್ಹಗೊಳಿಸಿ ಆದೇಶಿಸಿರುವ ಸಹಕಾರ ಸಂಘಗಳ ಸಹಾಯಕ ನಿಬಂಧಕ ಆರ್.ಪ್ರಕಾಶ್ ರಾವ್ ಹಾಗೂ ಇತರ ಸಿಬ್ಬಂದಿ ಮೇಲೆ ಸತೀಶ್ ಕಡತನಮಲೆ ಹಲ್ಲೆ ನಡೆಸಿ, ಬೆದರಿಕೆಯೊಡ್ಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಈ ಕುರಿತು ವಿಡಿಯೊ ಸಮೇತ ಪ್ರಕಾಶ್ ರಾವ್ ನೀಡಿದ ದೂರಿನ ಅನ್ವಯ ಸತೀಶ್ ವಿರುದ್ಧ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

'ಕಡತನಮಲೆ ಹಾಲು ಉತ್ಪಾದಕರ ಸಂಘದ ಸದಸ್ಯ ಸ್ವಾಕ್ಕೆ ಅಯ್ಕೆಯಾಗುವ ಮುನ್ನ ಕನಿಷ್ಠ ಮಾನದಂಡಗಳನ್ನು ಪೂರೈಸದೆ ಸುಳ್ಳು ಮಾಹಿತಿ ನೀಡಿ ಸದಸ್ಯತ್ವ ಪಡೆದಿದ್ದಾರೆ. ಜತೆಗೆ, ನಿರ್ದೇಶಕರಾಗಿಯೂ ಆಯ್ಕೆಯಾಗಿದ್ದಾರೆ' ಎಂದು ಸತೀಶ್ ಗೌಡ ಎಂಬುವವರು ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ದೂರು ನೀಡಿದ್ದರು.

ಅದರಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ದಾಖಲೆಗಳ ಪರಿಶೀಲನೆ ನಡೆಸಿದ್ದರು. ಇದರಿಂದ ಸತೀಶ್ ಕಡತನಮಲೆ ಅವರು ಸಹಕಾರ ಸಂಘಗಳ ಕಾಯಿದೆ ನಿಯಮಗಳ ಉಲ್ಲಂಘನೆ ಮಾಡಿರುವುದು ಸಾಬೀತಾಗಿತ್ತು. ಹೀಗಾಗಿ, ಅವರನ್ನು ನಿರ್ದೇಶಕ ಸ್ಥಾನದಿಂದ ಶುಕ್ರವಾರ ಅನರ್ಹಗೊಳಿಸಿ ಪ್ರಕಾಶ್ ರಾವ್ ಆದೇಶ ಹೊರಡಿಸಿದ್ದರು. 'ನಿರ್ದೇಶಕ ಸ್ಥಾನದಿಂದ ಅನರ್ಹಗೊಳಿಸಿದ ವಿಚಾರ ತಿಳಿದು ಕಚೇರಿಗೆ ಭೇಟಿ ನೀಡಿದ್ದ ಸತೀಶ್ ಗಲಾಟೆ ನಡೆಸಿ, ಹಲ್ಲೆ ನಡೆಸಿದ್ದಾರೆ. ಜೀವ ಬೆದರಿಕೆ ಒಡ್ಡಿದ್ದಾರೆ. ಜತೆಗೆ ಹಲ್ಲೆ ನಡೆಸಿ ಜಾತಿ ನಿಂದನೆ ಮಾಡಿದ್ದಾರೆ. ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ' ಎಂದು ಆರೋಪಿಸಿ ಪ್ರಕಾಶ್ ರಾವ್ ದೂರಿದ್ದರು.

ಕಾನೂನು ಪ್ರಾಧ್ಯಾಪಕರನ್ನು ಪರಿಗಣಿಸಿ

■ ವಿಕ ಸುದ್ದಿಲೋಕ ಬೆಂಗಳೂರು

ಕಾನೂನು ವಿಷಯ ಬೋಧಿಸುವ ಪ್ರಾಧ್ಯಾಪಕರನ್ನು ನ್ಯಾಯಶಾಸ್ತ್ರಜ್ಞರನ್ನಾಗಿ ಗುರುತಿಸಿ, ಅವರನ್ನು ನ್ಯಾಯಾಂಗದ ನೇಮಕಾತಿಗಳಲ್ಲಿ ಪರಿಗಣಿಸಬೇಕು ಎಂದು ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಡಾ.ವಿ.ಗೋಪಾಲಗೌಡ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾನ್ಫೆಡರೇಷನ್ ಆಫ್ ಲಾ ಟೀಚರ್ಸ್, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನ್ಯಾಷನಲ್ ಯೂನಿವರ್ಸಿಟಿ ಆಫ್ ಅಡ್ವಾನ್ಸ್ಡ್ ಲೀಗಲ್ ಸ್ಟಡೀಸ್ ಹಾಗೂ ರಾಮಯ್ಯ ಕಾನೂನು ಮಹಾವಿದ್ಯಾಲಯದ ಸಹಯೋಗದಲ್ಲಿ ನಡೆದ 'ಕಾನೂನು ಮತ್ತು ತಂತ್ರಜ್ಞಾನದ ಸಮನ್ವಯ: ಕಾನೂನು ಶಿಕ್ಷಣ, ವೃತ್ತಿ ಮತ್ತು ನ್ಯಾಯ ವಿತರಣೆಯ ಮೇಲೆ ಪರಿಣಾಮ' ಕುರಿತ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾನೂನು ಶಿಕ್ಷಣ, ಶಾಸನ ಪ್ರಕ್ರಿಯೆಗಳು ಮತ್ತು ನ್ಯಾಯಾಂಗ ಕ್ಷೇತ್ರಗಳಲ್ಲಿ ಎದುರಾಗುವ ಸವಾಲುಗಳನ್ನು ಪರಿಹರಿಸಲು ತಂತ್ರಜ್ಞಾನದ ಮಹತ್ವದ ಬಗ್ಗೆ ವಿವರಿಸಿದ ಅವರು, "ಕೃತಕ ಬುದ್ಧಿಮತ್ತೆ (ಎಐ) ಸೇರಿದಂತೆ ಇತರೆ ಸಾಧನಗಳ ಮೇಲಿನ ಅತಿಯಾದ ಅವಲಂಬನೆ ಅಪಾಯ ತಂದೊಡ್ಡಬಹುದು" ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಾ. ಸಿ.ಬಸವರಾಜು ಮಾತನಾಡಿ, "ಕೃತಕ ಬುದ್ಧಿಮತ್ತೆ (ಎಐ) ಕಾನೂನು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬಹುದಾದರೂ, ಅದು ಮಾನವ ಬುದ್ಧಿಮತ್ತೆ ಮತ್ತು ತೀರ್ಮಾನ ಸಾಮರ್ಥ್ಯವನ್ನು ಬದಲಾಯಿಸಲಾರದು. ಹಾಗಾಗಿ, ಅದು ಕೇವಲ ಪೂರಕ ಸಾಧನವಾಗಿರಬೇಕು" ಎಂದು ಅಭಿಪ್ರಾಯಪಟ್ಟರು.

ವೆಸ್ಟ್ ಬೆಂಗಳೂರು ನ್ಯಾಯಾಂಗ ಅಕಾಡೆಮಿಯ ಮಾಜಿ ಅಧ್ಯಕ್ಷ ಪ್ರೊ. ಬಿ.ಟಿ.ಕೌಲ್, ಕೊಚ್ಚಿಯ ನ್ಯಾಷನಲ್ ಯೂನಿವರ್ಸಿಟಿ ಆಫ್ ಅಡ್ವಾನ್ಸ್ಡ್ ಲೀಗಲ್ ಸ್ಟಡೀಸ್‌ನ ಕುಲಪತಿ ಪ್ರೊ. ಜಿ.ಬಿ.ರೆಡ್ಡಿ, ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ವಿಭಾಗದ ಡೀನ್ ಪ್ರೊ. ಡಾ. ಎನ್.ಸತೀಶ್ ಗೌಡ, ರಾಮಯ್ಯ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲ ಪ್ರೊ. ಉಮಾಮಹೇಶ್ ಸಕ್ಲಾನಾರಾಯಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹಕ್ಕಿ ಜ್ವರ ನಿಯಂತ್ರಣ ಯಶಸ್ವಿ

ಬೆಂಗಳೂರು: ಹೆಸರಘಟ್ಟದ ಮಜ್ಜೂರು ಗ್ರಾಮದ ರಾಜ್ಯ ಕೋಳಿ ಸಾಕಾಣಿಕೆ ತರಬೇತಿ ಕೇಂದ್ರದಲ್ಲಿ ಪತ್ತೆಯಾದ ಎಚ್5ಎನ್1 ಹಕ್ಕಿಜ್ವರ ನಿಯಂತ್ರಿಸಲಾಗಿದ್ದು, ಮನುಷ್ಯರಿಗೆ ಹರಡಿಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಏ.14ರಂದು ಕೋಳಿಗಳಲ್ಲಿ ಹಕ್ಕಿಜ್ವರ ಕಾಣಿಸಿತ್ತು. ಸೋಂಕಿತ ಪ್ರದೇಶದ 10 ಕಿ.ಮೀ ವ್ಯಾಪ್ತಿಯಲ್ಲಿನ 22 ಗ್ರಾಮಗಳ 28172 ಮಂದಿಗೆ 10 ದಿನಗಳ ಕಾಲ ನಿರಂತರವಾಗಿ ಆರೋಗ್ಯ ತಪಾಸಣೆ ಮಾಡಲಾಗಿತ್ತು. ಇಲ್ಲಿ ಹಕ್ಕಿಜ್ವರ ಹರಡಿರುವುದಾಗಿ ರಾಷ್ಟ್ರೀಯ ಉನ್ನತ ಭದ್ರತಾ ಪಶು ರೋಗಗಳ ಸಂಸ್ಥೆ (ಎನ್ ಐಎಚ್‌ಎಸ್‌ಎಡಿ-ಭೋಪಾಲ್) ದೃಢ ಪಡಿಸಿತ್ತು. ಹೀಗಾಗಿ 7444 ಕೋಳಿ, 14,788 ಮೊಟ್ಟೆ, 2250 ಕೆ.ಜಿ ಫೌಲ್ಟಿ ಆಹಾರವನ್ನು ನಾಶಪಡಿಸಲಾಗಿತ್ತು. ಜತೆಗೆ ಪಶುಪಾಲನಾ ಇಲಾಖೆಯು ನೈರ್ಮಲ್ಯೀಕರಣ ಪ್ರಮಾಣ ಪತ್ರ ನೀಡಿದೆ. 3 ತಿಂಗಳು ಕೋಳಿ ಸಾಕಾಣಿಕೆ ಮಾಡದಿರಲು ಹಾಗೂ 15 ದಿನಗಳಿಗೊಮ್ಮೆ ಔಷಧ ಸಿಂಪಡಣೆ ಮಾಡಲು ಸೂಚಿಸಲಾಗಿದೆ.

ಪಾಲಿಕೆ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ಎಸ್. ಉದಯ್ ಕುಮಾರ್ ಅವರ 51ನೇ ಹುಟ್ಟುಹಬ್ಬವನ್ನು ವರ್ತೂರಿನ ಸರಕಾರಿ ಮೈದಾನದಲ್ಲಿ ಅಭಿಮಾನಿಗಳು ಸಂಭ್ರಮದಿಂದ ಆಚರಿಸಿದರು. ರಕ್ತದಾನ ಶಿಬಿರ, ಅಶಕ್ತರು ಹಾಗೂ ಬಡವರಿಗೆ ನೆರವು ವಿತರಣೆ ಸೇರಿ ನಾನಾ ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸಿದರು. ಕೆಪಿಸಿಸಿ ಸದಸ್ಯ ಜಯರಾಂ ರೆಡ್ಡಿ, ಕೃಷ್ಣಾರೆಡ್ಡಿ, ಎಂಸಿಬಿ ರವಿ, ಗುಂಜೂರು ರಾಮಕೃಷ್ಣಪ್ಪ, ನಲ್ಲೂರಹಳ್ಳಿ ಟಿ.ನಾಗೇಶ್, ವಿ.ಟಿ.ಬಿ ಬಾಬುರೆಡ್ಡಿ, ಅನಿಲ್ ರೆಡ್ಡಿ, ಕುಪ್ಪಿ ಮಂಜುನಾಥ್, ಮಧುರನಗರ ನಾಗೇಶ್ ಉಪಸ್ಥಿತರಿದ್ದರು.

ಕಾಲೇಜು ಶಿಕ್ಷಣ ಇಲಾಖೆ ಅಧಿಕಾರಿ ವಿರುದ್ಧ ಆರೋಪ

ಸರಕಾರಿ ಕೆಲಸದ ಆಮಿಷ: ₹1.83 ಕೋಟಿ ವಂಚನೆ

■ ವಿಕ ಸುದ್ದಿಲೋಕ ಬೆಂಗಳೂರು

ಸರಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ ಉದ್ಯೋಗಾಕಾಂಕ್ಷಿಗಳಿಂದ 1.83 ಕೋಟಿ ರೂ. ಪಡೆದು ವಂಚಿಸಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಈ ಕುರಿತು ಆರ್‌ಎಂವಿ ಬಡಾವಣೆಯ ಎಸ್.ಸುರೇಂದ್ರನಾಥ್ ರಾವ್ ಮಿಡ್ಡಾಕರ್ ಎಂಬುವವರು ಸಿಸಿಬಿ ಪೊಲೀಸರಿಗೆ ದೂರು ನೀಡಿದ್ದಾರೆ. ಅದರಂತೆ ಕಾಲೇಜು ಶಿಕ್ಷಣ ಇಲಾಖೆ ಅಧಿಕಾರಿ ಡಾ. ವೈ.ರಮೇಶ್ ಹಾಗೂ ಮಧ್ಯವರ್ತಿಗಳಾದ ರಾಘವೇಂದ್ರ, ಬಿ. ಎಸ್.ಧ್ರುವಕುಮಾರ್ ಎಂಬುವವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಸುರೇಂದ್ರನಾಥ್ ಅವರಿಗೆ 2019ರಲ್ಲಿ ಸ್ನೇಹಿತರ ಮೂಲಕ ರಮೇಶ್ ಪರಿಚಿತರಾಗಿದ್ದಾರೆ. ಈ ವೇಳೆ ರಮೇಶ್, 'ತಾನು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಜತೆಗೆ ಸರಕಾರಿ ಕಾಲೇಜು ಶಿಕ್ಷಕರ ಸಂಘದ ಉಪಾಧ್ಯಕ್ಷನಾಗಿದ್ದೇನೆ. ಶಿಕ್ಷಣ ಇಲಾಖೆ ಸೇರಿದಂತೆ ಸರಕಾರದ ನಾನಾ ಇಲಾಖೆಗಳಲ್ಲಿ ಗ್ರೂಪ್ 'ಬಿ', 'ಡಿ' ದರ್ಜೆಯ ಉದ್ಯೋಗ ಕೊಡಿಸುತ್ತೇನೆ' ಎಂದು ಹೇಳಿದ್ದರು.

ರಮೇಶ್ ಅವರ ಮಾತು ನಂಬಿದ್ದ ಸುರೇಂದ್ರನಾಥ್, ತಮ್ಮ ಪರಿಚಯಸ್ಥರು ಹಾಗೂ ಸಂಬಂಧಿಕರ ಮಕ್ಕಳಿಗೆ ವಿಚಾರ ತಿಳಿಸಿದ್ದರು. ಅವರಲ್ಲಿ ಒಟ್ಟು 57 ಉದ್ಯೋಗಾಕಾಂಕ್ಷಿಗಳು 2019-2023ರ ನಡುವಿನ ಅವಧಿಯಲ್ಲಿ ರಮೇಶ್ ಹಾಗೂ ಮಧ್ಯವರ್ತಿಯಾದ ರಾಘವೇಂದ್ರ ಅವರಿಗೆ 1,83,40,000 ರೂ.ಗಳನ್ನು ನೀಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

"ಉದ್ಯೋಗ ಕೊಡಿಸುವುದಾಗಿ ನಂಬಿಸಿ ಹಣ ಪಡೆದ ನಂತರ ರಮೇಶ್, ಯಾರೊಬ್ಬರಿಗೂ ಕೆಲಸ ಕೊಡಿಸಿಲ್ಲ. ಹಣವನ್ನೂ ವಾಪಸ್ ಕೊಡುತ್ತಿಲ್ಲ. ರಮೇಶ್ ಹಾಗೂ ರಾಘವೇಂದ್ರ ಪರಸ್ಪರರ ಜೊತ್ತು ಮಾಡುತ್ತಾ ಕಾಲ ದೂಡುತ್ತಿದ್ದಾರೆ. ಧ್ರುವಕುಮಾರ್ ಕೂಡ 29 ಲಕ್ಷ ರೂ. ಪಡೆದು ಮೋಸ ಮಾಡಿದ್ದಾರೆ ಎಂದು ಸುರೇಂದ್ರನಾಥ್ ದೂರಿನಲ್ಲಿ ಆರೋಪಿಸಿದ್ದಾರೆ" ಎಂದು ಪೊಲೀಸರು ಹೇಳಿದರು.

ಈರುಳ್ಳಿ ವ್ಯಾಪಾರಿ ಕೊಲೆ: ಬಂಧನ

ಬೆಂಗಳೂರು: ಈರುಳ್ಳಿ ವ್ಯಾಪಾರಿಯೊಬ್ಬರ ತಲೆ ಮೇಲೆ ಸಿಮೆಂಟ್ ಇಟ್ಟಿಗೆ ಎತ್ತಿ ಹಾಕಿ ಕೊಲೆ ಮಾಡಿದ್ದ ಆರೋಪಿ ಹರೀಶ್ ಎಂಬಾತನನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಮಚಂದ್ರ ರೆಡ್ಡಿ

ಕಾಡುಗೋಡಿಯ ಪಟಾಲಮ್ಮ ದೇವಾಲಯದ ಮುಂದೆ ಮಲಗಿದ್ದ ರಾಮಚಂದ್ರ ರೆಡ್ಡಿ(48) ಎಂಬುವವರ ತಲೆ ಮೇಲೆ ಹರೀಶ್, ಶುಕ್ರವಾರ ತಡರಾತ್ರಿ ಹಾಲೋಬ್ರಿಕ್ ಎತ್ತಿ ಹಾಕಿ ಕೊಲೆಗೈದು ಪರಾರಿಯಾಗಿದ್ದ.

ಹರೀಶ್

ಕಡುಬಾಡಿನ ಹೊಸೂರು ಮೂಲದ ರಾಮಚಂದ್ರ ರೆಡ್ಡಿ ಈರುಳ್ಳಿ ವ್ಯಾಪಾರ ಮಾಡುತ್ತಿದ್ದರು. ವ್ಯಾಪಾರದ ಸಂದರ್ಭದಲ್ಲಿ ಪಟಾಲಮ್ಮ ಲೇಔಟ್‌ನ ಮಂಜುಳಾ ಎಂಬುವವರ ಪರಿಚಯವಾಗಿತ್ತು. ಇಬ್ಬರ ನಡುವೆಯೂ ಅನ್ಯೋನ್ಯ ಸಂಬಂಧವಿತ್ತು. ರಾಮಚಂದ್ರ ರೆಡ್ಡಿ, ಮಹಿಳೆಯ ಮನೆಗೆ ಬಂದು ಹೋಗುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಮಂಜುಳಾ ಅವರು ಹರೀಶ್ ಅವರಿಗೂ ಆಪ್ತರಾಗಿದ್ದರು. ಹೀಗಾಗಿ, ರಾಮಚಂದ್ರ ರೆಡ್ಡಿ ಹಾಗೂ ಹರೀಶ್ ನಡುವೆ ಹಲವು ಸಲ ಗಲಾಟೆ ನಡೆದಿತ್ತು. ಶುಕ್ರವಾರವೂ ಮಹಿಳೆಯ ಮನೆಗೆ ಬಂದಿದ್ದ ರಾಮಚಂದ್ರ ರೆಡ್ಡಿ, ತಡರಾತ್ರಿ ಪಟಾಲಮ್ಮ ದೇವಾಲಯದ ಬಳಿ ಹೋಗಿ ಮಲಗಿದ್ದರು. ಇದನ್ನು ಗಮನಿಸಿದ್ದ ಹರೀಶ್, ಅಲ್ಲಿನ ತೆರಳಿ ಹಾಲೋಬ್ರಿಕ್ ಎತ್ತಿ ಹಾಕಿ ಕೊಲೆಗೈದು ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಜನಗಣತಿ ಕಾರ್ಯಕ್ಕೆ ಅಡ್ಡಿ: ವ್ಯಕ್ತಿ ವಿರುದ್ಧ ಕೇಸ್

ಬೆಂಗಳೂರು: ರಾಷ್ಟ್ರೀಯ ಜನಗಣತಿ-2027ರ ಕಾರ್ಯಕ್ಕೆ ತೆರಳಿದ್ದ ಗಣತಿದಾರರ ಕರ್ತವ್ಯಕ್ಕೆ ಅಡ್ಡಿಪಡಿಸಿ, ಅವಾಚ್ಯ ಪದಗಳಿಂದ ನಿಂದಿಸಿದ ಪೇಲ ಮೊನಾರ್ಕ್ ಅಪಾರ್ಟ್‌ಮೆಂಟ್‌ನ ನಿವಾಸಿಯೊಬ್ಬರ ವಿರುದ್ಧ ಆರ್.ಟಿ.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಸಂಬಂಧ ಜನಗಣತಿಯ ಮೇಲ್ವಿಚಾರಣಾ ಅಧಿಕಾರಿ ಡಾ. ಲೋಕೇಶ್ ಅವರು ಆರ್.ಟಿ.ನಗರ ಠಾಣೆಗೆ ದೂರು ನೀಡಿದ್ದರು. ಅದರಂತೆ ಪೊಲೀಸರು ಸುಲ್ತಾನ್‌ಪಾಳ್ಯ ಮುಖ್ಯರಸ್ತೆಯಲ್ಲಿನ ಅಪಾರ್ಟ್‌ಮೆಂಟ್ ನಿವಾಸಿಯೊಬ್ಬರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಗಣತಿದಾರರಾಗಿರುವ ವೀಣಾ ಎಂಬ ಸಿಬ್ಬಂದಿಯು ಏ.20ರಂದು ಜನಗಣತಿ ಕಾರ್ಯಕ್ಕೆ ಪೇಲ ಮೊನಾರ್ಕ್ ಅಪಾರ್ಟ್‌ಮೆಂಟ್‌ಗೆ ತೆರಳಿದ್ದರು. ಈ ವೇಳೆ ನಿವಾಸಿಯೊಬ್ಬರು ಮಾಹಿತಿ ನೀಡಲು ನಿರಾಕರಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು. ಅಲ್ಲದೇ ಏ.25ರಂದು

ಮೇಲ್ವಿಚಾರಕ ಆರ್.ರಶ್ಮಿ ಅವರೊಂದಿಗೆ ಅನುಚಿತವಾಗಿ ವರ್ತಿಸಿದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ತಿಳಿಸಿದ್ದಾರೆ. ಜನಗಣತಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಡ್ಡಿಪಡಿಸುವುದು ಅಪರಾಧವಾಗಿದೆ. ಈ ರೀತಿಯ ಕೃತ್ಯಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಎಲ್ಲಿ-ಏನು? ಭಾನುವಾರ

ಲಯನ್ಸ್ ಇಂಟರ್‌ನ್ಯಾಷನಲ್ ಜಿಲ್ಲಾ 317ಎ: 50ನೇ ಸುವರ್ಣ ಮಹೋತ್ಸವ ಹಾಗೂ ಜಿಲ್ಲಾ ಸಮಾವೇಶ-2026 ಕಾರ್ಯಕ್ರಮ. ಅಧ್ಯಕ್ಷತೆ: ಜಿಲ್ಲಾ ಗವರ್ನರ್ ಡಾ. ಜಿ.ಮೋಹನ್. **ಸ್ಥಳ:** ಬಂಟ್ಸ್ ಸಂಘದ ಸಭಾಂಗಣ, ವಿಜಯನಗರ. ಬೆಳಗ್ಗೆ 9

ಕಲಾಕಂದಿರ ಕಲಾಮಂದಿರ ಟ್ರಸ್ಟ್: ಡಾ.ರಾಜ್‌ಕುಮಾರ್ ಹುಟ್ಟುಹಬ್ಬ ಪ್ರಯುಕ್ತ ಉಪನ್ಯಾಸ, ಕವಿಗೋಷ್ಠಿ, ಉಚಿತ ಕರೋಕೆ ಗಾಯನ, ರಂಗ ಗೀತೆ ಹಾಗೂ ರಸಪ್ರಶ್ನೆ ಕಾರ್ಯಕ್ರಮ. ಅಧ್ಯಕ್ಷತೆ: ಪ್ರಕಾಶಕ ಎಸ್.ಶ್ರೀನಿವಾಸ ಗುಪ್ತ, ಅತಿಥಿ: ಸಾಹಿತಿ ಎ.ಆರ್.ಎ.ಪಾರ್ಥಸಾರಥಿ. **ಸ್ಥಳ:** ಚೈತ್ರದ ಗಾನಲಹರಿ ಆಡಿಟೋರಿಯಂ, 1ನೇ ಅಡ್ಡರಸ್ತೆ, ರಿಂಗ್ ರೋಡ್, ಸ್ವಾತಂತ್ರ್ಯ ಯೋಧರ ನಗರ, ಲಗ್ಗೆರೆ ಬ್ರಿಡ್ಜ್ ಹತ್ತಿರ. ಬೆಳಗ್ಗೆ 9.30

ಶ್ರಾವಣಿ ಪ್ರಶಾಂತ್ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ. ಅತಿಥಿ: ಕೇಶವ ಕಾಲೇಜ್ ಆಫ್ ಡ್ಯಾನ್ಸ್ ಆಂಡ್ ಮ್ಯೂಸಿಕ್‌ನ ಪ್ರಾಂಶುಪಾಲ ಎಸ್.

ರಘುನಂದನ್, ದೇವಗಿರಿ ವೆಂಕಟೇಶ್ವರ ವಿದ್ಯಾಪೀಠದ ಕಾರ್ಯದರ್ಶಿ ಜಿ.ಎನ್.ಮದನ್. **ಸ್ಥಳ:** ಎಡಿಎ ರಂಗಮಂದಿರ, ಜೆ.ಸಿ.ರಸ್ತೆ. ಬೆಳಗ್ಗೆ 10

ಅಂಕಿತ ಪುಸ್ತಕ: ಬರಗೂರು ರಾಮಚಂದ್ರಪ್ಪ ಅವರ 'ಶ್ರೀಷ್ಠತೆಯ ಸೊಕ್ಕು' ಲೇಖನಗಳ ಸಂಕಲನ ಬಿಡುಗಡೆ ಸಮಾರಂಭ. ಪುಸ್ತಕ ಬಿಡುಗಡೆ: ಸಾಹಿತಿ ಬಾನು ಮುಷ್ತಾಕ್, ಅಧ್ಯಕ್ಷತೆ: ವಿಮರ್ಶಕ ಡಾ. ಎಚ್.ಎಸ್. ರಾಘವೇಂದ್ರರಾವ್,

ಅತಿಥಿ: ವಿಮರ್ಶಕ ಡಾ. ರಾಜೇಂದ್ರ ಚೆನ್ನಿ. **ಸ್ಥಳ:** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣ, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ. ಬೆಳಗ್ಗೆ 10.30

ಬಿವಿಎಸ್‌ಆರ್ ಪ್ರತಿಷ್ಠಾನ: 14ರಿಂದ 20 ವರ್ಷದೊಳಗಿನವರಿಗೆ 'ಭೈರವಿ ರಾಗದಲ್ಲಿ ಗಾಯನ ಸ್ಪರ್ಧೆ'. ಉದ್ಘಾಟನೆ: ಅಖಿಲ ಕರ್ನಾಟಕ ಮಕ್ಕಳ ಕೂಟದ ಗೌರವಾಧ್ಯಕ್ಷ ಕೆ.ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ: ಡಾ. ಜಿ.ಎಸ್.ಶ್ರೀಧರ್ ಮೂರ್ತಿ. **ಸ್ಥಳ:** ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ಎನ್.ಆರ್.ಕಾಲೋನಿ. ಬೆಳಗ್ಗೆ 10.30

ಆರ್ಯವೈಶ್ಯ ಸಂಘಟನೆಗಳು: ವಾಸವಿ ಜಯಂತಿ ಕಾರ್ಯಕ್ರಮ. ಉದ್ಘಾಟನೆ: ಕರ್ನಾಟಕ ಆರ್ಯ ವೈಶ್ಯ ಮಹಾ ಮಂಡಳಿಯ ರಾಜ್ಯಾಧ್ಯಕ್ಷ ಟಿ.ಎ.ಶರವಣ. **ಸ್ಥಳ:** ನಿಜಗುಣ ಕ್ಷೇತ್ರ ಕಲ್ಯಾಣ ಮಂಟಪ, ದೊಡ್ಡ ಗಣಪತಿ ದೇವಸ್ಥಾನದ ಎದುರು, 5ನೇ ಮುಖ್ಯರಸ್ತೆ, ಬಸವನಗುಡಿ. ಮಧ್ಯಾಹ್ನ 12

ಕರ್ನಾಟಕ ಲೋಕ ಭವನ, ಮಹಾವೀರ್ ಇಂಟರ್‌ನ್ಯಾಷನಲ್: ರಾಜಸ್ಥಾನ ರಾಜ್ಯ ಸಂಸ್ಥಾಪನಾ ದಿನಾಚರಣೆ. ಅಧ್ಯಕ್ಷತೆ: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಅತಿಥಿ: ರಾಜಸ್ಥಾನದ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ. **ಸ್ಥಳ:** ಗಾಜಿನ ಮನೆ, ಲೋಕಭವನ. ಮಧ್ಯಾಹ್ನ 3.30

ಸಪ್ತಕ: ಸಾಹಿತ್ಯ ಸಂಗೀತ ಸಮಾರೋಪ ಕಾರ್ಯಕ್ರಮ. ಸಾವಣ್ಣ ಪ್ರಕಾಶನ ಪ್ರಕಟಿಸಿರುವ ಜಗದೀಶ ಶರ್ಮಾ ಸಂಪ ಅವರ 'ಆ 108 ಸುಭಾಷಿತ (ಭಾಗ-1)' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ. ಅತಿಥಿ: ಸಾಹಿತಿ ಡಾ. ಗಜಾನನ ಶರ್ಮಾ, ಪತ್ರಕರ್ತರಾದ ರಂಗನಾಥ್ ಭಾರದ್ವಾಜ್, ರಾಧಿಕಾ ರಾಣಿ. **ಸ್ಥಳ:** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ. ಸಂಜೆ 5

ಡಾ.ಜಿ.ಭವ್ಯ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ. ಅತಿಥಿ: ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ, ವೈದ್ಯ ಡಾ. ಆನು ಕೆಟ್ಟೂರ್, ಶಾಂತಲಾ ಆರ್ಟ್ಸ್ ಅಕಾಡೆಮಿ ಅಧ್ಯಕ್ಷೆ ಪ್ರೊ.ಎಂ.ಆರ್. ಕಮಲ.

ಸ್ಥಳ: ಕೃಷ್ಣದೇವರಾಯ ಕಲಾ ಮಂದಿರ, ಗಾಯತ್ರಿದೇವಿ ಬಡಾವಣೆ, ವೈಯಾಲಿಕಾವಲ್, ಮಲ್ಲೇಶ್ವರ. ಸಂಜೆ 5

ಕಾರ್ಯಕ್ರಮ ಆಹ್ವಾನ ಪತ್ರಿಕೆ ವಾಟ್ಸ್‌ಆಪ್ ಮಾಡಿ 76766 68588

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಭಾನುವಾರ,26 ಏಪ್ರಿಲ್ 2026
X.com /vijaykarnataka | facebook.com/vijaykarnataka | www.vijaykarnataka.com

ಪಶ್ಚಿಮ ನಗರ ಪಾಲಿಕೆ ವತಿಯಿಂದ ಜ್ಞಾನಭಾರತಿ ಆವರಣದಲ್ಲಿ ನಾಯಿಗಳ ದತ್ತು ಸ್ವೀಕಾರ ಮೇಳ ನಡೆಯಿತು.

ಎಸ್‌ಟಿಪಿ ದಕ್ಷತೆ ಹೆಚ್ಚಿಸಲು ಸಜ್ಜು

■ **ಬಿ.ಎನ್.ಧನಂಜಯ** ಬೆಂಗಳೂರು
dhananjaya.gowda@timesofindia.com

ನಗರದ ಒಳಚರಂಡಿ ಮೂಲಸೌಕರ್ಯವನ್ನು ಸುಧಾರಿಸಲು ಮುಂದಾಗಿರುವ ಜಲಮಂಡಳಿ, ಅಸ್ತಿತ್ವದಲ್ಲಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ(ಎಸ್‌ಟಿಪಿ) ಉನ್ನತೀಕರಣ ಮತ್ತು ಪುನಶ್ಚೇತನಕ್ಕೆ ಯೋಜನೆ ರೂಪಿಸಿದೆ.

ಒಂದೆಡೆ ಕಾವೇರಿ 5ನೇ ಹಂತದ ಯೋಜನೆಯಡಿ 110ಹಳ್ಳಿಗಳ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರಿನ ಸಂಸ್ಕರಣೆಗೆ 124 ಎಂಎಲ್‌ಡಿ ಸಾಮರ್ಥ್ಯದ 14 ಎಸ್‌ಟಿಪಿಗಳನ್ನು 574.24ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುತ್ತಿದೆ. ಮತ್ತೊಂಡೆ ಈಗಾಗಲೇ ಅಸ್ತಿತ್ವದಲ್ಲಿರುವ ಎಸ್‌ಟಿಪಿಗಳ ಸಾಮರ್ಥ್ಯ ಮತ್ತು ಕಾರ್ಯದಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿಯೂ ಕ್ರಮ ಕೈಗೊಂಡಿದೆ.

ನಗರದಲ್ಲಿ ಸದ್ಯ 1,480 ಎಂಎಲ್‌ಡಿಯಷ್ಟು ಕೊಳಚೆ ನೀರು ಉತ್ಪಾದನೆಯಾಗುತ್ತಿದೆ. ನಗರದಲ್ಲಿ ನಿರ್ಮಿಸಿರುವ 34 ಎಸ್‌ಟಿಪಿಗಳ ಸಾಮರ್ಥ್ಯ 1,348.5 ಎಂಎಲ್‌ಡಿ ಮಾತ್ರ. ಇದರಲ್ಲೂ ಪ್ರಸ್ತುತ 1,212.7 ಎಂಎಲ್‌ಡಿ ಕೊಳಚೆ ನೀರನ್ನು ಮಾತ್ರ ಸಂಸ್ಕರಿಸಲಾಗುತ್ತಿದೆ. ಈ 34 ಘಟಕಗಳನ್ನು ಉನ್ನತೀಕರಿಸಬೇಕೆಂಬ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠದ (ಎನ್‌ಜಿಟಿ) ನಿರ್ದೇಶನ ಮತ್ತು ಮಾನದಂಡವನ್ನು ಆಧರಿಸಿ, ಹಳೆಯ 20 ಘಟಕಗಳ ಪುನಶ್ಚೇತನಕ್ಕೆ ನಿರ್ಧರಿಸಲಾಗಿದೆ. ಈ ಪೈಕಿ ಪೂರ್ವ ಮತ್ತು ಪಶ್ಚಿಮ ವಲಯ ಭಾಗದ 7 ಘಟಕಗಳನ್ನು 33.4 ಕೋಟಿ ರೂ.ವೆಚ್ಚದಲ್ಲಿ ಮೊದಲ ಹಂತದಲ್ಲಿ ಉನ್ನತೀಕರಣಗೊಳಿಸುವ ಕಾಮಗಾರಿ ಕೈಗೊಂಡಿದ್ದು, ವರ್ಷಾಂತ್ಯದೊಳಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಶಿವಾಜಿನಗರ, ಮಹದೇವಪುರ, ಕೆ.ಆರ್.ಪುರ ಮತ್ತು ದಾಸರಹಳ್ಳಿ ಪ್ರದೇಶಗಳಲ್ಲಿನ 2 ರಿಂದ 60 ಎಂಎಲ್‌ಡಿ ಸಾಮರ್ಥ್ಯದ ಘಟಕಗಳನ್ನು ಪುನಶ್ಚೇತನಗೊಳಿಸಲು ನಿರ್ಧರಿಸಲಾಗಿದೆ. ಮೊದಲ ಹಂತದಲ್ಲಿ ಪೂರ್ವ ವಲಯದ ಹಲಸೂರು(2 ಎಂಎಲ್‌ಡಿ), ಕಾಡುಗೋಡಿ(6 ಎಂಎಲ್‌ಡಿ), ಕೆ.ಸಿ ವ್ಯಾಲಿ(60 ಎಂಎಲ್‌ಡಿ), ಎಲೆಮಲ್ಲಪ್ಪ ಶೆಟ್ಟಿ ಕೆರೆ (15 ಎಂಎಲ್‌ಡಿ), ಪಶ್ಚಿಮ ವಲಯದ ಚಿಕ್ಕಬಾಣಾವರ (5 ಎಂಎಲ್‌ಡಿ), ಸೀಗೆಹಳ್ಳಿ-ಕೆ.ಸಿ ವ್ಯಾಲಿ(40 ಎಂಎಲ್‌ಡಿ), ನಾಗಸಂದ್ರ (20 ಎಂಎಲ್‌ಡಿ) ಘಟಕಗಳ ಪುನಶ್ಚೇತನಕ್ಕೆ ಮುಂದಾಗಿದೆ.

ಎನ್‌ಜಿಟಿ ಮಾನದಂಡ: ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠವು ನಿಗದಿಪಡಿಸಿದ ಮಾನದಂಡಗಳನ್ನು 2018ರಲ್ಲಿ ಪರಿಷ್ಕರಿಸಿದೆ. ಮೊದಲಿಗೆ ಸಂಸ್ಕರಿಸಿದ ನೀರಿನ 'ಜೀವರಾಸಾಯನಿಕ ಆಮ್ಲಜನಕದ ಬೇಡಿಕೆ (ಬಿಒಡಿ)' ಮಟ್ಟವು 20ಎಂಜಿ/ಎಲ್ ಆಗಿತ್ತು. ಈಗ ಅದನ್ನು 10ಎಂಜಿ/ಎಲ್ ಕಡಿತಗೊಳಿಸಲಾಗಿದೆ. 'ರಾಸಾಯನಿಕ ಆಮ್ಲಜನಕದ ಬೇಡಿಕೆ (ಸಿಒಡಿ)'ಯನ್ನು 250ಎಂಜಿ/ಎಲ್ ನಿಂದ 50ಎಂಜಿ/ಎಲ್‌ಗೆ ಇಳಿಸಿದೆ. ಒಟ್ಟು ಸಾರಜನಕವನ್ನು ಈಗ 10ಎಂಜಿ/ಎಲ್ ಮತ್ತು ಒಟ್ಟು ರಂಜಕವನ್ನು 1ಎಂಜಿ/ಎಲ್‌ಗೆ ಮಿತಿಗೊಳಿಸಲಾಗಿದೆ. pH(ಹೈಡ್ರೋಜನ್ ಶಕ್ತಿ) ಶ್ರೇಣಿ 6.5 ಮತ್ತು 8.5 ರ ನಡುವೆ ಉಳಿದಿದೆ. ಈ ಮಾನದಂಡಗಳು ಮೊದಲಿಗಿಂತ ಹೆಚ್ಚು ಕಟ್ಟುನಿಟ್ಟಾಗಿರುವುದರಿಂದ ಹಳೆಯ ಘಟಕಗಳನ್ನು ಉನ್ನತೀಕರಿಸಲಾಗುತ್ತಿದೆ.

"ಎನ್‌ಜಿಟಿ ಮಾನದಂಡವನ್ನು ಕಟ್ಟುನಿಟ್ಟಾಗಿ ಕಾರ್ಯಗತಗೊಳಿಸಲು ಸುಧಾರಣೆಗೆ ಮುಂದಾಗಿದ್ದೇವೆ. ತೃತೀಯ ಹಂತದ ಸಂಸ್ಕರಣೆಗೆ ಮೇಲ್ದರ್ಜೆಗೇರಿಸುವ ಜತೆಗೆ ಈ ಘಟಕಗಳಿಗೆ ಡಿಸ್ಕ್ ಫಿಲ್ಟರ್ ರೂಪದಲ್ಲಿ ಹೆಚ್ಚುವರಿ ಘಟಕ ಅಳವಡಿಸಲಾಗುತ್ತದೆ. ಇದು ಕ್ಲೋರೀಕರಣದ ಮೊದಲು ಭೌತಿಕ ಶೋಧನೆ ಹಂತವಾಗಿ ಕೆಲಸ ಮಾಡುತ್ತದೆ. ಅಂತಿಮವಾಗಿ ಸಂಸ್ಕರಿಸಿದ ನೀರಿನ ಗುಣಮಟ್ಟವನ್ನು ಗಮನಾರ್ಹವಾಗಿ ಸುಧಾರಿಸುತ್ತದೆ. ಇವು ಬ್ರೌನ್‌ಫೀಲ್ಡ್ ಯೋಜನೆ ಆಗಿದೆ. ಹಾಗಾಗಿ, ಘಟಕಗಳನ್ನು ಕಾರ್ಯಾಚರಣೆಗೊಳಿಸದೆ, ಹಂತ ಹಂತವಾಗಿ ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ಇದು ಸವಾಲಿನ ಕೆಲಸವಾಗಿದೆ," ಎನ್ನುತ್ತಾರೆ ಜಲ ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು.

2028ರ ವೇಳೆಗೆ ಮತ್ತಷ್ಟು ಘಟಕಗಳ ನಿರ್ಮಾಣ



ಶರವೇಗದಲ್ಲಿ ಬೆಳೆಯುತ್ತಿರುವ ನಗರ ಮತ್ತು ಹೆಚ್ಚುತ್ತಿರುವ ಜನವಸತಿ ಪ್ರದೇಶಗಳಿಗೆ ಒಳಚರಂಡಿ ಮೂಲಸೌಕರ್ಯ ಕಲ್ಪಿಸಲು ಜಕ್ಕೂರು, ಪಿಲ್ಲಗಾನಹಳ್ಳಿ, ತಲಘಟ್ಟಪುರ, ಹೆಮ್ಮಿಗೆಪುರ, ಸಂಪಿಗೆಹಳ್ಳಿ ಮತ್ತು ನಾಗಸಂದ್ರ ಪ್ರದೇಶಗಳಲ್ಲಿ 4 ರಿಂದ 13 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು ನಿರ್ಮಿಸಲಾಗುತ್ತಿದೆ. ಪ್ರತಿ ಘಟಕಕ್ಕೆ 10 ರಿಂದ 39ಕೋಟಿ ರೂ. ವರೆಗೆ ವೆಚ್ಚ ಮಾಡಲಾಗುತ್ತಿದೆ. ಅಲ್ಲದೆ, ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಜಲಭದ್ರತಾ ವಿಪತ್ತು ಯೋಜನೆಯಡಿಯಲ್ಲೂ ಅಬ್ಬಿಗೆರೆ, ಕೋಗಿಲು, ಅಂಜನಾಪುರ, ಯು.ಎಂ.ಕಾವಲ್, ಇಬ್ಬಲೂರು, ಹುಳಿಮಾವು, ಚಿಕ್ಕಬೇಗೂರು, ಸೌಳ್ಕೆರೆ, ಚನ್ನಸಂದ್ರ ಪ್ರದೇಶಗಳಲ್ಲಿ ಒಟ್ಟು 148 ಎಂಎಲ್‌ಡಿ ಸಾಮರ್ಥ್ಯದ 9 ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಈ ಎಲ್ಲ ಘಟಕಗಳು 2028ರ ವೇಳೆಗೆ ಕಾರ್ಯ ನಿರ್ವಹಿಸುವ ನಿರೀಕ್ಷೆಯಿದ್ದು, ನಗರದ ಕೊಳಚೆ ನೀರಿನ ಸಂಸ್ಕರಣಾ ಸಾಮರ್ಥ್ಯ ಹೆಚ್ಚಾಗಲಿದೆ.

ಮಾನಹಾನಿ ಮೊಕದ್ದಮೆ ವಜಾ

ಕೃಷಿಕ್ ಫೌಂಡೇಷನ್‌ನ ಮಾಜಿ ಟ್ರಸ್ಟಿ ವಿರುದ್ಧ ಹೂಡಿದ್ದ ಪ್ರಕರಣ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್‌ನ ಅಧ್ಯಕ್ಷ ವೈ.ಕೆ.ಪುಟ್ಟ ಸೋಮೇಗೌಡ ಮತ್ತು ಕಾರ್ಯದರ್ಶಿ ಟಿ.ತಿಮ್ಮೇಗೌಡ ಅವರು ಫೌಂಡೇಷನ್‌ನ ಮಾಜಿ ಟ್ರಸ್ಟಿ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಕೆ.ಅಮರನಾರಾಯಣ ವಿರುದ್ಧ ಹೂಡಿದ್ದ ಮಾನನಷ್ಟ ಮೊಕದ್ದಮೆಯನ್ನು 40ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ ವಜಾಗೊಳಿಸಿದೆ.

ಪ್ರಕರಣದಲ್ಲಿ ಅಪ್ರಸ್ತುತ ದಾಖಲೆಗಳು, ಸಮರ್ಪಕ ಸಾಕ್ಷ್ಯಾಧಾರಗಳ ಕೊರತೆ ಹಾಗೂ ಆರೋಪಗಳ ಅಸ್ಪಷ್ಟತೆ ಗಮನಿಸಿದ ನ್ಯಾಯಾಧೀಶೆ ಮಮ್ತಾಜ್ ಕಳೆದ ಮಾ.5ರಂದು ದಾವೆಯನ್ನು ವಜಾಗೊಳಿಸಿದ್ದಾರೆ.

"ಆಂತರಿಕ ಪತ್ರ ವ್ಯವಹಾರದ ಮೂಲಕ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಮಾನನಷ್ಟದ ಅಡಿಯಲ್ಲಿ ಪರಿಗಣಿಸಲಾಗದು. ಅರ್ಜಿದಾರರನ್ನು ಪ್ರತಿವಾದಿಯು ಸಾರ್ವಜನಿಕವಾಗಿ ಎಲ್ಲಿಯೂ ಅವಹೇಳನ ಮಾಡಿಲ್ಲ ಮತ್ತು ಸಾಮಾಜಿಕ ಮಾಧ್ಯಮಗಳು ಅಥವಾ ಪ್ರಕಟಣೆ ಮೂಲಕವೂ ಯಾವುದೇ ಹೇಳಿಕೆ ನೀಡಿಲ್ಲ. ದಾಖಲೆಗಳ ಪ್ರಕಾರ ಪ್ರತಿವಾದಿ ಟ್ರಸ್ಟ್‌ನ ಬಗ್ಗೆ ಮಾಡಿರುವ ಆರೋಪಗಳನ್ನು ಸಭೆಯ ಕಾರ್ಯಸೂಚಿಯಲ್ಲಿಡಲಾಗಿತ್ತು. ಅದನ್ನು ವಾದಿಗಳು ಚರ್ಚಿಸಿದ್ದಾರೆ ಮತ್ತು ಪ್ರತಿವಾದಿ ಅಮರನಾರಾಯಣ ಅವರು ಅದಕ್ಕೆ ಕ್ಷಮೆಯನ್ನೂ ಕೋರಿದ್ದಾರೆ" ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ದಾಖಲಿಸಿದೆ.

ಅಲ್ಲದೆ, ಪ್ರತಿವಾದಿ ಅರ್ಜಿದಾರರ ವಿರುದ್ಧ ಸೆನೈಲ್(ಮುದಿತನ ಅಥವಾ ಮುಪ್ಪಿನ ಲಕ್ಷಣ)ಎಂಬ ಪದ ಬಳಸಿದ್ದಾರೆಂದು ಆಕ್ಷೇಪಿಸಲಾಗಿದೆ. ಆದರೆ ಆ ಪದದ ಅರ್ಥ ವಯಸ್ಸಾಗುತ್ತಿದೆ. ಎಲ್ಲವನ್ನೂ ನೆನಪಿನಲ್ಲಿಟ್ಟುಕೊಳ್ಳಲಾಗದು ಎಂದೂ ಅರ್ಥೈಸಬಹುದಾಗಿದೆ. ಆ ಪದ ಅವಹೇಳನಕಾರಿಯಲ್ಲ. ಅದು ಸಮಾಜದಲ್ಲಿ ಸಹಜವಾಗಿ ಬಳಸುವಂತಹದು. ಜತೆಗೆ ಉದ್ದೇಶಪೂರ್ವಕವಾಗಿ ಆ ಪದ ಬಳಸಿಲ್ಲ, ಲೋಕಾರೂಢಿಯಲ್ಲಿ ಹೇಳಲಾಗಿದೆ ಎಂದು ಪ್ರತಿವಾದಿ ಹೇಳಿದ್ದಾರೆ. ಹಾಗಾಗಿ ಅರ್ಜಿಯಲ್ಲಿ ಪುರಸ್ಕರಿಸಬಹುದಾದ ಯಾವುದೇ ಅಂಶವಿಲ್ಲ," ಎಂದು ನ್ಯಾಯಾಲಯ ಹೇಳಿದೆ.

ಬಿಎಂಟಿಸಿ ಬಸ್ ಡಿಕ್ಕಿ: ಬಿಇ ವಿದ್ಯಾರ್ಥಿನಿ ಸಾವು

ಬೆಂಗಳೂರು: ಬಿಎಂಟಿಸಿ ಬಸ್ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿನಿ ಯೊಬ್ಬರು ಮೃತಪಟ್ಟಿರುವ ಘಟನೆ ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶನಿವಾರ ನಡೆದಿದೆ.

ನಾಗರಬಾವಿ ನಿವಾಸಿ ಸಿರೀಶಾ (21) ಮೃತಪಟ್ಟವರು. ಉತ್ತರಹಳ್ಳಿ ಸಮೀಪದ ಖಾಸಗಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಿರೀಶಾ ಅಂತಿಮ ವರ್ಷದ ಪದವಿ ಓದುತ್ತಿದ್ದರು. ಶನಿವಾರ ಮಧ್ಯಾಹ್ನ ಕಾಲೇಜು ಮುಗಿದ ಬಳಿಕ ದ್ವಿಚಕ್ರ ವಾಹನದಲ್ಲಿ ಉತ್ತರಹಳ್ಳಿ ಮುಖ್ಯರಸ್ತೆ ಮೂಲಕ ಮನೆಗೆ ತೆರಳುತ್ತಿದ್ದರು. ಮಾರ್ಗ ಮಧ್ಯದ ಶ್ರೀನಿವಾಸಪುರ ಕ್ರಾಸ್ ಬಳಿ ಹಿಂದಿನಿಂದ ವೇಗವಾಗಿ ಬಂದ ಬಿಎಂಟಿಸಿ ಬಸ್, ಸಿರೀಶಾ ಅವರ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದ ರಸ್ತೆ ಮೇಲೆ ಬಿದ್ದ ಸಿರೀಶಾ ಅವರ ಮೇಲೆ ಬಸ್‌ನ ಚಕ್ರಗಳು ಹರಿದ ಪರಿಣಾಮ, ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಚಾಲಕ ಚಂದ್ರುವನ್ನು ವಶಕ್ಕೆ ಪಡೆದು, ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



B.M.S. EDUCTIONAL TRUST, BENGALURU
"BUILD A BRIGHT FUTURE WITH US"

B.M.S COLLEGE FOR WOMEN
Autonomous Institution Affiliated to
Dr. Manmohan Singh Bengaluru City University
NAAC Accreditation: "A" Grade
Recognised under 2(f) & 12(b) of the UGC act 1956

Late B.M.Sreenivasaiah
Founder

Late B.S.Narayan
Former Donor Trustee

UNDER GRADUATE PROGRAMS

SCHOOL OF COMMERCE & MANAGEMENT
- B.Com. General
- B.Com. CMA
- B.Com. Accounting & Finance
- B.Com. Business Data Analytics
- B.B.A. General
- B.B.A. Digital Marketing (certification Course)

SCHOOL OF NATURAL & APPLIED SCIENCE
- B.C.A. General
- B.C.A. Artificial Intelligence and Machine Learning
- B.Voc. Information Technology
- B.Sc. PCM (Physics, Chemistry, Mathematics)
- B.Sc. PMCs (Physics, Mathematics, Computer Science)
- B.Sc. CZMb (Chemistry, Zoology, Microbiology)
- B.Sc. CBBt (Chemistry, Botany, Biotechnology)
- B.Sc. Clinical Nutrition & Dietetics

SCHOOL OF ARTS & HUMANITIES
- B.A. HES (History, Economics, Sociology)
- B.A. PES (Psychology, Economics, Sociology)
- B.A. JPE (Journalism, Psychology, Optional English)

LEGACY OF 62 YEARS

POST GRADUATE STUDIES
- M.Com. General
- M.Sc. Mathematics
- M.Sc. Organic Chemistry

ADMISSIONS OPEN

MERITORIOUS SCHOLARSHIP
for the student score 80% & above in PU

Application can be obtained from the college or download from the website

CONTACT: BUGLE ROCK ROAD, BASAVANAGUDI, BENGALURU 560 004.
Ph: 080-26601836 | 9481237933 | 7338367755 | 73382 47755
email: enquiry@bmscw.edu.in, principal@bmscw.edu.in,
Website: www.bmscw.edu.in



ಶಿದಾ ಬಝ್ಯಾರ್ ಜರ್ಮನ್ ಭಾಷೆಯಲ್ಲಿ ಬರೆದು, ರುತ್ ಮಾರ್ಟಿನ್ ಇಂಗ್ಲಿಷ್‌ಗೆ ಅನುವಾದಿಸಿರುವ 'ದ ನೈಟ್ಸ್ ಆರ್ ಕ್ವಯಟ್ ಇನ್ ಟೆಹ್ರಾನ್' ಕಾದಂಬರಿ ಈ ಬಾರಿಯ ಬೂಕರ್ ಪ್ರಶಸ್ತಿಯ ಶಾರ್ಟ್ ಲಿಸ್ಟ್‌ನಲ್ಲಿದೆ. ಕುಟುಂಬವೊಂದು ಇರಾನ್‌ನಿಂದ ಜರ್ಮನಿಗೆ ತೆರಳಿ ಮತ್ತೆ ಇರಾನ್‌ಗೆ ಮರಳುವ ಕಥೆ ಇದರಲ್ಲಿದೆ.

ಚಿತ್ರಕೃಪೆ: ಜಾಲತಾಣ

ಉರಿಬಿಸಿಲು ಮನೆಯ ಹೊರಗಷ್ಟೇ ಅಲ್ಲ, ಒಳಗೂ ಧಗಧಗಿಸುತ್ತಿದೆ. ಸಹಜವಾಗಿಯೇ ಬಿಸಿಲ ಕಾಲಕ್ಕೆ ತಂಪಾಗುವ ರಾಜರ ಕಾಲದ ಮನೆಗಳು ಈಗ ನೆನಪಾಗುತ್ತಿವೆ. ಈ ಬಗೆಯ ಕಟ್ಟಡ ವಿನ್ಯಾಸ ಶೈಲಿ ಇಂದೆಷ್ಟು ಪ್ರಸ್ತುತ? ಈಗ ತಣ್ಣಗಿರಲು ನಾವೇನು ಮಾಡಬಹುದು? ಸುಡುಬಿಸಿಲ ಈ ಹೊತ್ತಿನಲ್ಲಿ ತಂಪು ಮನೆಯ ಕಥನವಿದು.


ಜಲಮಹಲ್, ಉದಯಪುರ

ಬಿಸಿಲ ಕಾಲಕ್ಕೆ ತಂಪಿನ ಅರಮನೆ

ನಾಗರಾಜ ವಸ್ತಾರೆ
feedbacklvk@vijaykarnataka.com

ದರಿಯಾ ದೌಲತ್ ಶ್ರೀರಂಗಪಟ್ಟಣದಲ್ಲಿರುವ ಒಂದು ಪ್ರವಾಸಿ ತಾಣ. ಟಿಪ್ಪು ಸುಲ್ತಾನರ ಬೇಸಗೆಯ ಅರಮನೆ. ಅಸಲಿನಲ್ಲಿ ಇದೊಂದು ಉದ್ಯಾನ. 'ದರಿಯಾ ದೌಲತ್ ಬಾಗ್' ಎಂತಲೇ ಹೆಸರು. ದರಿಯಾ ಮತ್ತು ದೌಲತ್- ಈ ಎರಡೂ ಪರ್ಷಿಯನ್ ಮೂಲದವು. ದರಿಯಾ ಎಂಬುದಕ್ಕೆ ನದಿ ಅಥವಾ ಸಮುದ್ರ ಎಂಬ ಅರ್ಥಗಳಿವೆ. 'ಕಡಲಿನಷ್ಟು ಆಳವೂ ಅಗಲವೂ ಉಳ್ಳಂತಹ' ಎಂಬ ವಿಶೇಷಣವಾಗಿಯೂ ಅದನ್ನು ಬಳಸಲಾಗುತ್ತದೆ. ಸಾಂದರ್ಭಿಕವಾಗಿ, ಈ 'ದರಿಯಾ ದೌಲತ್' ಎನ್ನುವ ಸರಿಸುಮಾರು ಇನ್ನೂರೈವತ್ತು ವರ್ಷಗಳ ಹಿಂದೆ ಹೂಡಲಾದ ಉಪವನವು ಕಾವೇರಿ ನದಿಯ ದಕ್ಷಿಣದಂಡೆಯ ಮೇಲಿದೆ. ಇನ್ನು, ದೌಲತ್ ಎಂಬುದಕ್ಕೆ ಸಂಪತ್ತೆನ್ನುವ ಅರ್ಥವಿದೆ. ಗರ್ವವೆನ್ನುವುದು ಅದರ ಮುಂದುವರಿಕೆ. ಹೀಗಾಗಿ 'ದರಿಯಾ ದೌಲತ'ನ್ನು ಹೊಳೆದಂಡೆಯ ಮೇಲಿರುವ ಐಸಿರಿಯೆಂತಲೋ ದವಲತ್ತೆಂತಲೋ ಅರ್ಥಯಿಸಿಕೊಳ್ಳಬಹುದು. ಹಾಗೆ, ಆಯತಾಕಾರದಲ್ಲಿ ಹಬ್ಬಿರುವ ಇದರ ಒಟ್ಟು 'ಭೂ' ಸಂಯೋಜನೆಯನ್ನೊಂದು 'ಸಂಪದ್ಭರಿತ' ತೋಟವೆಂತಲೇ ಗಣಿಸಬಹುದು.

'ದರಿಯಾ ದೌಲತ್' ಹೆಸರು ಬಂದಿದ್ದೇ ಸರ್ವೇಸಾಮಾನ್ಯ ಎಲ್ಲರೂ ನೆನೆಯುವುದು ತೋಟದ ಮಧ್ಯದ ಅರಮನೆಯನ್ನೇ ಹೊರತು ತೋಟವನ್ನಲ್ಲ. ಶಿಲಾಮೂರ್ತಿಯೆಂದಿದ್ದೇ ಮೂರ್ತಿಯನ್ನಲ್ಲದೆ ಶಿಲೆಯನ್ನು ಕಲ್ಪಿಸಿಕೊಳ್ಳೆವಷ್ಟೆ, ಥೇಟು ಹಾಗೆ. ಇಷ್ಟಾಗಿ, ಸುತ್ತಲಿನ ತೋಟವಿಲ್ಲದೆ ನಡುವಿನ ಅರಮನೆಗೆ ಅಸ್ತಿತ್ವವಿಲ್ಲವೆಂಬುದೂ ಸತ್ಯವೇ. ಈ ದರಿಯಾ ದೌಲತ್ 'ಬೇಸಗೆಯ ಅರಮನೆ' ಅಂತನಿಸುವುದೇ ಅದನ್ನು ಕಾರಂಜಿಯ ಚಿಲುಮೆಗಳುಳ್ಳ ತೋಟದಲ್ಲಿ ಹೂಡಿರುವ ಮೇರೆಗೆ.

ಬೇಸಗೆಗೊಂದು ಮನೆ, ಉಳಿದಂತೆ ಇನ್ನೊಂದು ಎಂಬುದು ಎಲ್ಲ ಕಾಲದ ಅರಸೊತ್ತಿಗೆಗಳು ಮಾಡಿಕೊಂಡ ಪ್ರತೀತಿಯೇ ಸರಿ. ತಕ್ಕುದಾಗಿ, ಎಲ್ಲ ಸೀಮೆಗಳಲ್ಲಿನ ವಣಿಕ-ವರ್ತಕರೂ ಮತ್ತು ಇತರೆ ಶ್ರೀಮಂತರೂ ತಂತಮ್ಮ ದೊರೆಗಳನ್ನು ಅನುಸರಿಸಿ ಕಂಡುಕೊಂಡಿದ್ದ ರೂಢಿಯೂ ಹವುದು. ಬೆಂಗಳೂರಿನ ಹಳೆಕಾಲದ ಸಾವುಕಾರರಿರಲಿ, ಇವೊತ್ತಿನ ಐಟಿಬಿಟಿಯಲ್ಲಿರುವ 'ನವ'ಸಿರಿವಂತರೂ- ನಗರದಲ್ಲೊಂದು ಮನೆ, ತೋಟದಲ್ಲೊಂದು ಎಂದು ಜಂಟಿವಾಸ ಕಲ್ಪಿಸಿಕೊಂಡಿಲ್ಲವೇ, ಅಂಥದೇ ಪ್ರಾಚೀನವಾದ ಪದ್ಧತಿಯಿದು. ಒಟ್ಟಿನಲ್ಲಿ, ಮನುಷ್ಯಾನುಕೂಲವೆಂಬುದು ಯಾವೊತ್ತಿಗೂ ದೇಹಸೌಖ್ಯಕ್ಕೆಂದೇ ಉಂಟಾದುದು ಮತ್ತು ಶ್ರೀಮಂತಿಕೆಯನ್ನೇ ಆಧರಿಸಿ ಜರುಗುವಂಥದು.

ಬೇಸಗೆಮನೆ: ಆಳುವ ದೊರೆಗಳ ಬೇಸಗೆಮನೆಗಳು ಪುರಾತನ ಗ್ರೀಕಿನಲ್ಲಿ ಮೊದಲಾದವಾದರೂ, ಮಧ್ಯಕಾಲದ ಬಳಿಕ ಪೂರ್ವಪಶ್ಚಿಮವೆನ್ನುವ ಭೇದವಿಲ್ಲದೆ, ಸರಿಸುಮಾರು ಒಂದೇ ಬಗೆಯ 'ಕಟ್ಟು'ನಿಯತಿಯಿಟ್ಟುಕೊಂಡು ಯೂರೋಪು ಏಷಿಯಾಗಳುದ್ದಕ್ಕೂ ಹೆಚ್ಚು ಸಂಖ್ಯೆಯಲ್ಲಿ ಮೂಡಿಬಂದವು. ಸುತ್ತಮುತ್ತಲೂ ಹತ್ತಾರು ಸುತ್ತಿನ ಕೋಟೆಕೊತ್ತಲು ಹೂಡಿಕೊಂಡು, ಇಲ್ಲಾ, ಇಡೀ ನಗರವನ್ನೇ ರಕ್ಷಣೆಯ ವರ್ತುಳದಂತೆ ಮಾಡಿಕೊಂಡು, ಎತ್ತೆತ್ತರದ ಗೋಡೆಕಟ್ಟಡಗಳನ್ನು ಹೊಕ್ಕಿರುತ್ತಿದ್ದ ದೊರೆವಸತಿಗಳು ಮತ್ತು ಅಂತಃಪುರಗಳು- ವಸಂತಋತುವಿನ ಕಾವು ಸೆಣಸಲೆಂತಲೇ ಉಂಟಾದ ಉಪವನದೊಳಗಿನ ಉಪಗೃಹಗಳತ್ತ ಬಿಡದಿ ಬದಲಿಸುತ್ತಿದ್ದವು. ಇವಿವೇ ಉಪವನ-ಉಪವಸತಿಗಳು ಕೆಲಕಾಲ ನೆಲೆಗೊಳ್ಳುವ ಅರಸೊತ್ತಿಗೆಗೆಂದು ಬಲು 'ಉಷ್ಣಸಹಿಷ್ಣು'ವಾದ ಉಪನಗರವನ್ನೇ ಸೃಜಿಸಿದ್ದು ಹವುದು. ಹೀಗೊಂದು ಉಪನೆಲೆಯನ್ನು ಬೇಸಗೆಮನೆಯೆನ್ನುವುದಾದರೆ, ಅದು ಬಲುಮಟ್ಟಿಗೆ ಸೂರಿನ ಹೊಚ್ಚುಗೆಯುಳ್ಳ ಮತ್ತು ಬಲುಕಡಿಮೆ ಗೋಡೆಯ ಮುಚ್ಚುಗೆಯುಳ್ಳ ಮಂಟಪದಂತಹ ಕಟ್ಟಡವಾಗಿರುವುದು. ದಿಬ್ಬದಂತಹ ನೆಲಗಟ್ಟಿನ ಜಗತಿಯ ಮೇಲೆ- ನಾಲ್ಕಾರು ಹಂತಗಳಲ್ಲಿ ಕಟ್ಟಲಾದ ಕೇವಲ ಕಂಭ- ಗುಂಭ-ಚಾವಣಿಗಳುಳ್ಳ ಚಪ್ಪರದಂತಹ ಸೃಜನೆಯಾಗಿರುವುದು. ಎಲ್ಲಕ್ಕಿಂತ ಈ ಬೇಸಗೆಬಿಡದಿಯು ರಾಜಧಾನಿಯ ಮುಖ್ಯನಗರದ ದಟ್ಟಣೆಯಿಂದ ಹೊರತಾಗಿ, ಆಚೆಗಿರುವ ಬೆಟ್ಟದ ಮೇಲೋ, ಉನ್ನತ ಪ್ರಸ್ಥಲದಲ್ಲೋ, ಕೆರೆದಂಡೆಯಲ್ಲೋ, ನದೀತಟದಲ್ಲೋ ಚಂದದ ಉದ್ಯಾನದೊಳಗೆ ಸ್ವಚ್ಛಂದವಾಗಿ ಹೂಡಿಕೊಂಡಿದ್ದು- ಸ್ವಯಂ ತಂಪೂಡಿಕೊಂಡು ನೆಲೆಸಿಗರನ್ನೂ ತಣ್ಣಗಿರಿಸುವುದು. ನಮ್ಮದೇ ಮಗ್ಗುಲಿನ ಹಂಪಿ, ಬಿಜಾಪುರಗಳಿಂದ ಮುನ್ನಾಗಿ ದೇಶದ ಉತ್ತರಪ್ರಾಂತ್ಯದ, ಅದರಲ್ಲೂ ದೆಹಲಿ-ಆಗ್ರಾವಿತ್ಯಾದಿ ಮುಘಲಾಡಳಿತವಿದ್ದ ಎಡೆಗಳಲ್ಲಿ ಮತ್ತು ಜಯಪುರ, ಉದಯಪುರ, ಜೋಧಪುರ ಮುಂತಾಗಿ ರಾಜಸ್ಥಾನದಲ್ಲಿ ಹೆಚ್ಚಾಗಿ ನೋಡಸಿಗುವ 'ಹವಾಮಹಲ್' ಅನ್ನಲಾಗುವ ರಚನೆಗಳೆಲ್ಲ ಈ ಬಗೆಯವೇ. ಸುತ್ತಲೂ ಪೊಗದಸ್ತಾದ ಉದ್ಯಾನವುಳ್ಳ ಭೂಸಂದರ್ಭವನ್ನು ಇಟ್ಟುಕೊಂಡಂಥವೇ. ಬಗೆಬಗೆಯಾಗಿ ಚಿಮ್ಮುವ ಕಾರಂಜಿಗಳನ್ನು ಹಾದು ಬರುವ ಗಾಳಿಯು ತಣಿದು ವಾತಾವರಣವು ತಂಪಾದೀತೆನ್ನುವ ಸಲುವಿನಲ್ಲಿ ಆದಂಥವೇ. ಎಲ್ಲಕ್ಕಿಂತ, ಈ ಹವಾಮಹಲುಗಳಲ್ಲಿ ಗೋಡೆಯ ಸಗಟು ಆದಷ್ಟೂ ಕಡಿಮೆಯಿದ್ದು, ಹೆಚ್ಚುಹೆಚ್ಚು ಗಾಳಿಗಿಂಡಿಗಳನ್ನು ಒಳಗೊಂಡಿದ್ದು, ಬಲುವೊಮ್ಮೆ ಜಾಲಂಧ್ರಗಳನ್ನೂ ಹೊಂದಿದ್ದು- ಹೆಚ್ಚುಹೆಚ್ಚು ಗಾಳಿಗಳಿಕೆಗೆಂತಲೇ ಉಂಟಾದಂಥವು.

ಈ ಬಗೆಯ ಬೇಸಗೆಯ ಅರಮನೆಗಳ ವಿನ್ಯಾಸಮೂಲವನ್ನು 'ಪರ್ಷಿಯನ್' ಎನ್ನಲಾಗುತ್ತದೆ. ಇವೊತ್ತಿನ ಇರಾನಿನ ಆಸುಪಾಸಿನ ಭೂಪ್ರದೇಶವನ್ನೂ ಹವಾಮಾನವನ್ನೂ ಗಮನಿಸಿದಲ್ಲಿ ಕಾರಣವೇನೆಂದು ಸ್ವವೇದ್ಯವಾಗುತ್ತದೆ. ಪರ್ಷಿಯಾವಾದರೂ ಹೇಳಿಕೇಳಿ ಪುರಾತನ ನಾಗರಿಕತೆಯ ತೊಟ್ಟಿಲು. ಅತ್ತಲಿನ ಈಜಿಪ್ಟಿನಿಂದ ಇತ್ತಲಿನ ಇಂಡಿಯಾದವರೆಗಿನ ನೆಲದ ಐದಾರು ಸಾವಿರ ವರ್ಷಗಳ ಇತಿಹಾಸವನ್ನು ಗಮನಿಸಿದಲ್ಲಿ, ಈ ಭೂಪ್ರದೇಶದ ನಡುವಿದ್ದ ಪರ್ಷಿಯಾಕ್ಕೂ ಆಚೀಚಿನ ನಾಡುಗಳಿಗೂ ಮಧ್ಯೆ ಬಲು ಸಹಜ ಕೊಡುಕೊಳು ಇತ್ತು. ಅಸಲಿನಲ್ಲಿ, ಕಮಾನು-ಗುಮ್ಮಟಗಳ ಬಳಕೆ ಮೊದಲಾಗಿದ್ದೇ ಪರ್ಷಿಯಾದಲ್ಲಿ. ಆ ಬಳಿಕದಲ್ಲಿ ಕ್ರೈಸ್ತರೂ ಮುಸಲ್ಮಾನರೂ ಇವೆರಡನ್ನೂ ಧಾರಾಳವಾಗಿ ಒಪ್ಪಿಕೊಂಡಿದ್ದು ಹೊಸಬಗೆಯ ಕಟ್ಟಡಗಾರಿಕೆಗೂ ದೊಡ್ಡದೊಡ್ಡ ನಗರಗಾರಿಕೆಗೂ ಎಡೆ ಕಲ್ಪಿಸಿತು. ಚರ್ಚು-ಮಸೀದಿಗಳಲ್ಲಿಯಲ್ಲದೆ ಶಹರದ ಇತರೆ ಕಟ್ಟೋಣದಲ್ಲೂ ಈ ಕಮಾನುಗುಂಭಗಳು ಆಗಿಬಂದವು. ಪರ್ಷಿಯಾದ ಅದಿಬದಿಯಲ್ಲಿದ್ದ ನೆಲಸೀಮೆಯೆಲ್ಲ ಒಣಹವೆಯುಳ್ಳ ಪ್ರದೇಶವಾದ್ದರಿಂದ ಗಾಳಿ ತಣಿಸಿ ಒಳಮಾಡಿಕೊಳ್ಳುವ ಪದ್ಧತಿಗಳು ಜಾರಿಗೆ ಬಂದವು. ಒಡಲಿನಲ್ಲೆಲ್ಲ ಕಿಂಡಿಗಳುಳ್ಳ ಎತ್ತರೆತ್ತರದ ಗೋಪುರಗಳನ್ನು ಕಟ್ಟಲಾಯಿತು. ಕಟ್ಟಡಗಳ ಮೇಲಂತಸ್ತಿನ ಸೂರಿಗಿಂತಲೂ ಹೆಚ್ಚು ಆಚೆ ಆಕಾಶದೊಳಕ್ಕೆ ತೂರಿಕೊಂಡೇರುವ ಇವನ್ನು ಗಾಳಿಗೋಪುರವೆಂದೇ ಕರೆಯಲಾಯಿತು. ಶಹರದ ಸರಾಸರಿ ತಲೆಮಟ್ಟಕ್ಕಿಂತಲೂ ಮೇಲೆ ಯಾವುದೇ ಅಡೆತಡೆಯಿರದೆ ಬೀಸುವ ಗಾಳಿ ತನ್ನೆಲ್ಲ ರಭಸದೊಡನೆ ಈ ಬುರುಜುಗಳ ಮೈಯಲ್ಲಿರುವ ರಂಧ್ರಗಳನ್ನು ಹೊಕ್ಕಿದ್ದೇ ಒಮ್ಮೆಗೆ ತಣಿದು, ಒಳಗಿನ ನೆಲಹಂತದಲ್ಲಿ ಹೂಡಿರುವ ನೀರಿನ ಹಾಸಿನ ಮೇಲ್ಮೈಯನ್ನೊಮ್ಮೆ ತೀಡಿ- ಇನ್ನಷ್ಟು ತಂಪಾಗಿ ತಂಗಾಳಿಯೇ ಆಗಿಬಿಡುವುದು.

ಬೇಲೆರ್ಬೇಯಿ ಅರಮನೆ, ಇಸ್ತಾನ್‌ಬುಲ್, ಟರ್ಕಿ

ಮನೆ ಮಾತು

ಗಾಳಿಗೋಪುರಗಳು

ಬಿರುಬೇಸಿಗೆಯನ್ನು ತಡೆದುಕೊಳ್ಳುವ ಬಗೆ: ಇವಿಷ್ಟೂ ಒಂದಾನೊಂದು ಕಾಲದ ಕತೆಯಾದರೆ, ಈ ಹೊತ್ತಿನ ಕಟ್ಟಡಗಳು ಬೇಸಗೆಯ ಬಿರುಬೇಯಿಗೆಯನ್ನು ತಡೆದುಕೊಳ್ಳುವ ಬಗೆಯೆಂತೆನ್ನುವ ಪ್ರಶ್ನೆ ಸಹಜವಾಗಿ ಎದುರಾಗುತ್ತದೆ. ಉತ್ತರವಾದರೂ ಮೇಲೆ ತಿಳಿಸಿದ ಮಾಹಿತಿಯೊಳಗೆ ಇದೆ. ಇಪ್ಪತ್ತನೇ ಶತಮಾನದಿಂದೀಚೆಗೆ ಬೇಸಗೆಯನ್ನು ಸೆಣಸಲಿಕ್ಕೆಂದೇ ಯಾಂತ್ರಿಕವೂ ವಿದ್ಯುಚ್ಚಾಲಿತವೂ ಆದ ಪರಿಹಾರಗಳು ನಮ್ಮೆದುರಿಗಿದ್ದೇ ಇವೆ. ನಿಜವಾದ ಸವಾಲಿರುವುದು ಕಟ್ಟಡವೊಂದನ್ನು ತನ್ನ ನಿರ್ಮಿತಿಯಲ್ಲೇ ಸ್ವಯಂ ಉಷ್ಣಸಹ್ಯವಾಗುವುದು ಹೇಗೆಂಬುದಾಗಿದೆ. ಮನೆಯೆಂಬುದು, ತನ್ನನ್ನು ತಾನು, ಚಳಿಮಳೆಯಿರುವಾಗ ಬೆಚ್ಚಗೂ ಬೇಸಗೆಯಲ್ಲಿ ತಣ್ಣಗೂ ಹೇಗೆ ಕಾಪಿಟ್ಟುಕೊಳ್ಳಬಹುದೆಂಬುದೇ ಆಗಿದೆ. ಪರಿಹಾರವೂ ಸರಳವಾಗಿದೆ. ಆಧುನಿಕಪೂರ್ವದ ಸಾವಿರಾರು ಕಾಲದ ಕಟ್ಟುಗಾರಿಕೆಯು ಅಷ್ಟೇ ಸಾವಿರಾರು ಕಾಲದಲ್ಲಿ ಈ ಪ್ರಶ್ನೆಗೆ ಉತ್ತರವನ್ನೂ ಕಂಡುಕೊಂಡಿದೆ. ದಪ್ಪನೆಯ ಗೋಡೆಗಳು ಚಳಿಮಳೆಯಷ್ಟೇ ಬಿಸಿಲಿನ ಝಳವನ್ನೂ ತಡೆಯಬಲ್ಲುವಾಗಿವೆ. ಮನೆಯ ಒಳಾಯವನ್ನು ಹೊರಗೆ ಥಂಡಿಯಿರುವಾಗ ಬೆಚ್ಚಗೂ, ಕಾವಿರುವಾಗ ತಣ್ಣಗೂ ಇಟ್ಟು ಥರ್ಮಾಸಿನ ಹಾಗೆ ಕಾಯತಕ್ಕ ಸ್ವಾಭಾವಿಕ ವ್ಯವಧಾನವನ್ನು ಹೊಂದಿವೆ. ಕಿಟಕಿಗಳನ್ನು ಯಥೇಚ್ಛ ಬೆಳಕನ್ನು ಒಳಮಾಡಿಕೊಂಡು ಬಿಸಿಲನ್ನು ತಂದುಕೊಳ್ಳದ ಹಾಗೆ ಹೂಡಿದಲ್ಲಿ ಅನುಕೂಲವಾಗುತ್ತದೆ. ಮುಂಬಾಗಿಲು ಹೊರಬಾಗಿಲುಗಳನ್ನು ಸೂರಿನಡಿಯಿಟ್ಟು ಕಾಯುವಂತೆ ಕಿಟಕಿಗಳನ್ನೂ ಸದಾ ಸಜ್ಜಾಗಳ ನೆರಳೊಳಗೆ ಇರುವಂತೆ ಹಮ್ಮುವಲ್ಲಿ ಸುಲಭವಾಗುತ್ತದೆ. ಮನೆಯೊಳಗಿನ ಆಯಕಟ್ಟನ್ನು ತೆರೆದ ಹೊರಗಿನ ಆಕಾಶಕ್ಕೆ ನೇರವಾಗಿ ಬಿಚ್ಚಿಡದೆ ನಡುವೊಂದು ವೆರಾಂಡಾವಿದ್ದಲ್ಲಿ ಸಲೀಸಾಗಿ ಚಳಿಮಳೆ ಬಿಸಿಲಿಗೆ ತಡೆಯೊಡ್ಡಿದಂತಾಗುತ್ತದೆ. ಈ ವೆರಾಂಡಾಗಳು ಮನೆಗೊಂದು ಚಂದದ ಛಾಪೂ ಹೌದು.

ವಾತಾವರಣಕ್ಕೆ ತಕ್ಕಂತೆ ಮನೆ: ಅನುಕೂಲವಿದ್ದಲ್ಲಿ, ಮನೆಯ ಕೆಲಪಾಲನ್ನು ಥಂಡಿಕಾಲಕ್ಕೆಂದೂ ಇನ್ನೊಂದಿಷ್ಟನ್ನು ಬಿಸಿಲುಗಾಲಕ್ಕೆಂದೂ ಮೀಸಲಿಡುವುದರ ಬಗ್ಗೆ ಯೋಚಿಸಬಹುದು. ಒಂದು ಕಾಲದ ಅರಸೊತ್ತಿಗೆಗಳು ಬೇಸಗೆಯ ಮೂರು ನಾಲ್ಕು ತಿಂಗಳಿಗೆಂತಲೇ ಉಪನೆಲೆಗಳನ್ನು ಕಟ್ಟಿದ ಹಾಗೆ, ಒಂದೇ ಮನೆಯಲ್ಲಿ ಈ ಬಗೆಯ ವಿಂಗಡಣೆಗಳನ್ನು ಮಾಡಿಕೊಳ್ಳಬಹುದು. ಮನೆಯ ಕೊನೆಹಂತವನ್ನು ಬಿಸಿಲುಮನೆ ಎಂದು ಯೋಜಿಸಬಹುದು. ಅಂದರೆ ಅರಸರ ಕಾಲದಕ್ಕಿದ್ದ ಹಾಗೆ ಬೇಸಗೆಮನೆ. ರಾತ್ರಿಗಳನ್ನು ಕೊಠರಿಗಳೊಳಗಿನ ಫ್ಯಾನು-ಏಸೀ ಸಂಗಡ ಕಳೆಯುವ ಬದಲು, ಗೋಡೆಗಳಿಲ್ಲದೆ ಬರೇ ಸೂರು ಹೊಚ್ಚಿದ ತಾರಸಿಯನ್ನೇ ಮಲಗುಮನೆಯಾಗಿ ಕಲ್ಪಿಸಿಕೊಳ್ಳಬಹುದು. ಟೆರೇಸಿನ ಕೆಲಪಾಲನ್ನು ತೋಟವೊಂದಾಗಿ ಮಾಡಿ, ಈ ಮಲಗುಮನೆಯು ಅದನ್ನು ಒಳಗೊಳ್ಳುವ ಹಾಗೆ ಯೋಜಿಸ ಬಹುದು. ಬದಿಗೊಂದು ತಾವರೆಕೊಳವಿದ್ದರೂ ಅನುಕೂಲವೇ. ಸಾಧ್ಯವಾದರೆ ನೀರಿನ ಬುಗ್ಗೆಗಳನ್ನೂ ಹೂಡಬಹುದು. ಒಳಬರುವ ಗಾಳಿಯು ತೋಟದ ಗಿಡಗಳನ್ನೂ ಕೊಳದ ನೀರುಗಳನ್ನೂ ತೀಡಿ ಬಂದಲ್ಲಿ ಉಂಟಾಗುವ ಆಹ್ಲಾದಕ್ಕೆ ಎಣೆಯೇ ಇರದು, ಕಾಣಿ. ಎಲ್ಲಕ್ಕಿಂತ, ಟೆರೇಸೆನ್ನುವ ಮನೆಯ ನೆತ್ತಿ ಸಂಪಾದಿಸುವ ಹವೆಯು ಇನಿತೂ ಅಡೆತಡೆಯಿಲ್ಲದೆ ಬೀಸುವ ಮೇರೆಗೆ ಫ್ಯಾನಿಗೆ ಮೈಯೊಡ್ಡಿದಷ್ಟೇ ಹಿತವುಂಟಾಗುವುದು ಖಾತ್ರಿ. ಯೋಚಿಸಿ ನೋಡಿ.

ಈ ಬೇಸಗೆಮನೆಯೆಂಬುದರ ಸರಳ ಸೂತ್ರವಿರುವುದೇ ಮನೆಯೊಳಗಿನ ಇರವು ಎಷ್ಟು ಹೆಚ್ಚು ನೆರಳೊಳಗಿದೆ ಎಂಬುದರಲ್ಲಿ, ಎಷ್ಟು ಕಡಿಮೆ ಗೋಡೆಗಳನ್ನು ಹೊಂದಿ ಎಷ್ಟು ಹೆಚ್ಚು ಗಾಳಿಗೆ ಮೈಯೊಡ್ಡುತ್ತದೆ ಎಂಬುದರಲ್ಲಿ, ಗಾಳಿಯನ್ನು ಎಷ್ಟರ ಮಟ್ಟಿಗೆ ತಣಿಸಿ ಒಳತರಬಲ್ಲುದು ಎಂಬುದರಲ್ಲಿ. ಇಂಥವಕ್ಕೆ ಈ ಮೊದಲು ಹೇಳಿದ ಅರಸರ ಕಾಲದ ಬೇಸಗೆಮನೆಗಳ ಉದಾಹರಣೆಯಿದ್ದೇ ಇವೆ. ಅನುಕರಿಸಿಯೋ ಅನುಸರಿಸಿಯೋ ಅಳವಡಿಸಿಕೊಳ್ಳಿ. ಅನವಶ್ಯಕವಾದ ವಿದ್ಯುತ್-ಅವಲಂಬನೆಯನ್ನು ತಗ್ಗಿಸಿದಲ್ಲಿ ಲೋಕಕ್ಕೆ ಲೋಕವೇ ತಂತಾನೇ ತಣಿದೀತು. ಸದಾ ಒಳಿತೇ ಇದ್ದೀತು ಮತ್ತು ಆದೀತು.

(ಲೇಖಕರು ಕಟ್ಟಡ ವಿನ್ಯಾಸಕಾರರು, ಕಥೆಗಾರರು)



ಏಕ ಅನೇಕ
ಎಸ್.ದಿವಾಕರ್

ಖ್ಯಾತಿಯಿದ್ದೂ ಅಜ್ಞಾತ

ಒಳ್ಳೆಯ ಸಾಹಿತ್ಯಕೃತಿ ಬರೆದರೆ ಖ್ಯಾತಿ ಖಚಿತ, ಓದುಗರು ಮೆಚ್ಚುಗೆ ವ್ಯಕ್ತಪಡಿಸಲು ಹುಡುಕಿ ಬರುವುದೂ ಖಂಡಿತ. ಆದರೆ, ಇವರ‍್ಯಾರ ಸಂಗವೂ ಬೇಡವೆಂದು ಎಲ್ಲರಿಂದ ದೂರವಾಗಿ ಅಜ್ಞಾತರಾಗಿಯೇ ಉಳಿದ ಲೇಖಕರೂ ಹಲವರಿದ್ದಾರೆ.

ನಲವತ್ತೈದು ವರ್ಷಗಳಿಗೂ ಹಿಂದೆ ಒಂದು ಸಂಜೆ ನಾನು ಮಲ್ಲೇಶ್ವರದಲ್ಲಿದ್ದ ಕೃಷ್ಣಾನಂದ ಕಾಮತರ ಸೈಂಟಿಫಿಕ್ ಫೋಟೊ ಸ್ಟುಡಿಯೋದಲ್ಲಿ ಕೂತಿದ್ದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಬಂದವರೊಬ್ಬರು ತಾವು ಸಂಸ್ಕರಿಸುವುದಕ್ಕಾಗಿ ನೀಡಿದ್ದ ಫಿಲ್ಮನ್ನು ಪಡೆದುಕೊಳ್ಳುತ್ತ ಅವರನ್ನು ಕೇಳಿದರು: 'ಸರ್, ಕೃಷ್ಣಾನಂದ ಕಾಮತ್ ಅಂತ ಪುಸ್ತಕಗಳನ್ನು ಬರೀತಾರಲ್ಲ, ಅವರು ನಿಮ್ಮ ಸಂಬಂಧಿಕರಾ?' ಅದಕ್ಕೆ ಕಾಮತರು ನೀಡಿದ ಉತ್ತರ: 'ಇಲ್ಲ, ಅವರು ಯಾರೋ ಗೊತ್ತಿಲ್ಲ.'

ಹೀಗೆ ಯಾರದೋ ಕಣ್ಣಿಗೆ ಬಿದ್ದೆನಲ್ಲ ಎಂದು ಸಂಕೋಚದ ಮುದ್ದೆಯಾದ ಲೇಖಕನೊಬ್ಬನನ್ನು ಮೊಟ್ಟಮೊದಲ ಬಾರಿಗೆ ನೋಡಿದ ನನಗೆ ಆಶ್ಚರ್ಯವಾದದ್ದು ಸಹಜವೇ. ನಾಟಕಕಾರ ಸಂಸರನ್ನು - ಹಾರರ್ ಕತೆಗಳನ್ನು ಬರೆದ ಎಡ್ಗರ್ ಅಲೆನ್ ಪೋನಂತೆ - ಅವರದೇ ಭೂತಗಳು ಕಾಡುತ್ತಿದ್ದವಂತೆ. ಹಾಗಾಗಿ ಅವರು ಜನರ ಸುಳಿವು ಕಂಡರೆ ಸಾಕು, ದೂರ ಸರಿಯುತ್ತಿದ್ದರು. ಅಪರೂಪದ ಕತೆಗಾರ ರಾಘವೇಂದ್ರ ಖಾಸನೀಸರು ನಮ್ಮಲ್ಲಿ ಕೆಲವರಿಗೆ ಸ್ನೇಹಿತರಾಗಿದ್ದರೂ ಬಹುಮಂದಿ ಲೇಖಕರಿಗೆ ಅವರ ಪರಿಚಯಭಾಗ್ಯವೇ ಇರಲಿಲ್ಲ. ಅದಕ್ಕೆ ಅವರಲ್ಲಿದ್ದ ಸಂಕೋಚ ಪ್ರವೃತ್ತಿಯಷ್ಟೇ ಕಾರಣವಾಗಿರಲಾರದು.

ಕತೆ, ಕಾದಂಬರಿ, ನಾಟಕ, ಇತ್ಯಾದಿ ಬರೆಯುವವರಿಗೆ ಏನೆಲ್ಲ ಕಾರಣಗಳುಂಟು? ನೋವನ್ನೋ ನಿರಾಶೆಯನ್ನೋ ಕಾರಿಕೊಳ್ಳುವುದಕ್ಕೆ; ಸೌಂದರ್ಯದ, ಪ್ರೀತಿಯ, ಹಗೆತನದ ಪ್ರದರ್ಶನಕ್ಕೆ; ಭವಿಷ್ಯತ್ತಿಗೆ ರಕ್ಷಿಸಿಡುವುದಕ್ಕೆ; (ಲೇಖಕನ ಅಥವಾ ಬೇರೊಬ್ಬನ) ಜೀವನವನ್ನು ದಾಖಲಿಸುವುದಕ್ಕೆ; ಥುಸೈಡೈಡನಂತೆ ಇತಿಹಾಸವನ್ನು ನಂತರದ ಪೀಳಿಗೆಗೆ ತಿಳಿಸಿಕೊಡುವುದಕ್ಕೆ. ಜೊತೆಗೆ ಖ್ಯಾತಿಯೆನ್ನುವುದೂ ಉಂಟಲ್ಲ ಇದೆಯಲ್ಲ, ಸದ್ಯದ ಖ್ಯಾತಿ? ಭವಿಷ್ಯದ ಖ್ಯಾತಿ? ಎಷ್ಟು ಮಂದಿ ಭವಿಷ್ಯತ್ ಕಾಲದ ಮೆಚ್ಚುಗೆಯನ್ನು ಆಕರ್ಷಿಸುವ ಆಸೆಯಿಲ್ಲದೆ ಬರೆಯುತ್ತಾರೆ? ಯಾವ ಕವಿ ತಾನೆ ಪಂಪನ, ಕುಮಾರ ವ್ಯಾಸನ, ಕುವೆಂಪು, ಬೇಂದ್ರೆ ಅಂಥವರ ಭವ್ಯ ಸಾಧನೆಗಳನ್ನು ನೆನೆದು ಪರವಶಗೊಳ್ಳಲಾರ? ಅಂಥ ಕವಿಗಳಲ್ಲಿ ಕೆಲವರಾದರೂ ಮುಂದೊಂದು ಕಾಲದಲ್ಲಿ ಆ ಅಂಥ ಮಹಾಕವಿಗಳ ಜೊತೆ ತಮಗೂ ಒಂದು ಸ್ಥಾನ ಇರಬಹುದೆಂಬ ಕನಸು ಕಾಣಲಾರರೆ? ಕೆ.ಎಸ್. ನರಸಿಂಹಸ್ವಾಮಿಯವರ ಕವನವೊಂದರ ಈ ಸಾಲುಗಳನ್ನು ಓದಿ:

ಗಾರೆಗೋಡೆಯ ಚಿತ್ರಸಾಲು ಪರಿಷತ್ತಿನಲಿ;
ಒಬ್ಬೊಬ್ಬರೂ ಒಂದು ಧನ್ಯಜೀವ.
ನನಗು ಎಡೆಯಿರಬಹುದು ಅವರಿರುವ ಸಾಲಿನಲಿ-
ಮನವ ತುಂಬಿದ್ದುಂಟು ನಮ್ರ ಭಾವ.

ಆದರೂ ಜಗತ್ತಿನ ಪ್ರಖ್ಯಾತ ಲೇಖಕರನೇಕರು 'ಕೀರ್ತಿಶನಿ'ಯ ಬಳಿ ಸುಳಿಯುವ ಮನಸ್ಸಿಲ್ಲದೆ 'ದೂರ ದೂರ ಜನವಿದೂರ'ರಾಗಿರುವುದುಂಟು. ಅವರಲ್ಲಿ ಜಿಯೊವಾನ್ನಿ ವೆರ್ಗಾ, ಫ್ರಾಂರ್ಝ್ ಕಾಫ್ಕ, ಮಾರ್ಸೆಲ್ ಪ್ರೂಸ್, ವಿಲಿಯಂ ಫಾಕ್ನರ್, ಜೆ.ಡಿ. ಸಾಲಿಂಜರ್, ಥಾಮಸ್ ಪಿಂಚಾನ್, ಹಾರ್ಪರ್ ಲೀ, ಎಲೆನಾ ಫೆರಾಂತೆ, ಹೀಗೆ ಅದೆಷ್ಟು ಮಂದಿ!

ಅಮೆರಿಕನ್ ಲೇಖಕ ವಿಲಿಯಂ ಫಾಕ್ನರ್‌ನ ಒಂದು ಅತ್ಯದ್ಭುತ ಸಣ್ಣಕತೆ 'ಎ ರೋಸ್ ಫಾರ್ ಎಮಿಲಿ'. ಅದರಲ್ಲಿರುವುದು ಮನೆ ಬಿಟ್ಟು ಹೊರಗೇ ಕಾಲಿಡದ ನಿಗೂಢ ಮಹಿಳೆಯೊಬ್ಬಳ ಕತೆ. ಆ ಮಹಿಳೆಯಂತೆ ವಿಲಿಯಂ ಫಾಕ್ನರ್ ಕೂಡ ಮಿಸಿಸಿಪ್ಪಿಯ ಆಕ್ಸ್‌ಫರ್ಡ್ ಎಂಬಲ್ಲಿನ 'ರೋವನ್‌ಓಕ್' ಬಂಗಲೆಯಲ್ಲಿ ಬದುಕುತ್ತ ತನ್ನ ಖಾಸಗಿ ಜೀವನಕ್ಕೆ ಧಕ್ಕೆಯಾಗದಂತೆ ನೋಡಿಕೊಂಡ. ಅವನ 'ರಿಕ್ವಿಯಮ್ ಫಾರ್ ಎ ನನ್' ಎಂಬ ಕಾದಂಬರಿಯನ್ನು ಫ್ರೆಂಚ್ ಲೇಖಕ ಆಲ್ಬರ್ಟ್ ಕಮೂ ನಾಟಕ ರೂಪಕ್ಕೆ ಅಳವಡಿಸಿದನಷ್ಟೆ, ಅವನು ಫಾಕ್ನರನನ್ನು ನೋಡಿ ಮಾತಾಡಿಸಬೇಕೆಂಬ ಆಸೆಯಿಂದ ಆಕ್ಸ್‌ಫರ್ಡಿಗೇ ಹೋದ. ಆದರೆ ಫಾಕ್ನರ್ ಅವನನ್ನು ಸರಿಯಾಗಿ ಮಾತಾಡಿಸಲೂ ಇಲ್ಲ. ಆದರೇನು, ನೊಬೆಲ್ ಪ್ರಶಸ್ತಿ ಸ್ವೀಕರಿಸಿದ ಸಂದರ್ಭದಲ್ಲಿ ಅವನು ಮಾಡಿದ ಒಂದೂವರೆ ಪುಟದ ಭಾಷಣ ಸಾಹಿತ್ಯಲೋಕದಲ್ಲಿ ಸದಾ ಕಾಲ ಅನುರಣಿಸುತ್ತಿರುತ್ತದೆ. (ಇದನ್ನು ಎಚ್.ಎಸ್. ರಾಘವೇಂದ್ರರಾವ್ ಕನ್ನಡಕ್ಕೆ ಅನುವಾದಿಸಿದ್ದಾರೆ.)

'ದಿ ಕ್ಯಾಚರ್ ಇನ್ ದಿ ರೈ' ಎಂಬ ಮೊದಲ ಕಾದಂಬರಿಯಿಂದಲೇ ರಾತ್ರೋರಾತ್ರಿ ಪ್ರಖ್ಯಾತನಾದವನು ಜೆ.ಡಿ. ಸಾಲಿಂಜರ್. ಎರಡನೇ ಮಹಾ ಯುದ್ಧದಲ್ಲಿ ಕೌಂಟರ್ ಇಂಟೆಲಿಜೆನ್ಸ್ ಆಫೀಸರಾಗಿ ಕೆಲಸ ಮಾಡಿದ ಈತ ಯುದ್ಧಕಾಲದ ಮಾನಸಿಕ ಒತ್ತಡದಿಂದಾಗಿ ಆಸ್ಪತ್ರೆ ಸೇರಿದ್ದೂ ಉಂಟು. 1965ರಲ್ಲಿ ಜನಸಂಪರ್ಕದಿಂದ ಸಂಪೂರ್ಣವಾಗಿ ದೂರವಾದವನು ತನ್ನ ಪುಸ್ತಕಗಳಲ್ಲಿ ತನ್ನ ಫೋಟೊ ಹಾಕಬಾರದೆಂದು ತೀರ್ಮಾನಿಸಿದ್ದಷ್ಟೇ ಅಲ್ಲ, ತನ್ನ ಎಸ್ಟೇಟಿನೊಳಕ್ಕೆ ಯಾರೇ ಕಾಲಿಡಲಿ ಅವರತ್ತ ಪಿಸ್ತೂಲು ತೋರಿಸಿ ಹೆದರಿಸುತ್ತಿದ್ದನೆಂದು ಪ್ರತೀತಿ.

ಥಾಮಸ್ ಪಿಂಚಾನ್ ತನ್ನ ತಾರುಣ್ಯದಲ್ಲಿ ಅಮೆರಿಕದ ನೌಕಾದಳಕ್ಕೆ ಸೇರಿದವನು ಬಹುಬೇಗ ಅದನ್ನು ಬಿಟ್ಟು ಒಂದು ವಿಶ್ವವಿದ್ಯಾಲಯವನ್ನು ಸೇರಿಕೊಂಡ. ಅಲ್ಲಿ ಅವನಿಗೆ ಬೋಧಿಸಿದವನು ವ್ಲದೀಮಿರ್ ನೊಬೊಕೋವ್. ಆಮೇಲೆ ಅವನು ಬರೆದ 'ವಿ' ಮತ್ತು 'ಗ್ರಾವಿಟೀಸ್ ರೇನ್ ಬೊ' ಸಾಹಿತ್ಯಲೋಕವನ್ನು ಬೆರಗಿಗೀಡು ಮಾಡಿದ ಕಾದಂಬರಿಗಳು. ಆದರೂ ಅವನು ಜನರಿಂದ ಎಷ್ಟು ದೂರವಾದನೆಂದರೆ 1974ರಲ್ಲಿ ತನಗೆ ಬಂದ ನ್ಯಾಷನಲ್ ಬುಕ್ ಅವಾರ್ಡನ್ನು ಸ್ವೀಕರಿಸಲು ಹೋಗಲಿಲ್ಲ; ಬದಲಿಗೆ ಒಬ್ಬ ವಿದೂಷಕನನ್ನು ಕಳಿಸಿದ.

ಲೇಖಕರಂತೆ ಅಜ್ಞಾತವಾಗಿ ಉಳಿಯಬಯಸುವ ಲೇಖಕಿಯರಿಲ್ಲವೆ? ಇದ್ದಾರೆ. ಉದಾಹರಣೆಗೆ ಕವಯಿತ್ರಿ ಎಮಿಲಿ ಡಿಕಿನ್ಸನ್. ಸ್ವಲ್ಪಮಟ್ಟಿಗೆ ನಿರಂಕುಶವೆನ್ನಿಸುವ, ಬೆಚ್ಚಿಬೀಳಿಸುವ ಪ್ರತಿಮೆಗಳುಳ್ಳ ಹೊಸ ಧಾಟಿಯ ಕಾವ್ಯ ರಚಿಸಿದ ಈಕೆ ಸುಮಾರು ಎರಡು ದಶಕಗಳ ಕಾಲ ತನ್ನ ಮನೆಯನ್ನು ಬಿಟ್ಟು ಹೊರಗೆ ಕಾಲಿಡದೆ ಕಿಟಕಿಗಳ ಮೂಲಕವೇ ಹೊರ ಜಗತ್ತಿನೊಡನೆ ವ್ಯವಹರಿಸುತ್ತಿದ್ದಳಂತೆ. ಅಜ್ಞಾತವಾಗಿ ಉಳಿಯಬಯಸುವ ಇನ್ನೊಬ್ಬ ಲೇಖಕಿ ಎಲೆನಾ ಫೆರಾಂತೆ ಸ್ವತಃ ಬರೆದಿರುವುದು ಹೀಗೆ: 'ಪುಸ್ತಕಗಳನ್ನು ಬರೆದಾದ ಮೇಲೆ ಲೇಖಕನ ಅಗತ್ಯವಿಲ್ಲ, ಅವನ ಪುಸ್ತಕಗಳಿಗೆ ಏನಾದರೂ ಹೇಳುವುದಕ್ಕಿದ್ದರೆ ಈಗಲೋ ಆಮೇಲೋ ಓದುಗರು ಹುಟ್ಟಿಕೊಳ್ಳುತ್ತಾರೆ, ಇಲ್ಲದಿದ್ದರೆ ಇಲ್ಲ... ನನಗಂತೂ ಪ್ರಾಚೀನವೂ ಆಧುನಿಕವೂ ಆದ, ನಿರ್ದಿಷ್ಟ ಲೇಖಕರ ಹೆಸರುಗಳೇ ಇಲ್ಲದ, ತಮ್ಮದೇ ಗಾಢವಾದ ಜೀವನಾನುಭವವನ್ನು ನಿರೂಪಿಸುವ ನಿಗೂಢ ಗ್ರಂಥಗಳೆಂದರೆ ಇಷ್ಟ. ನಿಜವಾದ ಪವಾಡವೆನ್ನುವುದು ಪವಾಡ ಮಾಡಿದವರು ಅಜ್ಞಾತವಾಗಿಯೇ ಉಳಿದಾಗ ಮಾತ್ರ.'

ಖ್ಯಾತಿಯ ಆಸೆಯಿಲ್ಲದ ಲೇಖಕ ಯಾರಾದರೂ ಇದ್ದರೆ ಅವನು ಅನಾಮಧೇಯ ಲೇಖಕನೇ ಇರಬೇಕು.

ಆರ್.ಕೆ. ನಾರಾಯಣರ ಒಂದು ಪ್ರಬಂಧದ ಹೆಸರು 'ಅಡ್ವಾಂಟೇಜಸ್ ಆಫ್ ಅನಾನಿಮಿಟಿ'. ಅದರಲ್ಲಿ ಅನಾಮಧೇಯತೆಯ ಅನುಕೂಲಗಳನ್ನು ವಿವರಿಸುತ್ತ ಅವರು ಹೇಳುತ್ತಾರೆ: 'ಪುಸ್ತಕವೊಂದು ಚೆನ್ನಾಗಿದ್ದರೆ ಉಳಿದುಕೊಳ್ಳುತ್ತದೆ; ಚೆನ್ನಾಗಿಲ್ಲದಿದ್ದರೆ ಅದನ್ನು ಬರೆದ ಲೇಖಕ ಯಾರೆಂದು ಯಾರಿಗೂ ಗೊತ್ತಾಗುವುದಿಲ್ಲ!'

ಅನಾಮಿಕನಾಗಿರುವುದೆಂದರೆ ಲೇಖಕನ ಮತ್ತು ಓದುಗನ ನಡುವೆ, ಅವನ ಕೃತಿ ಮತ್ತು ಅವನ ಜೀವನದ ನಡುವೆ ಗೋಡೆಯೆದ್ದಂತೆ. ಹಾಗೆ ನೋಡಿದರೆ, ಒಬ್ಬ ಲೇಖಕನ ಕೃತಿಯೇ ಬೇರೆ, ಅವನ ನಿಜವಾದ ಜೀವನವೇ ಬೇರೆ. ಕೆಲವು ಲೇಖಕರು ತಮಗಷ್ಟೇ ಸಂಬಂಧಿಸಿದ ಘಟನೆಯನ್ನೋ ಸನ್ನಿವೇಶವನ್ನೋ ಪರೋಕ್ಷವಾಗಿ ಬರೆದಿರುವ ಸಂಭವವೂ ಇದೆಯೆನ್ನಿ. ಆದರೂ ಓದುಗನಿಗೆ ಅದು ಅವನದೇ ಎಂದು ಗೊತ್ತಾಗುವುದು ಸುಲಭವಲ್ಲ.

ಸಾಮಾಜಿಕ ಜಾಲತಾಣಗಳ ಈ ಕಾಲದಲ್ಲಿ ಹೇಗೋ ಎಂತೋ ಕ್ಷಣವಾದರೂ ಜನರ ಕಣ್ಣಿಗೆ ಬಿದ್ದರೆ ಸಾಕು ಎಂದು ಹಂಬಲಿಸುತ್ತಲೇ ಇರುವ ಲೇಖಕರಲ್ಲಿ ಒಬ್ಬಿಬ್ಬರಾದರೂ, 'ನಾನು ಅನಾಮಿಕನಾಗಿಯೇ ಉಳಿದಿರುತ್ತೇನೆ' ಎಂದು ಸುಮ್ಮನಿರಲು ಸಾಧ್ಯವೆ? ಸಾಧ್ಯವಿಲ್ಲ. ಯಾಕೆಂದರೆ ಜನರೇ - ಪನ್ನುಗಳ ಪಂಡಿತ ವೈಯೆನ್ಕೆಯವರ ಜೋಕಿನಂತೆ, 'ಸುಮ್ನೆ ಇರಾನಂದ್ರೆ ಇರಾಕ್‌ಬಿಡಲ್ಲ'. ■

ಇಂಗ್ಲಿಷ್‌ಗೆ ನಮ್ಮಮ್ಮ



ವಸುಧೇಂದ್ರ ಅವರ ಬಲು ಪ್ರಸಿದ್ಧ ಪ್ರಬಂಧ ಕೃತಿ 'ನಮ್ಮಮ್ಮ ಅಂದ್ರೆ ನಂಗಿಷ್ಟ' ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಗೊಳ್ಳುತ್ತಿದೆ. ಮೇ 10ರ ತಾಯಂದಿರ ದಿನದ ನಿಮಿತ್ತ ಹಾರ್ಪರ್ ಕೊಲಿನ್ಸ್ ಪ್ರಕಾಶನವು ಇದನ್ನು ಪ್ರಕಟಿಸುತ್ತಿದೆ. ಮೋಹನಸ್ವಾಮಿ, ತೇಜೋ ತುಂಗಭದ್ರಾ ಕೃತಿಗಳ ಬಳಿಕ ಇಂಗ್ಲಿಷ್‌ಗೆ ಭಾಷಾಂತರಗೊಂಡ ವಸುಧೇಂದ್ರ ಅವರ ಮೂರನೇ ಕೃತಿ ಇದು.

ನಾರಾಯಣ್ ಶಂಕರನ್ 'ನಮ್ಮಮ್ಮ ಅಂದರೆ ನಂಗಿಷ್ಟ' ಕೃತಿಯನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಈ ಪ್ರಬಂಧ ಸಂಕಲನದ ಮುಖ್ಯ ಪ್ರಬಂಧ 'ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳು' 25 ವರ್ಷಗಳ ಹಿಂದೆ ವಿಜಯ ಕರ್ನಾಟಕದಲ್ಲಿ ಮೊದಲ ಬಾರಿಗೆ ಪ್ರಕಟವಾಗಿತ್ತು. ನಮ್ಮಮ್ಮ ಕೃತಿ ಈಗಾಗಲೇ ಕನ್ನಡದಲ್ಲಿ 32 ಮುದ್ರಣಗಳನ್ನು ಕಂಡಿದೆ. ತಮಿಳು, ತೆಲುಗು ಭಾಷೆಗಳಿಗೆ ಅನುವಾದಗೊಂಡು ಅಲ್ಲಿಯೂ ಓದುಗರ ಮೆಚ್ಚುಗೆ ಗಳಿಸಿದೆ. ರಂಗ ಪ್ರಯೋಗವಾಗಿಯೂ ಯಶಸ್ವಿಯಾಗಿದ್ದು, ಬೆಂಗಳೂರಿನ ರಂಗಶಂಕರದಲ್ಲಿ 50ಕ್ಕೂ ಹೆಚ್ಚು ಪ್ರದರ್ಶನ ಕಂಡಿದೆ. ■

Advertorial

ಅಲಿವಿಯೇಟ್ ಕ್ಲಿನಿಕ್‌ನಲ್ಲಿದೆ ನೋವಿಗೆ ಉಪಾಯ | ಸ್ಟಿರಾಯ್ಡ್ ಎಂಬ ಶಾರ್ಟ್‌ಕಟ್ ಬಳಕೆ ಇಲ್ಲ

ಮಂಡಿನೋವಿನ ಉಪಶಮನಕ್ಕೆ ಸರ್ಜರಿ ಇಲ್ಲದೇ ಸುಲಭ ಚಿಕಿತ್ಸೆ

■ ಬೆಂಗಳೂರು

ಮೊಣಕಾಲಿನ ನೋವು ಇತ್ತೀಚಿನ ವರ್ಷಗಳಲ್ಲಿ ಅನೇಕ ಜನರ ಜೀವನ ನಿರ್ವಹಣೆಯನ್ನು ಕಷ್ಟಕರವಾಗಿಸಿದೆ. ಆದರೆ, ಇದರ ಬಗ್ಗೆ ಆತಂಕ ಬೇಡ. ಬೆಂಗಳೂರಿನ ಪ್ರಸಿದ್ಧ 'ಅಲಿವಿಯೇಟ್ ಪೇನ್ ಮ್ಯಾನೇಜ್ಮೆಂಟ್ ಕ್ಲಿನಿಕ್'ನಲ್ಲಿ ಯಾವುದೇ ಅಡ್ಡ ಪರಿಣಾಮಗಳಿಲ್ಲದೆ, ನೈಸರ್ಗಿಕವಾಗಿ ನೋವನ್ನು ಕಡಿಮೆ ಮಾಡುವ 'ಪಿಆರ್‌ಪಿ ಚಿಕಿತ್ಸೆ' ವರದಾನವಾಗಿದೆ.

ವಯಸ್ಸಾದವರು, ಕ್ರೀಡಾಪಟುಗಳಿಂದ ಹಿಡಿದು ಗೃಹಿಣಿಯರವರೆಗೆ ಬಹಳಷ್ಟು ಮಂದಿ ಕೀಲು ಸವೆತ ಮತ್ತು ಸಂಧಿವಾತ ದಂತಹ ನೋವಿನಿಂದ ನರಳುತ್ತಿದ್ದಾರೆ. ಮೆಟ್ಟಿಲು ಹತ್ತಲು ತೊಂದರೆ, ಸರಳ ಕೆಲಸವೂ ಕಷ್ಟವಾಗಿದ್ದು, ಕುಳಿತಿದ್ದ ಜಾಗದಿಂದ ಏಳುವುದು ಕಷ್ಟಕರ. ಇವೆಲ್ಲವೂ ಅಸ್ಥಿ ಸಂಧಿವಾತದ ಲಕ್ಷಣಗಳಾಗಿದ್ದು, ಇದಕ್ಕಾಗಿ ನೋವು ನಿವಾರಕಗಳ ಮೇಲೆ ಅತಿಯಾದ ಅವಲಂಬನೆ ಹೊಂದುತ್ತಿದ್ದಾರೆ.

ಈ ನೋವು ದೇಹದೊಳಗಿನ ಸಮಸ್ಯೆ ಸೂಚಿಸುವ ಒಂದು ಪ್ರಬಲವಾದ ಎಚ್ಚರಿಕೆ ಸಂದೇಶ ಅಷ್ಟೇ. ಅದಕ್ಕೆ ನೋವು ನಿವಾರಕಗಳ ಮೊರೆ ಹೋಗುವುದು, ಸ್ಟೀರಾಯ್ಡ್ ಚುಚ್ಚುಮದ್ದುಗಳನ್ನು ಹಾಕಿಸಿಕೊಳ್ಳುವುದರಿಂದ ತಾತ್ಕಾಲಿಕವಾಗಿ ಪರಿಹಾರ ಕಂಡುಕೊಳ್ಳಬಹುದು. ಆದರೆ ಪೂರ್ಣ ಗುಣ ಸಾಧ್ಯವಿಲ್ಲ. ಹಾಗಾಗಿ ಸಮಸ್ಯೆಯನ್ನು ಬುಡದಿಂದಲೇ ಪರಿಹರಿಸುವ ಅಗತ್ಯವಿದೆ. ಅದಕ್ಕಾಗಿ ಅಲಿವಿಯೇಟ್ ಪೇನ್ ಮ್ಯಾನೇಜ್ಮೆಂಟ್ ಕ್ಲಿನಿಕ್‌ನಲ್ಲಿ ಪರಿಹಾರ ಲಭ್ಯವಿದೆ.

ಸಾಂದರ್ಭಿಕ ಚಿತ್ರ

ಚಿಕಿತ್ಸೆಯ ವಿಶೇಷತೆ ಮತ್ತು ಅನುಕೂಲ

- **ಮೂಲಕ್ಕೆ ಚಿಕಿತ್ಸೆ:** ನೋವಿಗೆ ಕಾರಣವಾದ ಅಂಗಾಂಶದ ಹಾನಿ ಸರಿಪಡಿಸಲಿದೆ. ಇದರಿಂದ ನೋವಿನ ಸಮಸ್ಯೆ ಬುಡದಿಂದಲೇ ಉಪಶಮನ ಸಾಧ್ಯವಾಗುತ್ತದೆ.
- **ನಿಮ್ಮದೇ ದೇಹದ ಶಕ್ತಿ ಬಳಕೆ:** ನಿಮ್ಮ ದೇಹದಿಂದ ತೆಗೆದ ರಕ್ತದಲ್ಲಿರುವ ಪ್ಲೇಟ್‌ಲೆಟ್‌ಗಳು (ಗುಣ ಮಾಡುವ ಶಕ್ತಿಯನ್ನು) ಪ್ರತ್ಯೇಕಿಸಿ, ಚುಚ್ಚುಮದ್ದಿನ ಮೂಲಕ ನೋವಿರುವ ಜಾಗಕ್ಕೆ ನೀಡಲಾಗುತ್ತದೆ.
- **ದೀರ್ಘಕಾಲೀನ ಉಪಶಮನ:** ಕೇವಲ ತಾತ್ಕಾಲಿಕ ಆರಾಮಕ್ಕಷ್ಟೇ ಸೀಮಿತವಾಗದೆ, ದೀರ್ಘಕಾಲದ ನೋವು ಮುಕ್ತ ಜೀವನಕ್ಕಾಗಿ ರೂಪಿಸಲಾದ ಸುರಕ್ಷಿತ ಮಾರ್ಗವಿದು.
- **ಅಪರೇಷನ್‌ಗೆ ಸೂಕ್ತ ಪರ್ಯಾಯ:** ಶಸ್ತ್ರಚಿಕಿತ್ಸೆ (ಆಪರೇಷನ್) ಬೇಡ ಎನ್ನುವವರಿಗೆ ಮತ್ತು ಆಪರೇಷನ್‌ಗೆ ಸೂಕ್ತವಲ್ಲದವರಿಗೆ ಈ ವರದಾನವಾಗಿದೆ.
- **ಡೇ ಕೇರ್ ಕಾರ್ಯವಿಧಾನ:** ಈ ಚಿಕಿತ್ಸೆಯು ಡೇ ಕೇರ್ ಕಾರ್ಯವಿಧಾನ ಹೊಂದಿದ್ದು, ಚಿಕಿತ್ಸೆ ಪಡೆದ ದಿನವೇ ಡಿಸ್ಚಾರ್ಜ್ ಮಾಡಲಾಗುತ್ತದೆ.

ಪಿಆರ್‌ಪಿ ಚಿಕಿತ್ಸೆಯ ಲಾಭಗಳು

- ಆಸ್ಪತ್ರೆ ವಾಸ ಇರುವುದಿಲ್ಲ
- 30-60 ನಿಮಿಷದ ಪ್ರಕ್ರಿಯೆ
- ಸ್ಟೀರಾಯ್ಡ್ ಬಳಕೆ ಇಲ್ಲ
- 48 ಗಂಟೆಯಲ್ಲಿ ಕೆಲಸಕ್ಕೆ ಮರಳಬಹುದು

ಇತರ ಚಿಕಿತ್ಸೆ ಮೊಣಕಾಲು ಮಾತ್ರವಲ್ಲದೆ ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿದೆ.

ವಿಳಾಸ:
ಅಲಿವಿಯೇಟ್ ನೋವು ನಿವಾರಣಾ ಕೇಂದ್ರ,
ಬೆಂಗಳೂರು ಶಾಖೆಗಳು: ಪೀಣ್ಯ ದಾಸರಹಳ್ಳಿ, ಸದಾಶಿವನಗರ, ಜಯನಗರ, ಇಂದಿರಾನಗರ, ವೈಟ್‌ಫೀಲ್ಡ್, ದೂ: 080 25256878; 080 23614888

RNI No. KARKAN/2016/71628
Vol. 11 Issue no. 115
Published by Lokesh K V on behalf of Metropolitan Media Company Limited., Published at 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, Ph: 080 40877666 and Printed at (a) Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099. (b) Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) Metropolitan Media Co. Ltd.,Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g) Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. Regd. Office: 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, (Ph:080-40877666). Editor: Sudarshan Channangihalli.
© All Rights Reserved. Reproduction in whole or part without permission is prohibited.

ಪದ್ಯಕಾಲ

ಹರ ಸಾಹಸ

ಹರ ಹರ ಮಹಾದೇವ
ಎಂದೆನುತ ಧ್ಯಾನದಲಿ ನಟಿಸಿ
ಕೈಮುಗಿದು ಕುಳಿತು
ನೆಟ್ಟ ಸಸಿ ಪೋಷಿಸದೆ ಹೋದಾಗ
ಬೆಳೆದು ಹೆಮ್ಮರವಾಗಿ
ಫಲ ನೀಡಬಹುದೆ?

ಒಂದೆಡೆ
ತಾಳಲಾರದ ಬಿಸಿಲಿನ
ಬಂಡಾಯದ ಕಾವಿನಲಿ
ಕಲ್ಲುಬಂಡೆಯ ಸೀಳಿ
ಬೆಳೆದ ಮರದ ಹಾಗೆ
ಬೆಳೆಸಬೇಕಲ್ಲ!

ಆದರಲ್ಲೂ
ಹಾರಬೇಕು ಎತ್ತರಕ್ಕೆ
ಹಕ್ಕಿಯ ಹಾಗೆ
ರೆಕ್ಕೆ ಸೋತರೂ ನಿಲ್ಲದೆ
ಸದಾ ಏರಬೇಕು
ಗುರಿ ಮುಟ್ಟುವತನಕ

ಬಿದ್ದರೂ-ಎದ್ದರೂ
ಬಿಟ್ಟುಬಿಡದೆ
ಕಣ್ಣಿಗೆ ಬಿದ್ದ
ನಿಲುಕದ ಹಣ್ಣು
ಕೈಗೆಟುಕಲು ಮಾಡಲೇಬೇಕಲ್ಲ
ಹರ
ಸಾಹಸ!
ಕೊನೆಗೊಮ್ಮೆ ಸಿಕ್ಕಾಗ
ಸವಿದಷ್ಟು ತೃಪ್ತಿಕರ
ಕೈಲಾಸ!

ಡಿ.ಬಿ. ಥಂಗ

ಪಿಂಕು ಮತ್ತು ಕಂಬಳಿಹುಳು

ಮಕ್ಕಳ ಕಥೆ

ಭಾರತಿ ಎ. ಕೊಪ್ಪ
feedbacklvk@vijaykarnataka.com



ಪಿಂಕು ತುಂಟ ಕೋತಿ. ಯಾವಾಗಲೂ ತನ್ನ ಸ್ನೇಹಿತರು ಮತ್ತು ಬಳಗವನ್ನು ಬಿಟ್ಟು ಒಂಟಿಯಾಗಿ ಹೋಗುತ್ತಾನೆ. ಹೇಗಾದರೂ ಮಾಡಿ ಜನರ ಕಣ್ಣು ತಪ್ಪಿಸಿ ಸಿಕ್ಕ ಸಿಕ್ಕ ತರಕಾರಿ ತೋಟ, ಹಣ್ಣಿನ ತೋಟ ನುಗ್ಗಿ ಚೇಷ್ಟೆ ಮಾಡುತ್ತಾ ಹೊಟ್ಟೆ ತುಂಬಿಸಿಕೊಳ್ಳುತ್ತಾನೆ. ಆ ಊರಿನ ಶಾಲೆಯ ಕೈತೋಟದಲ್ಲಿ ಇದ್ದ ಪೇರಳೆ ಹಣ್ಣುಗಳನ್ನಂತೂ ಮಕ್ಕಳ ಕಣ್ಣು ತಪ್ಪಿಸಿ ಕಚ್ಚಿ ಕಚ್ಚಿ ಎಸೆಯುವುದು ಪಿಂಕುವಿಗೆ ಇಷ್ಟ. ಹಣ್ಣು ತಿನ್ನುವಾಗ ಕೈತೋಟದ ಹೂವಿನ ಗಿಡಗಳ ಮೇಲೆ ಹಾರಾಡುವ ಚಿಟ್ಟೆಗಳ ಜೊತೆಗೆ ಸ್ನೇಹ ಬೆಳೆಸಿಕೊಳ್ಳುತ್ತಿದ್ದ. ತರಗತಿಯಲ್ಲಿ ಶಿಕ್ಷಕರು ಪಾಠ ಮಾಡುವಾಗ ಕಿಟಕಿಯಲ್ಲಿ ಕೈಯಾಡಿಸಿ ತನ್ನ ಕಿಲಾಡಿತನ ತೋರಿಸುತ್ತಿದ್ದ.

ಒಂದು ದಿನ ಶಾಲಾ ಕೈತೋಟದ ಗಿಡವೊಂದರಲ್ಲಿ ಕೆಲವು ಕಂಬಳಿಹುಳುಗಳು ನೇತಾಡುತ್ತಿರುವುದು ಪಿಂಕುವಿಗೆ ಕಾಣಿಸಿತು. ಆ ಗಿಡದ ಹತ್ತಿರ ಹೋಗಿ ನೋಡಿದ ಪಿಂಕು, 'ಈ ಹುಳುಗಳು ಎಲೆಗಳನ್ನು ತಿನ್ನುತ್ತಿವೆ. ಕೆಲವು ನನ್ನ ಹಾಗೆ ಜೋಕಾಲಿ ಆಡ್ತ ಇವೆಯಲ್ಲ' ಎಂದು ಅಚ್ಚರಿಪಟ್ಟಿತ್ತು.

ಬಹಳ ಸಣ್ಣ ಹುಳು. ಹೋಗಿ ಎಳೆದೇ ಬಿಡಲೇ? ಮೈಯೆಲ್ಲ ಮುಳ್ಳು ಮುಳ್ಳಿನ ಹಾಗಿದೆ. ಎಳೆದರೆ ನನಗೆ ಕಷ್ಟ ಎಂದು ಮನದಲ್ಲೇ ಲೆಕ್ಕ ಹಾಕಿತು ಪಿಂಕು. ಹತ್ತಿರ ಹೋಗಿ ಮಾತನಾಡಿಸುತ್ತೇನೆ ಎಂದು ಪಿಂಕು ಮರದಿಂದ ಇಳಿದು ಮೆಲ್ಲನೆ ಕಂಬಳಿಹುಳುವಿನ ಬಳಿ ಹೋಯಿತು. 'ಏಯ್ ...' ಪಿಂಕು ಒಂದೆರಡು ಸಲ ಕರೆಯಿತು. ಗಾಢ ನಿದ್ರೆಯಲ್ಲಿದ್ದ ಕಂಬಳಿಹುಳು ಎಚ್ಚರಗೊಂಡು ಗಾಬರಿಗೊಂಡಿತು. ಆಗ ಕೋತಿ, 'ಹೆದರಬೇಡ, ಈ ತೋಟದ ಮರದಲ್ಲಿ ಜೋಕಾಲಿ ಆಡುವವನು ನಾನು ಮಾತ್ರ ಅಂದುಕೊಂಡಿದ್ದೆ. ನೀನೂ ನನ್ನ ಹಾಗೆ ತೂಗಾಡುತ್ತಿರುವೆಯಲ್ಲ! ಯಾರು ನೀನು' ಎಂದಿತು.

'ನಾನು ಕಂಬಳಿಹುಳ. ನಿನ್ನ ಹಾಗೆ ಯಾವಾಗಲೂ ಮರದಲ್ಲಿ ಜೋಕಾಲಿ ಆಡಲ್ಲ. ಕೆಲ ದಿನಗಳು ಮಾತ್ರ ಹೀಗೆ ಗಿಡಗಳಲ್ಲಿ ತೂಗಾಡುತ್ತ, ಗಾಢ ನಿದ್ರೆ ಮಾಡುತ್ತ, ಸಿಕ್ಕ ಸಿಕ್ಕ ಎಲೆಗಳನ್ನು ತಿನ್ನುತ್ತ ಇರುತ್ತೇನೆ. ನಂತರ ಈ ರೂಪ ಕಳೆದುಕೊಂಡು ಚಿಟ್ಟೆಯಾಗಿ ಸಂತಸದಿಂದ ಹಾರಾಡ್ತ ಇರುತ್ತೇನೆ' ಎಂದಿತು. 'ತಮಾಷೆ ಮಾಡ್ತೀಯ? ನನಗೂ ಬಹಳ ಚಿಟ್ಟೆ ಸ್ನೇಹಿತರಿದ್ದಾರೆ. ಅವರು ಯಾರೂ ನಿನ್ನ ಹಾಗೆ ಕುರೂಪ ಹೊಂದಿಲ್ಲ' ಎಂದಿತು ಕೋತಿ.

'ಅಯ್ಯೋ, ನಾನು ಏಕೆ ಸುಳ್ಳು ಹೇಳಲಿ ಕೋತಿಯಣ್ಣಾ, ನೋಡು ಅಲ್ಲಿ ಕೈತೋಟದ ಆ ಮೂಲೆಯ ಗಿಡಗಳ ಮೇಲೆ ಬಣ್ಣ ಬಣ್ಣದ ಚಿಟ್ಟೆಗಳು ಹಾರಾಡುತ್ತಿವೆಯಲ್ಲ, ಅವರೆಲ್ಲ ನನ್ನ ಬಳಗದವರೇ. ಮೊನ್ನೆ ತನಕ ಅವರೂ ನನ್ನ ಹಾಗೆ ಇದ್ದರು. ನೀನು ನಿನ್ನ ಚೇಷ್ಟೆಯ ನಡುವೆ ಅವರನ್ನು ಗಮನಿಸಿಲ್ಲ. ಬೇಕಿದ್ದರೆ ಅವರನ್ನು ವಿಚಾರಿಸು' ಎಂದಿತು ಕಂಬಳಿಹುಳು.

ನೋಡಿಯೇ ಬಿಡೋಣ ಎಂದು ಪಿಂಕು ನೇರವಾಗಿ ಚಿಟ್ಟೆಗಳ ಬಂದು, 'ಸುಂದರಿಯರೇ, ಮಕರಂದ ಹೀರಿದ್ದು ಸಾಕು ಬನ್ನಿ ಇಲ್ಲಿ' ಎಂದು ಕರೆಯಿತು. ಎಲ್ಲ ಚಿಟ್ಟೆಗಳೂ ಕೋತಿಯ ಸುತ್ತಲೂ ಕುಳಿತವು.

'ಅಲ್ಲೊಂದು ಹುಳು ಇದೆ. ನೀವು ಮೊದಲು ಹಾಗೆ ಇದ್ರಂತೆ ಹೌದ?' ಎಂದು ಪಿಂಕು ಚಿಟ್ಟೆಗಳನ್ನು ಪ್ರಶ್ನಿಸಿತು. ಆಗ ರಾಣಿ ಚಿಟ್ಟೆ 'ಓಹೋ, ನೀನು ತಲೆ ಕೆರೆದುಕೊಳ್ಳುತ್ತಿರುವುದು ಈ ವಿಚಾರಕ್ಕ? ಅದು ನಿಜ. ನಾವೆಲ್ಲರೂ ಮೊದಲು ಕಂಬಳಿ ಹುಳು ಆಗಿದ್ದೆವು. ಈಗ ಚಿಟ್ಟೆ ಆಗಿದ್ದೇವೆ' ಎಂದಿತು. ಪಿಂಕುವಿಗೆ ಎಲ್ಲವೂ ವಿಚಿತ್ರ ಎನಿಸಿದರೂ ಮಂಗನಿಂದ ಮಾನವ ಆಗಿದಾನೆ ಅಂತ ನಮ್ಮ ಮಾವಿನ ಮರದ ಪಕ್ಕದ ಮನೆಯ ಅಜ್ಜಿ ಹೇಳಿದ ಹಾಗೆ ಇದೂ ಇರಬಹುದು ಅಂತ ಮನದಲ್ಲೇ ಅಂದುಕೊಂಡಿತು. ಪಿಂಕು ಇದೇ ವಿಚಾರ ಮೆಲುಕು ಹಾಕುತ್ತ ಮರ ಏರಿತು. ಪೇರಳೆ ಮರವನ್ನು ಸುತ್ತುವರಿಯುವ ಶಾಲಾ ಮಕ್ಕಳು ಇನ್ನೂ ಹೊರಗೆ ಬರಲಿಲ್ಲವಲ್ಲ ಎಂದು ತರಗತಿ ಬಳಿ ಹೋಯಿತು. ಆಗ ಶಿಕ್ಷಕರು ಸ್ಮಾರ್ಟ್ ಕ್ಲಾಸ್‌ನಲ್ಲಿ ಕಂಬಳಿಹುಳು ಚಿಟ್ಟೆಯಾಗುವ ಬಗ್ಗೆ ಪಾಠ ಹೇಳುತ್ತಿದ್ದರು. ಪಿಂಕು ಕಣ್ಣರಳಿಸಿ ನೋಡಿತು. ■

ಬಾಡಿಗೆ

ಕಥೆ ಕಿಟಕಿ



ಗಿರಿಧರ್ ಖಾಸನೀಸ್

ಪಕ್ಕದ ಮನೆಗೆ ಹೊಸ ಬಾಡಿಗೆದಾರರು ಬಂದಿದ್ದಾರೆ. ರಾಕೇಶ್ ಮತ್ತು ರಾಖಿ -ಮೂವತ್ತರ ಆಸುಪಾಸಿನ ದಂಪತಿಗಳು. ಅವರಿಗೊಂದು ಹಸುಗೂಸು.

ನೋಡಲು ಡೀಸೆಂಟ್ ಆಗಿದ್ದಾರೆ. ಎದುರು ಸಿಕ್ಕಾಗ ಗುಡ್ ಮಾರ್ನಿಂಗ್, ಗುಡ್ ಇವ್‌ನಿಂಗ್... ಎರಡು ನಿಮಿಷ ಮಾತುಕತೆ.

ರಾಕೇಶ್ ಬಿಝಿ ಹುಡುಗ. ಯಾವಾಗಲೋ ಬರ್ತಾನೆ ಯಾವಾಗಲೋ ಹೋಗ್ತಾನೆ. ಹಾಗಾಗಿ ರಾಖಿ ಮತ್ತು ಮಗುವಿನ ಜೊತೆ ನನ್ನ ಹೆಚ್ಚು ಪರಿಚಯ, ಒಡನಾಟ.

ಒಮ್ಮೊಮ್ಮೆ ರಾತ್ರಿಯೆಲ್ಲ ಮಗು ಅಳುತ್ತೆ. ನನ್ನ ನಿದ್ದೆ ಕೆಡುತ್ತೆ. ಏನು ಮಾಡೋದು? ಹೇಳಕ್ಕಾಗಲ್ಲ ಬಿಡಕ್ಕಾಗಲ್ಲ. ಮಾರನೇ ದಿನ ಸಿಕ್ಕರೆ, 'ಸಾರಿ ಅಂಕಲ್, ನಿಮ್ಮ ಸ್ಲೀಪ್ ಡಿಸ್ಟರ್ಬ್ ಆಯಿತೇನೋ?' ಅನ್ನುತ್ತಾಳೆ.

ನಿನ್ನೆ ರಾತ್ರಿ ಜಗಳ. ಪಾತ್ರೆ ಬಿದ್ದ ಸದ್ದು... ಮಗು ಎಚ್ಚರಗೊಂಡು ಅಳತೊಡಗಿತು. ನನಗೆ ತಡೆಯಲಾಗಲಿಲ್ಲ. ಗೇಟು ತೆರೆದು ಅವರ ಕಾಂಪೌಂಡಿನ ಒಳಗೆ ಹೆಜ್ಜೆ ಇಟ್ಟೆ. ಕತ್ತಲೋ ಕತ್ತಲು. ಬಾಗಿಲು ತಟ್ಟಿದೆ. ತೆರೆಯಲಿಲ್ಲ. ಬೆಲ್ ಒತ್ತಿದೆ. ಉಹುಂ, ನೋ ರಿಪ್ಲೈ. ಅಷ್ಟು ಹೊತ್ತಿಗೆ ಕೂಗಾಟ ನಿಂತಿತ್ತು. ಸಾಯಲಿ ಅಂತ ಹಿಂತಿರುಗಿದೆ.

ಕಣ್ಣು ತೆರೆದಾಗ ಬೆಳಕಾಗಿತ್ತು. ಆಸ್ಪತ್ರೆಯ ವಾಸನೆ. ತಲೆಗೆ ಬ್ಯಾಂಡೇಜ್. ನನ್ನ ಮುಂದೆ ಅವರಿಬ್ಬರೂ ನಿಂತಿದ್ದರು. 'ರಾತ್ರಿ ಕತ್ತಲಲ್ಲಿ ಯಾಕೆ ಓಡಾಡ್ತೀರಿ, ಅಂಕಲ್? ನೀವು ಗೇಟಿನ ಹತ್ತಿರ ಬಿದ್ದಿದ್ದಿರಿ. ರಾಕೇಶ್ ಕೆಲಸದಿಂದ ಲೇಟ್ ಆಗಿ ಬಂದಿದ್ದು... ಅದೃಷ್ಟ.'

ಅವಳ ಕಂಕುಳಲ್ಲಿದ್ದ ಮಗು ಪಿಳಿಪಿಳಿ ಕಣ್ಣು ಬಿಡುತ್ತಾ ನನ್ನನ್ನು ನೋಡಿತು. 'ಡೋಂಟ್ ವರಿ ಅಂಕಲ್, ಹೆಚ್ಚು ಪೆಟ್ಟಾಗಿಲ್ಲ, ರೆಸ್ಟ್ ತಗೊಳ್ಳಿ.' ರಾಕೇಶ್ ಮಾತಾಡುತ್ತಿದ್ದ. ರಾತ್ರಿ ಕೇಳಿದ ದನಿ ಬೇರೆಯಿತ್ತಲ್ಲಾ?

ತಿಂಗಳ ನಂತರ ಅವರ ಮನೆ ಖಾಲಿಯಾಯಿತು. ಕೆಲವು ದಿನಗಳ ನಂತರ ಅಮೆರಿಕದಿಂದ ಪತ್ರ, 'ಥ್ಯಾಂಕ್ ಯು, ಅಂಕಲ್. ರಾಖಿ.'

ಲಾಜಿಕ್ ಮ್ಯಾಜಿಕ್

ಗಣಿತ

1. 10 9 16 45 176 ?

2. ಕೆಳಗೆ ಕೆಲವು ಸಂಖ್ಯೆಗಳನ್ನು ನಿರ್ದಿಷ್ಟ ಕ್ರಮದಲ್ಲಿ ಕೆಲವು ಗಣಿತ ಚಿಹ್ನೆಗಳೊಂದಿಗೆ ನೀಡಲಾಗಿದೆ. ಸರಿಯಾದ ಗಣಿತ ಸಮೀಕರಣವನ್ನು ಮಾಡಲು ಸಂಖ್ಯೆಗಳು ಮತ್ತು ಚಿಹ್ನೆಗಳನ್ನು ಜೋಡಿಸಿ.

ಗಮನಿಸಿ: ನೀವು ಎಲ್ಲಾ ಸಂಖ್ಯೆಗಳು ಮತ್ತು ಚಿಹ್ನೆಗಳನ್ನು ಒಂದೇ ಕ್ರಮದಲ್ಲಿ ಬಳಸಬೇಕು.

ಸಂಖ್ಯೆಗಳು: 753452120

ಚಿಹ್ನೆಗಳು: + − =



ಉತ್ತರಗಳು:
1. 875
10 X 1 1 = 9; 9 X 2 2 = 16;
16 X 3 3 = 45;
45X4 4 = 176
176 X 5 5 = 875.
2. 7 + 534 521 =
20

ನ್ಯೂ ಬುಕ್

ಕೋಮುವಾದ ಸಂತ್ರಸ್ತರ ಮಾತುಗಳು



ಕರಾವಳಿಯ ರಕ್ತ-ಕಣ್ಣೀರು; ಲೇ: ಇರ್ಷಾದ್ ಉಪ್ಪಿನಂಗಡಿ ಪ್ರ: ಅಹರ್ನಿಶಿ, ಶಿವಮೊಗ್ಗ ಪುಟ: 144; ಬೆಲೆ: 160 ರೂ.

ಶೈಕ್ಷಣಿಕವಾಗಿ ಮುಂಚೂಣಿಯಲ್ಲಿರುವ ದಕ್ಷಿಣ ಕನ್ನಡಕ್ಕೆ ಕೋಮುವಾದ ಒಂದು ಕಪ್ಪುಚುಕ್ಕೆಯಾಗಿ ಪರಿಣಮಿಸಿದೆ. ಶಾಂತವಾಗಿರುವ ಜಿಲ್ಲೆ ಒಮ್ಮಿಂದೊಮ್ಮೆಲೆ ಭುಗಿಲೇಳುತ್ತದೆ. ಮತೀಯವಾದಿಗಳ ಜಿದ್ದಿಗೆ, ದ್ವೇಷಕ್ಕೆ ಯಾರದ್ದೋ ಹೆಣ ಬೀಳುತ್ತದೆ. ಸಮಯ ಕಳೆದ ಹಾಗೆ ಪರಿಸ್ಥಿತಿ ತಿಳಿಯಾಗುತ್ತದೆ. ಆದರೆ, ನೋವು, ಸಂಕಟ, ಭಯ, ಆತಂಕ ಹಾಗೆಯೇ ಉಳಿದುಬಿಡುತ್ತದೆ. ಈ ನೋವನ್ನು ಅನುಭವಿಸಿದವರ ಮತ್ತು ಆ ನೋವಲ್ಲೇ ಕೊರಗುತ್ತಿರುವವ ಮಾತಿಗೆ ಕಿವಿಯಾಗಿ ಅದನ್ನು 'ಕರಾವಳಿಯ ರಕ್ತ ಕಣ್ಣೀರು' ಮೂಲಕ ಪುಸ್ತಕ ರೂಪಕ್ಕೆ ಇಳಿಸಿದ್ದಾರೆ ಇರ್ಷಾದ್ ಉಪ್ಪಿನಂಗಡಿ.

ಈ ಪುಸ್ತಕದಲ್ಲಿ ಒಟ್ಟು 18 ಲೇಖನಗಳಿವೆ. ಅದರಲ್ಲಿ 13 ಕೋಮು ಹತ್ಯೆಯ ಪ್ರಕರಣಗಳಿವೆ. ದಿನೇಶ್ ಅಮಿನ್ ಮಟ್ಟು ಅವರು ಬೆನ್ನುಡಿಯಲ್ಲಿ ಹೇಳಿರುವಂತೆ 'ಕಣ್ಣುಗಳಿದ್ದೂ ದೃಷ್ಟಿ ಕಳೆದುಕೊಂಡು ತಮ್ಮ ತಮ್ಮ ಧರ್ಮ ರಕ್ಷಣೆಗೆ ಹೊರಟವರು ಈ ಪುಸ್ತಕದಲ್ಲಿ ದಾಖಲಿಸಿರುವ ಕೋಮುವಾದದ ಸಂತ್ರಸ್ತರ ಎದೆಯಾಳದ ಮಾತುಗಳನ್ನು ತಮ್ಮೆದೆಗಳಿಗೆ ಇಳಿಸಿಕೊಂಡು ಇರ್ಷಾದ್ ಉಪ್ಪಿನಂಗಡಿಯವರ ಪ್ರಯತ್ನ ಅಷ್ಟರಮಟ್ಟಿಗೆ ಸಾರ್ಥಕವಾಗಬಹುದು'. ■

ಬದುಕ ಸಂಭ್ರಮಿಸುವ ಬರಹ



ಬೆಲ್‌ವೆಲ್; ಲೇ: ವಿಕ್ರಮ್ ಬಿ.ಕೆ. ಪ್ರ: ತ್ರಿಲೋಕ ಬರಹ, ಬೆಂಗಳೂರು ಪುಟ: 125; ಬೆಲೆ: 150 ರೂ.

ಆತ್ಮಕಥನವನ್ನೋ ಅನುಭವ ಕಥನವನ್ನೋ ಬರೆಯುವುದಕ್ಕೆ ಇಳಿವಯಸ್ಸಿಗೆ ಕಾಲಿಟ್ಟಿರಬೇಕು ಅಥವಾ ಕಠಿಣ ಆರೋಗ್ಯ ಸಮಸ್ಯೆಯೊಂದನ್ನು ಜಯಿಸಿದ ಅನುಭವವಿರಬೇಕು ಎಂಬ ನಂಬುಗೆಯೊಂದು ನಮ್ಮಲ್ಲಿದೆ. ಆದರೆ, ವಿಕ್ರಮ್ ಬಿ.ಕೆ. ಅವರಿಗೆ ಇನ್ನೂ ನಲುವತ್ತು ದಾಟಿಲ್ಲ, ಅವರು ಅನುಭವ ಕಥನವೊಂದನ್ನು ಬರೆದಿದ್ದಾರೆ. 'ಬೆಲ್‌ವೆಲ್' ಹೆಸರಿನ ಈ ಕೃತಿಗೆ '#celebratinglife' ಎಂಬ ಅಡಿಬರಹವಿದೆ.

ಈ ಎಳೆಯನ ಅನುಭವ ಏನಿರಬಹುದು, ತನ್ನ ಬಗ್ಗೆಯೇ ಹೇಳಿಕೊಳ್ಳುತ್ತಾರಾ ಎಂಬ ಗುಮಾನಿಯಿಂದ ಓದಲು ಹೊರಡುವವರಿಗೆ ಅಚ್ಚರಿ ಎದುರಾಗುತ್ತದೆ. ಇಲ್ಲಿ ಬಹುತೇಕ ಬರಹಗಳೂ ಆರಂಭವಾಗುವುದು ವಿಕ್ರಮ್ ಅವರ ಸ್ವಾನುಭವದಿಂದ, ಆದರೆ ಅಂತ್ಯವಾಗುವುದು ಲೋಕದೃಷ್ಟಿಯ ವಿಶಾಲ ನೋಟದಿಂದ. ಪುಸ್ತಕದಲ್ಲಿ 'ಮಗು ಹುಟ್ಟಿತು' ಎಂಬ ಒಂದು ಅಧ್ಯಾಯವಿದೆ. ಸ್ವತಃ ವಿಕ್ರಮ್‌ಗೆ ಮಗು ಹುಟ್ಟಿದ ಸಂದರ್ಭದಿಂದಲೇ ಬರಹ ಆರಂಭ. ಬರೆಯುತ್ತ ಬರೆಯುತ್ತ ಸಹೋದ್ಯೋಗಿಯೊಬ್ಬರ ಮಗು ವಿರಳ ಕಾಯಿಲೆಯಿಂದ ನರಳುತ್ತಿರುವುದು, ಅದಕ್ಕೆ ಚಿಕಿತ್ಸೆ ಕೊಡಿಸುವ ಕಷ್ಟ, ಭಾರತದ ಮಕ್ಕಳಲ್ಲಿ ಇಂತಹ ಏಳು ಸಾವಿರಕ್ಕೂ ಹೆಚ್ಚು ಡಿಸಾರ್ಡರ್‌ಗಳು ಕಂಡುಬಂದಿರುವುದು, ಪೋಷಕರ ಸೆಣಸಾಟ ಮೊದಲಾದ ವಿವರಗಳೊಂದಿಗೆ ಆ ಬರಹ ಮಿಡಿಯುತ್ತದೆ. 'ಇದೂ ದುಡಿಮೆ' ಲೇಖನದಲ್ಲಿ ತಾನು ಜರ್ಮನಿಗೆ ಹೋದ ಸಂದರ್ಭವನ್ನು ಹೇಳುತ್ತಾ 'ನಾನು ಸೆಕ್ಸ್ ವರ್ಕರ್' ಎಂದು ಪರಿಚಯಿಸಿಕೊಂಡಾತನ ಬಗೆಗೆ ಯೋಚಿಸುತ್ತಾರೆ ಲೇಖಕರು. ಹಾಗೆಯೇ 'ಪಿರಮಿಡ್' ಲೇಖನದಲ್ಲಿ ಈಜಿಪ್ಟ್ ಪ್ರವಾಸದ ಬಗೆಗೆ ಹೇಳುತ್ತಾ ಅಲ್ಲಿನ ಜನರ ಬಗೆಗೆ ಹೇಳುತ್ತಾರೆ, 'ಬದುಕು ಹುಟ್ಟು ಸಾವುಗಳ ತುದಿಗಳಲ್ಲಿಲ್ಲ, ನಡುವಿನ ದಾರಿಯಲ್ಲಿದೆ' ಎಂಬ ಗಾಢ ಅನುಭವ ಕೊಡುವ ಸಾಲುಗಳನ್ನೂ ಬರೆಯುತ್ತಾರೆ.

ವಿಕ್ರಮ್ ತಳಮಟ್ಟದಿಂದ ಮೇಲೆ ಬಂದವರು, ಕ್ಷಣಕ್ಷಣವೂ ಬದುಕನ್ನು ಸಂಭ್ರಮಿಸುವವರು. ಹೀಗಾಗಿಯೇ ಹಂಚಿಕೊಳ್ಳಲು ಅವರಲ್ಲಿ ಬಹಳಷ್ಟು ವಿಷಯಗಳಿವೆ, ಸಾಮಾಜಿಕ ಕಾಳಜಿಯುಕ್ತ ನೋಟಗಳಿವೆ, ಸಮೃದ್ಧ ಆತ್ಮವಿಶ್ವಾಸವೂ ಇದೆ. ಇವನ್ನೆಲ್ಲ ಬರೆದಿರುವ ರೀತಿಯೂ ಹಾಗೆಯೇ, ಇತರರಿಗೂ ಸ್ಫೂರ್ತಿ ನೀಡುವಂತೆ. 'ಕೇಳು ಮನಸೇ'ಯಂತಹ ಹಲವು ಹೊಸ ಪ್ರಯೋಗ ಮಾಡಿದ, ಮಂಜಮ್ಮ ಜೋಗತಿ, ಸಾಲುಮರದ ತಿಮ್ಮಕ್ಕರಂಥ ಹಿರಿಯ ಚೈತನ್ಯಗಳ ಜೊತೆಗಿನ ಒಡನಾಟದ ಬುತ್ತಿ ಕಟ್ಟಿಕೊಂಡಿರುವ ವಿಕ್ರಮ್ ಬರಹದ ಭಾಷೆ ಸರಳ, ಸುಲಲಿತ, ಭಾವಪ್ರೇರಿತ. ವಿಚಾರಗಳು ಕೂಡ ಅಷ್ಟೇ ಸ್ಪಷ್ಟ. ಈ ಹೊಸ ಬಗೆಯ ಕೃತಿ ಇನ್ನಷ್ಟು ಹೊಸ ಅನುಭವಗಳಿಗೆ ತೆರೆದುಕೊಳ್ಳಲಿರುವ ಅವರಿಂದ, ಅಷ್ಟೇ ಅಲ್ಲ, ಅವರಂತಹ ಎಳೆಯರಿಂದ ಇನ್ನಷ್ಟು ಅನುಭವ ಕಥನಗಳನ್ನು ನಿರೀಕ್ಷಿಸುವಂತೆ ಮಾಡುತ್ತದೆ. ■

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ.

ದೂ: 9513747474

ಮೇಷ, ಸಿಂಹ, ತುಲಾ -ಈ ರಾಶಿಯವರಿಗೆ ಈ ದಿನ ಮಹಾ ಪುರುಷ ರಾಜ ಯೋಗ

ಮೇಷ: ರಾಜಕೀಯ ರಂಗದಲ್ಲಿ ಬಹಳ ದಿನಗಳ ನಂತರ ಯಶಸ್ಸು ದೊರೆಯಲಿದೆ. ಇಂದಿನ ದಿನಚರಿಯು ಸಂತೋಷ ಮೂಡಿಸುತ್ತದೆ. ಎಲ್ಲವನ್ನೂ ನಿಭಾಯಿಸುವ ಸಾಮರ್ಥ್ಯವಿದ್ದರೂ ಸೋಮಾರಿತನ ಕಾಡಬಹುದು. ಅದೃಷ್ಟ ಸಂಖ್ಯೆ 1, ಅದೃಷ್ಟ ಬಣ್ಣ ಕಿತ್ತಳೆ
(ನಾಮಾಕ್ಷರ: ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ಸಿಂಹ: ಸರಕಾರಿ ಸಂಬಂಧ ವ್ಯವಹಾರಗಳಿಂದ ನಿರೀಕ್ಷೆಗೂ ಮೀರಿದ ಲಾಭ ಅನುಭವಿಸುತ್ತೀರಿ. ಹಣಕಾಸು ಸಂಸ್ಥೆಗಳ ನೆರವಿನಿಂದ ಬಹುದಿನದ ಸ್ವಂತ ಉದ್ದಿಮೆ ಪ್ರಾರಂಭಿಸುವ ಯೋಜನೆ ಕೈಗೂಡುವುದು. ಅದೃಷ್ಟ ಸಂಖ್ಯೆ 2, ಅದೃಷ್ಟ ಬಣ್ಣ ನೀಲಿ
(ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ) ಮಘೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಧನುಸ್ಸು: ಕೃಷಿ ಕ್ಷೇತ್ರದವರಿಗೆ ಕೆಲಸ ಅಧಿಕ. ಲಾರಿ ಮತ್ತು ಟ್ಯಾಂಕರ್‌ನಂಥ ದೊಡ್ಡ ಪ್ರಮಾಣದ ವಾಹನಗಳ ಮಾಲೀಕರಿಗೆ ಒಳ್ಳೆಯ ದಿನ. ಅಧಿಕಾರಿಗಳ ಪರಿಚಯವಾಗಲಿದೆ. ಅದೃಷ್ಟ ಸಂಖ್ಯೆ 9, ಅದೃಷ್ಟ ಬಣ್ಣ ಕಪ್ಪು
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ವೃಷಭ: ಕ್ರೀಡಾ ಕ್ಷೇತ್ರದವರಿಗೆ ಉತ್ತಮ ಸಾಧನೆಗೆ ಅವಕಾಶವಿದೆ. ಮಕ್ಕಳು ವ್ಯಸನಗಳಿಗೆ ಒಳಗಾಗಿ ಆರೋಗ್ಯ ಮತ್ತು ಮನಸ್ಸನ್ನು ಹಾಳು ಮಾಡಿಕೊಳ್ಳುವ ಲಕ್ಷಣವಿದೆ. ಮಕ್ಕಳ ಚಟುವಟಿಕೆಗಳ ಬಗ್ಗೆ ಗಮನವಹಿಸಿ. ಅದೃಷ್ಟ ಸಂಖ್ಯೆ 3, ಅದೃಷ್ಟ ಬಣ್ಣ ಕೆಂಪು
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಕನ್ಯಾ: ಮಕ್ಕಳ ಶಿಕ್ಷಣದ ವಿಚಾರವಾಗಿ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ವ್ಯವಹಾರದಲ್ಲಿ ಇನ್ನೊಬ್ಬರ ಹಸ್ತಕ್ಷೇಪ ನಿಮ್ಮ ನಷ್ಟಕ್ಕೆ ಮುಖ್ಯ ಕಾರಣ. ಹಿರಿಯರ ಮನಸ್ಸನ್ನು ನೋಯಿಸುವಂತೆ ನಡೆದುಕೊಳ್ಳಬೇಡಿ. ಅದೃಷ್ಟ ಸಂಖ್ಯೆ 6, ಅದೃಷ್ಟ ಬಣ್ಣ ಹಳದಿ
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ಮಕರ: ಕೆಲಸಗಳ ಬಗ್ಗೆ ಅನುಭವಸ್ಥರೊಂದಿಗೆ ಮಾತುಕತೆ ನಡೆಸುವುದರಿಂದ ತಿಳಿವಳಿಕೆ ವೃದ್ಧಿ. ಕಾನೂನಾತ್ಮಕ ಹೋರಾಟ ಅಥವಾ ಕೋರ್ಟ್ ವ್ಯವಹಾರ ಓಡಾಟಕ್ಕೆ ಮುಕ್ತಾಯ ಸಿಗಲಿದೆ. ಅದೃಷ್ಟ ಸಂಖ್ಯೆ 2, ಅದೃಷ್ಟ ಬಣ್ಣ ಆಕಾಶ ನೀಲಿ
(ಬೊ,ಜ,ಜಿ,ಖಿ,ಖು,ಖೆ,ಖೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಮಿಥುನ: ವ್ಯಾವಹಾರಿಕ ಸಂಬಂಧಗಳು ವಿಸ್ತಾರಗೊಳ್ಳುವ ಸಮಯ ಇದಾಗಿದೆ. ಅಭಿವೃದ್ಧಿಯ ವಿಚಾರದಲ್ಲಿ ಸ್ವಪ್ರಯತ್ನದೊಂದಿಗೆ ದೈವ ಬಲವೂ ಇರುತ್ತದೆ. ರಾಜಕೀಯ ಚಟುವಟಿಕೆಗಳು ಹೆಚ್ಚಾಗಲಿವೆ. ಅದೃಷ್ಟ ಸಂಖ್ಯೆ 5, ಅದೃಷ್ಟ ಬಣ್ಣ ಹಸಿರು
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ತುಲಾ: ಇತರರ ಮಾತನ್ನು ತಪ್ಪಾಗಿ ಅರ್ಥೈಸಿ ಸಂಬಂಧಿಕರಲ್ಲಿ ಭಿನ್ನಾಭಿಪ್ರಾಯ ಸೃಷ್ಟಿಸಿಕೊಳ್ಳಬೇಡಿ. ಮಕ್ಕಳ ದೈನಂದಿನ ಚಟುವಟಿಕೆಯತ್ತ ಗಮನ ನೀಡಿ. ಭೂಮಿ ಸಂಬಂಧ ವ್ಯವಹರಿಸುವಾಗ ಬುದ್ಧಿವಂತಿಕೆ ಅಗತ್ಯ. ಅದೃಷ್ಟ ಸಂಖ್ಯೆ 4, ಅದೃಷ್ಟ ಬಣ್ಣ ಗುಲಾಬಿ
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ಕುಂಭ: ವಿವಿಧ ಮೂಲಗಳಿಂದ ಆದಾಯ ವೃದ್ಧಿ. ವೈವಾಹಿಕ ಮಾತುಕತೆಗಳು ಪ್ರಗತಿಯತ್ತ ಸಾಗಲಿವೆ. ಷೇರು ವ್ಯವಹಾರಗಳಿಂದ ನಿರೀಕ್ಷಿಸಿದ ಲಾಭ ಬರುವುದು. ಅದೃಷ್ಟ ಸಂಖ್ಯೆ 1, ಅದೃಷ್ಟ ಬಣ್ಣ ಕೇಸರಿ
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಕಟಕ: ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧಕ್ಕೆ ಪೌಷ್ಟಿಕತೆ ಸಿಕ್ಕಿ ಮುಂದುವರಿಯಲಿ. ಪ್ರವಾಸ ಮನರಂಜನೆಗೂ ಸಾಕಷ್ಟು ಸಮಯ ಮೀಸಲಿಡುವುದರಿಂದ ನೆಮ್ಮದಿ ಇರಲಿದೆ. ಅದೃಷ್ಟ ಸಂಖ್ಯೆ 7, ಅದೃಷ್ಟ ಬಣ್ಣ ಬೂದು
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ವೃಶ್ಚಿಕ: ಬಟ್ಟೆ ಉದ್ಯಮದವರಿಗೆ ಲಾಭ ಬರುವುದು. ಪುಸ್ತಕ ಪ್ರಕಾಶಕರಿಗೆ ನೂತನ ಕಾರ್ಯಭಾರ ಹೊರೆಯಾಗಬಹುದು. ವಿನೋದ ಸ್ವಭಾವ, ಧರ್ಮ-ಕರ್ಮಗಳಲ್ಲಿ ಆಸಕ್ತಿ ಇತರರನ್ನು ಆಕರ್ಷಿಸುವುದು. ಅದೃಷ್ಟ ಸಂಖ್ಯೆ 8, ಅದೃಷ್ಟ ಬಣ್ಣ ಬಿಳಿ
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಮೀನ: ಪರಿಶ್ರಮದ ಫಲಕ್ಕಿಂತ ಅದೃಷ್ಟದ ಫಲವೇ ಅಧಿಕವಾಗಿ ಅನುಭವಕ್ಕೆ ಬರಲಿದೆ. ನಾಯಕತ್ವದ ಗುಣವಿರುವ ನಿಮಗೆ ಅವಕಾಶ ಮತ್ತು ಸಹಚರರ ಒತ್ತಡ ಅನುಭವಕ್ಕೆ ಬರಲಿದೆ. ಅದೃಷ್ಟ ಸಂಖ್ಯೆ 3, ಅದೃಷ್ಟ ಬಣ್ಣ ಖಾಕಿ
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಪುಸ್ತಕ ಟಿಪ್ಪಣಿ

ವಿಚಾರಪೂರ್ಣ ಕೃತಿ



ಕೆ. ರಘು ಶೆಟ್ಟಿಯವರ ಸಣ್ಣ ಕಥೆಗಳು ಹಾಗೂ ವೈಚಾರಿಕ ಲೇಖನಗಳ ಸಂಗ್ರಹ ಕೃತಿ 'ಪುರಾಣದ ಪಾತ್ರಗಳು ಮತ್ತು ವರ್ತಮಾನದ ಚಿತ್ರಗಳು'. ಈ ಪುಸ್ತಕದ ಕಥಾಭಾಗದಲ್ಲಿ ಗಜೇಂದ್ರ ಮೋಕ್ಷ, ಅಯ್ಯಪ್ಪ ಸ್ವಾಮಿ, ಪರೀಕ್ಷಿತನ ಶಾಪದ ಕಥೆ ಸೇರಿದಂತೆ ಒಟ್ಟು 28 ಸಣ್ಣ ಕಥೆಗಳು ಹಾಗೂ ವೈಚಾರಿಕ ಲೇಖನಗಳು ವಿಭಾಗದಲ್ಲಿ ಏಳು ವಿಚಾರಪೂರ್ಣ ಲೇಖನಗಳಿವೆ. **ಪುರಾಣದ ಪಾತ್ರಗಳು ಮತ್ತು ವರ್ತಮಾನದ ಚಿತ್ರಗಳು; ಲೇ: ಕೆ. ರಘು ಶೆಟ್ಟಿ; ಪ್ರ: ಶ್ರೀರಾಮ ಪ್ರಕಾಶನ, ಮಂಡ್ಯ; ಪುಟ: 160; ಬೆಲೆ: 160 ರೂ.** ■

ಬದುಕು-ಭಾವಗಳ ಮೆಲುಕು



ಹಿರಿಯ ಸಾಹಿತಿ ಆರ್.ಎಂ. ಸೀತಾರಾಮು ಅವರ 'ಪಂಚವಟಿಯಲ್ಲಿ ಸೀತಾರಾಮ ಮತ್ತು ಇತರ ಕವನಗಳು' ಸಂಕಲನದಲ್ಲಿ 50 ಕವನಗಳಿವೆ. ಇಲ್ಲಿ ಪುರಾಣ ಪಾತ್ರಗಳ ಕುರಿತ ಕತೆಗಳಿವೆ, ಬದುಕು, ಭಾವನೆ, ಕಾಲ ಹೀಗೆ ಅನೇಕ ವಿಚಾರಗಳ ಕುರಿತ ವಿಚಾರ ಮಂಥನ ಇದೆ. ಪ್ರಾಸಗಳ ಹಂಗಿಲ್ಲದೆ ಮುಕ್ತವಾಗಿ ಹರಿಯುವ ಕವಿತೆಗಳು ಇವು. **ಪಂಚವಟಿಯಲ್ಲಿ ಸೀತಾರಾಮ ಮತ್ತು ಇತರ ಕವನಗಳು; ಲೇ: ಆರ್.ಎಂ. ರಾವ್; ಪ್ರ: ಓಂಕಾರ್ ಪ್ರಕಾಶನ, ಬೆಂಗಳೂರು; ಪುಟ: 105; ಬೆಲೆ: 100 ರೂ.** ■

ಜನಪರ ಕನ್ನಡಕದಲ್ಲಿ ಕವಿತೆಗಳು



ಸುಮುಖಾನಂದ ಜಲವಳ್ಳಿಯವರು ತಮ್ಮ 'ಕಾವ್ಯದ ಅಂತರಂಗ ಬಹಿರಂಗ' ಪುಸ್ತಕದಲ್ಲಿ ಕವನಗಳನ್ನು ಜನಪರವಾಗಿ ನೋಡುವ ಪ್ರಯತ್ನ ಮಾಡಿದ್ದಾರೆ. ಕವನಗಳ ಅರ್ಥ-ಭಾವಗಳಿಗೆ ನಾನಾ ಮಗ್ಗುಲುಗಳು ಇರುತ್ತವೆ ಅನ್ನುವ ಎಚ್ಚರದಿಂದಲೇ ಇಲ್ಲಿ ಕವಿತೆಗಳನ್ನು ನೋಡಲಾಗಿದೆ. ಸುಮಾರು 60ಕ್ಕಿಂತ ಹೆಚ್ಚು ಕವಿಗಳ ಒಂದೊಂದು ಕವಿತೆ ಆಯ್ದು ವಿಶ್ಲೇಷಣೆಗೆ ಒಳಪಡಿಸಲಾಗಿದೆ. **ಕಾವ್ಯದ ಅಂತರಂಗ ಬಹಿರಂಗ-ಭಾಗ 1; ಲೇ:ಸುಮುಖಾನಂದ ಜಲವಳ್ಳಿ; ಪ್ರ: ಸುಮುಖ ಪ್ರಕಾಶನ, ಹೊನ್ನಾವರ; ಪುಟ:420;ಬೆಲೆ:500 ರೂ.**

ಮನೋವಿಕಾಸಕ್ಕೆ ಪದ್ಯಗಳು

ಮಕ್ಕಳ ಪದ್ಯ ಸಂಕಲನ 'ಗಾಳಿಪಟ'ದಲ್ಲಿ 35 ಪದ್ಯಗಳಿವೆ. ಇಲ್ಲಿನ ಪದ್ಯಗಳು ಮಕ್ಕಳಲ್ಲಿ ಸಾಹಿತ್ಯ ಆಸಕ್ತಿಯನ್ನು ಉತ್ತೇಜಿಸುವುದು ಖಂಡಿತ. ಈ ಪದ್ಯಗಳನ್ನು ಓದಿದರೆ ಸುತ್ತಲಿನ ಪರಿಸರವನ್ನು ಅರ್ಥ ಮಾಡಿಕೊಳ್ಳುವ ಆಸೆ ಹುಟ್ಟುತ್ತದೆ. ಮನರಂಜನೆಯ ಜತೆಗೆ ಮಾಹಿತಿ ನೀಡುವ ಕವಿತೆಗಳನ್ನು ಸುರೇಶ ಅಂಗಡಿ ಬರೆದಿದ್ದಾರೆ. **ಗಾಳಿಪಟ; ಲೇ: ಸುರೇಶ ಅಂಗಡಿ; ಪ್ರ: ಸಿಂಚನ ಪ್ರಕಾಶನ, ಹೂವಿನ ಹಡಗಲಿ; ಪುಟ: 88; ಬೆಲೆ: 120 ರೂ.** ■

ನಾನು ಓದಿದ ಹೊತ್ತಿಗೆ

ನಿತ್ಯದ ಜಂಜಾಟಕ್ಕೆ ನಗುವಿನ ಮದ್ದು

ಕಲ್ಪನಾ ಹೆಗಡೆ ಸೋಮನಳ್ಳಿ
feedbacklvk@vijaykarnataka.com

ಲೇಖಕಿ, ಕತೆಗಾರ್ತಿ ನಳಿನಿ ಟಿ. ಭೀಮಪ್ಪರವರ ಲಲಿತ ಪ್ರಬಂಧಗಳ ಸಂಗ್ರಹ ನಾಲ್ಕೊಂದ್ಲ ನಾಕು. ಇದಕ್ಕೆ ಲೇಖಕಿ ಸುಮಾ ರಮೇಶ್ ಅವರ ಮುನ್ನುಡಿಯ ತೋರಣವಿದೆ.

ಈ ಸಂಕಲನದಲ್ಲಿ ನಳಿನಿಯವರು ಬರವಣಿಗೆಗೆ ಆಯ್ಕೆ ಮಾಡಿಕೊಂಡ ವಿಷಯಗಳು ನಮ್ಮ ನಿತ್ಯದ ಬದುಕಿನಲ್ಲಿ ನೋಡಿದ ಅನುಭವಿಸಿದ ಘಟನೆಗಳೇ. ಇನ್ನು ಕೆಲವು ನಮ್ಮ ಶರೀರದ ಸೊಂಟ, ಕಿವಿ, ಉಗುರುಗಳಂತಹ ಅಂಗಾಂಗಗಳು. ಈ ಸಾದಾಸೀದಾ ಚಿಕ್ಕ ಚಿಕ್ಕ ವಿಷಯಗಳೇ ನಳಿನಿಯವರ ಕೈ ಬರಹದಲ್ಲಿ ವಿಶೇಷವಾಗಿ ಕಾಣಿಸುತ್ತವೆ. ಗಂಭೀರ ವಿಷಯಗಳೂ ತಿಳಿಯಾದಂತೆ ಭಾಸವಾಗಿ ತುಟಿಗಳು ಬೇಡವೆಂದರೂ ಹೂ ಅರಳಿದಂತೆ ಅರಳುತ್ತವೆ.

ನಳಿನಿಯವರ ಪ್ರಬಂಧಗಳು ಒಂದೇ ದೃಷ್ಟಾಂತದಲ್ಲಿ ಶುರುವಾಗಿ ಅಲ್ಲೇ ಹಿಂದೆ ಮುಂದೆ ಹೋಗಿ ಕೊನೆಗೊಳ್ಳುವುದಿಲ್ಲ. ಬದಲಾಗಿ ಆದಿವಾಸಿಗಳಿಂದ ಹಿಡಿದು ಪುರಾಣ ಪುಣ್ಯಕತೆಗಳೂ ಸೇರಿಕೊಂಡು ಆಧುನಿಕ ಯಂತ್ರ ತಂತ್ರ ವ್ಯವಸ್ಥೆ ಅವ್ಯವಸ್ಥೆ ಪರಿಪಾಟಲವರೆಗೂ ಮುಂದುವರಿಯುತ್ತವೆ. ಇವರು ಪ್ರತೀ ಹಂತದಲ್ಲೂ ಪದಗಳ ಜೊತೆ ಸರಸವಾಡುವುದು ನಮಗೆ ಕಚಗುಳಿಯಿಟ್ಟಂತಾಗುತ್ತವೆ. ಓದುಗನಿಗೆ ಸ್ವಲ್ಪವೂ ಬೋರ್ ಅಂತ ಅನಿಸುವುದೇ ಇಲ್ಲ.

'ನಿದ್ದೆ ಬಸ್ಸು' ಪ್ರಬಂಧದಲ್ಲಿ ಸ್ಲೀಪಿಂಗ್ ಕೋಚ್ ಬಸ್ಸಿನ ಪ್ರಯಾಣದಲ್ಲಿ ಆಗುವ ಕಿರಿಕಿರಿ ಮತ್ತು ಅನುಭವಗಳನ್ನು ಕಿಷ್ಕಿಂಧೆಯ ಸನ್ನಿವೇಶಕ್ಕೆ ಹೋಲಿಸಿ ಹಾಸ್ಯಮಯವಾಗಿ ವಿವರಿಸಲಾಗಿದೆ. 'ಮೊಬೈಲ್ ಕೂಸು' ಪ್ರಬಂಧದಲ್ಲಿ ಇಂದಿನ ಕಾಲದಲ್ಲಿ ಮೊಬೈಲ್ ಅನ್ನು ಮಗುವಿನಂತೆ ಹೇಗೆ ಪೋಷಿಸುತ್ತೇವೆ. ಚಾರ್ಜಿಂಗ್, ಸ್ಕ್ರೀನ್ ಗಾರ್ಡ್, ಕವರ್ ಇತ್ಯಾದಿಗಳನ್ನು ಬಳಸಿ ಜೋಪಾನವಾಗಿಡುತ್ತೇವೆ ಎಂಬುದನ್ನು ವ್ಯಂಗ್ಯವಾಗಿ ಚಿತ್ರಿಸಲಾಗಿದೆ. ಗೃಹಿಣಿಯರ ನಿತ್ಯದ ಬಟ್ಟೆ ಒಗೆಯುವ ಕಾಯಕ ಮತ್ತು ಆದಿವಾಸಿಗಳ ಕಾಲದ ಸರಳ ಜೀವನದ ನಡುವಿನ ವ್ಯತ್ಯಾಸವನ್ನು 'ತೊಳೆಯಿರಿ ತೊಳೆಯಿರಿ' ಯಲ್ಲಿ ಚರ್ಚಿಸಲಾಗಿದೆ. 'ಚಲ್ಲಣದ ತಲ್ಲಣಗಳು' ಹರಿದ ಬಟ್ಟೆಗಳು ಫ್ಯಾಷನ್ ಆಗಿ ಬದಲಾದ ಬಗೆಯನ್ನು ಇದು ವಿವರಿಸುತ್ತದೆ.

'ಅಮ್ಮಾ.. ಯಾರೋ ಬಂದ್ರು' ಕೌಟುಂಬಿಕ ಸಂಬಂಧಗಳ ಅಂದಿನ ಮತ್ತು ಇಂದಿನ ಸ್ಥಿತಿಗತಿಯನ್ನು ಗಂಭೀರವಾಗಿದ್ದರೂ ಮಾರ್ಮಿಕವಾಗಿ ತಿಳಿಸುತ್ತದೆ. 'ನಾಲ್ಕೊಂದ್ಲನಾಕು' ಪ್ರಬಂಧದಲ್ಲಿ ನಾಲ್ಕು ಎಂಬ ಸಂಖ್ಯೆ ಜೀವನದ ವಿವಿಧ ಹಂತಗಳಲ್ಲಿ ಹೇಗೆ ಬಳಕೆಯಾಗುತ್ತದೆ ಎಂಬುದನ್ನು ಲೇಖಕಿ ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆ.

ನಾಲ್ಕೊಂದ್ಲನಾಕು (ಪ್ರಬಂಧಗಳು); ಲೇ: ನಳಿನಿ ಟಿ. ಭೀಮಪ್ಪ; ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು; ಬೆಲೆ:195 ರೂ. ■

ಜ್ಞಾನದಾಹದ ಸಂಕೇತವಾಗುವ ಬುದ್ಧ

ಬುದ್ಧನನ್ನು ಅವತಾರ ಪುರುಷನೆಂಬ ಪೌರಾಣಿಕ ಚೌಕಟ್ಟಿನಿಂದ ಹೊರತಂದು, ಸಾಮಾನ್ಯ ಮನುಷ್ಯನೊಬ್ಬನ ಜ್ಞಾನದಾಹದ ಸಂಕೇತದಂತೆ ಚಿತ್ರಿಸಿದ ಕಾದಂಬರಿ ಕಂನಾಡಿಗಾ ನಾರಾಯಣ ಅವರ 'ಬುದ್ಧಯಾನ'.

ದಾಯಾದಿ ಮಾತ್ಸರ್ಯವನ್ನು ಸಿದ್ಧಾರ್ಥ ಎದುರಿಸುವ ಬಗೆ, ನದಿ ನೀರಿನ ಗಲಭೆಯು ಕದನಕ್ಕೆ ಹೊರಳುವ ಸಂದರ್ಭದಲ್ಲಿ ಯುದ್ಧವಿರೋಧಿ ನಿಲುವಿನಿಂದ ಅದನ್ನು ನಿವಾರಿಸುವ ಬಗೆ, ಮಡದಿ-ಮಗನ ಮೋಹವು ಆವರಿಸಿಕೊಂಡು ತನ್ನ ಧ್ಯೇಯೋದ್ದೇಶಕ್ಕೆ ಅಡ್ಡಿಯಾಗದಂತೆ ವಹಿಸುವ ಎಚ್ಚರ, ಅರಮನೆಯನ್ನು ಬಿಟ್ಟು ಹೊರಡುವಾಗಲೂ ಕಟು ವಾಸ್ತವದ ಆಲೋಚನೆಗಳಿಂದ ದೂರಾಗದಿರುವುದು, ವರ್ಷಗಟ್ಟಲೆ ಮಾಡುವ ದೇಹದಂಡನೆ ಮತ್ತು ಮನೋನಿಗ್ರಹಗಳ ತಪಸ್ಸು ಹೀಗೆ ಎಲ್ಲೆಡೆಯೂ ಸಿದ್ಧಾರ್ಥ ಮನುಷ್ಯ ಪ್ರಯತ್ನದ ಪ್ರತಿರೂಪದಂತೆಯೇ ಕಾಣುತ್ತಾನೆ.

ಪುರಾಣದ ಚೌಕಟ್ಟನ್ನು ಕಳಚಿಕೊಂಡು ಸಾಮಾನ್ಯತೆಯ ಚೌಕಟ್ಟಿನೊಳಗೆ ಚಿತ್ರಿತನಾಗುವ ಸಿದ್ಧಾರ್ಥ ಓದುಗರಿಗೆ ಹೆಚ್ಚು ಆಪ್ತನಾಗುತ್ತಾ ಹೋಗುತ್ತಾನೆ ಮತ್ತು ಸಂಕಲ್ಪಶಕ್ತಿ, ಮನೋಸ್ಥೈರ್ಯ, ಆತ್ಮವಿಶ್ವಾಸಗಳಿದ್ದರೆ ಯಾರು ಬೇಕಾದರೂ ಈ ದಾರಿಯಲ್ಲಿ ಸಾಗಬಹುದೆಂಬುದಕ್ಕೆ ಮೇಲ್ಪಂಕ್ತಿಯಾಗುತ್ತಾನೆ. ಪುಟ್ಟ ಕಾದಂಬರಿಯಾಗಿರುವುದರಿಂದ ಚುರುಕಾದ ಹಾಗೂ ವೇಗದ ನಿರೂಪಣೆಯಿದೆ.

ಬುದ್ಧಯಾನ; ಲೇ: ಕಂನಾಡಿಗಾ ನಾರಾಯಣ; ಪ್ರ: ನವ ಕರ್ನಾಟಕ ಪ್ರಕಾಶನ, ಬೆಂ ; ಪುಟ: 136; ಬೆಲೆ: 170 ರೂ. ■

ವಿಜಯಬಂಧ - 7927

1	■	■	2		3	■	■	4
5	6			■	7		8	
■		■	9			■		■
10		11		■	12	13		14
	■		■	■	■		■	
15	16		17	■	18		19	
■		■	20			■		■
21				■	22			23
	■	■	24			■	■	

ಎಡದಿಂದ ಬಲಕ್ಕೆ

2 ರಮಾರಮಣನೇ ಬಂದರೂ ಬದಲಾಗದ ದಡ್ಡ 3
5 ಜನರ ನಡಿಗೆಯಲ್ಲಿ ಕಾಣಿಸಿದ ರಕ್ತ ಸಂಚಾರದ ನಾಳ 4
7 ವ್ಯವಧಾನದಿಂದಲೇ ನೋಡಿದಾಗ ಸಾವಕಾಶದ ತಾಳ್ಮೆ 4
9 ಪಾಳಾದ ಗುಡಿ ಬಿದಿ ಬಿಟ್ಟ ಶಿಬಿರ 3
10 ಕಾರನ್ನು ಹತ್ತಿ ಬಾರಿಗೆ ಹೋದವರು ನಡೆಸಿದ ಆಡಳಿತ 4
12 ಮಾನವ ಆತನಲ್ಲಿ ಕಂಡು ಹಿಡಿದ ಹೊಸ ವಿಷಯ 4
15 ಶಂಕರನಿಗೆ ಗತ ಕಾಲದಿಂದಲೂ ಆದ ಕೈವಶ 4
18 ಕಾಡಿನಲ್ಲಿನ ಬೆಟ್ಟವನ್ನು ಹೀಗೆ ಕರೆಯಬಹುದು 4
20 ವಂಚಕನಲ್ಲ ಇವನು ಭಿಕ್ಷೆ ಬೇಡುವಾತ 3
21 ಮಹಾರಾಷ್ಟ್ರದ ಉಪರಾಜಧಾನಿ ದೊಡ್ಡ ನಗರಗಳಲ್ಲೊಂದು 4
22 ಅರಸನ ವಂಶಕ್ಕೆ ಕುಜ ಪ್ರವೇಶವೂ ಆಗಿದೆ 4
24 ಕಂಕಣ ಕಟ್ಟಿಕೊಂಡು ಬಂದ ಹುಳ 3

ಮೇಲಿನಿಂದ ಕೆಳಕ್ಕೆ

1 ರೇಖಾಗಣಿತದ ಕೋನ ಸೇರಿಸುವ ರೇಖೆ ತೋಳೂ ಹೌದು 2
2 ಗರುವದ ಜನರಿಗೆ ಹಾಡಿ ತೋರೆಯುವ ಶಿಕ್ಷೆ 4
3 ಸಿಹಿ ಖಾರ ಮೊದಲಾದ ಆರು ರಸಗಳ ಮಿಶ್ರಣ 4
4 ನಗಾರಿ ಜೊತೆಯೇ ಕೇಳಿಸಿದ ಸಂಗೀತ 2
6 ನಾವಿರುವಾಗ ಕಾಣಿಸಿದ ಸೂಕ್ಷ್ಮತೆ 3
8 ಬಲವಂತದ ಜೊತೆ ಜೊತೆ ತರಾತುರಿಯೂ ಇದೆ 3
10 ಬೆಂಗಳೂರು ಕಡಲೆಕಾಯಿ ಪರಿಷೆ ನಡೆದ ಮಾಸ 3
11 ಮದುವೆಯ ವಧು ವರರ ಹಣೆಗೆ ಕಟ್ಟಿದ ಬೆಂಡು 3
13 ಪ್ರವಚನದಲ್ಲಿ ನೀಡಿದ ಮಾತು 3
14 ಬಂಗಾರಿಯನ್ನು ಎಚ್ಚರಿಸಲು ನುಡಿಸಿದ ವಾದ್ಯ 3
16 ಅನರ್ಘ್ಯ ಮಣಿಗಳಿಂದ ಕೂಡಿದ ದೇಹದ ಅವಯವ 3
17 ಯಾರ ತಕರಾರು ಇಲ್ಲದಂತೆ ಉತ್ಪಾದನೆ ಮಾಡುವಾತ 4
18 ನೀರಿನ ಬಳಿ ನಿಂತ ಕೊಕ್ಕರೆ ಅರಸ 4
19 ಗಿಲೀಟಾಗಿ ಕಂಡ ಒಣಗಿದ ಕೊಬ್ಬರಿ 3
21 ನಾವಾಡುವ ನುಡಿಯನ್ನು ಹೊಂದಿದ ರಾಜ್ಯ 2
23 ವಿವಾಹದಲ್ಲಿ ತಾಳಿ ಕಟ್ಟುವ ಶುಭ ಮುಹೂರ್ತ 2

ವಿಜಯಬಂಧ | 7926

ಎಡದಿಂದ ಬಲಕ್ಕೆ: 2.ಮನನ 5.ಹೊಸಕೆರೆ 6.ವನಸಿರಿ 7.ಗುಡಾರ 8.ಗೊತ್ತುವಳಿ 10.ಸರಸಿಗ 13.ವಸಾಹತು 16.ಅಪಸಾಕ್ಷಿ 18.ರಂಜನ 19.ಮಹಾತ್ಯಾಗ 20.ಪೇರುಸಿರು 21.ಮಹಂತ.

ಮೇಲಿನಿಂದ ಕೆಳಕ್ಕೆ: 1.ಕಸರತ್ತು 2.ಮರೆಗುಳಿ 3.ನವರಸ 4.ಕಸಿವಿಸಿ 8.ಗೊರವ 9.ವರಹ 11.ರತಿಪ 12.ಗವಾಕ್ಷಿ 14,ಸಾಗಹಾಕು 15.ತುರಂಗಮ 16.ಅನಪೇತ 17.ಸಾಹಸಿಗ.

ಅ.ನಾ. ಪ್ರಹ್ಲಾದರಾವ್

ಮಾರ್ಚ್ 28ರಿಂದ ಮೇ 31ರವರೆಗೆ

ಐಪಿಎಲ್ ಸಂಗ್ರಾಮ 2026ರ ಹಂಗಾಮ

2026ರ ಐಪಿಎಲ್ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ರನ್ ರೇಟ್
ಪಂಜಾಬ್	7	6	0	1	13	+1.333
ಬೆಂಗಳೂರು	7	5	2	0	10	+1.101
ಹೈದರಾಬಾದ್	8	5	3	0	10	+0.815
ರಾಜಸ್ಥಾನ	8	5	3	0	10	+0.602
ಚೆನ್ನೈ	7	3	4	0	6	+0.118
ಡೆಲ್ಲಿ	7	3	4	0	6	-0.184
ಗುಜರಾತ್	7	3	4	0	6	-0.790
ಮುಂಬಯಿ	7	2	5	0	4	-0.736
ಲಖನೌ	7	2	5	0	4	-1.277
ಕೋಲ್ಕೊತಾ	7	1	5	1	3	-0.879

380 ರನ್ ಅಭಿಷೇಕ್ ಶರ್ಮಾ ರಾಜಸ್ಥಾನ ರಾಯಲ್ಸ್

14 ವಿಕೆಟ್ ಅಂಶುಲ್ ಕಾಂಬೋಜ್ ಚೆನ್ನೈ ಸೂಪರ್ ಕಿಂಗ್ಸ್

ಡೆಲ್ಲಿ ವಿರುದ್ಧ 6 ವಿಕೆಟ್ ಜಯ | ಕೆ.ಎಲ್. ರಾಹುಲ್ ದಾಖಲೆಯ ಶತಕ ವ್ಯರ್ಥ

ಪಂಜಾಬ್ ಚೇಸಿಂಗ್ ಕಿಂಗ್ಸ್

ಹೊಸದಿಲ್ಲಿ: ಟಿ20 ಕ್ರಿಕೆಟ್ ಇತಿಹಾಸದಲ್ಲೇ ಅತಿ ದೊಡ್ಡ ಮೊತ್ತವನ್ನು ಯಶಸ್ವಿಯಾಗಿ ಬೆನ್ನಟ್ಟುವ ಮೂಲಕ ಪಂಜಾಬ್ ಕಿಂಗ್ಸ್ ಶನಿವಾರ ಹೊಸ ಇತಿಹಾಸ ಬರೆದಿದೆ. ಡೆಲ್ಲಿ ಕ್ಯಾಪಿಟಲ್ಸ್ ನೀಡಿದ 265 ರನ್‌ಗಳ ಬೃಹತ್ ಗುರಿಯನ್ನು ಶ್ರೇಯಸ್ ಅಯ್ಯರ್ ಪಡೆ ಯಶಸ್ವಿಯಾಗಿ ಮೀರಿ ಜಯಶಾಲಿಯಾಯಿತು. ಡೆಲ್ಲಿ ಪರ ಕೆ.ಎಲ್ ರಾಹುಲ್ (152) ಗಳಿಸಿದ ದಾಖಲೆಯ ಶತಕ ವ್ಯರ್ಥವಾಯಿತು.

ಪಂಜಾಬ್‌ಗೆ ಪ್ರಭ್‌ಸಿಮ್ರನ್ ಸಿಂಗ್ (76) ಮತ್ತು ಪ್ರಿಯಾಂಶ್ ಆರ್ಯ (43) ಕೇವಲ 42 ಎಸೆತಗಳಲ್ಲಿ 126 ರನ್ ಪೇರಿಸಿ ಭದ್ರ ಬುನಾದಿ ಹಾಕಿಕೊಟ್ಟರು. ನಂತರ ನಾಯಕ ಶ್ರೇಯಸ್ ಅಯ್ಯರ್ (71*) ಅದ್ಭುತ ಆಟವಾಡಿ, ಪಂದ್ಯ ಮುಗಿಯಲು ಇನ್ನೂ 7 ಎಸೆತಗಳು ಬಾಕಿ ಇರುವಂತೆಯೇ ತಂಡವನ್ನು ಗೆಲುವಿನ ದಡ ಸೇರಿಸಿದರು. ಇದರೊಂದಿಗೆ ಅತ್ಯಧಿಕ ರನ್ ಚೇಸಿಂಗ್‌ನಲ್ಲಿ ಅಗ್ರಸ್ಥಾನದಲ್ಲಿದ್ದ ಪಂಜಾಬ್ ತನ್ನದೇ ದಾಖಲೆಯನ್ನು ಉತ್ತಮಪಡಿಸಿಕೊಂಡಿದೆ. ಈ ಹಿಂದೆ ಪಂಜಾಬ್ 2024ರಲ್ಲಿ ಕೆಕೆಆರ್ ವಿರುದ್ಧ 262 ರನ್ ಬೆನ್ನಟ್ಟಿದ್ದು ಗರಿಷ್ಠ ಚೇಸಿಂಗ್ ದಾಖಲೆಯಾಗಿತ್ತು. ಈ ಗೆಲುವಿನೊಂದಿಗೆ ಪಂಜಾಬ್ ಕಿಂಗ್ಸ್ ಈ ಋತುವಿನಲ್ಲಿ ಅಜೇಯ ಓಟ ಮುಂದುವರಿಸಿದ್ದು, 13 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ.

ಪ್ರಭ್‌ಸಿಮ್ರನ್ ಸಿಂಗ್

ಶ್ರೇಯಸ್ ಅಯ್ಯರ್

ಸಂಕ್ಷಿಪ್ತ ಸ್ಕೋರ್

ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 2 ವಿಕೆಟ್‌ಗೆ 264 (ಕೆ.ಎಲ್. ರಾಹುಲ್ 152*, ನಿತೀಶ್ ರಾಣಾ 91; ಅರ್ಷ್‌ದೀಪ್ 49ಕ್ಕೆ 1, ಕ್ಸೇವಿಯರ್ 69ಕ್ಕೆ 1)
ಪಂಜಾಬ್ ಕಿಂಗ್ಸ್: 18.5 ಓವರ್‌ಗಳಲ್ಲಿ 4 ವಿಕೆಟ್‌ಗೆ 265 (ಪ್ರಭ್‌ಸಿಮ್ರನ್ ಸಿಂಗ್ 76, ಶ್ರೇಯಸ್ ಅಯ್ಯರ್ 71*; ಕುಲ್ದೀಪ್ 46ಕ್ಕೆ 2, ವಿಪ್ರಜ್ 24ಕ್ಕೆ 1)

ಎನ್ಗಿಡಿ ತಲೆಗೆ ಪೆಟ್ಟು

ಪಂದ್ಯದಲ್ಲಿ ಕ್ಯಾಚ್ ಹಿಡಿಯುವ ವೇಳೆ ಡೆಲ್ಲಿಯ ಲುಂಗಿ ಎನ್ಗಿಡಿ ಅವರ ತಲೆ ಜೋರಾಗಿ ನೆಲಕ್ಕೆ ಅಪ್ಪಳಿಸಿತು. ತಕ್ಷಣವೇ ಆಂಬ್ಯುಲೆನ್ಸ್‌ನಲ್ಲಿ ಅವರನ್ನು ಕರೆದೊಯ್ಯಲಾಯಿತು. ಈಗ ಅವರ ಆರೋಗ್ಯ ಸ್ಥಿರವಾಗಿದ್ದು ಶೀಘ್ರದಲ್ಲಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಲಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ರಾಹುಲ್ ರೌದ್ರಾವತಾರ

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್, ಕೆ.ಎಲ್. ರಾಹುಲ್ ಅವರ ಸ್ಫೋಟಕ ಶತಕದ (152 ರನ್, 67 ಎಸೆತ) ನೆರವಿನಿಂದ 264 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಕೆ.ಎಲ್. ರಾಹುಲ್ ಅವರು ಶನಿವಾರ ತಮ್ಮ ಐಪಿಎಲ್ ವೃತ್ತಿಜೀವನದ ಅತಿ ವೇಗದ ಶತಕ ಸಿಡಿಸಿದ್ದು ಮಾತ್ರವಲ್ಲದೆ, ಐಪಿಎಲ್ ಇತಿಹಾಸದಲ್ಲೇ ಭಾರತೀಯ ಆಟಗಾರನೊಬ್ಬ ಗಳಿಸಿದ ಗರಿಷ್ಠ ವೈಯಕ್ತಿಕ ಮೊತ್ತದ ದಾಖಲೆಯನ್ನೂ ಮುರಿದರು. ಈ ಹಿಂದೆ ಅಭಿಷೇಕ್ ಶರ್ಮಾ ಅವರು ಕಳೆದ ವರ್ಷ ಡೆಲ್ಲಿ ವಿರುದ್ಧ ಗಳಿಸಿದ್ದ 141 ರನ್‌ಗಳ ದಾಖಲೆಯನ್ನು ರಾಹುಲ್ ಹಿಂದಿಕ್ಕಿದರು. ನಿತೀಶ್ ರಾಣಾ (91) ರಾಹುಲ್ ಅವರಿಗೆ ಉತ್ತಮ ಸಾಥ್ ನೀಡಿದರು. ಒಟ್ಟಾರೆಯಾಗಿ 49 ಬೌಂಡರಿ ಮತ್ತು 33 ಸಿಕ್ಸರ್‌ಗಳು ಸಿಡಿದ ಈ ಪಂದ್ಯ ರನ್ ಹಬ್ಬಕ್ಕೆ ಸಾಕ್ಷಿಯಾಯಿತು.

ಐಪಿಎಲ್‌ನಲ್ಲಿ ಗರಿಷ್ಠ ರನ್ ಗಳಿಸಿದ ಭಾರತೀಯರು

ಬ್ಯಾಟರ್	ರನ್	ಎಸೆತ
ಕೆ.ಎಲ್.ರಾಹುಲ್	152*	67
ಅಭಿಷೇಕ್ ಶರ್ಮಾ	141	55
ಅಭಿಷೇಕ್ ಶರ್ಮಾ	135	68
ಕೆ.ಎಲ್. ರಾಹುಲ್	132*	69
ಶುಬ್ಮನ್ ಗಿಲ್	129	60

ಸನ್‌ರೈಸರ್ಸ್‌ಗೆ 5 ವಿಕೆಟ್ ಜಯ

ರಾಯಲ್ಸ್‌ನ ಸೂರ್ಯವಂಶಿ ಶತಕ ವ್ಯರ್ಥ

ಜೈಪುರ: ರಾಜಸ್ಥಾನ ರಾಯಲ್ಸ್ ನೀಡಿದ 229 ರನ್ ಗುರಿಯನ್ನು ಬೆನ್ನಟ್ಟಿದ ಸನ್‌ರೈಸರ್ಸ್ ಹೈದರಾಬಾದ್, ಇಶಾನ್ ಕಿಶನ್, ಅಭಿಷೇಕ್ ಶರ್ಮಾ ಅರ್ಧ ಶತಕಗಳ ನೆರವಿನಿಂದ 18.3 ಓವರ್‌ಗಳಲ್ಲಿ ಗುರಿ ಮುಟ್ಟಿ ಜಯ ಸಾಧಿಸಿದೆ. ರಾಯಲ್ಸ್ ಪರ ಜೊಫ್ರಾ ಆರ್ಚರ್ ಹೊರತುಪಡಿಸಿದರೆ ಉಳಿದ ಬೌಲರ್‌ಗಳಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬರಲಿಲ್ಲ. ಅಮೂಲ್ಯ ಕ್ಯಾಚ್‌ಗಳನ್ನು ಬಿಟ್ಟ ರಾಯಲ್ಸ್ ತಂಡ ಅದಕ್ಕೆ ತಕ್ಕ ಬೆಲೆಯನ್ನು ತೆತ್ತಿತು.

ಶನಿವಾರ ಇಲ್ಲಿನ ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಎಸ್‌ಆರ್‌ಎಚ್ ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು.

ಸೂರ್ಯವಂಶಿ ಸಿಡಿಲಿನ ಶತಕ: ರಾಜಸ್ಥಾನ ಪರ ಅಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದ ವೈಭವ್ ಸೂರ್ಯವಂಶಿ ಕೇವಲ 36 ಎಸೆತಗಳಲ್ಲಿ ಶತಕ ಪೂರೈಸಿದರು. ಔಟಾಗುವುದಕ್ಕೂ ಮುನ್ನ 103 ರನ್ ಗಳಿಸಿದ ಅವರ ಇನಿಂಗ್ಸ್ 12 ಸಿಕ್ಸರ್ ಹಾಗೂ 5 ಬೌಂಡರಿಗಳನ್ನು ಒಳಗೊಂಡಿದೆ. ವೈಭವ್ ಸೂರ್ಯವಂಶಿ (103) ಸಿಡಿಸಿದ ಶತಕ ಐಪಿಎಲ್ ಇತಿಹಾಸದ ಮೂರನೇ ಅತಿ ವೇಗದ ಶತಕ ದಾಖಲೆಗೆ ಪಾತ್ರವಾಯಿತು.

ವೈಭವ್ 32 ರನ್ ಗಳಿಸಿದ್ದಾಗ ಇಶಾನ್ ಮಾಲಿಂಗ ಎಸೆತದಲ್ಲಿ ಅನಿಕೇತ್ ರೆಡ್ಡಿ ಕ್ಯಾಚ್ ಕೈಚೆಲ್ಲಿದ್ದರು. ಈ ಜೀವದಾನದ ಲಾಭ ಪಡೆದ ವೈಭವ್ ಹೈದರಾಬಾದ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಪ್ರಫುಲ್ ಹಿಂಗೆ ಎಸೆದ ಮೊದಲ ಓವರ್‌ನಲ್ಲೇ ಸತತ ಎರಡು ಸಿಕ್ಸರ್ ಬಾರಿಸುವ ಮೂಲಕ ಅಬ್ಬರ ಆರಂಭಿಸಿದ ಸೂರ್ಯವಂಶಿ, ಕೇವಲ 15 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಎರಡನೇ ವಿಕೆಟ್‌ಗೆ ಜುರೆಲ್ (51) ಅವರೊಂದಿಗೆ ವೈಭವ್ 112 ರನ್‌ಗಳ ಅಮೂಲ್ಯ ಜೊತೆಯಾಟ ನೀಡಿದರು.

ಇಶಾನ್ ಕಿಶನ್

ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 228 (ವೈಭವ್ ಸೂರ್ಯವಂಶಿ 103, ಧ್ರುವ್ ಜುರೆಲ್ 51; ಇಶಾನ್ ಮಾಲಿಂಗ 38ಕ್ಕೆ 2, ನಿತೀಶ್ ಕುಮಾರ್ ರೆಡ್ಡಿ 20ಕ್ಕೆ 1).
ಸನ್‌ರೈಸರ್ಸ್ ಹೈದರಾಬಾದ್: 18.3 ಓವರ್‌ಗಳಲ್ಲಿ 5 ವಿಕೆಟ್‌ಗೆ 229 (ಇಶಾನ್ ಕಿಶನ್ 74, ಅಭಿಷೇಕ್ ಶರ್ಮಾ 57; ಜೊಫ್ರಾ ಆರ್ಚರ್ 34ಕ್ಕೆ 2, ಬ್ರಿಜೇಶ್ ಶರ್ಮಾ 44ಕ್ಕೆ 2)

ಔಟ್ of ಸಿಲಬಸ್

'ಕಪಾಳಮೋಕ್ಷ' ವಿವಾದದಿಂದ 1 ಕೋಟಿ ರೂ. ಸಂಪಾದನೆ



ಹರ್ಭಜನ್ ವಿರುದ್ಧ ಶ್ರೀಶಾಂತ್ ಆಕ್ರೋಶ

ಹೊಸದಿಲ್ಲಿ: ಮೊದಲ ಐಪಿಎಲ್ ಆವೃತ್ತಿಯಲ್ಲಿ (2008) ಹರ್ಭಜನ್ ಸಿಂಗ್ ಮತ್ತು ಶ್ರೀಶಾಂತ್ ನಡುವಿನ 'ಸ್ಲ್ಯಾಪ್‌ಗೇಟ್' (ಕೆನ್ನೆಗೆ ಹೊಡೆದ ಘಟನೆ) ಎಂದೇ ಹೆಸರಾದ ಪ್ರಕರಣ ಮತ್ತೆ ಮುನ್ನೆಲೆಗೆ ಬಂದಿದೆ. ''ಹರ್ಭಜನ್ ಸಿಂಗ್ ಅವರು ಈ ಹಳೆಯ ವಿವಾದವನ್ನು ಬಳಸಿಕೊಂಡು ಜಾಹೀರಾತಿನಲ್ಲಿ ನಟಿಸಿ 1 ಕೋಟಿ ರೂ. ಸಂಪಾದಿಸಿದ್ದಾರೆ,'' ಎಂದು ಶ್ರೀಶಾಂತ್ ಗಂಭೀರವಾಗಿ ಆರೋಪಿಸಿದ್ದಾರೆ. ಬಳಿಕ ಆ ಜಾಹೀರಾತನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವಂತೆ ತಮ್ಮನ್ನು ಕೇಳಿಕೊಂಡಿದ್ದಾಗಿಯೂ ಶ್ರೀಶಾಂತ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ನಡವಳಿಕೆಯಿಂದ ಬೇಸತ್ತ ಶ್ರೀಶಾಂತ್, ಹರ್ಭಜನ್‌ರನ್ನು ಸೋಷಿಯಲ್ ಮೀಡಿಯಾದಲ್ಲಿ 'ಬ್ಲಾಕ್' ಮಾಡಿದ್ದಾರೆ. ಹಲವು ವರ್ಷಗಳ ಬಳಿಕ ಇಬ್ಬರೂ ಒಂದಾಗಿದ್ದಾರೆ ಎಂದು ಭಾವಿಸಿದ್ದ ಅಭಿಮಾನಿಗಳಿಗೆ ಈ ಬೆಳವಣಿಗೆ ಅಚ್ಚರಿ ಮೂಡಿಸಿದೆ. 2008ರಲ್ಲಿ ಮುಂಬಯಿ ತಂಡ ಸೋತಾಗ, ಪಂದ್ಯದ ಬಳಿಕ ಪಂಜಾಬ್ ಬೌಲರ್ ಶ್ರೀಶಾಂತ್ ಹರ್ಭಜನ್ ಬಳಿ ತೆರಳಿ ವ್ಯಂಗ್ಯದ ಮಾತುಗಳನ್ನಾಡಿದ್ದರು. ಸಿಟ್ಟಿಗೆದ್ದ ಹರ್ಭಜನ್ ಕಪಾಳಮೋಕ್ಷ ಮಾಡಿದ್ದರು.

ಕೋಲ್ಕೊತಾಗೆ ಲಖನೌ ಸವಾಲು ಇಂದು

ರಹಾನೆ ಮತ್ತು ಪಂತ್ ನಾಯಕತ್ವಕ್ಕೆ ಅಗ್ನಿಪರೀಕ್ಷೆ

ಲಖನೌ: ಐಪಿಎಲ್‌ನ ಡಬಲ್‌ಹೆಡರ್‌ನಲ್ಲಿ ಭಾನುವಾರದ ಎರಡನೇ ಪಂದ್ಯ ಕೋಲ್ಕೊತಾ ನೈಟ್‌ರೈಡರ್ಸ್ ಮತ್ತು ಲಖನೌ ಸೂಪರ್ ಜಯಂಟ್ಸ್ ತಂಡಗಳಿಗೆ ಮಾಡು ಇಲ್ಲವೇ ಮಡಿ ಎಂಬಂತಿದೆ. ಎರಡೂ ತಂಡಗಳ ನಾಯಕರಾದ ಅಜಿಂಕ್ಯ ರಹಾನೆ ಮತ್ತು ರಿಷಬ್ ಪಂತ್ ಅವರ ನಾಯಕತ್ವದ ಮೇಲೆ ಈಗ ಎಲ್ಲರ ದೃಷ್ಟಿ ನೆಟ್ಟಿದೆ.

ರಹಾನೆ ನೇತೃತ್ವದ ಕೆಕೆಆರ್ ಈವರೆಗೆ ಕೇವಲ ಒಂದು ಜಯ ದಾಖಲಿಸಿ ಅಂಕಪಟ್ಟಿಯಲ್ಲಿ ಕೆಳಮಟ್ಟದಲ್ಲಿದೆ. ರಹಾನೆ ಅವರ ಬ್ಯಾಟಿಂಗ್ ಫಾರ್ಮ್ ಮತ್ತು ಟಾಸ್ ಸಮಯದಲ್ಲಿನ ತಪ್ಪು ನಿರ್ಧಾರಗಳು ಟೀಕೆಗೆ ಗುರಿಯಾಗಿವೆ. ಮುಂದಿನ ಹಂತಕ್ಕೇರಲು ಕೆಕೆಆರ್ ಉಳಿದ ಏಳು ಪಂದ್ಯಗಳಲ್ಲಿ ಆರನ್ನು ಗೆಲ್ಲಲೇಬೇಕಿದೆ. ತಂಡವು 18 ಕೋಟಿ ರೂ. ಮೊತ್ತ ನೀಡಿ ಖರೀದಿ ಮಾಡಿರುವ ವೇಗಿ ಮತೀಶ ಪತಿರಾಣ ಅವರು ಭಾನುವಾರ ತಂಡವನ್ನು ಕೂಡಿಕೊಳ್ಳುತ್ತಿದ್ದು ಆತ್ಮವಿಶ್ವಾಸ ಹೆಚ್ಚಿಸಿದೆ. ಪಂತ್ ನೇತೃತ್ವದ ಎಲ್‌ಎಸ್‌ಜಿ ಕೂಡ ಸತತ ನಾಲ್ಕು ಸೋಲುಗಳಿಂದ ಕಂಗೆಟ್ಟಿದ್ದು, 9ನೇ ಸ್ಥಾನದಲ್ಲಿದೆ. ಪಂತ್ ಅವರ ಜವಾಬ್ದಾರಿಯಿಲ್ಲದ ಬ್ಯಾಟಿಂಗ್ ಮತ್ತು ತಂಡದ ಮಧ್ಯಮ ಕ್ರಮಾಂಕದ ವೈಫಲ್ಯ ಹಿನ್ನಡೆಗೆ ಕಾರಣವಾಗಿದೆ. ಏಕನಾ ಕ್ರೀಡಾಂಗಣದಲ್ಲಿ ತಂಡದ ಕಳಪೆ ದಾಖಲೆ (24 ಪಂದ್ಯಗಳಲ್ಲಿ ಕೇವಲ 9 ಜಯ) ಆತಂಕ ಮೂಡಿಸಿದೆ. ಒಟ್ಟಾರೆಯಾಗಿ, ಈ ಪಂದ್ಯವು ಇಬ್ಬರೂ ಅನುಭವಿ ಆಟಗಾರರ ನಾಯಕತ್ವದ ಭವಿಷ್ಯವನ್ನು ನಿರ್ಧರಿಸುವ ಸಾಧ್ಯತೆಯಿದೆ.

ಪಂದ್ಯ: ಏಕನಾ ಕ್ರೀಡಾಂಗಣ, ಲಖನೌ
ಸಮಯ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ರೇಸ್‌ವಾಕ್‌ನಲ್ಲಿ ನಿತಿನ್ ದಾಖಲೆ

ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್

ತುಮಕೂರು: ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಫೆಡರೇಶನ್ ಕ್ರೀಡಾಕೂಟದ ಎರಡನೇ ದಿನವಾದ ಶನಿವಾರ ಮೂರು ಹೊಸ ರಾಷ್ಟ್ರೀಯ ದಾಖಲೆಗಳು ನಿರ್ಮಾಣವಾದವು. ಸೇನಾ ಪಡೆಯ ನಿತಿನ್ ಗುಪ್ತಾ 5,000 ಮೀ. ನಡಿಗೆಯಲ್ಲಿ 19 ನಿಮಿಷಗಳಿಗಿಂತ ಕಡಿಮೆ ಅವಧಿಯಲ್ಲಿ (18:54.37) ಗುರಿ ಮುಟ್ಟಿ ಇತಿಹಾಸ ಬರೆದರು. ಕೇರಳದ ಮೊಹಮ್ಮದ್ ಅಷ್ಫಾಕ್ 400 ಮೀ. ಓಟದಲ್ಲಿ (46.05 ಸೆಕೆಂಡ್) ಮತ್ತು ಉತ್ತರಪ್ರದೇಶದ ಶಹನವಾಜ್ ಖಾನ್ ಲಾಂಗ್ ಜಂಪ್‌ನಲ್ಲಿ (8.23 ಮೀ.) ಹೊಸ ರಾಷ್ಟ್ರೀಯ ಜೂನಿಯರ್ ದಾಖಲೆ ಸ್ಥಾಪಿಸಿದರು. ಮಧ್ಯಪ್ರದೇಶದ ರಂಜನಾ ಯಾದವ್ ಮತ್ತು ತಮಿಳುನಾಡಿನ ಕವಿನರಾಜ ಕೂಡ ಚಿನ್ನದ ಪದಕದೊಂದಿಗೆ ಮಿಂಚಿದರು.

ಜೂನಿಯರ್ ಶೂಟಿಂಗ್ ವಿಶ್ವಕಪ್

ವಂಶಿಕಾ ಮತ್ತು ಚಿರಾಗ್ ಜೋಡಿಗೆ ಚಿನ್ನ

ಕೈರೋ: ಕೈರೋದಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನಲ್ಲಿ ಭಾರತದ ವಂಶಿಕಾ ಚೌಧರಿ ಮತ್ತು ಚಿರಾಗ್ ಶರ್ಮಾ 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಈ ಜೋಡಿಯು ಫೈನಲ್‌ನಲ್ಲಿ 484.3 ಅಂಕಗಳನ್ನು ಗಳಿಸಿ ಅಗ್ರಸ್ಥಾನ ಪಡೆಯಿತು. ಇದೇ ಸ್ಪರ್ಧೆಯಲ್ಲಿ ಭಾರತದ ಮತ್ತೊಂದು ಜೋಡಿಯಾದ ಮೋಹಿನಿ ಸಿಂಗ್ ಮತ್ತು ಹಿಮಾಂಶು ರಾಣಾ ಕಂಚಿನ ಪದಕ ಮುಡಿಗೇರಿಸಿಕೊಂಡರು.

ವಂಶಿಕಾ ಅವರಿಗೆ ಈ ಕೂಟದಲ್ಲಿ ಇದು 2ನೇ ಚಿನ್ನದ ಪದಕವಾಗಿದೆ. ಸದ್ಯ ಭಾರತ ತಂಡವು 5 ಚಿನ್ನ, 5 ಬೆಳ್ಳಿ ಮತ್ತು 4 ಕಂಚಿನ ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಕಾಯ್ದುಕೊಂಡಿದೆ. ಟ್ರ್ಯಾಪ್ ಶೂಟಿಂಗ್ ವಿಭಾಗದಲ್ಲಿ ಜುಹೇರ್ ಖಾನ್ ಮತ್ತು ಭವ್ಯಾ ತ್ರಿಪಾಠಿ ಫೈನಲ್ ಪ್ರವೇಶಿಸಿದರೂ ಪದಕ ಗೆಲ್ಲಲು ವಿಫಲರಾದರು. ಪಂದ್ಯಾವಳಿಯ ಕೊನೆಯ ದಿನವಾದ ಭಾನುವಾರ ರೈಫಲ್ ಮತ್ತು ಟ್ರ್ಯಾಪ್ ಮಿಶ್ರ ತಂಡ ಸ್ಪರ್ಧೆಗಳು ನಡೆಯಲಿವೆ.

ಇಂದು ಸೂಪರ್ ಕಿಂಗ್ಸ್ ಟೈಟನ್ಸ್ ಮುಖಾಮುಖಿ

ಚೆನ್ನೈ: ಚೇತರಿಕೆಯ ಹಾದಿಯಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಸತತ ಸೋಲುಗಳಿಂದ ಕಂಗೆಟ್ಟಿರುವ ಗುಜರಾತ್ ಟೈಟನ್ಸ್ ಭಾನುವಾರ ನಡೆಯಲಿರುವ ನಿರ್ಣಾಯಕ ಪಂದ್ಯದಲ್ಲಿ ಎದುರಾಗುತ್ತಿದೆ. ಆರಂಭಿಕ ಹಿನ್ನಡೆಯ ನಂತರ ಸಿಎಸ್‌ಕೆ ಅದ್ಭುತವಾಗಿ ಪುಟಿದೇಳುತ್ತಿದೆ. ಕಳೆದ ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಗೆದ್ದಿರುವ ಚೆನ್ನೈ, ಮುಂಬಯಿ ಇಂಡಿಯನ್ಸ್ ವಿರುದ್ಧ ಸಂಜು ಸ್ಯಾಮ್ಸನ್ ಬಾರಿಸಿದ ಸೀಸನ್‌ನ 2ನೇ ಶತಕದ ನೆರವಿನಿಂದ 103 ರನ್‌ಗಳ ಬೃಹತ್ ಜಯ ದಾಖಲಿಸಿದೆ.

ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಅಕಿಲ್ ಹೊಸೈನ್ ನೇತೃತ್ವದ ಬೌಲಿಂಗ್ ವಿಭಾಗ ತಂಡಕ್ಕೆ ಬಲ ನೀಡಿದೆ. ಕಾಲು ಸ್ನಾಯು ಸೆಳೆತ ಸಮಸ್ಯೆಯಿಂದಾಗಿ ಎಂ.ಎಸ್. ಧೋನಿ ಮತ್ತು ಈ ಸೀಸನ್‌ನಲ್ಲಿ 201 ರನ್ ಗಳಿಸಿರುವ ಆಯುಷ್ ಮ್ಹಾತ್ರೆ ಹೊರಗುಳಿದಿರುವುದು ತಂಡಕ್ಕೆ ಹಿನ್ನಡೆಯಾಗಿದೆ. ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ವೈಫಲ್ಯ ತಂಡವನ್ನು ಕಾಡುತ್ತಿದೆ. ಗಾಯಕ್ವಾಡ್ ಮತ್ತು ಶಿವಂ ದುಬೆ ದೊಡ್ಡ ಮೊತ್ತ ಗಳಿಸಲು ವಿಫಲರಾಗುತ್ತಿದ್ದಾರೆ.

ಗುಜರಾತ್ ಟೈಟನ್ಸ್ ತಂಡವು ಭರವಸೆಯ ಆರಂಭದ ನಂತರ ಸತತ ಎರಡು ಪಂದ್ಯಗಳನ್ನು ಸೋತು ಸಂಕಷ್ಟದಲ್ಲಿದೆ. ಮುಂಬಯಿ ವಿರುದ್ಧ 99 ರನ್‌ಗಳ ಸೋಲು ಮತ್ತು ಆರ್‌ಸಿಬಿ ವಿರುದ್ಧದ ಸೋಲು ತಂಡದ ನೆಟ್ ರನ್‌ರೇಟ್ (-0.790) ಮೇಲೆ ಭಾರಿ ಪರಿಣಾಮ ಬೀರಿದೆ. ನಾಯಕ ಶುಬ್ಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಫಾರ್ಮ್‌ನಲ್ಲಿದ್ದಾರೆ. ಜೋಸ್ ಬಟ್ಲರ್ ಕೂಡ ಉತ್ತಮ ಸಾಥ್ ನೀಡುತ್ತಿದ್ದಾರೆ.

ಮೊಹಮ್ಮದ್ ಸಿರಾಜ್, ಕಗಿಸೊ ರಬಾಡ ಮತ್ತು ಪ್ರಸಿದ್ಧ್ ಕೃಷ್ಣ ಅವರಂತಹ ವೇಗಿಗಳಿದ್ದರೂ, ಡೆತ್ ಓವರ್‌ಗಳಲ್ಲಿ ರನ್ ನಿಯಂತ್ರಿಸುವುದು ತಂಡಕ್ಕೆ ಸವಾಲಾಗಿದೆ. ರಶೀದ್ ಖಾನ್ ಹೊರತುಪಡಿಸಿ ಸ್ಪಿನ್ ವಿಭಾಗದಲ್ಲಿ ಉಳಿದವರಿಂದ ನಿರೀಕ್ಷಿತ ಬೆಂಬಲ ಸಿಗುತ್ತಿಲ್ಲ. ಫೀಲ್ಡಿಂಗ್‌ನಲ್ಲಿನ ತಪ್ಪುಗಳು ತಂಡಕ್ಕೆ ದುಬಾರಿಯಾಗುತ್ತಿವೆ.

ಪಂದ್ಯ: ಎಂ.ಎ. ಚಿದಂಬರಂ ಕ್ರೀಡಾಂಗಣ, ಚೆನ್ನೈ
ಸಮಯ: ಮಧ್ಯಾಹ್ನ 3:30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಒಲಿಂಪಿಕ್ ಪದಕ ವಿಜೇತ ಹಾಕಿ ಆಟಗಾರ ಗುರುಬಕ್ಷ್ ಸಿಂಗ್ ನಿಧನ

ಹೊಸದಿಲ್ಲಿ: ಹಿರಿಯ ಹಾಕಿ ಆಟಗಾರ, 1968ರ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತೀಯ ಹಾಕಿ ತಂಡದ ಸದಸ್ಯರಾಗಿದ್ದ ಗುರುಬಕ್ಷ್ ಸಿಂಗ್ ಗ್ರೆವಾಲ್ ಅವರು ಜಿರಕ್ಪುರದಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 84 ವರ್ಷ ವಯಸ್ಸಾಗಿತ್ತು.

1968ರ ಮೆಕ್ಸಿಕೊ ಸಿಟಿ ಒಲಿಂಪಿಕ್ಸ್‌ನಲ್ಲಿ ಗುರುಬಕ್ಷ್ ಸಿಂಗ್ ಅವರು ತಮ್ಮ ಸಹೋದರ ಬಲ್ಬೀರ್ ಸಿಂಗ್ ಗ್ರೆವಾಲ್ ಅವರೊಂದಿಗೆ ಭಾರತವನ್ನು ಪ್ರತಿನಿಧಿಸಿದ್ದರು. ರಾಷ್ಟ್ರೀಯ ಹಾಕಿ ತಂಡದಲ್ಲಿ ಇಬ್ಬರು ಸಹೋದರರು ಒಟ್ಟಿಗೆ ಆಡಿದ ಅಪರೂಪದ ಸಾಧನೆ ಅವರದ್ದಾಗಿದೆ. ಕ್ರೀಡಾ ವೃತ್ತಿಜೀವನದಿಂದ ನಿವೃತ್ತಿಯಾದ ನಂತರ, ಅವರು ಪಶ್ಚಿಮ ರೈಲ್ವೆಯಲ್ಲಿ ಹಿರಿಯ ಕ್ರೀಡಾ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ರೈಲ್ವೆ ಹಾಕಿ ತಂಡಕ್ಕೆ ರಾಜಸ್ಥಾನದ ಹಲವು ಪ್ರತಿಭಾವಂತ ಆಟಗಾರರನ್ನು ಗುರುತಿಸಿ, ಅವರಿಗೆ ಅವಕಾಶ ದೊರಕಿಸಿಕೊಡುವಲ್ಲಿ ಗ್ರೆವಾಲ್ ಪ್ರಮುಖ ಪಾತ್ರ ವಹಿಸಿದ್ದರು. ಅವರ ನಿಧನಕ್ಕೆ ದೇಶದ ಕ್ರೀಡಾ ಲೋಕ ಕಂಬನಿ ಮಿಡಿದಿದೆ.

ಇಂದು ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು ಓಟ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಭಾನುವಾರ (ಏಪ್ರಿಲ್ 26) 18ನೇ ಆವೃತ್ತಿಯ 'ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು' ಕ್ರೀಡಾಕೂಟ ನಡೆಯಲಿದೆ. ಈ ಪ್ರತಿಷ್ಠಿತ ಓಟದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾಪಟುಗಳು ಸೇರಿದಂತೆ 36,000ಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆಯಿದೆ.

ಫೀಲ್ಡ್ ಮಾರ್ಷಲ್ ಸ್ಯಾಮ್ ಮಾಣೆಕ್ ಶಾ ಪರೇಡ್ ಮೈದಾನದಿಂದ ಓಟ ಆರಂಭವಾಗಲಿದ್ದು, ಈ ಬಾರಿ ಹಲಸೂರು ಕೆರೆಯ ಸುತ್ತಲಿನ ಸುಂದರ ಮಾರ್ಗವನ್ನು ಒಳಗೊಂಡಿದೆ. ಇದರಲ್ಲಿ ವರ್ಲ್ಡ್ 10ಕೆ, ಓಪನ್ 10ಕೆ, ಮಜ್ಜಾ ರನ್, ಹಿರಿಯ ನಾಗರಿಕರ ಓಟ ಮತ್ತು ವಿಶೇಷ ಚೇತನರ ಓಟ ಎಂಬ ವಿಭಾಗಗಳಡಿ ಬೆಳಗ್ಗೆ 5ರಿಂದ 8.30ರ ತನಕ ಸ್ಪರ್ಧೆಗಳು ನಡೆಯಲಿವೆ. ಒಟ್ಟು 2,10,000 ಯುಎಸ್ ಡಾಲರ್ ಮೊತ್ತದ ಬಹುಮಾನವನ್ನು ಹೊಂದಿರುವ ಈ ಕೂಟವು ದಕ್ಷಿಣ ಭಾರತದ ಅತಿದೊಡ್ಡ ಕ್ರೀಡಾ ಹಬ್ಬ ಎನಿಸಿಕೊಂಡಿದೆ.

ಪಿಎಸ್‌ಎಲ್: ಮೈದಾನದಲ್ಲಿ ಪಂದ್ಯ ವೀಕ್ಷಣೆಗೆ ಪಾಕ್ ಸರಕಾರ ಸಮ್ಮತಿ

ಇಸ್ಲಾಮಾಬಾದ್: ಲಾಹೋರ್‌ನಲ್ಲಿ ಮೇ 3ರಂದು ನಡೆಯಲಿರುವ ಪಾಕಿಸ್ತಾನ ಸೂಪರ್ ಲೀಗ್ (ಪಿಎಸ್‌ಎಲ್) ಫೈನಲ್ ಪಂದ್ಯವನ್ನು ಮೈದಾನದಲ್ಲಿ ವೀಕ್ಷಿಸಲು ಕ್ರೀಡಾಭಿಮಾನಿಗಳಿಗೆ ಅವಕಾಶ ನೀಡಲಾಗುವುದು ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಶನಿವಾರ ತಿಳಿಸಿದೆ. ಫ್ರಾಂಚೈಸಿ ಮಾಲೀಕರ ಮನವಿಯ ಮೇರೆಗೆ ಪ್ರಧಾನಿ ಶೆಹಬಾಜ್ ಷರೀಫ್ ಅವರು ಈ ಪ್ರಸ್ತಾವನೆಗೆ ಅನುಮೋದನೆ ನೀಡಿದ್ದಾರೆ.

ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಅವರು ಸಾಮಾಜಿಕ ಜಾಲತಾಣದಲ್ಲಿ ಈ ವಿಷಯವನ್ನು ಹಂಚಿಕೊಂಡಿದ್ದು, ''ಅಭಿಮಾನಿಗಳ ಉಪಸ್ಥಿತಿಗೆ ಪ್ರಧಾನಿಯವರು ಸಮ್ಮತಿಸಿದ್ದಾರೆ,'' ಎಂದು ತಿಳಿಸಿದ್ದಾರೆ. ಇರಾನ್ ಯುದ್ಧದ ಹಿನ್ನೆಲೆಯಲ್ಲಿ ಇಂಧನ ಬೆಲೆ ಏರಿಕೆಯಾದ ಕಾರಣ, 'ಸಾರ್ವಜನಿಕರು ಪ್ರಯಾಣ ನಿರ್ಬಂಧಿಸಬೇಕು ಮತ್ತು ಮನೆಯಿಂದಲೇ ಕೆಲಸ ಮಾಡಬೇಕು' ಎಂದು ಪಾಕ್ ಸರಕಾರ ಸೂಚಿಸಿತ್ತು. ಇದರಿಂದಾಗಿ ಕಳೆದ ತಿಂಗಳು ಆರಂಭವಾದ ಪಿಎಸ್‌ಎಲ್ ಪಂದ್ಯಗಳಿಗೆ ಪ್ರೇಕ್ಷಕರ ಪ್ರವೇಶವನ್ನು ನಿಷೇಧಿಸಲಾಗಿತ್ತು. ಅಲ್ಲದೆ ವೆಚ್ಚ ತಗ್ಗಿಸುವ ಉದ್ದೇಶದಿಂದ 6 ನಗರಗಳಿಗೆ ಬದಲಾಗಿ 2 ನಗರಗಳಲ್ಲಿ (ಲಾಹೋರ್ ಮತ್ತು ಕರಾಚಿ) ಪಂದ್ಯಾವಳಿ ನಡೆಸಲು ಉದ್ದೇಶಿಸಿತು.

ತ್ವರಿತ, ನಿಖರ ಚಿಕಿತ್ಸೆಗೆ ತಂತ್ರಜ್ಞಾನ ಪೂರಕ

ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ ಅಭಿಮತ

■ ವಿಕ ಸುದ್ದಿಲೋಕ ಬೆಳಗಾವಿ

ರೋಗಿಗಳು ಚಿಕಿತ್ಸೆಯಲ್ಲಿ ಗುಣಮಟ್ಟವನ್ನಷ್ಟೇ ಅಲ್ಲ, ಪಾರದರ್ಶಕತೆಯನ್ನೂ ನಿರೀಕ್ಷಿಸುತ್ತಾರೆ. ಬದಲಾಗುತ್ತಿರುವ ಕಾಲಘಟ್ಟಕ್ಕೆ ತಕ್ಕಂತೆ ಪಠ್ಯಕ್ರಮ, ತರಬೇತಿ ಮತ್ತು ಸೇವಾ ವ್ಯವಸ್ಥೆಗಳಲ್ಲಿ ಬದಲಾವಣೆ ಅನಿವಾರ್ಯ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ ಹೇಳಿದರು.

ನಗರದಲ್ಲಿ ಕೆಎಲ್‌ಇ ವಿ.ಕೆ. ದಂತ ವಿಜ್ಞಾನ ಸಂಸ್ಥೆಯ ಪ್ರೊಸ್ಥೊಡಾಂಟಿಕ್ಸ್ ವಿಭಾಗ ಆಯೋಜಿಸಿರುವ 28ನೇ ಐಪಿಎಸ್ ರಾಷ್ಟ್ರೀಯ ಪಿಜಿ ಸಮಾವೇಶವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

''ಕ್ಯಾಡ್-ಕ್ಯಾಮ್, 3ಡಿ ಪ್ರಿಂಟಿಂಗ್ ಹಾಗೂ ಕೃತಕ ಬುದ್ಧಿಮತ್ತೆಯಂತಹ ನವೀನ ತಂತ್ರಜ್ಞಾನಗಳು ಚಿಕಿತ್ಸೆಯನ್ನು ವೇಗವಾಗಿ ಮತ್ತು ನಿಖರವಾಗಿ ನಡೆಸಲು ಸಹಕಾರಿ. ಸೇವಾಮನೋಭಾವ, ರೋಗಿಯ ವಿಶ್ವಾಸ ಗಳಿಸುವುದೇ ವೈದ್ಯಕೀಯ ವೃತ್ತಿಯ ನಿಜವಾದ ಯಶಸ್ಸು,'' ಎಂದು ಅವರು ಕಿವಿಮಾತು ಹೇಳಿದರು.

ಇಂಡಿಯನ್ ಪ್ರೊಸ್ಥೊಡಾಂಟಿಕ್ ಸೊಸೈಟಿ ಅಧ್ಯಕ್ಷ ಡಾ. ವಿ.ಆನಂದಕುಮಾರ ಅಧ್ಯಕ್ಷತೆ ವಹಿಸಿದ್ದರು.

ಪ್ರತಿ ಲಕ್ಷ ಜನಸಂಖ್ಯೆಗೆ 66 ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಕರ್ನಾಟಕವು ಜ್ಞಾನದ ರಾಜಧಾನಿಯಾಗಿ ಹೊರಹೊಮ್ಮಿದೆ. ಕೇಂದ್ರ ಸರಕಾರ ಹೂಡಿಕೆಗಳನ್ನು ಗುಜರಾತ್‌ಗೆ ಸೆಳೆಯಲು ಪ್ರಯತ್ನಿಸುತ್ತಿದ್ದರೂ, ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕದ ಜ್ಞಾನ ಸಂಪತ್ತನ್ನು ಯಾರೂ ಕಡಿಮೆ ಮಾಡಲು ಸಾಧ್ಯವಿಲ್ಲ.

- ಡಾ. ಎಂ.ಸಿ.ಸುಧಾಕರ ಉನ್ನತ ಶಿಕ್ಷಣ ಸಚಿವ

ಕೆಎಲ್‌ಇ ವಿ.ಕೆ. ದಂತ ವಿಜ್ಞಾನ ಸಂಸ್ಥೆಯ ಪ್ರೊಸ್ಥೊಡಾಂಟಿಕ್ಸ್ ವಿಭಾಗದ 28ನೇ ಐಪಿಎಸ್ ರಾಷ್ಟ್ರೀಯ ಪಿಜಿ ಸಮಾವೇಶವನ್ನು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ ಉದ್ಘಾಟಿಸಿದರು. ಪದ್ಮಶ್ರೀ ಡಾ. ಪ್ರಭಾಕರ ಕೋರೆ ಹಾಗೂ ಇತರರು ಇದ್ದರು.

ಕಾಲೋಚಿತ ತಂತ್ರಜ್ಞಾನ ಅಳವಡಿಕೆ

ಕೆಎಲ್‌ಇ ಸಂಸ್ಥೆ ಗೌರವ ಕಾರ್ಯಾಧ್ಯಕ್ಷ ಡಾ.ಪ್ರಭಾಕರ ಕೋರೆ ಮಾತನಾಡಿ, ''50 ವರ್ಷಗಳ ಹಿಂದೆ ನನಗೆ ಹಲ್ಲುನೋವು ಬಂದಾಗ ಬೆಳಗಾವಿಯಲ್ಲಿ ಚಿಕಿತ್ಸೆ ಪಡೆಯಲು ಹೋಗಿದ್ದೆ. ವೈದ್ಯರು ಹಲ್ಲು ಕೀಳುವುದೇ ಏಕೈಕ ಪರಿಹಾರ ಎಂದು ಹೇಳಿದರು. ಆ ಸಂದರ್ಭದಲ್ಲಿ ದಂತ ವೈದ್ಯಕೀಯದಲ್ಲಿ ವಿಶೇಷ ಸೌಲಭ್ಯ ಬೆಳಗಾವಿಯಲ್ಲಿ ಇರಲಿಲ್ಲ. ಹೀಗಾಗಿ ಹಲ್ಲು ಉಳಿಸಿಕೊಳ್ಳಲು ನಾನು ಹುಬ್ಬಳ್ಳಿಯ ವೈದ್ಯರ ಬಳಿ ಹೋಗಬೇಕಾಯಿತು,'' ಎಂದು ತಮ್ಮ ಅನುಭವ ಹಂಚಿಕೊಂಡರು.

''ಇಂದು ಕೆಎಲ್‌ಇಯಂಥ ಸಂಸ್ಥೆಗಳಿಂದಾಗಿ ಅತ್ಯಾಧುನಿಕ ತಂತ್ರಜ್ಞಾನ ಮತ್ತು ನುರಿತ ವೈದ್ಯರು ಬೆಳಗಾವಿಯಲ್ಲೇ ಲಭ್ಯವಿದ್ದಾರೆ. ಹಲ್ಲು ಉಳಿಸುವ ಮತ್ತು ನೋವಿಲ್ಲದ ಚಿಕಿತ್ಸೆ ನೀಡುವ ಕ್ರಾಂತಿಕಾರಕ ಬದಲಾವಣೆ ಸಾಧ್ಯವಾಗಿದೆ. ಕೆಎಲ್‌ಇ ಸಂಸ್ಥೆ ಸದಾ ಕಾಲೋಚಿತ ತಂತ್ರಜ್ಞಾನ ಅಳವಡಿಸಿಕೊಂಡು ಅತ್ಯುತ್ತಮ ತರಬೇತಿ ನೀಡಲು ಬದ್ಧವಾಗಿದೆ,'' ಎಂದರು.

ಹಾನಗಲ್ಲ ತಾಲೂಕು ಆಸ್ಪತ್ರೆಯಲ್ಲಿ ಬೆಂಕಿ

ಹಾನಗಲ್ಲ (ಹಾವೇರಿ): ಇಲ್ಲಿನ ತಾಲೂಕು ಆಸ್ಪತ್ರೆಯ ಔಷಧ ವಿಭಾಗದಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಸುಮಾರು 1 ಕೋಟಿ ರೂ. ಮೌಲ್ಯದ ಔಷಧ ಮತ್ತು ವೈದ್ಯಕೀಯ ಉಪಕರಣಗಳು ಭಸ್ಮವಾಗಿವೆ.

1 ಕೋಟಿ ರೂ. ಮೌಲ್ಯದ ಔಷಧ ಸಾಮಗ್ರಿ ಹಾನಿ

ಶನಿವಾರ ಸಂಜೆ 4ಕ್ಕೆ ಈ ಘಟನೆ ನಡೆದಿದ್ದು, ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಈ ದುರಂತಕ್ಕೆ ಕಾರಣ ಎಂದು ಶಂಕಿಸಲಾಗಿದೆ. ಅಗ್ನಿಶಾಮಕ ಸಿಬ್ಬಂದಿ ಸುಮಾರು ಎರಡು ತಾಸು ಶ್ರಮಿಸಿ ಬೆಂಕಿ ನಂದಿಸಿದರು.

ಮೊದಲು ಬೆಂಕಿ ಕಾಣಿಸಿಕೊಂಡ ತಕ್ಷಣ ಆಸ್ಪತ್ರೆ ಸಿಬ್ಬಂದಿ ಎಚ್ಚೆತ್ತುಕೊಂಡು ಒಳ ರೋಗಿಗಳನ್ನು ಸುರಕ್ಷಿತವಾಗಿ ಹೊರಗೆ ಕಳಿಸಿದ್ದಾರೆ. ಔಷಧ ಕೊಠಡಿ ಸಮೀಪದಲ್ಲಿ ಸಂಗ್ರಹಿಸಲಾಗಿದ್ದ ಆಕ್ಸಿಜನ್ ಸಿಲೆಂಡರ್‌ಗಳನ್ನು ತೆರವು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಸ್ಥಳಕ್ಕೆ ಶಾಸಕ ಶ್ರೀನಿವಾಸ ಮಾನೆ, ತಹಸೀಲ್ದಾರ್ ರೇಣುಕಾ ಎಸ್. ಮತ್ತು ಪೊಲೀಸ್ ಅಧಿಕಾರಿಗಳು ಭೇಟಿ ನೀಡಿದ್ದರು.

'ಪುನೀತ್' ಸದಾಶಯಗಳ 'ನಿವಾಸ'

ಪುನೀತ್ ನಿವಾಸ

ಗಾರೆ ಕೆಲಸ ಮಾಡಿಕೊಂಡಿರುವ ಟೀನೇಜ್ ಹುಡುಗ ಮಲ್ಲುಗೆ ತಾನೇ ಹಣ ಕೂಡಿಸಿ, 'ಪುನೀತ್ ನಿವಾಸ' ಎಂಬ ಸಿನಿಮಾ ಮಾಡಬೇಕೆಂಬ ಆಸೆ. ಇದಕ್ಕಾಗಿ ಸಿನಿಮಾ ನಟ ಅಭಿಜಿತ್ ಅವರನ್ನು ಭೇಟಿ ಮಾಡಿ ಕಥೆ ಹೇಳುವ ಮಲ್ಲು, ಅಭಿಜಿತ್ ಮನ ಗೆಲ್ಲುತ್ತಾನೆ. ಕೇವಲ 5 ಲಕ್ಷ ರೂಪಾಯಿ ವೆಚ್ಚದಲ್ಲಿ ಸಿನಿಮಾ ಮಾಡುವ ಆಲೋಚನೆ ಮಾಡುವ ಮಲ್ಲು ಅದಕ್ಕಾಗಿ ಮನೆಗಳನ್ನು ಮಾರಿಸಿ ಅದರಿಂದ ಬರುವ ಹಣದಿಂದ ಸಿನಿಮಾ ಮಾಡಲು ಪ್ರಯತ್ನಿಸುತ್ತಾನೆ. ಇದರಿಂದ ದುಡ್ಡು ಸಂಪಾದಿಸುತ್ತಾನೆ. ಸಿನಿಮಾ ಮಾಡಬೇಕೆಂದು ಅಂದುಕೊಂಡವನು ಅದೇ ಹಣದಿಂದ ಸಮಾಜಕ್ಕೆ ನೆರವಾಗುವ ಕೆಲಸ ಮಾಡಲು ಮುಂದಾಗುತ್ತಾನೆ. ಏನು ಆ ಪರೋಪಕಾರಿ ಕೆಲಸ, ರಿಯಲ್ ಎಸ್ಟೇಟ್ ಉದ್ಯಮ ಆ ಹುಡುಗನನ್ನು ಹೇಗೆ ಬಳಸಿಕೊಳ್ಳುತ್ತದೆ, ಅವನ ಬದುಕು ಮುಂದೆ ಯಾವ ದಿಕ್ಕಿನತ್ತ ಸಾಗುತ್ತದೆ ಎನ್ನುವುದೇ ಸಿನಿಮಾ ಕಥೆ.

ನಟ ಪುನೀತ್ ರಾಜ್‌ಕುಮಾರ್ ಬರೀ ನಟನಾಗಿ ಅಲ್ಲದೆ ಅವರ ಅಭಿಮಾನಿಗಳಿಗೆ ಹಲವು ರೀತಿಯಲ್ಲಿ ಸ್ಫೂರ್ತಿಯಾಗಿದ್ದಾರೆ. ಇವತ್ತಿಗೂ ಎಷ್ಟೋ ಸಮಾಜಮುಖಿ ಕೆಲಸಗಳಿಗೆ ಕಾರಣರಾಗಿದ್ದಾರೆ. ಇದೇ ಎಳೆಯನ್ನು ಇಟ್ಟುಕೊಂಡು ಸಿನಿಮಾ ಮಾಡಿದ್ದಾರೆ ನಿರ್ದೇಶಕ ಉದ್ಭವ ನಾಗೇಂದ್ರ. ಇಷ್ಟು ಕಡಿಮೆ ಮೊತ್ತಕ್ಕೆ ಸಿನಿಮಾ ಮಾಡಲು ಈಗಿನ ಕಾಲದಲ್ಲಿ ಸಾಧ್ಯವೇ ಎಂಬಂತಹ ಸಾಕಷ್ಟು ಅಸಹಜ ವಿಷಯಗಳನ್ನು ಸಿನಿಮಾದಲ್ಲಿ ಸೇರಿಸಿಕೊಂಡಿದ್ದಾರೆ. ಆದರೆ ಸಿನಿಮಾದ ಒನ್ ಲೈನ್ ಕಥೆ ಒಂದೊಳ್ಳೆ ಸಿನಿಮಾ ಆಗಲು ಸೂಕ್ತವಾಗಿರುವುದು ಸಿನಿಮಾವನ್ನು ಮೆಚ್ಚಿಸುತ್ತದೆ. ಸಿನಿಮಾದ ಮೇಕಿಂಗ್ ಕೊಂಚ ಹಿಂದಿನ ಕಾಲದಲ್ಲೇ ಉಳಿದಂತಿದ್ದು, ಮೇಕಿಂಗ್ ಒಂದು ಆರ್ಟ್ ಸಿನಿಮಾದಂತಿದೆ. ಪುನೀತ್ ಅವರ ಆಶಯಗಳನ್ನು ಹೇಳುವ ಪ್ರಯತ್ನದಲ್ಲಿ ಮಲ್ಲು ಪಾತ್ರದಲ್ಲಿ ವಿಠಲ್ ಹಾಗೂ ಶ್ರೇಯಸ್ ಚೆನ್ನಾಗಿ ನಟಿಸಿದ್ದಾರೆ. ಉಳಿದಂತೆ ಎಲ್ಲರೂ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ಈಗಿನ ಕಮರ್ಷಿಯಲ್ ಸಿನಿಮಾಗಳ ಅದ್ದೂರಿತನ ಇಲ್ಲದೆ ಹೋದರೂ, ಒಂದೊಳ್ಳೆ ವಿಷಯವನ್ನಿಟ್ಟು ಮಾಡಿರುವ ಸಿನಿಮಾ ಒಮ್ಮೆ ನೋಡಲು ಅಡ್ಡಿ ಇಲ್ಲ.



ಸಿನಿ ವಿಮರ್ಶೆ

- ಕಿರಣ್ ಚಂದ್ರ

ತಾರಾಗಣ: ಅಭಿಜಿತ್, ವಿಠಲ್ ನಾಗರಾಜ್, ಶ್ರೇಯಸ್ ಭಾರದ್ವಾಜ್, ಐಶ್ ಆರಾಧ್ಯ, ಮಧುಶ್ರೀ ಆರಾಧ್ಯ
ನಿರ್ದೇಶನ: ಉದ್ಭವ ನಾಗೇಂದ್ರ
ಸಂಗೀತ: ಎಂ.ಎನ್. ಕೃಪಾಕರ್
ಛಾಯಾಗ್ರಹಣ: ಎಸ್. ಬಾಲು
ರೇಟಿಂಗ್: ★★½

Rating Scale: TRASH * | BELOW AVERAGE ** | AVERAGE **1/2 | ABOVE AVERAGE *** | GOOD ***1/2 | VERY GOOD **** | OUTSTANDING ****1/2 | MASTERPIECE *****